ಪ್ರಜಾವಾಣಿ
ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ


ಪ್ರಾರ್ಥನೆ
ಬಕ್ರೀದ್ ಅಂಗವಾಗಿ ಬೆಂಗಳೂರಿನ ಚಾಮರಾಜಪೇಟೆಯ ಈದ್ಗಾ ಮೈದಾನದಲ್ಲಿ ಮಕ್ಕಳು ಶನಿವಾರ ಸಾಮೂಹಿಕ ಪ್ರಾರ್ಥನೆ ಸಲ್ಲಿಸಿದರು

ಕೋರ್ಟ್ ಕದತಟ್ಟಲಿದೆ 'ಹಾಳೆ ತಟ್ಟೆ' 6
ಕೋವಿಡ್–19 ಪಿಡುಗು: 2021ರಲ್ಲಿ ಸತ್ತವರ ಸಂಖ್ಯೆ 1.02 ಕೋಟಿ 9
'ಅಪಾಯ ತರುತ್ತಿದೆ ಸಂಸ್ಕರಿಸಿದ ಆಹಾರ' 7
'ಸಾವು: 2022ರಲ್ಲಿ ಶೇ 15ರಷ್ಟು ಇಳಿಕೆ' 9

ಸಾವಿನ ಬಾಗಿಲು ತೆರೆದವರಾರು?

ಯಾರದ್ದು ಏನು ಲೋಪ?



ಸರ್ಕಾರ

- ಕಾರ್ಯಕ್ರಮಕ್ಕೆ ಅಗತ್ಯ ಅನುಮತಿ ದೊರೆತಿದೆಯೇ ಮತ್ತು ಸಿದ್ಧತೆ ಮಾಡಿಕೊಳ್ಳಲಾಗಿದೆಯೇ ಎಂಬುದನ್ನು ಪರಿಗಣಿಸದೆ ಮುಖ್ಯಮಂತ್ರಿ ಮತ್ತು ಉಪ ಮುಖ್ಯಮಂತ್ರಿ ಕಾರ್ಯಕ್ರಮ ಘೋಷಿಸಿದ್ದು
- ಆಟಗಾರರನ್ನು ಸ್ವಾಗತಿಸಲು ಎಚ್‌ಎಎಲ್ ವಿಮಾನ ನಿಲ್ದಾಣಕ್ಕೆ ಸ್ವತಃ ಉಪ ಮುಖ್ಯಮಂತ್ರಿ ತೆರಳಿ, ಇಡೀ ಬೆಳವಣಿಗೆ ಸುದ್ದಿ ವಾಹಿನಿಗಳಲ್ಲಿ ನೇರ ಪ್ರಸಾರವಾಗಲು ಕಾರಣವಾಗಿದ್ದು
- ಲಕ್ಷಾಂತರ ಜನ ಸೇರಿದ್ದರೂ ಭದ್ರತೆ ಹೆಚ್ಚಿಸಲು ಅಥವಾ ಕಾರ್ಯಕ್ರಮದಲ್ಲಿ ಬದಲಾವಣೆ ಮಾಡಿಕೊಳ್ಳಲು ಕ್ರಮ ತೆಗೆದುಕೊಳ್ಳದೇ ಇದ್ದುದು

ಪೊಲೀಸ್

- ಸಮಾರಂಭಕ್ಕೆ ಪೊಲೀಸರಿಂದ ಪೂರ್ವಸಿದ್ಧತೆ ಆಗಿರಲಿಲ್ಲ. ವಿಧಾನಸೌಧ ಹಾಗೂ ಕ್ರೀಡಾಂಗಣದ ಬಳಿ **2.5** ಲಕ್ಷಕ್ಕೂ ಹೆಚ್ಚು ಜನ ಸೇರಿದ್ದರು. ಆದರೆ, ಎರಡೂ ಕಡೆ ಇದ್ದ ಸಿಬ್ಬಂದಿ **1,318** ಮಾತ್ರ
- ಜನರು ರಸ್ತೆಗೆ ಇಳಿಯುವುದನ್ನು ತಡೆಯಲು ಮತ್ತು ಸರತಿಯಲ್ಲಿ ನಿಲ್ಲುವಂತೆ ಮಾಡಲು ಎಲ್ಲೆಡೆ ಬ್ಯಾರಿಕೇಡ್ ಹಾಕಿರಲಿಲ್ಲ
- ತರಬೇತಿ ಹಂತದಲ್ಲಿದ್ದ ಸಿಬ್ಬಂದಿಯನ್ನೇ ಹೆಚ್ಚಿನ ಸಂಖ್ಯೆಯಲ್ಲಿ ಕ್ರೀಡಾಂಗಣದ ಬಳಿ ನಿಯೋಜನೆ ಮಾಡಲಾಗಿತ್ತು

ಆಯೋಜಕರು

- ಸರ್ಕಾರ ಮತ್ತು ಸಂಬಂಧಿತ ಪ್ರಾಧಿಕಾರಗಳಿಂದ ಅನುಮತಿ ದೊರೆಯುವ ಮುನ್ನವೇ ಮೆರವಣಿಗೆ, ವಿಜಯೋತ್ಸವ ಕಾರ್ಯಕ್ರಮ ಘೋಷಿಸಿದ್ದು
- ಕ್ರೀಡಾಂಗಣದಲ್ಲಿ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಭಾಗವಹಿಸಲು ಎಷ್ಟು ಜನಕ್ಕೆ ಅವಕಾಶವಿದೆ ಎಂದು ಬಹಿರಂಗಪಡಿಸದೇ ಇದ್ದುದು
- ಕ್ರೀಡಾಂಗಣ ಪ್ರವೇಶಕ್ಕೆ ಉಚಿತ ಪಾಸ್ ಎಂದು ಘೋಷಿಸಿದ್ದು ಮತ್ತು ನೋಂದಣಿ ಲಿಂಕ್ ಕೆಲಸ ಮಾಡದೇ ಇದ್ದುದು

ಜನರು

- ಗೃಹ ಸಚಿವ ಜಿ.ಪರಮೇಶ್ವರ ಅವರು ತೆರೆದ ವಾಹನದಲ್ಲಿ ಆಟಗಾರರ ಮೆರವಣಿಗೆಗೆ ಅವಕಾಶ ನೀಡುವುದಿಲ್ಲ ಎಂದು ಖಚಿತಪಡಿಸಿದ ನಂತರ ಅವರ ವಿರುದ್ಧ ಸಾಮಾಜಿಕ ಜಾಲತಾಣಗಳಲ್ಲಿ ಆಕ್ಷೇಪ ವ್ಯಕ್ತಪಡಿಸಿದ್ದು
- ಮೆರವಣಿಗೆಗೆ ಅವಕಾಶ ನೀಡಬೇಕು ಎಂದು ಒತ್ತಾಯಿಸಿ 'ಎಕ್ಸ್'ನಲ್ಲಿ ಪೋಸ್ಟ್ ಹಾಕಿದ್ದು
- ಆಟಗಾರರು ಎಲ್ಲಿ ಬಂದಿಳಿದರು, ಯಾವ ಹಾದಿಯಲ್ಲಿದ್ದಾರೆ, ಎಲ್ಲಿಗೆ ಹೋಗುತ್ತಿದ್ದಾರೆ ಎಂದು ಹಲವರು ಸಾಮಾಜಿಕ ಜಾಲತಾಣಗಳಲ್ಲಿ ವಿಡಿಯೊಗಳನ್ನು ಹಾಕಿದ್ದು, ಉಚಿತ ಪಾಸ್‌ಗೆ ನೋಂದಣಿ ಮಾಡಿಕೊಳ್ಳಲಾಗದ ಎಲ್ಲರೂ ಕ್ರೀಡಾಂಗಣದತ್ತ ಧಾವಿಸಿ ಬಂದಿದ್ದು

● ಆದಿತ್ಯ ಕೆ.ಎ./ಕೆ.ಎಸ್.ಸುನಿಲ್

ಬೆಂಗಳೂರು: ಅಭಿಮಾನಿಗಳಲ್ಲಿ ಭುಗಿಲೆದ್ದ ಜಯದ ಉನ್ಮಾದ, ವಿವೇಚನಾರಹಿತ ತೀರ್ಮಾನ, ಹೆಜ್ಜೆ ಹೆಜ್ಜೆಗೂ ನಡೆದ ಪ್ರಮಾದ, ಅಸಹಾಯಕರಾಗಿ ನಿಲ್ಲಬೇಕಾದ ಪೊಲೀಸರ ಸ್ಥಿತಿ... ಇವೆಲ್ಲವೂ ಸೇರಿ ರಾಯಲ್ ಚಾಲೆಂಜರ್ಸ್ ಬೆಂಗಳೂರು (ಆರ್‌ಸಿಬಿ) ವಿಜಯದ ಸಂಭ್ರಮವು ನಾಡಿನ ಚರಿತ್ರೆಯಲ್ಲಿ ದಿನವೊಂದು ಕರಾಳ ನೆನಪಾಗಿ ಉಳಿಯುವಂತಹ ಘೋರ ದುರಂತವಾಗಿ ಮಾರ್ಪಟ್ಟಿತು.

ಎಂತಹದೇ ಪರಿಸ್ಥಿತಿಯನ್ನು ನಿಭಾಯಿಸುವ ಛಾತಿಯವರು ಎಂಬ ಮೆಚ್ಚುಗೆ ಪಡೆದಿದ್ದ ಕರ್ನಾಟಕದ ಪೊಲೀಸರು, ವರ್ಚಸ್ಸು ಹೆಚ್ಚಿಸಿಕೊಳ್ಳುವ ಆತುರದಲ್ಲಿದ್ದವರು ಮಾಡಿದ ಪ್ರಮಾದದಿಂದಾಗಿ ಎಂದೆಂದೂ ಮರೆಯಲಾಗದ ಕಳಂಕವೊಂದನ್ನು ಅಂಟಿಸಿಕೊಳ್ಳಬೇಕಾಯಿತು. ಎದೆಯೆತ್ತರ ಬೆಳೆಯುತ್ತಿದ್ದ ಕನಸುಕಂಗಳ ಮಕ್ಕಳನ್ನು ಕಣ್ಣುರೆಪ್ಪೆಯೊಳಗೆ ಇಟ್ಟು ಕಾಪಿಡುತ್ತಿದ್ದ 11 ಪೋಷಕರು ತಮ್ಮ ಕಣ್ಣೆದುರೇ ಮಣ್ಣಾದ ಕಂದಮ್ಮಗಳನ್ನು ನೆನೆದು ಜೀವನಪೂರ್ತಿ ಕೊರಗುವಿಕೆಗೂ ಕಾರಣವಾಯಿತು.

18 ವರ್ಷದ ಬಳಿಕ 'ಕಪ್' ಗೆದ್ದು 'ನಮ್ದು' ಎಂದು ಬೀಗಿದ ಆರ್‌ಸಿಬಿ ತಂಡಕ್ಕೆ ಜೂನ್ 4ರಂದು ವಿಧಾನಸೌಧದ ಎದುರು ನಡೆದ ಸನ್ಮಾನ, ಚಿನ್ನಸ್ವಾಮಿ ಕ್ರೀಡಾಂಗಣದೊಳಗೆ ಹಮ್ಮಿಕೊಂಡ ಸಂಭ್ರಮಾಚರಣೆ ಕಾಲ್ತುಳಿತಕ್ಕೆ ದಾರಿ ಮಾಡಿಕೊಟ್ಟು, ಸಾವಿನ ಮನೆಯ ಬಾಗಿಲನ್ನು ತೆರೆಯಿತು. ಅನಾಹುತಕ್ಕೆ ಯಾರು ಹೊಣೆ ಎಂದು ಹುಡುಕುತ್ತಾ ಹೊರಟರೆ ಸಾವಿನ ಮನೆಗೆ ಅಭಿಮಾನಿಗಳನ್ನು ದೂಡಿದವರು ಯಾರೆಂಬ ಹಲವು ಎಳೆಗಳು ಬಿಚ್ಚಿಕೊಳ್ಳುತ್ತಾ ಹೋಗುತ್ತವೆ.

ಹಲವು ತನಿಖೆ

1. ಬೆಂಗಳೂರು ಜಿಲ್ಲಾಧಿಕಾರಿ ಜಗದೀಶ್ ನೇತೃತ್ವದಲ್ಲಿ ಮ್ಯಾಜಿಸ್ಟೀರಿಯಲ್ ತನಿಖೆ
2. ನಿವೃತ್ತ ನ್ಯಾಯಮೂರ್ತಿ ಮೈಕಲ್ ಡಿ.ಕುನ್ಹ ನೇತೃತ್ವದಲ್ಲಿ ನ್ಯಾಯಾಂಗ ತನಿಖೆ
3. ಕೆಎಸ್‌ಸಿಎ, ಆರ್‌ಸಿಬಿ, ಡಿಎನ್‌ಎ ಸಂಸ್ಥೆಗಳ ವಿರುದ್ಧ ಸಿಐಡಿ ತನಿಖೆ
4. ಕಬ್ಬನ್ ಪಾರ್ಕ್ ಪೊಲೀಸರ ತನಿಖೆ

ಒಳನೋಟ
ಕಾಲ್ತುಳಿತದ ಪ್ರಕರಣ

ಉನ್ಮಾದದ ಮುಗಿಲು–ಕಾಲ್ತುಳಿತಕ್ಕೆ ಬಾಗಿಲು: ಐಪಿಎಲ್ ಕ್ರಿಕೆಟ್ ಆಯೋಜಕರು ತಮ್ಮ ಅಭಿಮಾನಿ ಪಡೆಯನ್ನು ಹುಚ್ಚೆಬ್ಬಿಸಿ, ಸದಾ ತಮ್ಮ ಪರವಾದ ಅಲೆಯನ್ನು ಇರುವಂತೆ ನೋಡಿಕೊಳ್ಳುವತ್ತ ಲಕ್ಷ್ಯ ನೆಟ್ಟಿದ್ದರು. ಈ ಉನ್ಮಾದವೇ ವಿಜಯೋತ್ಸವಕ್ಕೆ ದಾರಿ ಮಾಡಿಕೊಟ್ಟಿತು. ಜೂನ್ 3ರಂದು ನಡೆದ ಐಪಿಎಲ್ ಅಂತಿಮ ಪಂದ್ಯದತ್ತ ಕೋಟ್ಯಂತರ ಜನರು ಕಣ್ಣುನೆಟ್ಟಿದ್ದರು. ಆರ್‌ಸಿಬಿ ಗೆದ್ದರೆ ದೇಶವೇ ಗೆದ್ದಂತೆ ಎಂದು ಬಿಂಬಿಸಲಾಗಿತ್ತು. ಈ ಕಾರಣದಿಂದಾಗಿಯೇ ಅಂತಿಮ ಪಂದ್ಯದ ರೋಚಕತೆಯನ್ನು ಕಂಡು, ಇಡೀ ರಾತ್ರಿ ಸಂಭ್ರಮಿಸಿದ್ದರು. ಅದೇ, ಉಮೇದು ಹಾಗೂ ಉತ್ಸಾಹವು ಕೆಲವು ದಿನಗಳು ಅಭಿಮಾನಿಗಳ ಎದೆಯಲ್ಲಿ ಸಂತಸದ ಅರಳುವಿಕೆಗೂ ಕಾರಣವಾಗಬಹುದಿತ್ತು.

ಹಲವು ಗೊಂದಲ, ಬೇಕು–ಬೇಡಗಳ ನಡುವೆಯೇ ರಾಜ್ಯ ಸರ್ಕಾರ, ಆರ್‌ಸಿಬಿ, ಡಿಎನ್‌ಎ (ಇವೆಂಟ್ ಮ್ಯಾನೇಜ್‌ಮೆಂಟ್) ಹಾಗೂ ಕೆಎಸ್‌ಸಿಎ ಕಡೆಯಿಂದ ಜೂನ್ 4ರ ಬೆಳಿಗ್ಗೆ ಪೊಲೀಸರ ಮೇಲೆ ಒತ್ತಡ ಬಂತು. ಆಗಲೂ ಪೊಲೀಸರು ಅನುಮತಿ ನಿರಾಕರಿಸಿದರು.

8ನೇ ಪುಟ ನೋಡಿ

ಕೆಎಸ್‌ಸಿಎ ಕಾರ್ಯದರ್ಶಿ ಖಜಾಂಚಿ ರಾಜೀನಾಮೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕರ್ನಾಟಕ ರಾಜ್ಯ ಕ್ರಿಕೆಟ್ ಸಂಸ್ಥೆಯ ಕಾರ್ಯದರ್ಶಿ ಎ. ಶಂಕರ್ ಮತ್ತು ಖಜಾಂಚಿ ಇ.ಎಸ್. ಜಯರಾಮ್ ಅವರು ಶನಿವಾರ ರಾಜೀನಾಮೆ ನೀಡಿದ್ದಾರೆ. ಸಂಜೆ ನಡೆದ ಆಡಳಿತ ಸಮಿತಿಯ ತುರ್ತು ಸಭೆಯಲ್ಲಿ ಇಬ್ಬರ ರಾಜೀನಾಮೆಯನ್ನು ಅಂಗೀಕರಿಸಲಾಯಿತು.


ಎ. ಶಂಕರ್


ಜಯರಾಮ್

ಜೂನ್ 3ರಂದು ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡವು ಐಪಿಎಲ್‌ನಲ್ಲಿ ಮೊದಲ ಸಲ ಪ್ರಶಸ್ತಿ ಗೆದ್ದ ಮರುದಿನವೇ ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ 'ಅಭಿಮಾನಿ ಗಳೊಂದಿಗೆ ಸಂಭ್ರಮಾಚರಣೆ' ಕಾರ್ಯಕ್ರಮ ಆಯೋಜಿಸಿತ್ತು. ಈ ಸಂದರ್ಭದಲ್ಲಿ ಕಾಲ್ತುಳಿತ ಸಂಭವಿಸಿದ್ದರಿಂದ 11 ಅಭಿಮಾನಿಗಳು ದುರ್ಮರಣ ಹೊಂದಿದ್ದರು. ದುರಂತದ ನೈತಿಕ ಹೊಣೆ ಹೊತ್ತು ಕಾರ್ಯದರ್ಶಿ ಮತ್ತು ಖಜಾಂಚಿ ರಾಜೀನಾಮೆ ನೀಡಿದ್ದಾರೆಂದು ಬೆಳಿಗ್ಗೆ ಕೆಎಸ್‌ಸಿಎ ಇಮೇಲ್ ಮೂಲಕ ಮಾಧ್ಯಮಗಳಿಗೆ ತಿಳಿಸಿತ್ತು. ಸಂಜೆ ಸುಮಾರು ಎರಡು ಗಂಟೆ ನಡೆದ ಆಡಳಿತ ಸಮಿತಿ ಸಭೆಯಲ್ಲಿ ಇಬ್ಬರೂ ಪದಾಧಿಕಾರಿಗಳ ರಾಜೀನಾಮೆ ಸ್ವೀಕೃತವಾಯಿತು.

'ನಮ್ಮ ಸಂಸ್ಥೆಯ ಕಾರ್ಯದರ್ಶಿ ಮತ್ತು ಖಜಾಂಚಿ ರಾಜೀನಾಮೆ ನೀಡಿದ್ದರಿಂದ ಆಡಳಿತ ಸಮಿತಿಯ ತುರ್ತು ಸಭೆ ಕರೆದಿದ್ದೆ. ಅವರು ನೈತಿಕ ಹೊಣೆ ಹೊತ್ತು ಈ ನಿರ್ಧಾರ ಕೈಗೊಂಡಿದ್ದಾರೆ' ಎಂದು ಕೆಎಸ್‌ಸಿಎ ಅಧ್ಯಕ್ಷ ರಘುರಾಮ್ ಭಟ್ ಸುದ್ದಿಗಾರರಿಗೆ ಹೇಳಿದರು.

14ನೇ ಪುಟ ನೋಡಿ

ಪರಿಹಾರದ ಮೊತ್ತ ₹25 ಲಕ್ಷಕ್ಕೆ ಏರಿಕೆ


'ಕಾಲ್ತುಳಿತದಲ್ಲಿ ಮೃತಪಟ್ಟವರ ಕುಟುಂಬಕ್ಕೆ ತಲಾ ₹ 25 ಲಕ್ಷ ಪರಿಹಾರ ನೀಡಲಾಗುವುದು' ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ತಿಳಿಸಿದ್ದಾರೆ.

ಮೃತಪಟ್ಟವರ ಕುಟುಂಬಕ್ಕೆ ತಲಾ ₹ 10 ಲಕ್ಷ ಪರಿಹಾರ ನೀಡಲಾಗುವುದು ಎಂದು ಘಟನೆ ನಡೆದ ದಿನ ಮುಖ್ಯಮಂತ್ರಿ ಪ್ರಕಟಿಸಿದ್ದರು. ಈ ಮೊತ್ತವನ್ನು ಹೆಚ್ಚಿಸಲಾಗುವುದು ಎಂದು ಶನಿವಾರ ಅವರು ತಿಳಿಸಿದ್ದಾರೆ.

ಬಾಲಕಿಯ ವಿವಾಹಕ್ಕೆ ಯತ್ನ: ಐವರು ವಶಕ್ಕೆ

ಪ್ರಜಾವಾಣಿ ವಾರ್ತೆ

ಚಿತ್ರದುರ್ಗ: 8ನೇ ತರಗತಿ ವಿದ್ಯಾರ್ಥಿನಿಯ ವಿವಾಹ ಮಾಡಲು ಮುಂದಾಗಿ ಆಕೆಯ ಮೇಲೆ ತೀವ್ರ ಹಲ್ಲೆ ನಡೆಸಿದ್ದ ಚಳ್ಳಕೆರೆ ತಾಲ್ಲೂಕಿನ ಗ್ರಾಮವೊಂದರ ಐವರ ವಿರುದ್ಧ ಚಳ್ಳಕೆರೆ ಠಾಣೆ ಪೊಲೀಸರು ಸ್ವಯಂಪ್ರೇರಿತವಾಗಿ ದೂರು ದಾಖಲಿಸಿಕೊಂಡಿದ್ದಾರೆ.



ಮದುವೆಯಾಗುವಂತೆ ಬಾಲಕಿಯ ಮೇಲೆ ಹಲ್ಲೆ ನಡೆಸಿರುವ ತಾಯಿ, ಬಲವಂತವಾಗಿ ತಾಳಿ ಕಟ್ಟಲು ಯತ್ನಿಸಿದ ಸೋದರ ಮಾವ, ಆತನ ಅಣ್ಣ, ಅತ್ತಿಗೆ, ಬಾಲಕಿಯ ಅಜ್ಜಿ ವಿರುದ್ಧ ಎಫ್‌ಐಆರ್ ದಾಖಲಾಗಿದ್ದು, ಎಲ್ಲ ಐವರು ಆರೋಪಿಗಳನ್ನು ಶನಿವಾರ ವಶಕ್ಕೆ ಪಡೆಯಲಾಗಿದ್ದು ವಿಚಾರಣೆ ನಡೆಸಲಾಗುತ್ತಿದೆ.

ಜೂನ್ 4ರಂದು ಬಾಲಕಿಗೆ ಒತ್ತಾಯಪೂರ್ವಕ ಮದುವೆ ಮಾಡುವ ಪ್ರಯತ್ನ ನಡೆದಿತ್ತು. ಆದರೆ, ತನಗಿಷ್ಟವಿಲ್ಲದ ಮದುವೆಗೆ ಬಾಲಕಿ ತೀವ್ರ ಪ್ರತಿರೋಧ ಒಡ್ಡಿದ್ದರಿಂದ ಸಂಬಂಧಿಕರು ಆಕೆಯ ಮೇಲೆ ಹಲ್ಲೆ ನಡೆಸಿದ್ದರು. ದಿಟ್ಟತನ ಪ್ರದರ್ಶಿಸಿದ ಬಾಲಕಿ ಬಾಲ್ಯವಿವಾಹದಿಂದ ಪಾರಾಗಿದ್ದಳು.


ಘಟನೆ ಕುರಿತ ವಿಡಿಯೊ ಜಾಲತಾಣದಲ್ಲಿ ಹರಿದಾಡಿತ್ತು. ಅದನ್ನು ವೀಕ್ಷಿಸಿದ ಪೊಲೀಸರು ಬಾಲಕಿಯನ್ನು ರಕ್ಷಿಸಿದ್ದರಾದರೂ ಬಾಲ್ಯವಿವಾಹ ನಡೆಯದ್ದರಿಂದ ಯಾರ ವಿರುದ್ಧವೂ ಪ್ರಕರಣ ದಾಖಲಿಸದೆ ಎಚ್ಚರಿಕೆ ನೀಡಿ ಕಳುಹಿಸಿದ್ದರು.

'10–15 ಜನ ಬಾಲಕಿಯ ಮೇಲೆ ಎರಗಿ ತಾಳಿ ಕಟ್ಟಿಸಲು ಯತ್ನಿಸಿದ್ದಾರೆ. ಆಕೆಯ ಮೇಲೆ ತೀವ್ರವಾಗಿ ಹಲ್ಲೆ ನಡೆಸಿರುವ ಕಾರಣ ದೂರು ದಾಖಲು ಮಾಡಿಕೊಂಡಿದ್ದೇವೆ' ಎಂದು ಚಳ್ಳಕೆರೆ ಠಾಣೆ ಪೊಲೀಸರು ತಿಳಿಸಿದ್ದಾರೆ.

ಈ ಸಂಬಂಧ 'ಪ್ರಜಾವಾಣಿ'ಯ ಶನಿವಾರದ ಸಂಚಿಕೆಯ ಮುಖಪುಟದಲ್ಲಿ ವಿಶೇಷ ವರದಿ ಪ್ರಕಟವಾಗಿತ್ತು.

ಚಿನಕುರುಳಿ

ಪ್ರಕಾಶ್ ಶೆಟ್ಟಿ



'ಬಿಹಾರದಲ್ಲೂ ಮ್ಯಾಚ್ ಫಿಕ್ಸಿಂಗ್'

ನವದೆಹಲಿ/ನಾಗ್ಪುರ: 'ಮಹಾರಾಷ್ಟ್ರ ಚುನಾವಣೆ ಸಂದರ್ಭದಲ್ಲಿ ನಡೆದ ಮ್ಯಾಚ್ ಫಿಕ್ಸಿಂಗ್ ರೀತಿಯಲ್ಲೇ ಬಿಹಾರದಲ್ಲಿಯೂ ನಡೆಯಲಿದೆ. ಬಿಜೆಪಿ ತಾನು ಸೋಲುವ ಎಲ್ಲ ಕಡೆಗಳಲ್ಲಿಯೂ ಮುಂದೆ ಇದೇ ರೀತಿ ಮ್ಯಾಚ್ ಫಿಕ್ಸಿಂಗ್ ಮಾಡಿಕೊಳ್ಳುತ್ತದೆ' ಎಂದು ಲೋಕಸಭೆ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ಶನಿವಾರ ಆರೋಪಿಸಿದರು.

ಮಹಾರಾಷ್ಟ್ರದಲ್ಲಿ ನಡೆದ ವಿಧಾನಸಭಾ ಚುನಾವಣಾ ಪ್ರಕ್ರಿಯೆಯ ಕುರಿತು ಅನೇಕ ಆಕ್ಷೇಪ ಗಳನ್ನು ವ್ಯಕ್ತಪಡಿಸಿ ನಾನಾ ಪತ್ರಿಕೆಗಳಿಗೆ ರಾಹುಲ್ ಗಾಂಧಿ ಅವರು ಸುದೀರ್ಘ ಲೇಖನ ಬರೆದಿದ್ದಾರೆ. 9



ಅನುಮತಿ ಇಲ್ಲದೇ ಜಾಹೀರಾತು ಫಲಕ ಅಳವಡಿಕೆ

ಕೆಎಸ್‌ಸಿಎಗೆ ಬಿಬಿಎಂಪಿ ನೋಟಿಸ್

ಪ್ರಜಾವಾಣಿ ವಾರ್ತೆ

ಮುಖ್ಯಾಂಶಗಳು

- ಬಿಬಿಎಂಪಿ ಕಾಯ್ದೆ ಸೆಕ್ಷನ್ 158ರ ಸ್ಪಷ್ಟ ಉಲ್ಲಂಘನೆ ಆರೋಪ
- ಏಳು ದಿನಗಳಲ್ಲಿ ಜಾಹೀರಾತು ಫಲಕ ತೆರವು ಮಾಡಲು ಸೂಚನೆ

ಬೆಂಗಳೂರು: ಎಂ. ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಅನುಮತಿ ಇಲ್ಲದೆ ಎಲ್‌ಇಡಿ ಜಾಹೀರಾತು ಫಲಕಗಳನ್ನು ಅಳವಡಿಸಿ, ನಿಯಮ ಉಲ್ಲಂಘಿಸಿರುವ ಕರ್ನಾಟಕ ಕ್ರಿಕೆಟ್ ಸಂಸ್ಥೆಗೆ (ಕೆಎಸ್‌ಸಿಎ) ಬಿಬಿಎಂಪಿ ನೋಟಿಸ್ ಜಾರಿ ಮಾಡಿದೆ.

'ಮುಖ್ಯ ಆಯುಕ್ತರ ಲಿಖಿತ ಅನುಮತಿ ಇಲ್ಲದೆ ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಎಲ್‌ಇಡಿ ಜಾಹೀರಾತು ಫಲಕಗಳನ್ನು ಅಳವಡಿಸಿರುವುದು ಬಿಬಿಎಂಪಿ ಕಾಯ್ದೆಯ ಸೆಕ್ಷನ್ 158ರ ಸ್ಪಷ್ಟ ಉಲ್ಲಂಘನೆ' ಎಂದು ಬಿಬಿಎಂಪಿಯ ಕಂದಾಯ ಹಾಗೂ ಜಾಹೀರಾತು ವಿಭಾಗದ ವಿಶೇಷ ಆಯುಕ್ತ ಮುನೀಶ್ ಮೌದ್ಗಿಲ್ ಅವರು ಮೇ 13ರಂದು ಹೊರಡಿಸಿರುವ ನೋಟಿಸ್‌ನಲ್ಲಿ ತಿಳಿಸಲಾಗಿದೆ.

'ಈ ರೀತಿಯ ಕಾನೂನು ಉಲ್ಲಂಘನೆಗೆ ಎರಡು ಲಕ್ಷ ರೂಪಾಯಿ ದಂಡದ ಜೊತೆಗೆ ಒಂದು ವರ್ಷ ಜೈಲು ಶಿಕ್ಷೆ ಇದೆ. ಮುಖ್ಯ ಆಯುಕ್ತರ ಲಿಖಿತ ಅನುಮತಿ ಇಲ್ಲದೆ ಜಾಹೀರಾತು ಪ್ರದರ್ಶಿಸಿರುವುದರಿಂದ ಕಾನೂನು, ನಿಯಮ ಉಲ್ಲಂಘನೆಯಾಗಿದೆ. ಏಳು ದಿನಗಳೊಳಗೆ ಎಲ್‌ಇಡಿ ಜಾಹೀರಾತು ಫಲಕಗಳನ್ನು ತೆರವುಗೊಳಿಸಬೇಕು. ಇಲ್ಲದಿದ್ದರೆ, ಬಿಬಿಎಂಪಿ ವತಿಯಿಂದಲೇ ಫಲಕಗಳನ್ನು ತೆರವು ಮಾಡಲಾಗುತ್ತದೆ. ಇದರ ವೆಚ್ಚವನ್ನೂ ಭರಿಸಬೇಕಾಗುತ್ತದೆ. ಅಲ್ಲದೆ, ಕ್ರಿಮಿನಲ್ ಪ್ರಕರಣವನ್ನೂ ದಾಖಲಿಸಲಾಗುತ್ತದೆ' ಎಂದು ಕೆಎಸ್‌ಸಿಎಯ ಮುಖ್ಯ ಕಾರ್ಯನಿರ್ವಹಣಾಧಿಕಾರಿಗೆ (ಸಿಇಒ) ಜಾರಿ ಮಾಡಲಾಗಿರುವ ನೋಟಿಸ್‌ನಲ್ಲಿ ಹೇಳಲಾಗಿದೆ.

ಮೇ 13ರಂದು ಈ ನೋಟಿಸ್ ಜಾರಿಯಾಗಿದ್ದರೂ, ಈ ಬಗ್ಗೆ ಯಾವುದೇ ಕ್ರಮ ಕೈಗೊಂಡಿಲ್ಲ. ಅಲ್ಲದೆ, ಆಸ್ತಿ ತೆರಿಗೆ ಪಾವತಿಸದ ಬಗ್ಗೆ ಬಿಬಿಎಂಪಿಯ ಪಶ್ಚಿಮ ವಲಯದಿಂದ ಕೆಎಸ್‌ಸಿಎಗೆ ನೋಟಿಸ್ ಜಾರಿ ಮಾಡಲಾಗಿದೆ. ಈ ಬಗ್ಗೆಯೂ ಕೆಎಸ್‌ಸಿಎ ಅಥವಾ ಬಿಬಿಎಂಪಿ ಮುಂದಿನ ಕ್ರಮ ಕೈಗೊಂಡಿಲ್ಲ.

ಕಾಲ್ತುಳಿತ: ಟೀಕೆ, ಸಮರ್ಥನೆ ಬಿಡಿ

ಬೆಂಗಳೂರು: 'ಆರ್‌ಸಿಬಿ ಆಟಗಾರರ ಅಭಿನಂದನಾ ಕಾರ್ಯಕ್ರಮದಲ್ಲಿ ಕಾಲ್ತುಳಿತ ಸಂಭವಿಸಿ ಜನರು ಮೃತಪಟ್ಟ ಘಟನೆಗೆ ಸಂಬಂಧಿಸಿದಂತೆ ವಿರೋಧ ಪಕ್ಷಗಳು ಸರ್ಕಾರವನ್ನು ಟೀಕಿಸುವ ಮತ್ತು ಸರ್ಕಾರ ತನ್ನ ನಡೆಯನ್ನು ಸಮರ್ಥಿಸಿಕೊಳ್ಳುವ ಚಾಳಿಯನ್ನು ಬಿಡಬೇಕು' ಎಂದು ಕಾಂಗ್ರೆಸ್‌ನ ಹಿರಿಯ ನಾಯಕ ಪ್ರೊ.ಬಿ.ಕೆ. ಚಂದ್ರಶೇಖರ್ ಹೇಳಿದ್ದಾರೆ.

ಪತ್ರಿಕಾ ಪ್ರಕಟಣೆ ನೀಡಿರುವ ಅವರು, 'ಆರ್‌ಸಿಬಿ ಆಟಗಾರರಿಗೆ ಅಭಿನಂದನಾ ಕಾರ್ಯಕ್ರಮ ನಡೆಸುವ ಸಂಬಂಧ ಶಿಷ್ಟಾಚಾರ ಇಲಾಖೆ ಮತ್ತು ಗುಪ್ತಚರ ಇಲಾಖೆಗಳಿಂದ ಸರ್ಕಾರವು ಮಾಹಿತಿ ಪಡೆದುಕೊಂಡಿರಲಿಲ್ಲ. ಸಂಬಂಧಿತ ಪ್ರಾಧಿಕಾರಗಳಿಂದ ಅಗತ್ಯ ಅನುಮತಿ ಪಡೆದು ಕೊಳ್ಳದೇ, ತೆರೆದ ವಾಹನದಲ್ಲಿ ಆಟಗಾರರ ಮೆರವಣಿಗೆ ನಡೆಸುವುದಾಗಿ ಆರ್‌ಸಿಬಿ ಏಕಪಕ್ಷೀಯವಾಗಿ ಘೋಷಿಸಿತ್ತು. ಮೆರವಣಿಗೆ ನಡೆಸಬಾರದು ಎಂದು ಗೃಹ ಸಚಿವ ಜಿ.ಪರಮೇಶ್ವರ ಕಟ್ಟುನಿಟ್ಟಾಗಿ ಹೇಳಿದ್ದರು' ಎಂದಿದ್ದಾರೆ.


ಚಂದ್ರಶೇಖರ್

'ಈ ಅವಘಡವನ್ನು ವಿಶ್ಲೇಷಿಸುವಲ್ಲಿ ಈ ಎಲ್ಲ ಅಂಶಗಳನ್ನು ಪರಿಶೀಲಿಸಬೇಕು. ಆದರೆ ಇವುಗಳನ್ನು ಕಡೆಗಣಿಸಲಾಗಿದೆ. ಇದರ ಹೊರತಾಗಿ ಹೊರಗೆ ಜನ ಸಾಯುತ್ತಿರುವಾಗ ಕ್ರೀಡಾಂಗಣದಲ್ಲಿ ಸನ್ಮಾನ ಕಾರ್ಯಕ್ರಮ ಬೇಕಿತ್ತೇ ಎಂದು ಪ್ರಶ್ನಿಸಬೇಕಿದೆ' ಎಂದಿದ್ದಾರೆ.


'ಹಾಲಿ ನ್ಯಾಯಮೂರ್ತಿ ತನಿಖೆ ಮಾಡಲಿ'

ಬೆಂಗಳೂರು: 'ಕಾಲ್ತುಳಿತ ಅವಘಡ ಪ್ರಕರಣದ ಕುರಿತು ಹೈಕೋರ್ಟ್ ಹಾಲಿ ನ್ಯಾಯಮೂರ್ತಿಯಿಂದ ತನಿಖೆ ನಡೆಸಬೇಕು. ನೀವು ಯಾವುದೇ ನಿರ್ಧಾರ ತೆಗೆದುಕೊಂಡರೂ ಅದಕ್ಕೆ ನಾವು ಸಿದ್ಧ ಎಂದು ಹೈಕೋರ್ಟ್‌ಗೆ ಸರ್ಕಾರ ತಿಳಿಸಲಿ' ಎಂದು ಕೇಂದ್ರ ಸಚಿವೆ ಶೋಭಾ ಕರಂದ್ಲಾಜೆ ಸವಾಲೆಸೆದರು.

'ಸರ್ಕಾರದ ತಪ್ಪಿಲ್ಲ ಎಂದಾದರೆ ಕಮಿಷನರ್ ಅವರನ್ನು ಅಮಾನತು ಮಾಡಿದ್ದೇಕೆ?' ಎಂದು ಪ್ರಶ್ನಿಸಿದರು.

'ನಾವು ಆಕ್ಷೇಪಿಸಿದ ಬಳಿಕ ನ್ಯಾಯಮೂರ್ತಿ ಮೈಕೆಲ್ ಡಿಕುನ್ಹ ಆಯೋಗವನ್ನು ಸರ್ಕಾರ ರಚಿಸಿದೆ. ನಿವೃತ್ತ ನ್ಯಾಯಮೂರ್ತಿಯವರ ಕುರಿತು ನಮ್ಮದೇನೂ ವಿರೋಧ ಇಲ್ಲ. ಆದರೆ, ಅವರೊಬ್ಬರೇ ನಿಮಗೆ ಸಿಗುತ್ತಿದ್ದಾರೆಯೇ' ಎಂದೂ ಕೇಳಿದ ಅವರು, 'ಪ್ರಕರಣವನ್ನು ಮುಚ್ಚಿ ಹಾಕಲೆಂದೇ ಜಿಲ್ಲಾಧಿಕಾರಿ ಮತ್ತು ಮೈಕೆಲ್ ಡಿಕುನ್ಹ ಅವರಿಗೆ ತನಿಖೆಯನ್ನು ವಹಿಸಲಾಗಿದೆ' ಎಂದು ಆರೋಪಿಸಿದರು.





ನಗರದಲ್ಲಿ ಇಂದು

ಬಸವಣ್ಣ ಅವರ ಜಯಂತಿ ಅಂಗವಾಗಿ 'ವಚನ ಗಾನ ಯಾನ–6' ಸಮಾರೋಪ: ಉದ್ಘಾಟನೆ: ಎಂ. ಕೃಷ್ಣಪ್ಪ, ಪ್ರಶಂಸಾ ಪತ್ರ ಪ್ರದಾನ: ಪ್ರಿಯಕೃಷ್ಣ, ಸಮಾರೋಪ ನುಡಿ: ಎಸ್. ಪಿನಾಕಪಾಣಿ, ಅಧ್ಯಕ್ಷತೆ: ಜೆ.ಎಂ. ರಾಚಯ್ಯ, ಪ್ರತಿಭಾ ಪುರಸ್ಕಾರ: ಬಿ.ಎಂ. ಹನುಮಂತಪ್ಪ, ಆಯೋಜನೆ: ಪ್ರಪುಣ್ಯಾ ಸಂಗೀತ ಶಾಲೆ, ಸ್ಥಳ: ಡಾ.ಚಿದಾನಂದಮೂರ್ತಿ ಸಭಾಂಗಣ, ಪಾಲಿಕೆ ಸೌಧ, 3ನೇ ಮಹಡಿ, ವಿಜಯನಗರ ಬಸ್ ನಿಲ್ದಾಣದ ಹತ್ತಿರ, ಬೆಳಿಗ್ಗೆ 9ರಿಂದ

'ಆರ್ಗ್ಯಾನಿಕ್ ಸಂತೆ': ಅತಿಥಿಗಳು: ವಿಕಾಸ್ ಬ್ರಹ್ಮಾವರ, ಶೈಲಜಾ ಜಿ., ಗಾಯನ: ಸಂಪದ ತಂಡ, ಆಯೋಜನೆ ಹಾಗೂ ಸ್ಥಳ: ದಿ ಗ್ರೀನ್ ಪಾಥ್, ಮಲ್ಲೇಶ್ವರ, ಬೆಳಿಗ್ಗೆ 9.30

ಸತ್ಸಂಗ: ರಮಣಚರಣ ತೀರ್ಥ ಸ್ವಾಮೀಜಿ, ಆಯೋಜನೆ: ಜನನಿ ಟ್ರಸ್ಟ್‌ನ ಎಸ್ಸೆ ಫೌಂಡೇಷನ್, ಸ್ಥಳ: ಆರ್.ವಿ. ಟೀಚರ್ಸ್ ಕಾಲೇಜು, ಜಯನಗರ 2ನೇ ಹಂತ, ಬೆಳಿಗ್ಗೆ 9.55

ಕಾವ್ಯ ಕಾಮಧೇನು ಎಚ್‌ಎಸ್‌ವಿ: ಸಾಹಿತ್ಯ ಗೌರವ: ಪ್ರೊ.ಕೆ.ಈ. ರಾಧಾಕೃಷ್ಣ, ಮಲ್ಲೇಪುರಂ ಜಿ. ವೆಂಕಟೇಶ್, ಬಿ.ಆರ್. ಲಕ್ಷ್ಮಣ ರಾವ್, ಚಾರ್ಲ್ಸ್ ಲಸ್ರಾಡೋ, ಸುಂದರ್ ವೀಣಾ, ಟಿ.ಎನ್. ಸೀತಾರಾಮ್, ರಂಗ ಗೌರವ: ಬಿ.ಜಯಶ್ರೀ, ಗೀತ ಗೌರವ: ಎಂ.ಡಿ. ಪಲ್ಲವಿ, ಉಪಸ್ಥಿತಿ: ಹಂಪ ನಾಗರಾಜಯ್ಯ, ಐ.ಎಂ. ವಿಠ್ಠಲಮೂರ್ತಿ, ಆಯೋಜನೆ: ಕಪ್ಪಣ್ಣ ಅಂಗಳ, ಸಮಂಜಸ, ಸ್ಥಳ: ಸಿ. ಅಶ್ವಥ್ ಕಲಾ ಭವನ, ಎನ್.ಆರ್. ಕಾಲೊನಿ, ಬೆಳಿಗ್ಗೆ 10

ಕೋಟಿ–ಚೆನ್ನಯ ಕ್ರೀಡಾಕೂಟ ಉದ್ಘಾಟನೆ: ಜಿ.ಪರಮೇಶ್ವರ, ಅಧ್ಯಕ್ಷತೆ: ಎನ್.ಎ. ಹ್ಯಾರಿಸ್, ಮುಖ್ಯ ಅತಿಥಿಗಳು: ಗಂಗಾಧರ ಪೂಜಾರಿ, ಕೃಷ್ಣ ಒಬಯ್ಯ, ಆಯೋಜನೆ: ಬಿಲ್ಲವ ಅಸೋಸಿಯೇಶನ್, ಸ್ಥಳ: ಸೇಂಟ್ ಜೋಸೆಫ್ ಇಂಡಿಯನ್ ಸ್ಕೂಲ್ ಆಟದ ಮೈದಾನ, ವಿಠಲ್ ಮಲ್ಯ ರಸ್ತೆ, ಬೆಳಿಗ್ಗೆ 10

ಸುವರ್ಣ ಪರ್ವ: ಶ್ರೀದೇವಿ ಲಲಿತಕಲಾ ವೃಂದ ಕಾರ್ಕಳದಿಂದ 'ಶಾಂಭವಿ ವಿಜಯ–ಶ್ರೀದೇವಿ ಮಹಿಮೆ' ಯಕ್ಷಗಾನ, ನಿರ್ದೇಶನ: ಶಶಿಕಾಂತ ಶೆಟ್ಟಿ, ಸಂಯೋಜನೆ: ಎಚ್. ಜನಾರ್ದನ ಹಂದೆ, ಆಯೋಜನೆ: ಸಾಲಿಗ್ರಾಮ ಮಕ್ಕಳ ಮೇಳ, ಸ್ಥಳ: ಪರಂಪರಾ ಹಾಲ್, ಚೆನ್ನಮ್ಮನ ಕೆರೆ ಅಚ್ಚುಕಟ್ಟು, ಬೆಳಿಗ್ಗೆ 10ರಿಂದ

ಡಾ.ಬಿ.ಆರ್. ಅಂಬೇಡ್ಕರ್, ಸಂತ ಸೇವಾಲಾಲ್ ಜಯಂತ್ಯುತ್ಸವ ಮತ್ತು ಭವನದ ಕೇಂದ್ರ ಕಚೇರಿ ಉದ್ಘಾಟನೆ ಹಾಗೂ ತಿರಂಗಯಾತ್ರೆ: ಕಾರ್ಯಾಲಯ ಉದ್ಘಾಟನೆ: ರಿಜ್ವಾನ್ ಅರ್ಷದ್, ಕಾರ್ಯಕ್ರಮ ಉದ್ಘಾಟನೆ: ಪಿ.ಸಿ. ಮೋಹನ್, ತಿರಂಗಯಾತ್ರೆಗೆ ಚಾಲನೆ: ಉಮೇಶ್ ಜಾಧವ್, ಉಪಸ್ಥಿತಿ: ವೆಂಕಟೇಶ್ ನಾಯ್ಕ್ ಟಿ., ಆಯೋಜನೆ: ಕರ್ನಾಟಕ ಪ್ರದೇಶ ಬಂಜಾರ ಸೇವಾ ಸಂಘ, ಸ್ಥಳ: ಬಂಜಾರ ಭವನ, # 16 ಕೆ, ಬಂಜಾರ ಭವನ, ಮಿಲ್ಲರ್ ಟ್ಯಾಂಕ್ ಬಂಡ್ ರಸ್ತೆ, ವಸಂತನಗರ, ಬೆಳಿಗ್ಗೆ 10

ವಿಕಸಿತ ಕೃಷಿ ಸಂಕಲ್ಪ ಅಭಿಯಾನದ ಭಾಗವಾಗಿ ರೈತರೊಂದಿಗೆ ಸಂವಾದ: ಶಿವರಾಜ್ ಸಿಂಗ್ ಚೌಹಾಣ್, ಆಯೋಜನೆ: ಭಾರತೀಯ ಕೃಷಿ ಸಂಶೋಧನಾ ಪರಿಷತ್ತು, ಸ್ಥಳ: ಐಸಿಎಆರ್–ಭಾರತೀಯ ತೋಟಗಾರಿಕೆ ಸಂಶೋಧನಾ ಸಂಸ್ಥೆ, ಹೆಸರುಘಟ್ಟ, ಬೆಳಿಗ್ಗೆ 10.30

ಮಹಾಕುಂಭಾಭಿಷೇಕ ಮಹೋತ್ಸವ: ರಾಜಗೋಪುರದ ಪ್ರಧಾನ ಕಲಷಾಭಿಷೇಕ, ಸರ್ವದೇವತಾಭಿಷೇಕ, ಸಾನ್ನಿಧ್ಯ: ಅಭಿನವ ಶಂಕರಭಾರತಿ ಸ್ವಾಮೀಜಿ, ಆಶೀರ್ವಚನ: ವಿದ್ಯಾಪ್ರಸನ್ನತೀರ್ಥ ಸ್ವಾಮೀಜಿ, ಮುಖ್ಯ ಅತಿಥಿ: ತೇಜಸ್ವಿ ಸೂರ್ಯ, ದೇವದಾಸ್, ಆಯೋಜನೆ: ಶ್ರೀ ವಿಘ್ನೇಶ್ವರ ಸಾರ್ವಜನಿಕ ವಿಶ್ವಸ್ಥ ಮಂಡಳಿ, ಸ್ಥಳ: ವಿಘ್ನೇಶ್ವರ ದೇವಸ್ಥಾನ, 26ನೇ ಮುಖ್ಯರಸ್ತೆ, ಬಿಟಿಎಂ ಬಡಾವಣೆ 2ನೇ ಹಂತ, ಬೆಳಿಗ್ಗೆ 11

ಪತ್ತೇದಾರಿ ಸಾಹಿತಿ ಎನ್. ನರಸಿಂಹಯ್ಯ ಅವರ ಜನ್ಮಶತಮಾನೋತ್ಸವ ಪ್ರಯುಕ್ತ ಕವಿಗೋಷ್ಠಿ, ಗೀತ ಗಾಯನ, ಪ್ರಶಸ್ತಿ ಪ್ರದಾನ: ಎಂ. ಪ್ರಕಾಶಮೂರ್ತಿ, ಅಧ್ಯಕ್ಷತೆ: ಮುರಳಿಕೃಷ್ಣ ಬೆಳಾಲು, ಅತಿಥಿ: ಎಚ್. ಎಸ್. ಜಯರಾಮ್, ಆಯೋಜನೆ: ಸಮ್ಮಿಲನ, ಸ್ಥಳ: ಕೆನ್ ಕಲಾಶಾಲೆ, ಶೇಷಾದ್ರಿಪುರ, ಬೆಳಿಗ್ಗೆ 11.30

ಪ್ರವೀಣರಾಜ್ ಎಸ್. ರಾವ್ ಅವರ 'ನದಿ ತಟದ ವೃಕ್ಷ' ಕವನ ಸಂಕಲನ ಬಿಡುಗಡೆ: ಉದ್ಘಾಟನೆ: ಗುರುರಾಜ್ ಹೊಸಕೋಟೆ, ಅತಿಥಿಗಳು: ಎಂ. ಪ್ರಕಾಶಮೂರ್ತಿ, ಮಲಕಪ್ಪ, ನಾಗರಾಜ್ ತಂಬ್ರಹಳ್ಳಿ, ಸ್ಥಳ: ಕನ್ನಡ ಸಾಹಿತ್ಯ ಪರಿಷತ್ತು, ಚಾಮರಾಜಪೇಟೆ, ಮಧ್ಯಾಹ್ನ 2

'ಮಕರಂದ' ಕನ್ನಡ ಕಲಿಕಾ ಅಭಿಯಾನದ ಘಟಿಕೋತ್ಸವ: ಅತಿಥಿಗಳು: ಪ್ರಣವ್ ಮೊಹಂತಿ, ಕೆ. ಪೂರ್ಣಿಮಾ ಶ್ರೀನಿವಾಸ್, ಪ್ರಸನ್ನ ರೈ, ವಿಕ್ರಂ ರೈ, ಆಯೋಜನೆ: ಮಕರಂದ, ಬಿಎಎಫ್ ತಂಡ, ಸ್ಥಳ: ಸೀ ಸಮೂಹ ಸಂಸ್ಥೆಗಳು, ಕೃಷ್ಣರಾಜಪುರ, ಮಧ್ಯಾಹ್ನ 2

'ಲವ ಕುಶ' ಯಕ್ಷಗಾನ ಪ್ರಸಂಗ: ಭಾಗವತಿಕೆ: ಬಾಲಕೃಷ್ಣ ಹಿಳ್ಳೋಡಿ, ಪ್ರಸನ್ನ ಕುಮಾರ್ ಹೆಗಡೆ, ಮದ್ದಳೆ: ಚಿನ್ಮಯ್ ಅಂಬಾರಗೋಡ್ಲು, ರಘು ಶರ್ಮ, ಚಂಡೆ: ಮಿತ್ರ ಮಧ್ಯಸ್ಥ, ಆಯೋಜನೆ: ನಿರ್ಮಾಣ್ ಯಕ್ಷ ಬಳಗ, ಸ್ಥಳ: ರಾಮಾಶ್ರಮ, ರಾಮಚಂದ್ರಾಪುರ ಮಠ, 80 ಅಡಿ ರಸ್ತೆ, ಗಿರಿನಗರ, ಮಧ್ಯಾಹ್ನ 2.30

ಎಚ್ಚೆಸ್ವಿ ನಮನ: ಕವಿ ಎಚ್.ಎಸ್. ವೆಂಕಟೇಶಮೂರ್ತಿ ಅವರಿಗೆ ಶ್ರದ್ಧಾಂಜಲಿ, ಮಾತನಾಡುವವರು: ಎಸ್.ಆರ್. ವಿಜಯಶಂಕರ, ನ. ರವಿಕುಮಾರ, ಆಯೋಜನೆ: ಶಿವರಾಮ ಕಾರಂತ ವೇದಿಕೆ, ವಿನಾಯಕ ದೇವಸ್ಥಾನ ಸಮಿತಿ, ಸ್ಥಳ: ಪಾಂಚಜನ್ಯ ಸಭಾಂಗಣ, ವಿನಾಯಕ ದೇವಸ್ಥಾನ, ಆರ್.ಟಿ.ನಗರ, ಸಂಜೆ 4


ಎಚ್ಚೆಸ್ವಿ

'ವಿಷ್ಣು ವಿಭವಂ' ನೃತ್ಯ ರೂಪಕ: ಮುಖ್ಯ ಅತಿಥಿಗಳು: ಶಾಂತಲಾ ರವಿಶಂಕರ್, ಪ್ರಕಾಶ್ ಎಸ್. ಅಯ್ಯರ್, ಆಯೋಜನೆ: ನೃತ್ಯ ಸಂಜೀವಿನಿ ಅಕಾಡೆಮಿ, ಸ್ಥಳ: ಎಡಿಎ ರಂಗಮಂದಿರ, ಜೆ.ಸಿ. ರಸ್ತೆ, ಸಂಜೆ 4

'ಮಹಾಭಾರತದ ಪಾತ್ರಗಳ ಪರಿಚಯ' ಧಾರ್ಮಿಕ ಪ್ರವಚನ: ವಿನಾಯಕ ನಾಮಣ್ಣವರ್, ಆಯೋಜನೆ: ಶ್ರೀ ರಾಘವೇಂದ್ರ ಸೇವಾ ಸಮಿತಿ, ಸ್ಥಳ: ರಾಘವೇಂದ್ರ ಸ್ವಾಮಿಗಳ ಮಠ, 6ನೇ ಅಡ್ಡರಸ್ತೆ, ಈಜುಕೊಳದ ಬಡಾವಣೆ, ಸುಧೀಂದ್ರನಗರ, ಸಂಜೆ 7

'ಹಸ್ಬೆಂಡ್ 360' ನಾಟಕ ಪ್ರದರ್ಶನ: ನಿರ್ದೇಶನ: ಅರ್ಚನಾ ಶ್ಯಾಮ್, ವಿಜಯ್ ಜೋಯಿಸ್, ಆಯೋಜನೆ: ಅಂತರಂಗ, ಸ್ಥಳ: ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ವರ್ಲ್ಡ್ ಕಲ್ಚರ್, ಬಿ.ಪಿ. ವಾಡಿಯಾ ರಸ್ತೆ, ಬಸವನಗುಡಿ, ಸಂಜೆ 7.15

ಸಾಹಿತ್ಯ, ಸಾಂಸ್ಕೃತಿಕ, ಶೈಕ್ಷಣಿಕ ಸೇರಿ ವಿವಿಧ ಕಾರ್ಯಕ್ರಮಗಳ ವಿವರಗಳನ್ನು 'ನಗರದಲ್ಲಿ ಇಂದು' ಅಂಕಣದಲ್ಲಿ ಪ್ರಕಟಿಸಲು ಈ ಕೆಳಗಿನ ಇ–ಮೇಲ್‌ಗೆ (ಸಂಜೆ 6 ಗಂಟೆ ಒಳಗೆ) ಕಳುಹಿಸಿ
nagaradalli_indu@prajavani.co.in



ಕಾಲ್ತುಳಿತ: ತಲಾ ₹ 1 ಕೋಟಿ ಪರಿಹಾರ ನೀಡಲು ಆಗ್ರಹ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಆರ್‌ಸಿಬಿ ತಂಡದ ಸಂಭ್ರಮಾಚರಣೆ ವೇಳೆ ಕಾಲ್ತುಳಿತದಲ್ಲಿ ಅಮಾಯಕರು ಬಲಿಯಾಗಿದ್ದು, ಅವರ ಕುಟುಂಬಗಳಿಗೆ ₹ 1 ಕೋಟಿ ಹಾಗೂ ಗಾಯಾಳುಗಳಿಗೆ ₹ 25 ಲಕ್ಷ ಪರಿಹಾರ ನೀಡಬೇಕು ಎಂದು ಕೇಂದ್ರ ಮಾಜಿ ಸಚಿವ ಸಿ.ಎಂ.ಇಬ್ರಾಹಿಂ ಆಗ್ರಹಿಸಿದರು.

ಸುದ್ದಿಗಾರರೊಂದಿಗೆ ಶನಿವಾರ ಮಾತನಾಡಿದ ಅವರು, 'ಹಣ ಕೊಟ್ಟು ಆಟಗಾರರನ್ನು ಖರೀದಿಸುವ ಐಪಿಎಲ್ ಕ್ರಿಕೆಟ್, ದೇಶದ ಅತಿ ದೊಡ್ಡ ಜೂಜು ಕ್ರೀಡೆ. ಇದರ ಹುಚ್ಚು ಅಭಿಮಾನದಿಂದ ಕೋಟ್ಯಂತರ ರೂಪಾಯಿ ಕಳೆದುಕೊಂಡವರಿದ್ದಾರೆ. ಈ ಜೂಜಾಟದ ಕ್ರೀಡೆಯನ್ನು ದೇಶದಿಂದಲೇ ನಿಷೇಧಿಸಲು ಬಿಸಿಸಿಐ ಕ್ರಮ ವಹಿಸಬೇಕು' ಎಂದು ಆಗ್ರಹಿಸಿದರು.

ಐಪಿಎಲ್‌ನಲ್ಲಿ ಗೆದ್ದವರನ್ನು ವಿಧಾನಸೌಧದ ಮುಂಭಾಗಕ್ಕೆ ಕರೆತಂದು ಸರ್ಕಾರ ಸನ್ಮಾನಿಸಲು ಅವರೇನು ಪಹಲ್ಗಾಂನಲ್ಲಿ ನಾಗರಿಕರ ರಕ್ಷಣೆಗೆ ಹೋರಾಡಿದವರೇ? ಹಾಕಿ, ವಾಲಿಬಾಲ್, ಕಬಡ್ಡಿಯಂತೆ ದೇಶಿಯ ಕ್ರೀಡೆಗಳು. ಕ್ರಿಕೆಟ್ ದೇಶಿಯ ಕ್ರೀಡೆಯಲ್ಲ. ಅದಕ್ಕೆ ಅಷ್ಟೊಂದು ಮಾನ್ಯತೆ ಯಾಕೆ ನೀಡಬೇಕು? ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಸ್ಥಳಾವಕಾಶ ಕಡಿಮೆ ಇದ್ದರೂ ಪೊಲೀಸರ ಅನುಮತಿ ಇಲ್ಲದೇ ಭಾರಿ ಸಂಖ್ಯೆಯಲ್ಲಿ ಸೇರಲು ಅವಕಾಶ ಯಾಕೆ ನೀಡಿದರು ಎಂದು ಪ್ರಶ್ನಿಸಿದರು.

ಸರ್ಕಾರ ಹಾಗೂ ಕರ್ನಾಟಕ ಕ್ರಿಕೆಟ್ ಅಸೋಸಿಯೇಷನ್, ಆರ್‌ಸಿಬಿ ಮ್ಯಾನೇಜ್‌ಮೆಂಟ್ ಯಾವುದೇ ಮುಂಜಾಗ್ರತಾ ಕ್ರಮ ವಹಿಸದೆ ಲೋಪ ಎಸಗಿವೆ. ಅವಘಡಕ್ಕೆ ಕಾರಣರಾದ ಎಲ್ಲಾ ತಪ್ಪಿತಸ್ಥರಿಗೂ ಶಿಕ್ಷೆಯಾಗಬೇಕು ಎಂದು ಆಗ್ರಹಿಸಿದರು.

ದರೋಡೆ : ಬೆಂಗಳೂರಿನಲ್ಲಿ 8 ಬಂಧನ

ಠಾಣೆ (ಪಿಟಿಐ): ದರೋಡೆ ಹಾಗೂ ಅಪಹರಣ ಪ್ರಕರಣ ಸಂಬಂಧ ನವಿ ಮುಂಬೈ ಪೊಲೀಸರು ಬೆಂಗಳೂರಿನಲ್ಲಿ ಎಂಟು ಮಂದಿಯನ್ನು ಬಂಧಿಸಿದ್ದಾರೆ.

ಆರೋಪಿಗಳು ಪೊಲೀಸರ ಸೋಗಿನಲ್ಲಿ ವ್ಯಕ್ತಿಯೊಬ್ಬರಿಂದ ₹31.7 ಲಕ್ಷವನ್ನು ದೋಚಿದ್ದರು.

'ನವಿ ಮುಂಬೈ ಪ್ರದೇಶದ ಜುಯಿನಗರದಲ್ಲಿ ಮೇ 31ರಂದು ಈ ಪ್ರಕರಣ ನಡೆದಿತ್ತು. ಜೂನ್ 2ರಂದು ಬೆಂಗಳೂರಿನ ಉಪ್ಪಾರಪೇಟೆ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ಆರೋಪಿಗಳನ್ನು ಬಂಧಿಸಲಾಗಿದೆ' ಎಂದು ಹಿರಿಯ ಇನ್‌ಸ್ಪೆಕ್ಟರ್ ದೇವಿದಾಸ್ ಕಟಾಲೆ ತಿಳಿಸಿದ್ದಾರೆ.

'ಮೇ 31ರಂದು ಬೆಳಿಗ್ಗೆ ಜುಯಿನಗರದ ರಾಷ್ಟ್ರೀಕೃತ ಬ್ಯಾಂಕ್‌ನ ಎಟಿಎಂಗೆ ಹಣ ಹಾಕುವ ವೇಳೆ ಆರೋಪಿಗಳು ದರೋಡೆ ಮಾಡಿದ್ದರು ಎಂದು ತಿಳಿಸಿದ್ದಾರೆ.

ನಗರದ ಇನ್ನಷ್ಟು ಸುದ್ದಿಗಳು 7A 7B

ಸಂಸದರ ಜೊತೆ ಪರಿಶೀಲನಾ ಸಭೆ ನಡೆಸಿ, ರೈಲ್ವೆ ಖಾತೆ ರಾಜ್ಯ ಸಚಿವ ವಿ. ಸೋಮಣ್ಣ ಮಾಹಿತಿ

ವರ್ತುಲ ರೈಲ್ವೆಗೆ 2,500 ಎಕರೆ ಜಮೀನು

ಪ್ರಜಾವಾಣಿ ವಾರ್ತೆ


ಬೆಂಗಳೂರು: ನಗರದ ಸುತ್ತಮುತ್ತಲಿನ ಪ್ರಮುಖ ಪಟ್ಟಣಗಳನ್ನು ಸಂಪರ್ಕಿಸುವ ದೇಶದ ಅತಿದೊಡ್ಡ ವೃತ್ತರೈಲು ಸಂಪರ್ಕಜಾಲವನ್ನು (ಸರ್ಕ್ಯುಲರ್ ರೈಲ್ವೆ) ನಿರ್ಮಿಸುವುದಕ್ಕಾಗಿ 2,500 ಎಕರೆ ಜಮೀನು ಭೂಸ್ವಾಧೀನ ಮಾಡಲು ನಿರ್ಧರಿಸಲಾಗಿದೆ. ಸ್ವಾಧೀನ ಮಾಡಿಕೊಳ್ಳುವ ಜಮೀನಿಗೆ ರೈಲ್ವೆ ಇಲಾಖೆಯೇ ಪರಿಹಾರ ನೀಡಲಿದೆ ಎಂದು ರೈಲ್ವೆ ಖಾತೆ ರಾಜ್ಯ ಸಚಿವ ವಿ. ಸೋಮಣ್ಣ ತಿಳಿಸಿದರು.

ಕೇಂದ್ರ ಸಚಿವೆ ಶೋಭಾ ಕರಂದ್ಲಾಜೆ, ಸಂಸದರಾದ ಕೆ. ಸುಧಾಕರ್, ಪಿ.ಸಿ.ಮೋಹನ್, ಡಾ.ಸಿ.ಎನ್. ಮಂಜುನಾಥ್, ರಾಜ್ಯದ ಸಚಿವ ಕೆ.ಎಚ್. ಮುನಿಯಪ್ಪ ಅವರ ಜೊತೆಗೆ ಹೊರ ವರ್ತುಲ ರೈಲ್ವೆ ಯೋಜನೆಯ ಪರಿಶೀಲನಾ ಸಭೆಯನ್ನು ಶನಿವಾರ ನಡೆಸಿದರು. ಬಳಿಕ ಸುದ್ದಿಗಾರರಿಗೆ ಮಾಹಿತಿ ನೀಡಿದರು.

ಮುಂದಿನ 50 ವರ್ಷಗಳನ್ನು ದೃಷ್ಟಿಯಲ್ಲಿಟ್ಟುಕೊಂಡು ವರ್ತುಲ ರೈಲ್ವೆ ಯೋಜನೆ ರೂಪಿಸಲಾಗಿದೆ. ಅದಕ್ಕೆ ಸಂಬಂಧಿಸಿದಂತೆ ಸಮೀಕ್ಷೆ ನಡೆಸಲಾಗಿದೆ. ಕೆಲ ನ್ಯೂನತೆ ಹಾಗೂ ಸವಾಲುಗಳಿರುವ ಬಗ್ಗೆ ಸಂಸದರು ತಿಳಿಸಿದ್ದಾರೆ. ಅವುಗಳನ್ನು ಸರಿಪಡಿಸಿ ವಿಸ್ತೃತ ಯೋಜನಾ ವರದಿ (ಡಿಪಿಆರ್) ರೂಪಿಸಲಾಗುವುದು ಎಂದು ವಿವರಿಸಿದರು.

ನಿಡವಂದ-ದೊಡ್ಡಬಳ್ಳಾಪುರ-ದೇವನಹಳ್ಳಿ-ಮಾಲೂರು, ಮಾಲೂರು-ಆನೇಕಲ್-ಹೆಜ್ಜಾಲ, ಹೆಜ್ಜಾಲ-ಸೋಲೂರು-ನಿಡವಂದ ಹೀಗೆ ಮೂರು ಹಂತದಲ್ಲಿ ಯೋಜನೆ ಅನುಷ್ಠಾನಗೊಳಿಸಲಾಗುವುದು. ಇದು 271 ಕಿ.ಮೀ. ಉದ್ದ ಹೊಂದಿದೆ. ವರ್ತುಲ ರೈಲು ಯೋಜನೆಗೆ ಸಾಧ್ಯವಿರುವೆಡೆ ಉಪನಗರ ರೈಲನ್ನು ಜೋಡಣೆ ಮಾಡಲಾಗುವುದು. ಜೊತೆಗೆ ರಾಷ್ಟ್ರೀಯ ಹೆದ್ದಾರಿ, ರಾಜ್ಯ ಹೆದ್ದಾರಿ ಸಂಪರ್ಕಿಸುವಂತೆ ಮಾಡಲು ತೀರ್ಮಾನಿಸಲಾಗಿದೆ ಎಂದರು.

ಭೂಸ್ವಾಧೀನಕ್ಕಾಗಿ ನೈಋತ್ಯ ರೈಲ್ವೆ ಬೆಂಗಳೂರು ವಿಭಾಗೀಯ ವ್ಯವಸ್ಥಾಪಕರು, ಭೂಸ್ವಾಧೀನ ಅಧಿಕಾರಿ, ಉನ್ನತಾಧಿಕಾರಿಗಳ ಸಮಿತಿ ರಚಿಸಲಾಗುವುದು. ಕೆಐಎಡಿಬಿ, ಕೆ-ರೈಡ್, ಬಿಬಿಎಂಪಿ, ನಗರ ಹಾಗೂ ಗ್ರಾಮಾಂತರ ಜಿಲ್ಲಾಡಳಿತ ಸೇರಿ ಸಂಬಂಧಿಸಿದ ಎಲ್ಲ ಅಧಿಕಾರಿಗಳನ್ನು ಸಮಿತಿ ಒಳಗೊಳ್ಳಲಿದೆ. ಪರಿಹಾರಕ್ಕಾಗಿ ರೈಲ್ವೆ ಇಲಾಖೆ, ರಾಜ್ಯಸರ್ಕಾರ, ಸುಪ್ರೀಂ ಕೋರ್ಟ್ ಮಾರ್ಗಸೂಚಿ ಅನುಸರಿಸಲಾಗುವುದು. ಸಾಧ್ಯವಾದಷ್ಟು ಯಾರಿಗೂ ತೊಂದರೆಯಾಗದಂತೆ ಖಾಸಗಿ ಜಮೀನು ಪಡೆಯಲಾಗುವುದು ಎಂದರು.



ವರ್ತುಲ ರೈಲು ಸಂಪರ್ಕ ಜಾಲ

ರಾಜ್ಯದ ಪಾಲುದಾರಿಕೆಯಿಂದಾಗಿ ಬಿಎಸ್‌ಆರ್‌ಪಿ ಕುಂಠಿತ

ರಾಜ್ಯ ಸರ್ಕಾರದ ಪಾಲುದಾರಿಕೆಯೂ ಇರುವುದರಿಂದ ಬೆಂಗಳೂರು ಉಪನಗರ ರೈಲು ಯೋಜನೆ (ಬಿಎಸ್‌ಆರ್‌ಪಿ) ಕುಂಠಿತವಾಗಿದೆ ಎಂದು ವಿ. ಸೋಮಣ್ಣ ಸಮಜಾಯಿಷಿ ನೀಡಿದರು.

ಬಿಎಸ್‌ಆರ್‌ಪಿಯನ್ನು ಅನುಷ್ಠಾನಗೊಳಿಸುವ ಕೆ-ರೈಡ್‌ನ ವ್ಯವಸ್ಥಾಪಕ ನಿರ್ದೇಶಕರಾಗಿ ಸದ್ಯ ಐಎಎಸ್ ಅಧಿಕಾರಿ ಇದ್ದಾರೆ. ಇದರಿಂದಾಗಿ ಯಾವ ಕೆಲಸವೂ ಆಗುತ್ತಿರಲಿಲ್ಲ. ಇದೀಗ ಮೂಲಸೌಕರ್ಯ ಅಭಿವೃದ್ಧಿ ಸಚಿವ ಎಂ.ಬಿ. ಪಾಟೀಲ ಅವರು ಕೂಡ ಹೊಸ ವ್ಯವಸ್ಥಾಪಕ ನಿರ್ದೇಶಕರ ನೇಮಕಕ್ಕೆ ಸಮ್ಮತಿಸಿದ್ದಾರೆ ಎಂದು ತಿಳಿಸಿದರು.

ರೈಲ್ವೆಯಿಂದ ಒಂದು ತಿಂಗಳ ಒಳಗಾಗಿ ಹಿರಿಯ ಅನುಭವಿ ತಾಂತ್ರಿಕ ಪರಿಣತ ವ್ಯವಸ್ಥಾಪಕ ನಿರ್ದೇಶಕರ ನೇಮಕ ಆಗಲಿದ್ದಾರೆ. ಉಪನಗರ ರೈಲು ಯೋಜನೆ ಕಾಮಗಾರಿ ಚುರುಕುಗೊಳ್ಳಲಿದೆ ಎಂದು ವಿಶ್ವಾಸ ವ್ಯಕ್ತಪಡಿಸಿದರು.

ಮೆಗಾ ಕೋಚಿಂಗ್ ಟರ್ಮಿನಲ್

ಬೆಂಗಳೂರು, ದೇವನಹಳ್ಳಿ ಹಾಗೂ ಯಲಹಂಕ ನಡುವೆ ಮೆಗಾ ಕೋಚಿಂಗ್ ಟರ್ಮಿನಲ್ ನಿರ್ಮಿಸಲು ವಿಸ್ತೃತ ಯೋಜನಾ ವರದಿ ತಯಾರಿಸಲಾಗುವುದು ಎಂದು ಸಚಿವ ವಿ. ಸೋಮಣ್ಣ ತಿಳಿಸಿದರು.

ನಗರದಲ್ಲಿ ಹೊಸ ಐಟಿ ಸಿಟಿಗಳು ತಲೆ ಎತ್ತಲಿವೆ. ಮೆಟ್ರೊ, ಉಪನಗರ ರೈಲು ಯೋಜನೆ ಜೊತೆಗೆ ವರ್ತುಲ ರೈಲು ಯೋಜನೆಯೂ ಅಗತ್ಯವಿದೆ ಎಂದರು.


ಸುದ್ದಿ 2 ನಿಮಿಷ

ಕೋವಿಡ್: ರಾಜ್ಯದಲ್ಲಿ ಮೃತರ ಸಂಖ್ಯೆ 9ಕ್ಕೆ ಏರಿಕೆ

ಬೆಂಗಳೂರು: ರಾಜ್ಯದಲ್ಲಿ ಇತ್ತೀಚೆಗೆ ಮೃತಪಟ್ಟವರಲ್ಲಿ ಇಬ್ಬರು ಕೋವಿಡ್ ಪೀಡಿತರಾಗಿದ್ದರು ಎನ್ನುವುದು ಪ್ರಯೋಗಾಲಯ ಪರೀಕ್ಷೆಯಿಂದ ದೃಢಪಟ್ಟಿದೆ. ಇದರಿಂದಾಗಿ ಈ ವರ್ಷ ಕೋವಿಡ್‌ನಿಂದ ಮೃತಪಟ್ಟವರ ಸಂಖ್ಯೆ ಒಂಬತ್ತಕ್ಕೆ ಏರಿಕೆಯಾಗಿದೆ.

ಹೃದಯ ಸಂಬಂಧಿ ಸಮಸ್ಯೆ ಎದುರಿಸುತ್ತಿದ್ದ ಬೆಳಗಾವಿಯ 78 ವರ್ಷದ ವೃದ್ಧ ಏಪ್ರಿಲ್ 6ರಂದು ಖಾಸಗಿ ಆಸ್ಪತ್ರೆಗೆ ದಾಖಲಾಗಿದ್ದರು. ಶ್ವಾಸಕೋಶ ಸಂಬಂಧಿ ಸಮಸ್ಯೆ ಎದುರಿಸುತ್ತಿದ್ದ 46 ವರ್ಷದ ವ್ಯಕ್ತಿ ಮೇ 29ರಂದು ಸರ್ಕಾರಿ ಆಸ್ಪತ್ರೆಗೆ ದಾಖಲಾಗಿದ್ದರು. ಅವರಿಗೆ ಜ್ವರ, ಉಸಿರಾಟದ ಸಮಸ್ಯೆ ಕಾಣಿಸಿಕೊಂಡಿದ್ದರಿಂದ ಕೋವಿಡ್ ಪರೀಕ್ಷೆಗೆ ಗಂಟಲ ದ್ರವದ ಮಾದರಿಯನ್ನು ಸಂಗ್ರಹಿಸಲಾಗಿತ್ತು. ಇಬ್ಬರೂ ಇದೇ 5ರಂದು ಮೃತಪಟ್ಟಿದ್ದಾರೆ. ಅವರ ಕೋವಿಡ್ ಪರೀಕ್ಷಾ ವರದಿ ಶನಿವಾರ ಬಂದಿದ್ದು, ಕೊರೊನಾ ಸೋಂಕಿತರಾಗಿರುವುದು ದೃಢಪಟ್ಟಿದೆ.

ರಾಜ್ಯದಲ್ಲಿ 24 ಗಂಟೆಗಳ ಅವಧಿಯಲ್ಲಿ 542 ಗಂಟಲ ದ್ರವದ ಮಾದರಿಗಳನ್ನು ಪರೀಕ್ಷೆ ಮಾಡಲಾಗಿದ್ದು, 57 ಪ್ರಕರಣಗಳು ಹೊಸದಾಗಿ ದೃಢಪಟ್ಟಿವೆ. ಇದರಿಂದಾಗಿ ಈವರೆಗೆ ವರದಿಯಾದ ಒಟ್ಟು ಕೋವಿಡ್ ಪ್ರಕರಣಗಳ ಸಂಖ್ಯೆ 894ಕ್ಕೆ ಏರಿಕೆಯಾಗಿದೆ. ಸಕ್ರಿಯ ಪ್ರಕರಣಗಳ ಸಂಖ್ಯೆ 366ಕ್ಕೆ ತಲುಪಿದೆ. 353 ಮಂದಿ ಮನೆ ಆರೈಕೆಗೆ ಒಳಗಾದರೆ, 13 ಮಂದಿ ಆಸ್ಪತ್ರೆಗಳಲ್ಲಿ ಚಿಕಿತ್ಸೆ ಪಡೆದುಕೊಳ್ಳುತ್ತಿದ್ದಾರೆ.



ಅಶ್ರಫ್ ಕಿನಾರ ವಿರುದ್ಧ ಎಫ್‌ಐಆರ್

ಮಂಗಳೂರು: ವಾಟ್ಸ್ ಆ್ಯಪ್‌ನ 'ಪಿರ್ಸ ಎಪ್ಪೊಲುಂ ಇಕ್ಕಟ್ಟ್' ಎಂಬ ಗ್ರೂಪ್‌ನಲ್ಲಿ ವಿಡಿಯೊ ಹಾಗೂ ಬರಹ ಹಂಚಿಕೊಂಡ ಆರೋಪದ ಮೇಲೆ ಅಶ್ರಫ್ ಕಿನಾರ ಕುದ್ರೋಳಿ ಅವರ ವಿರುದ್ಧ ನಗರ ಉತ್ತರ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿದೆ.

''ಪಿರ್ಸ ಎಪ್ಪೊಲುಂ ಇಕ್ಕಟ್ಟ್' ವಾಟ್ಸ್ ಆ್ಯಪ್ ಗ್ರೂಪ್‌ನಲ್ಲಿ ಅಶ್ರಫ್ ಕಿನಾರ ಅವರು 'ಬ್ರೇಕಿಂಗ್..., ಇದೀಗ ಸಜಿಪ ಪಾವೂರ್ ನಲ್ಲಿ ಮತ್ತೆ ಪೊಲೀಸ್ ರೈಡ್..., ಅಲ್ಲಾಹನ ಸಮರ್ಪಣೆಗೆ ತಂದಿಟ್ಟ ಉಳ್ಹಿಯಾ ಕೊಡುವ ಹಸುಗಳನ್ನು ವಶಪಡಿಸುತ್ತಿರುವ ಪೊಲೀಸರು. ಕೇಳಿದರೆ ಸರ್ಕಾರದ ಆದೇಶವಂತೆ. ಮುಸ್ಲಿಮರ ಮತಗಳಲ್ಲಿ ಉಸಿರಾಡುತ್ತಿರುವ ಕಾಂಗ್ರೆಸ್ ಸರ್ಕಾರಕ್ಕೆ ಮುಸ್ಲಿಮರು ಒಟ್ಟಾಗಿ ಬಿಸಿ ಮುಟ್ಟಿಸಬೇಕು' ಎಂದು ಬರೆದುಕೊಂಡಿದ್ದರು. ಅದನ್ನು ಮಾಹಿತಿದಾರರೊಬ್ಬರು ತಮ್ಮ ವಾಟ್ಸ್‌ಆ್ಯಪ್‌ಗೆ ಕಳುಹಿಸಿದ್ದರು ಎಂದು ಠಾಣೆಯ ಕಾನ್‌ಸ್ಟೆಬಲ್ ಸುನಿಲ್ ಕುಮಾರ್ ಎನ್.ಪಿ ದೂರಿನಲ್ಲಿ ತಿಳಿಸಿದ್ದಾರೆ' ಎಂದು ಪೊಲೀಸರು ಮಾಹಿತಿ ನೀಡಿದ್ದಾರೆ.

ತ್ಯಾಗ ಬಲಿದಾನದ ಹಬ್ಬ ಬಕ್ರೀದ್


ಸಾಮೂಹಿಕ ಪ್ರಾರ್ಥನಾ ಸಮಾರಂಭದಲ್ಲಿ ಮೌಲಾನ ಶೇಕ್ ಜಾಹೀರ್ ಅಹಮದ್ ಮಾತನಾಡಿದರು

ಪ್ರಜಾವಾಣಿ ವಾರ್ತೆ

ರಾಜರಾಜೇಶ್ವರಿನಗರ: 'ತ್ಯಾಗ, ಬಲಿದಾನ, ಮಾನವೀಯ ಮೌಲ್ಯ, ಸಹೋದರತ್ವ, ಶಾಂತಿಯ ಸಂಕೇತ ಮತ್ತು ಎಲ್ಲರೂ ಒಗ್ಗೂಡಿ ಜೀವನ ಸಾಗಿಸುವ ಹಬ್ಬವೇ ಬಕ್ರೀದ್' ಎಂದು ಮೌಲಾನ ಶೇಕ್ ಜಾಹೀರ್ ಅಹಮದ್ ತಿಳಿಸಿದರು.

ಮತ್ತಿಕೆರೆಯ ಜೆ.ಪಿ.ಪಾರ್ಕ್ ಆಟದ ಮೈದಾನದಲ್ಲಿ ಬಕ್ರೀದ್ ಅಂಗವಾಗಿ ಮಸ್ಜಿದ್-ಎ-ತಾಹ ಆಯೋಜಿಸಿದ್ದ ಸಾಮೂಹಿಕ ಪ್ರಾರ್ಥನೆ ನಂತರ ಅವರು ಮಾತನಾಡಿದರು.

'ಮಕ್ಕಳಿಗೆ ಶಿಕ್ಷಣ ಕೊಡಿಸಬೇಕು. ಮಕ್ಕಳನ್ನು ಹತೋಟಿಯಲ್ಲಿಟ್ಟುಕೊಂಡು ಸಂಸ್ಕಾರವಂತರಾಗಿ ರೂಪಿಸಬೇಕು ಎಂದು ಇಸ್ಲಾಂ ಧರ್ಮ ಹೇಳುತ್ತದೆ. ಮಕ್ಕಳು ಬಾಲ್ಯದಲ್ಲಿಯೇ ಪ್ರೀತಿ, ವಿಶ್ವಾಸ ವೃದ್ಧಿಸಿಕೊಂಡು ನೆಮ್ಮದಿಯ ಜೀವನ ಸಾಗಿಸಬೇಕಾಗಿದೆ' ಎಂದರು.

ಮಸ್ಜಿದ್-ಎ-ತಾಹಾದ ಅಧ್ಯಕ್ಷ ಸಮೀಉಲ್ಲಾ ಖಾನ್, 'ನಮ್ಮ ಮಸೀದಿಯಲ್ಲಿ ಕನ್ನಡ ಬಾರದವರಿಗೆ ಕನ್ನಡ ಕಲಿಸುವ ಪ್ರಯತ್ನ ಮಾಡುತ್ತಿದ್ದೇವೆ. ಕನ್ನಡ ಗ್ರಂಥಾಲಯವನ್ನು ಸ್ಥಾಪಿಸಿದ್ದೇವೆ' ಎಂದರು.

ಸಾಮೂಹಿಕ ಪ್ರಾರ್ಥನಾ ಸಭೆಯಲ್ಲಿ, ಆರ್‌ಸಿಬಿ ವಿಜಯೋತ್ಸವದ ವೇಳೆ ಕಾಲ್ತುಳಿತದಲ್ಲಿ ಮೃತರಾದ 11 ಮಂದಿಗೆ ಶ್ರದ್ಧಾಂಜಲಿ ಸಲ್ಲಿಸಲಾಯಿತು. 'ಘಟನೆಯಲ್ಲಿ ತೀವ್ರವಾಗಿ ಗಾಯಗೊಂಡವರು ಶೀಘ್ರ ಗುಣಮುಖರಾಗಲಿ' ಎಂದು ಪ್ರಾರ್ಥಿಸಲಾಯಿತು.

ಮಸ್ಜಿದ್ ಎ ತಾಹದ ಉಪಾಧ್ಯಕ್ಷ ಅಮೀರ್, ಕಾರ್ಯದರ್ಶಿ ಶಹಜಹಾನ್, ಖಜಾಂಚಿ ಸಾಗರ್ ಸಮೀಉಲ್ಲಾ, ಬೈತುಲ್ ಮಾಲ್ ಕಮಿಟಿಯ ಅಧ್ಯಕ್ಷ ನಜೀರ್, ಕಾರ್ಯದರ್ಶಿ ಬಶೀರ್ ಉಲ್ಲಾ ಬೇ, ಕೋಶಾಧ್ಯಕ್ಷ ಫಯಾಜ್, ದಸ್ತಗಿರ್ ಷರೀಫ್, ಮಹಮ್ಮದ್ ಫಕ್ರುದ್ದೀನ್ ಇದ್ದರು.

ಭಕ್ತಿಯಿಂದ ಬಕ್ರೀದ್ ಆಚರಣೆ


ಮಕ್ಕಳು ಬಕ್ರೀದ್ ಶುಭಾಶಯ ವಿನಿಯಮ ಮಾಡಿಕೊಂಡರು ಚಿತ್ರ: ಬಿ.ಕೆ. ಜನಾರ್ದನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ತ್ಯಾಗ ಹಾಗೂ ಬಲಿದಾನದ ಸಂಕೇತವಾದ ಬಕ್ರೀದ್ ಅನ್ನು ಮುಸ್ಲಿಂ ಸಮುದಾಯದವರು ನಗರದಲ್ಲಿ ಶ್ರದ್ಧೆ ಹಾಗೂ ಭಕ್ತಿಯಿಂದ ಆಚರಿಸಿದರು.

ನಗರದ ಹಲವು ಮಸೀದಿಗಳಲ್ಲಿ ನಡೆದ ಸಾಮೂಹಿಕ ಪ್ರಾರ್ಥನೆಯಲ್ಲಿ ನೂರಾರು ಜನರು ಪಾಲ್ಗೊಂಡಿದ್ದರು. ಧರ್ಮಗುರುಗಳು ಸಂದೇಶ ನೀಡಿದರು.

ಚಾಮರಾಜಪೇಟೆಯ ಈದ್ಗಾ ಮೈದಾನದಲ್ಲಿ ನಡೆದ ಸಾಮೂಹಿಕ ಪ್ರಾರ್ಥನೆಯಲ್ಲಿ ವಸತಿ ಸಚಿವ ಜಮೀರ್ ಅಹಮದ್ ಖಾನ್ ಹಾಗೂ ಅವರ ಪುತ್ರ, ನಟ ಜೈದ್ ಖಾನ್ ಪಾಲ್ಗೊಂಡಿದ್ದರು.

ಚಿಕ್ಕಪೇಟೆ ವಿಧಾನಸಭಾ ಕ್ಷೇತ್ರದ ಬಡಾ ಮಕಾನ್ ಈದ್ಗಾ ಮೈದಾನದಲ್ಲಿ ವಿಧಾನ ಪರಿಷತ್‌ನ ಸರ್ಕಾರದ ಮುಖ್ಯ ಸಚೇತಕ ಸಲೀಂ ಅಹ್ಮದ್ ಅವರ ಜೊತೆ ಸ್ಥಳೀಯ ಶಾಸಕ ಉದಯ್ ಗರುಡಾಚಾರ್ ಅವರು ಪ್ರಾರ್ಥನೆ ಸಲ್ಲಿಸಿದರು.

ಪಾದರಾಯನಪುರ, ಕಲಾಸಿಪಾಳ್ಯ, ಮೈಸೂರು ರಸ್ತೆ, ಶಿವಾಜಿನಗರ, ಹೆಬ್ಬಾಳ, ಆರ್.ಟಿ.ನಗರ, ಶಾಂತಿನಗರ, ಲಾಲ್‌ಬಾಗ್ ರಸ್ತೆ, ಮಾಗಡಿ ರಸ್ತೆ, ಕಮ್ಮಗೊಂಡನಹಳ್ಳಿ ವಿವಿಧ ಪ್ರಮುಖ ಮಸೀದಿಗಳಲ್ಲಿ ಮುಸ್ಲಿಮರು ಪ್ರಾರ್ಥನೆ ಸಲ್ಲಿಸಿದರು.

ಮಕ್ಕಳು, ದೊಡ್ಡವರು ಹೊಸ ಬಟ್ಟೆ ಧರಿಸಿ, ಹೊಸ ಟೋಪಿ ತೊಟ್ಟು ಸಂಭ್ರಮಿಸಿದರು. ಪರಸ್ಪರ ಆಲಂಗಿಸಿ ಕೊಂಡು ಶುಭಾಶಯ ವಿನಿಮಯ ಮಾಡಿಕೊಂಡರು. ಮಕ್ಕಳು ಶುಭಾಶಯ ವಿನಿಯಮ ಮಾಡಿಕೊಂಡರು. ನೆರೆ ಹೊರೆಯವರು, ಬಡವರಿಗೆ ತಮ್ಮ ಶಕ್ತಿಗೆ ಅನುಸಾರವಾಗಿ ಮಾಂಸ ದಾನ ಮಾಡಿದರು. ಹಬ್ಬದೂಟ ಮಾಡಿ ಸಂಬಂಧಿಕರ ಜೊತೆಗೆ, ಸ್ನೇಹಿತರ ಜೊತೆಗೆ ಹಂಚಿಕೊಂಡರು.


ಸಲೀಂ ಅಹ್ಮದ್, ಉದಯ್ ಗರುಡಾಚಾರ್ ಅವರು ಚಿಕ್ಕಪೇಟೆಯಲ್ಲಿ ಪ್ರಾರ್ಥನೆ ಸಲ್ಲಿಸಿದರು


ಜಮೀರ್ ಅಹಮದ್ ಖಾನ್ ಮತ್ತು ಜೈದ್ ಖಾನ್ ಅವರು ಚಾಮರಾಜಪೇಟೆಯಲ್ಲಿ ಪ್ರಾರ್ಥನೆ ಸಲ್ಲಿಸಿದರು—ಪ್ರಜಾವಾಣಿ ಚಿತ್ರಗಳು


ಈದ್ಗಾ ಮೈದಾನದಲ್ಲಿ ಮಕ್ಕಳ ಪ್ರಾರ್ಥನೆ

ಚಿತ್ರ: ಎಂ.ಎಸ್. ಮಂಜುನಾಥ್

ಸಂಕ್ಷಿಪ್ತ ಸುದ್ದಿ

ಬಿಜೆಪಿ ನಿಯೋಗ ದ.ಕ.ಕ್ಕೆ ಭೇಟಿ ನಾಳೆ

ಮಂಗಳೂರು: ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಎರಡು ತಿಂಗಳಿಂದ ನಡೆಯುತ್ತಿರುವ ಬೆಳವಣಿಗೆಗಳ ಬಗ್ಗೆ ಪರಾಮರ್ಶಿಸಲು ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ. ವಿಜಯೇಂದ್ರ ಮತ್ತು ವಿಧಾನಸಭೆ ಪ್ರತಿಪಕ್ಷದ ನಾಯಕ ಆರ್. ಅಶೋಕ ನೇತೃತ್ವದ ನಿಯೋಗವು ಇದೇ 9ರಂದು ಇಲ್ಲಿಗೆ ಭೇಟಿ ನೀಡಲಿದೆ.

ಮಾಜಿ ಮುಖ್ಯಮಂತ್ರಿ ಡಿ.ವಿ. ಸದಾನಂದ ಗೌಡ, ವಿಧಾನ ಸಭೆಯ ಪ್ರತಿಪಕ್ಷದ ಉಪನಾಯಕ ಅರವಿಂದ ಬೆಲ್ಲದ, ಶಾಸಕ ವಿ.ಸುನಿಲ್ ಕುಮಾರ್, ವಿಧಾನ ಪರಿಷತ್‌ನ ವಿಪಕ್ಷದ ಮುಖ್ಯ ಸಚೇತಕ ಎನ್. ರವಿಕುಮಾರ್, ವಿಧಾನ ಪರಿಷತ್ ಸದಸ್ಯ ಸಿ.ಟಿ. ರವಿ ಈ ನಿಯೋಗದಲ್ಲಿ ಇರಲಿದ್ದಾರೆ.

ವೈದ್ಯರ ತಂಡದ ಚೀನಾ ಪ್ರವಾಸ

ಬೆಂಗಳೂರು: ದಿ ಚೈನೀಸ್ ಪೀಪಲ್ಸ್ ಅಸೋಸಿಯೇಷನ್ ಫಾರ್ ಫ್ರೆಂಡ್ಶಿಪ್ ವಿಥ್ ಫಾರಿನ್ ಕಂಟ್ರೀಸ್ ಅವರ ಆಹ್ವಾನದ ಮೇರೆಗೆ ಭಾರತದಿಂದ ಹತ್ತು ವೈದ್ಯರ ತಂಡ ಚೀನಾ ಪ್ರವಾಸ ಕೈಗೊಂಡಿದೆ.ಚೀನಾದ ವಿವಿಧ ಆರೋಗ್ಯ ವ್ಯವಸ್ಥೆಗಳನ್ನು ವೈದ್ಯರು ಎಂಟು ದಿನ ಅಧ್ಯಯನ ಮಾಡಲಿದ್ದಾರೆ. ಶಂಕರ್ ಗುಹಾ ಸೇರಿದಂತೆ ಹತ್ತು ವೈದ್ಯರು ತಂಡದಲ್ಲಿದ್ದಾರೆ.

ಚಾವಣಿ ಸೌರ ಅಭಿಯಾನ

ಬೆಂಗಳೂರು: ನವೀಕರಿಸಬಹುದಾದ ಇಂಧನ ವಲಯದ ಏಟ್ರಿಯಾ ರಿನ್ಯೂವಬಲ್ ಸಂಸ್ಥೆ, ಸಮುದಾಯ ಕೇಂದ್ರಿತ ಚಾವಣಿ ಸೌರ ಅಭಿಯಾನವನ್ನು ಆರಂಭಿಸಿದೆ.

'ವಸತಿ ಪ್ರದೇಶಗಳಲ್ಲಿ ಸೌರ ಅಳವಡಿಕೆದಾರರ ಸೂಕ್ಷ್ಮ ಸಮೂಹಗಳನ್ನು ರಚಿಸಲಾಗುತ್ತದೆ' ಎಂದು ಏಟ್ರಿಯಾ ಗ್ರೂಪ್‌ನ ಅಧ್ಯಕ್ಷ ಸಿ.ಎಸ್. ಸುಂದರ್ ರಾಜು ತಿಳಿಸಿದರು.

'ಹಲವು ಮಾದರಿಗಳ ಮೂಲಕ ಸೌರಶಕ್ತಿಯನ್ನು ಹೆಚ್ಚು ಜನರ ಕೈಗೆಟುಕುವಂತೆ ಮಾಡುವ ಸಾಮೂಹಿಕ ಚಳವಳಿಯನ್ನು ಈ ಅಭಿಯಾನ ಸೃಷ್ಟಿಸಲಿದೆ' ಎಂದರು.

ಸೆಮಿನಾರ್ ತಪ್ಪಿಸಿಕೊಳ್ಳಲು ಬಾಂಬ್ ಹುಸಿ ಕರೆ!

ಪ್ರಜಾವಾಣಿ ವಾರ್ತೆ

ಮಂಗಳೂರು: ದೇರಳಕಟ್ಟೆ ನಾಟೆಕಲ್ ರಸ್ತೆ ಬಳಿಯ ಕಣಚೂರು ವೈದ್ಯಕೀಯ ಕಾಲೇಜು ಆಸ್ಪತ್ರೆಯಲ್ಲಿ ಬಾಂಬ್ ಇರಿಸಲಾಗಿದೆ ಎಂದು ಬುಧವಾರ (ಜೂನ್ 4) ಹುಸಿ ಕರೆ ಮಾಡಿದ ಪ್ರಕರಣ ಸಂಬಂಧ ಅದೇ ಸಂಸ್ಥೆಯ ವಿದ್ಯಾರ್ಥಿನಿಯನ್ನು ಪೊಲೀಸರು ಶನಿವಾರ ಬಂಧಿಸಿದ್ದಾರೆ.

'ಸಂಸ್ಥೆಯ ವೈದ್ಯಕೀಯ ಸ್ನಾತಕೋತ್ತರ ವಿಭಾಗದ ವಿದ್ಯಾರ್ಥಿನಿ ಚಲಸಾನಿ ಮೋನಿಕಾ ಚೌಧರಿ ಬಂಧಿತ ವಿದ್ಯಾರ್ಥಿನಿ. ಆಕೆ ಅದೇ ದಿನ ಸೆಮಿನಾರ್ ಪ್ರಸ್ತುತಿ ಪಡಿಸಬೇಕಿತ್ತು. ಅದನ್ನು ತಪ್ಪಿಸಿಕೊಳ್ಳಲು ಹುಸಿ ಬಾಂಬ್ ಕರೆಯ ನಾಟಕವಾಡಿದ್ದಳು ಎಂದು ತನಿಖೆಯಲ್ಲಿ ಗೊತ್ತಾಗಿದೆ' ಎಂದು ಉಳ್ಳಾಲ ಠಾಣೆಯ ಪೊಲೀಸರು ತಿಳಿಸಿದ್ದಾರೆ.

ಕಣಚೂರು ವೈದ್ಯಕೀಯ ಕಾಲೇಜು ಆಸ್ಪತ್ರೆಗೆ ಬುಧವಾರ ಬೆಳಿಗ್ಗೆ 8.45 ಗಂಟೆಗೆ ಕರೆ ಬಂದಿತ್ತು, 'ಆಸ್ಪತ್ರೆ ಯಲ್ಲಿ ಬಾಂಬ್ ಇರಿಸಲಾಗಿದೆ. ಬೆಳಿಗ್ಗೆ11ರ ಒಳಗಾಗಿ ಆಸ್ಪತ್ರೆಯಲ್ಲಿದ್ದವರನ್ನೆಲ್ಲ ಖಾಲಿ ಮಾಡಬೇಕು' ಎಂದು ಬೆದರಿಸಲಾಗಿತ್ತು. ಇದೇ ರೀತಿ 5 ಸಲ ಕರೆ ಮಾಡಿ ಬೆದರಿಕೆ ಹಾಕಲಾಗಿತ್ತು. ಪೊಲೀಸರು, ಬಾಂಬ್ ನಿಷ್ಕ್ರಿಯ ದಳದ ತಂಡ ಹಾಗೂ ಶ್ವಾನ ದಳಗಳನ್ನು ಒಳಗೊಂಡ ತಂಡ ಆಸ್ಪತ್ರೆಯ ಸಂಪೂರ್ಣ ಕಟ್ಟಡ, ಆಸ್ಪತ್ರೆಯ ವಾಹನ ನಿಲುಗಡೆ ಸ್ಥಳ ಹಾಗೂ ಆಸ್ಪತ್ರೆಯ ಸುತ್ತಮುತ್ತಲಿನ ಪರಿಸರ ಸತತ 10 ಗಂಟೆ ಪರಿಶೀಲಿಸಿದ್ದರು. ಸ್ಥಳದಲ್ಲಿ ಯಾವುದೇ ಬಾಂಬ್ ಪತ್ತೆಯಾಗಿರಲಿಲ್ಲ. ಬೆದರಿಕೆ ಕರೆಯಿಂದಾಗಿ ಆಸ್ಪತ್ರೆಯ ವೈದ್ಯರು, ಸಿಬ್ಬಂದಿ ಹಾಗೂ ರೋಗಿಗಳು ಆತಂಕಕ್ಕೆ ಒಳಗಾಗಿದ್ದರು.

ಆರೋಪಿಯನ್ನು ಬಂಧಿಸಿ, ಆಕೆಯ ಮೊಬೈಲನ್ನು ಶನಿವಾರ ವಶಕ್ಕೆ ಪಡೆಯಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

'ಮಾದಿಗರೊಂದಿಗೆ ತ್ರಿಮತಸ್ಥರ ಸಮೀಕರಣ ಬೇಡ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಡೋಹರ, ಸಮಗಾರ, ಮಚಿಗಾರ ಸಮುದಾಯಗಳನ್ನು ಮಾದಿಗರೊಂದಿಗೆ ಸಮೀಕರಣ ಮಾಡುವುದನ್ನು ನಿಲ್ಲಿಸಬೇಕು. ಈ ತ್ರಿಮತಸ್ಥ ಸಮುದಾಯಗಳಿಗೂ ಮತ್ತು ಮಾದಿಗ ಸಮುದಾಯಕ್ಕೂ ಸಂಬಂಧವಿಲ್ಲ ಎಂದು ತ್ರಿಮತಸ್ಥ ಶ್ರೀಗುರು ರವಿದಾಸ ಪರಿಷತ್ ತಿಳಿಸಿದೆ.

'ಮಾದಿಗ, ಸಮಗಾರ, ಚನ್ನಯ್ಯ, ಡೋಹರ, ದಕ್ಕಲಿಗ ಜಾತಿ–ಉಪಜಾತಿ ಸಂಘಟನೆಗಳ ಒಕ್ಕೂಟ–ಕರ್ನಾಟಕ', 'ಮಾದಿಗ, ಸಮಗಾರ, ಚನ್ನಯ್ಯ, ಡೋಹರ ಹಾಗೂ ಹೊಲೆಯ ಸಮಾಜಗಳ ಒಕ್ಕೂಟ–ಕರ್ನಾಟಕ ರಾಜ್ಯ' ಹೆಸರುಗಳಲ್ಲಿ ಪೋಸ್ಟರ್‌ಗಳನ್ನು ಹಂಚಲಾಗುತ್ತಿದೆ. ಇದು ಸಾಂಸ್ಕೃತಿಕ ಅತಿಕ್ರಮಣವಾಗಿದ್ದು, ತ್ರಿಮತಸ್ಥ ಚರ್ಮಕಾರರ ಭಾವನೆಗೆ ಧಕ್ಕೆ ತಂದಿದೆ' ಎಂದು ಪರಿಷತ್‌ನ ಸಂಚಾಲಕರು ತಿಳಿಸಿದ್ದಾರೆ.

'ಇದು ಶ್ರೇಷ್ಠ–ಕನಿಷ್ಠದ ವ್ಯಸನದ ಪ್ರಶ್ನೆ ಅಲ್ಲ. ತ್ರಿಮತಸ್ಥರ ಅಸ್ತಿತ್ವದ ಮತ್ತು ಅಸ್ಮಿತೆಯ ಪ್ರಶ್ನೆ. ಎರಡು ಪರಕೀಯ ಮತ್ತು ಭಿನ್ನ ಸಮುದಾಯಗಳಾಗಿವೆ. ವಿಧಾನಗಳು, ವಿಧಿ ನಿಷೇಧಗಳು, ಧಾರ್ಮಿಕ ಆಚರಣೆಗಳು, ಸಾಮಾಜಿಕ ಸಂಪ್ರದಾಯಗಳು, ಜೀವನಪದ್ಧತಿ, ಸಂಸ್ಕಾರಗಳು, ದೇವತಾರಾಧನೆ ಕ್ರಮ, ಆಹಾರ ಕ್ರಮಗಳು ಮಾದಿಗ ಸಮುದಾಯದ ಜೀವನ ಶೈಲಿಗಿಂತ ಸಂಪೂರ್ಣ ಭಿನ್ನವಾಗಿದೆ' ಎಂದು ವಿವರಿಸಿದ್ದಾರೆ.

ಮಾದಿಗ, ಮಾದರ್, ಎಡಗೈ, ಎಡಗುಂಪು ಇದ್ಯಾವುದೂ ಅಲ್ಲದ ಡೋಹರ, ಮಚಿಗಾರ, ಸಮಗಾರರನ್ನು ಯಾವುದೇ ಸೂಚನೆ ನೀಡದೇ ಮಾದಿಗ ಜಾತಿಯವರು ಎಂದು ಬಿಂಬಿಸಲಾಗುತ್ತಿದೆ. ಎಡಗೈ ಗುಂಪು ಎಂದು ಹಣೆಪಟ್ಟಿ ಕಟ್ಟುವ ಪ್ರಯತ್ನಗಳು ಖಂಡನೀಯ. ಅಸ್ಪೃಶ್ಯರಲ್ಲೇ ದುರ್ಬಲ ಸಮುದಾಯ ನಮ್ಮದು. ಮಾದಿಗರ 28 ಸಮುದಾಯಗಳು ಎಂದು ಈ ಮೂರು ಸಮುದಾಯಗಳನ್ನು ಸೇರಿಸಿ ವರ್ಗೀಕರಿಸಿದರೆ ಶಾಶ್ವತ ಅಪಾಯ ಉಂಟಾಗುತ್ತದೆ ಎಂದು ಅವರು ಎಚ್ಚರಿಸಿದ್ದಾರೆ.

'ಸಂಸ್ಥೆಗಳಿಂದ ಪಾದಚಾರಿ ಮಾರ್ಗ ಅಭಿವೃದ್ಧಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಖಾಸಗಿ ಸಂಸ್ಥೆಗಳು, ಅಪಾರ್ಟ್‌ಮೆಂಟ್, ಕಾಂಪ್ಲೆಕ್ಸ್ ಹಾಗೂ ಇತರ ಖಾಸಗಿ ಸಂಸ್ಥೆಗಳು ತಮ್ಮ ಆವರಣದ ಮುಂಭಾಗದಲ್ಲಿರುವ ಪಾದಚಾರಿ ಮಾರ್ಗಗಳನ್ನು ಸ್ವಯಂ ಪ್ರೇರಿತವಾಗಿ ಅಭಿವೃದ್ಧಿಪಡಿಸಿ, ನಿರ್ವಹಣೆ ಮಾಡಬೇಕು' ಎಂದು ಬಿಬಿಎಂಪಿ ಮುಖ್ಯ ಆಯುಕ್ತ ಮಹೇಶ್ವರ್ ರಾವ್ ಸೂಚಿಸಿದರು.

ಮಹದೇವಪುರ ವಲಯದಲ್ಲಿ ಶನಿವಾರ ಪರಿಶೀಲನೆ ಸಂದರ್ಭದಲ್ಲಿ ಮಾತನಾಡಿದ ಅವರು, ಖಾಸಗಿಯವರು ಪಾದಚಾರಿ ಮಾರ್ಗದ ಅಭಿವೃದ್ಧಿ ಹಾಗೂ ನಿರ್ವಹಣೆ ಮಾಡಲು ಅನುಕೂಲವಾಗಲು ವಿಭಾಗೀಯ ಆದೇಶ ಹೊರಡಿಸುವಂತೆ ಅಧಿಕಾರಿಗಳಿಗೆ ಆದೇಶಿಸಿದರು.

'ರಸ್ತೆ ಬದಿಯ ಎಲ್ಲಾ ಮನೆಗಳ ಮುಂಭಾಗದ ಗೇಟುಗಳು ಒಳಭಾಗಕ್ಕೆ ತೆರೆಯುವಂತಿರಬೇಕು. ಪಾದಚಾರಿ ಮಾರ್ಗದ ಮೇಲೆ ಹೊರಗೆ ತೆರೆಯುವಂತಹ ಗೇಟುಗಳನ್ನು ಅಳವಡಿಸಿದವರಿಗೆ ದಂಡ ವಿಧಿಸಬೇಕು. ಈ ನಿಯಮವನ್ನು ಕಡ್ಡಾಯವಾಗಿ ಜಾರಿಗೆ ತರುವ ಉದ್ದೇಶದಿಂದ ಎಲ್ಲಾ ಆವರಣದ ಗೇಟುಗಳ ಸಮಗ್ರ ಪರಿಶೀಲನೆ ನಡೆಸಬೇಕು' ಎಂದು ಸೂಚಿಸಿದರು.

'ಮಹದೇವಪುರ ವಲಯ ವ್ಯಾಪ್ತಿಯ ಸೀತಾರಾಮ್ ಪಾಳ್ಯ ಮೆಟ್ರೊ ನಿಲ್ದಾಣದಿಂದ ಬಿಇಎಂಎಲ್ ಲೇಔಟ್ ಮುಖ್ಯರಸ್ತೆವರೆಗೆ ಪರಿಶೀಲಿಸಿದ ಮಹೇಶ್ವರ್ ರಾವ್, ಪಾದಚಾರಿ ಮಾರ್ಗದ ಒತ್ತುವರಿ ತೆರವು, ರಾಜಕಾಲುವೆಯ ಹತ್ತಿರದ ಕಟ್ಟಡಗಳ ತೆರವಿಗೆ ಕ್ರಮ ವಹಿಸಲು ಸೂಚಿಸಿದರು. ವಲಯ ಆಯುಕ್ತರು ಅಭಿವೃದ್ಧಿ ಕಾಮಗಾರಿಗಳ ಬಗ್ಗೆ ನಿರಂತರ ಪರಿಶೀಲಿಸಬೇಕು' ಎಂದು ತಿಳಿಸಿದರು.

ಬ್ರಿಗೇಡ್ ಟೆಕ್ ಗಾರ್ಡನ್ ಸಂಸ್ಥೆಯವರು ಪಾದಚಾರಿ ಮಾರ್ಗದಲ್ಲಿ ಅಡ್ಡಲಾಗಿ ಅಳವಡಿಸಿರುವ ಕರ್ಬ್‌ಗಳನ್ನು ಕೂಡಲೇ ತೆರವುಗೊಳಿಸಬೇಕು, ಐಟಿಪಿಎಲ್ ಮುಖ್ಯ ರಸ್ತೆಯಲ್ಲಿರುವ ಶಿವಶಕ್ತಿ ಬಾರ್‌ನವರು ಮದ್ಯದ ಬಾಟಲ್, ಪ್ಲಾಸ್ಟಿಕ್ ಬಾಟಲ್‌ಗಳನ್ನು ರಸ್ತೆಗೆ ಎಸದಿದ್ದು, ಅದನ್ನು ತೆರವುಗೊಳಿಸಿ, ಬಾರ್‌ನವರಿಗೆ ದಂಡ ವಿಧಿಸಲು ಸೂಚಿಸಿದರು.

ಗ್ರಾಫೈಟ್ ಇಂಡಿಯಾ ಮುಖ್ಯರಸ್ತೆಯಲ್ಲಿನ ರಾಯಲ್ ಬಿಲ್ಡಿಂಗ್ ಹೌಸ್‌ನವರು ತ್ಯಾಜ್ಯವನ್ನು ಪಾದಚಾರಿ ಮಾರ್ಗದಲ್ಲಿ ಹಾಕಿದ್ದು, ಅವರಿಗೆ ದಂಡ ವಿಧಿಸಬೇಕು. ವಾಹನಗಳನ್ನು ನಿಲುಗಡೆ ಮಾಡುವುದನ್ನು ತಡೆಯಬೇಕು ಎಂದರು.

ಐಟಿಪಿಎಲ್ ಮುಖ್ಯರಸ್ತೆಯಲ್ಲಿರುವ ಅಕ್ಮೆ ಎನ್‌ಕೋರ್ ಅಪಾರ್ಟ್‌ಮೆಂಟ್‌ನವರು ತ್ಯಾಜ್ಯ ನೀರನ್ನು ಚರಂಡಿಗೆ ಬಿಡುತ್ತಿದ್ದು, ಅವರ ಮೇಲೆ ಕ್ರಮ ಕೈಗೊಳ್ಳಲು ಸೂಚಿಸಿದರು.


ಮಹದೇವಪುರದಲ್ಲಿ ಮಹೇಶ್ವರ್ ರಾವ್ ಪಾದಚಾರಿ ಮಾರ್ಗ ಪರಿಶೀಲಿಸಿದರು

ಸಮರ್ಪಿತ ತಂಡ

ರಸ್ತೆ, ಪಾದಚಾರಿ ಮಾರ್ಗಗಳನ್ನು ನಿರ್ವಹಣೆ ಮಾಡಲು 'ಸಮರ್ಪಿತ' ತಂಡ ರಚಿಸಬೇಕು ಎಂದು ಬಿಬಿಎಂಪಿ ಮುಖ್ಯ ಆಯುಕ್ತ ಮಹೇಶ್ವರ್ ರಾವ್ ಅವರು ಸೂಚಿಸಿದರು.

ಬಿಬಿಎಂಪಿಯಲ್ಲಿನ ವಿವಿಧ ಇಲಾಖೆಗಳಾದ ರಸ್ತೆ ಮೂಲಸೌಕರ್ಯ ವಿಭಾಗ, ಸಂಚಾರ ಎಂಜಿನಿಯರಿಂಗ್ ಘಟಕ, ಓಎಫ್‌ಸಿ ಮತ್ತು ವಿದ್ಯುತ್ ವಿಭಾಗಗಳು ಒಟ್ಟಾರೆ 'ಸಮಗ್ರ ಸಂಚಾರಿ ಇಲಾಖೆ'ಯಾಗಿ ಏಕೀಕರಿಸಬೇಕು. ಈ ವಿಭಾಗಕ್ಕೆ ಸ್ವಂತ ಸಾರಿಗೆ ಯೋಜಕರು ಮತ್ತು ನಗರ ವಿನ್ಯಾಸಕಾರರನ್ನು ನೇಮಿಸಿಕೊಂಡು, ರಸ್ತೆ ಮತ್ತು ಪಾದಚಾರಿ ಮಾರ್ಗಗಳ ಅಭಿವೃದ್ಧಿ, ನಿರ್ವಹಣೆಗೆ 'ಸಮರ್ಪಿತ ತಂಡ' ರಚಿಸಬೇಕು ಎಂದರು.

ವಸತಿ ಪ್ರದೇಶಗಳಲ್ಲಿ ಕನಿಷ್ಠ 1.8 ಮೀಟರ್ ಮತ್ತು ವಾಣಿಜ್ಯ ಪ್ರದೇಶಗಳಲ್ಲಿ 2.5 ಮೀಟರ್ ವಿಸ್ತೀರ್ಣದ ಪಾದಚಾರಿ ಮಾರ್ಗ ಇರುವಂತೆ ಕ್ರಮ ಕೈಗೊಳ್ಳಬೇಕು ಎಂದು ಸೂಚಿಸಿದರು.

ಬಕ್ರೀದ್ ಆಚರಿಸಿಕೊಂಡವರನ್ನೂ ಗೋಸೇವೆಗೆ ಹಚ್ಚಬೇಕಾಗಿದೆ –ಬಿ.ಎಲ್. ಸಂತೋಷ್

'ನಾವು ಆರಾಧಿಸುತ್ತೇವೆ, ಅವರು ಕಡಿಯುತ್ತಿದ್ದಾರೆ..'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಗೋವು ಅಂದರೆ ಹಿಂದೂ. ಗೋವು ಅಂದರೆ ಭಾರತ. ನಾವು ಗೋವುಗಳನ್ನು ಆರಾಧಿಸುವ ಕಾರಣಕ್ಕಾಗಿಯೇ ಅವರು ಕಡಿಯುತ್ತಿದ್ದಾರೆ' ಎಂದು ಬಿಜೆಪಿ ರಾಷ್ಟ್ರೀಯ ಸಂಘಟನಾ ಪ್ರಧಾನ ಕಾರ್ಯದರ್ಶಿ ಬಿ.ಎಲ್. ಸಂತೋಷ್ ತಿಳಿಸಿದರು.

ಕೆ.ಎನ್. ಶೈಲೇಶ್ ಹೊಳ್ಳ ರಚಿಸಿರುವ ಕಾಮಧೇನು ಸರಣಿಯ ಐದು ಪುಸ್ತಕಗಳನ್ನು ಶನಿವಾರ ಬಿಡುಗಡೆ ಮಾಡಿ ಅವರು ಮಾತನಾಡಿದರು.

ಮಾಂಸಕ್ಕಾಗಿ ಇನ್ನು ಹಲವು ಪ್ರಾಣಿಗಳಿವೆ. ರುಚಿ ಹೆಚ್ಚು, ದರ ಕಡಿಮೆ ಎಂಬುದೆಲ್ಲ ನೈಜ ಕಾರಣವಲ್ಲ. ಇದಕ್ಕಿಂತ ಕಡಿಮೆ ದರದಲ್ಲಿ ಬೇರೆ ಮಾಂಸ ಸಿಗುತ್ತದೆ ಎಂದು ಹೇಳಿದರು.

'ಗೋಸಂರಕ್ಷಣೆ ಹೆಸರಲ್ಲಿ ಇನ್ನೆಷ್ಟು ವರ್ಷ ಕೇಸ್ ಹಾಕಿಸಿಕೊಳ್ಳುವುದು. ಗೋಸೇವೆ, ಗೋಸಂರಕ್ಷಣೆಯಿಂದ ಗೋಸಂವರ್ಧನೆ ಕಡೆಗೆ ನಾವು ಬರಬೇಕು. ಇಂದು ಬಕ್ರೀದ್ ಆಚರಿಸಿಕೊಂಡವರನ್ನೂ ಗೋಸೇವೆಗೆ ಹಚ್ಚಬೇಕಾಗಿದೆ. ಆಗ ಗೋರಕ್ಷಣೆಗಿಂತ ಗೋಸಂವರ್ಧನೆಯೇ ಮುಖ್ಯ ವಿಷಯ ಆಗಲು ಸಾಧ್ಯ' ಎಂದು ಪ್ರತಿಪಾದಿಸಿದರು.

ಗೋವು ಸಾಕಣೆ ಆರ್ಥಿಕ ಸ್ಥಿರತೆಯನ್ನು ಎಲ್ಲಿಯವರೆಗೆ ನೀಡುವುದಿಲ್ಲವೋ ಅಲ್ಲಿಯವರೆಗೆ ರೈತರು ಗೋವುಗಳ ಮಾರಾಟವನ್ನು ನಿಲ್ಲಿಸುವುದಿಲ್ಲ. ಗೋಶಾಲೆಗಳೆಲ್ಲ ಕೇವಲ ಸಂಕೇತಗಳು. ಗೋಶಾಲೆಗಳಿಂದ ಪೂರ್ಣಪ್ರಮಾಣದಲ್ಲಿ ಗೋಸಂರಕ್ಷಣೆ ಸಾಧ್ಯವಿಲ್ಲ. ಗೋಶಾಲೆ ಎಂಬುದು ವೃದ್ಧಾಶ್ರಮ ಇದ್ದಂತೆ. ಮನೆಯಲ್ಲಿ ಯಾರು ಗೋಸೇವೆ ಮಾಡುತ್ತಾರೋ ಅವರು ಹಿಂಸಾಪ್ರವೃತ್ತಿಯವರಾಗಲು ಸಾಧ್ಯವಿಲ್ಲ ಎಂದರು.

ಪಾರಂಪರಿಕ ವೈದ್ಯ ಹನುಮಂತ ಮಳಲಿ ಮಾತನಾಡಿ, 'ನಮ್ಮಲ್ಲಿ ಕಸಾಯಿ ಖಾನೆಗೆ ಸುಲಭದಲ್ಲಿ ಅನುಮತಿ ಸಿಗುತ್ತದೆ. ಗೋಶಾಲೆಗಳಿಗೆ ಅನುಮತಿ ಪಡೆಯುವುದು ಕಷ್ಟ. ಗೋವು ಕಡಿಯುವವರು ಮತ್ತು ಅವರಿಗೆ ಗೋವು ಕೊಡುವವರು ಸರ್ವನಾಶವಾಗುವವರೆಗೆ ಗೋಹತ್ಯೆ ಪಾಪ ಹೋಗಲ್ಲ' ಎಂದು ಹೇಳಿದರು.

ಲೇಖಕಿ ಎಸ್.ಆರ್. ಲೀಲಾ, ಚಿಕ್ಕಮಗಳೂರಿನ 'ಗೋಲೋಕ' ಗೋಶಾಲೆಯ ಅಧ್ಯಕ್ಷ ಎಸ್.ಎನ್. ರಾಮಸ್ವಾಮಿ, ಲೇಖಕ ಕೆ.ಎನ್. ಶೈಲೇಶ್ ಹೊಳ್ಳ ಉಪಸ್ಥಿತರಿದ್ದರು.

ಮುಖ್ಯಾಂಶಗಳು

- ರುಚಿ ಹೆಚ್ಚು, ದರ ಕಡಿಮೆ ಎಂಬುದೆಲ್ಲ ನೈಜ ಕಾರಣವಲ್ಲ
- ಗೋಸಂರಕ್ಷಣೆ ಹೆಸರಲ್ಲಿ ಇನ್ನೆಷ್ಟು ಕೇಸ್ ಹಾಕಿಸಿ ಕೊಳ್ಳುವುದು
- ಗೋಸೇವಕರಿಂದ ಹಿಂಸಾ ಪ್ರವೃತ್ತಿ ಸಾಧ್ಯವಿಲ್ಲ


ಕಾಮಧೇನು ಸರಣಿಯ ಐದು ಪುಸ್ತಕಗಳ ಲೋಕಾರ್ಪಣೆ ಕಾರ್ಯಕ್ರಮದಲ್ಲಿ ಎಸ್. ಆರ್. ಲೀಲಾ, ಹನುಮಂತ ಮಳಲಿ, ಎಸ್.ಎನ್. ರಾಮಸ್ವಾಮಿ, ಬಿ.ಎಲ್. ಸಂತೋಷ್ ಕೆ.ಎನ್. ಶೈಲೇಶ್ ಹೊಳ್ಳ ಉಪಸ್ಥಿತರಿದ್ದರು. ಪ್ರಜಾವಾಣಿ ಚಿತ್ರ

Create the Future

Up to
100% Scholarships
for eligible candidates*
*T&C apply

RANKED

69 IN INDIA — Among the Top Engineering Institutes

44 IN INDIA — Among the Top Private Institutes for Placement

Source: Times All India Engineering Institutes Ranking Survey 2025



CMR UNIVERSITY

Private University Estd in Karnataka State by Act No. 45 of 2013
BENGALURU | RECOGNISED BY UGC

APPLY NOW!

ADMISSIONS OPEN FOR AY 2025-26 | **LIMITED SEATS AT CONCESSIONAL FEE**

- **20+** PRESTIGIOUS INSTITUTIONS
- **45+** NATIONALITIES OF STUDENTS
- **75+** ACADEMIC DEPARTMENTS
- **200+** TOP RECRUITERS
- **1000+** WORLD CLASS FACULTY
- **20000+** ALUMNI ACROSS THE GLOBE

Semester-wise payment option | Interest-free education loan (EMI option*) | Hostel facility for boys & girls | Transport facility*

*T&C apply

Programmes Offered

SCHOOL OF ARCHITECTURE
B.Arch.

SCHOOL OF ENGINEERING & TECHNOLOGY
B.Tech.
- Computer Science & Engineering
- Computer Science & Engineering (Artificial Intelligence & Machine Learning)
- Computer Science & Engineering (Data Science)
- Computer Engineering*
  *With specialisation in Artificial Intelligence & Machine Learning, Internet of Things
- Computer Science and Technology*
  *With specialisation in Artificial Intelligence & Machine Learning, Internet of Things
- Information Technology
- Electronics and Communication Engineering

M.Tech. (For Regular and Professionals)
- Computer Science & Engineering
- Artificial Intelligence

Ph.D.
- Computer Science and Engineering (Artificial Intelligence & Machine Learning, Networking and Cloud Computing, Data Analytics, Cyber Security, Data Science and Internet of Things)
- ECE
- Mechanical Engineering

SCHOOL OF DESIGN
B.Des.
- Communication Design • Product Design
- Fashion Design • Interior Design

B.Sc.
- Sound Engineering
- Visual Effects & Animation

SCHOOL OF LIBERAL STUDIES
B.A. (Major + Minor)
- Psychology • English • Journalism
- Political Science • History • Sociology
- Media Studies • Travel & Tourism

B.Sc. | Psychology
M.Sc. | Psychology
- Clinical • Counselling • Human Resource Development and Management

Ph.D.
- Psychology

SCHOOL OF ECONOMICS & COMMERCE
B.Com.
- International Accounting & Finance (ACCA, UK)
- Professional - CA Integrated
- Data Science
- Certified Management Accountant (US CMA)

Ph.D.
- Economics
- Commerce

SCHOOL OF LEGAL STUDIES
B.A., LL.B. (Hons)
B.B.A., LL.B. (Hons)
LL.B.
LL.M.
- Constitutional Law
- Commercial Law
- Criminal Law

Ph.D. | Law

SCHOOL OF SCIENCE & COMPUTER STUDIES
BCA
- Cloud Computing • Data Science
- Game Development • Artificial Intelligence & Machine Learning NEW

B.Sc.
- Information Technology


M.Sc.
- Information Technology in Data Science

MCA
Ph.D. | Computer Application

SCHOOL OF MANAGEMENT
BBA
- Digital Marketing • Business Analytics
- Fintech NEW • Data Science NEW
- Logistics & Supply Chain Management NEW
- Tourism & Hospitality Management NEW

MBA with Dual Specialisation in
- Marketing • HR • Finance • Business Analytics
- Digital Marketing • Supply Chain Management

MBA | Business Analytics & Business Intelligence
MBA | Technology Management NEW
Executive MBA | Product Leadership
Ph.D. | Management



CMRIT — CELEBRATING 25 YEARS
CMR INSTITUTE OF TECHNOLOGY, BENGALURU.

NAAC GRADE A++ ACCREDITED INSTITUTION

CMR INSTITUTE OF TECHNOLOGY

- Permanently affiliated to VTU
- Approved by AICTE
- NIRF Ranked
- Recognised by the Govt. of Karnataka

B.E. | CSE • CSE (AI & ML) • AI & DS • AI & ML • CSE (Data Science) • ISE • ECE

MBA | **MCA**

Ph.D. | • CSE • ECE • Physics • Mathematics • Chemistry • Business Administration • Computer Applications

B.E : CET code - **E097** | ComedK code - **E032**
PGCET code : MCA - **C420MC** | MBA - **B151MB**

www.cmrit.ac.in
admission@cmrit.ac.in

SCAN FOR DETAILS

OUR GLOBAL ACADEMIC COLLABORATION

Atlantis University • Bradley University • ISM International School of Management • Seokyeong University • Humaniza • excelia group • Putra Business School • IT Tutor Pro

INNOVATIVE LEARNING FOR IMPACTFUL CHANGE
- Nurtures creative thinking
- Promotes global positive change
- Follows a project-based learning approach
- Encourages community service
- Offers interdisciplinary coursework
- Includes exchange and global immersion programmes

Our recruiters
BOSCH • KPMG • Capgemini • EY • IBM • zomato • amazon • Deloitte.
and many more..

ACCELERATED CREDIT COURSE PROGRAMME (ACCP)
Get trained and certified for FREE in niche courses and stay ahead of the competition

CET codes: B.Tech. - **E257** | B.Arch. - **E245**
PGCET code: MBA (City Campus) - **B150**
MBA (OMBR Campus) - **B149** | MBA (Lakeside Campus) - **B395** | MCA (OMBR Campus) - **C527**
MCA (Lakeside Campus) - **C521**

COMEDK code:
B.Tech. - **E187**
B.Arch. - **E187A**

We honour JEE, COMEDK, CUET, KCET and other state / National-level tests.
Direct admission for CUET students

93429 00666

www.cmr.edu.in
admissions@cmr.edu.in

Lakeside Campus: Off Hennur-Bagalur Main Road, Chagalahatti, Bengaluru - 562 149
City Campus: #2, 3rd Cross, 6th A Main, HRBR Layout, Bengaluru - 560 043
OMBR Campus: No.5, Bhuvanagiri, OMBR Layout, Bengaluru - 560 043
CMRIT Campus: 132, AECS Layout, ITPL Main Road, Kundalahalli, Bengaluru - 560 037

SCAN TO WATCH THE CAMPUS VIDEO

ಎನ್‌ಇಸಿಸಿ ಮೊಟ್ಟೆ ಧಾರಣೆ

ಬೆಂಗಳೂರು	100ಕ್ಕೆ	₹605
	12 ಕ್ಕೆ	₹80
ಮೈಸೂರು	100ಕ್ಕೆ	₹610

ರಾಮನಗರ ರೇಷ್ಮೆಗೂಡು

ಮಿಶ್ರತಳಿ (ಸಿ.ಬಿ)	₹280-480
ದ್ವಿತಳಿ (ಬಿ.ವಿ)	₹333-620

ಎನ್.ಆರ್.ಪುರ ರಬ್ಬರ್

ಆರ್‌ಎಸ್‌ಎಸ್-4	₹193.50
ಆರ್‌ಎಸ್‌ಎಸ್-5	₹188.50
ಗುಡ್ ಲಾಟ್	₹178.50

(ಪ್ರತಿ ಕೆ.ಜಿಗೆ)

ಅಡಿಕೆ ಹಾಳೆ ತಟ್ಟೆ, ಲೋಟಗಳ ಆಮದು ನಿಷೇಧಿಸಿದ ಅಮೆರಿಕ • ಉತ್ಪಾದನೆಯಲ್ಲಿ ಶೇ 50ರಷ್ಟು ಇಳಿಕೆ

ಕೋರ್ಟ್ ಕದತಟ್ಟಲಿದೆ 'ಹಾಳೆ ತಟ್ಟೆ'

• ಸಂಧ್ಯಾ ಹೆಗಡೆ

ಮಂಗಳೂರು: ಅಡಿಕೆ ಹಾಳೆ ತಟ್ಟೆ ಉತ್ಪಾದನೆಯನ್ನು ಉದ್ಯಮವಾಗಿ ರೂಪಿಸಿ ಕೊಂಡಿರುವ ಜಿಲ್ಲೆಯ ಹಲವಾರು ಸಂಸ್ಥೆಗಳು ಎರಡು ವಾರಗಳಿಂದ ಉತ್ಪಾದನೆಯನ್ನು ಶೇ 50ರಷ್ಟು ಇಳಿಕೆ ಮಾಡಿವೆ.

'ಅಡಿಕೆ ಹಾಳೆಯಲ್ಲಿ ನೈಸರ್ಗಿಕವಾಗಿ ಇರುವ ವಿಷಕಾರಿ ಅಂಶದಿಂದ ಕ್ಯಾನ್ಸರ್ ಬರುತ್ತದೆ. ಅದಕ್ಕಾಗಿ ಅವುಗಳನ್ನು ಬಳಸಬೇಡಿ' ಎಂದು ಅಮೆರಿಕದ ಆಹಾರ ಮತ್ತು ಔಷಧ ವ್ಯವಹಾರಗಳ ಸಚಿವಾಲಯವು ಮೂರು ವಾರಗಳ ಹಿಂದೆ ಸುತ್ತೋಲೆ ಹೊರಡಿಸಿತ್ತು. ಈ ಸುತ್ತೋಲೆ ಬೆನ್ನಲ್ಲೇ ಅಡಿಕೆ ಹಾಳೆಯಿಂದ ತಯಾರಿಸುವ ತಟ್ಟೆ, ಲೋಟಗಳ ಆಮದು ನಿಷೇಧಗೊಂಡಿದೆ. ಇದು ಸ್ಥಳೀಯ ಉದ್ಯಮದ ಮೇಲೆ ನೇರ ಪರಿಣಾಮ ಬೀರಿದ್ದು, ಹಾಳೆ ತಟ್ಟೆ ಉತ್ಪಾದಕ ಸಂಸ್ಥೆಗಳು ನಷ್ಟ ಅನುಭವಿಸುತ್ತಿವೆ. ಉತ್ಪಾದನೆ ಇಳಿಮುಖವಾಗಿರುವ ಕಾರಣ ಕೆಲಸಗಾರರೂ ಕೆಲಸ ಕಳೆದುಕೊಳ್ಳುವ ಭೀತಿ ಎದುರಿಸುತ್ತಿದ್ದಾರೆ.

'ರಾಜ್ಯದ ದಕ್ಷಿಣ ಕನ್ನಡ, ಶಿವಮೊಗ್ಗ, ತುಮಕೂರು ಜಿಲ್ಲೆಗಳಿಂದ ಅಡಿಕೆ ಹಾಳೆ ತಟ್ಟೆಗಳು ಅಮೆರಿಕ, ಯುರೋಪ್ ದೇಶಗಳಿಗೆ ರಫ್ತಾಗುತ್ತಿದ್ದವು. ಅವುಗಳಲ್ಲಿ ದೊಡ್ಡ ಖರೀದಿದಾರ ಅಮೆರಿಕ, ಈಗ ಭಾರತದ ಹಾಳೆ ತಟ್ಟೆ ನಿಷೇಧಿಸಿದೆ. ತಿಂಗಳಿಗೆ ಉತ್ಪಾದನೆ ಆಗುತ್ತಿದ್ದ 25 ಲಕ್ಷದಷ್ಟು ಹಾಳೆ ತಟ್ಟೆಗಳಲ್ಲಿ 12 ಲಕ್ಷಕ್ಕೂ ಅಧಿಕ ಹಾಳೆ ತಟ್ಟೆಗಳು ಅಮೆರಿಕಕ್ಕೆ ರವಾನೆಯಾಗುತ್ತಿದ್ದವು. ಅಲ್ಲಿ ನಿಷೇಧ ವಿಧಿಸಿದ ಮೇಲೆ ಶೇ 50ರಷ್ಟು ಉತ್ಪಾದನೆ ನಿಲ್ಲಿಸಿದ್ದೇವೆ' ಎನ್ನುತ್ತಾರೆ ಜಿಲ್ಲೆಯಿಂದ ಅತಿಹೆಚ್ಚು ಹಾಳೆ ತಟ್ಟೆ ರಫ್ತು ಮಾಡುತ್ತಿರುವ ಬೆಳ್ತಂಗಡಿ ತಾಲ್ಲೂಕು ನಿಡ್ಲೆಯ ಅಗ್ರಿಲೀಫ್ ಎಕ್ಸ್‌ಪೋರ್ಟ್ ಪ್ರೈವೆಟ್ ಲಿಮಿಟೆಡ್‌ನ ವ್ಯವಸ್ಥಾಪಕ ನಿರ್ದೇಶಕ ಹಾಗೂ ಸಿಇಒ ಅವಿನಾಶ್ ರಾವ್.


ಅಡಿಕೆ ಹಾಳೆಯಿಂದ ತಯಾರಿಸಿರುವ ತಟ್ಟೆಗಳು

> **ವಿದೇಶಕ್ಕೆ ರಫ್ತು ಮಾಡುವ ಕಾರಣಕ್ಕೆ ಉದ್ಯಮ ನಡೆಯುತ್ತಿದೆ. ದೇಶೀಯ ಮಾರುಕಟ್ಟೆ ಒಂದನ್ನೇ ನಂಬಿಕೊಂಡು ಉದ್ಯಮ ನಡೆಸುವುದು ಕಷ್ಟ**
> **ಅವಿನಾಶ್ ರಾವ್,** ಸಿಇಒ, ಅಗ್ರಿಲೀಫ್ ಎಕ್ಸ್‌ಪೋರ್ಟ್

20 ವರ್ಷಗಳಿಂದ ರಾಜ್ಯದ ಹಾಳೆ ತಟ್ಟೆಗಳು ಅಮೆರಿಕಕ್ಕೆ ರಫ್ತಾಗುತ್ತಿವೆ. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ನಾಲ್ಕೈದು ಸಂಸ್ಥೆಗಳು ಈ ಉದ್ಯಮದಲ್ಲಿ ತೊಡಗಿಕೊಂಡಿದ್ದು, ಅಂದಾಜು 50 ಲಕ್ಷ ಹಾಳೆ ತಟ್ಟೆ ಅಮೆರಿಕಕ್ಕೆ ರಫ್ತಾಗುತ್ತಿತ್ತು. ರಾಜ್ಯದಲ್ಲಿ ಈ ಉದ್ಯಮವನ್ನೇ ನಂಬಿಕೊಂಡಿರುವ 75 ಸಾವಿರಕ್ಕೂ ಅಧಿಕ ಜನರು ಈಗ ಆತಂಕದಲ್ಲಿದ್ದಾರೆ. ಅಮೆರಿಕಕ್ಕೆ ಮಾತ್ರ ರಫ್ತು ಮಾಡುತ್ತಿದ್ದ ಸಣ್ಣ ಉದ್ದಿಮೆಗಳಿಗೆ ಬಾಗಿಲು ಮುಚ್ಚುವ ಪರಿಸ್ಥಿತಿ ಬಂದಿದೆ. ಮುಂದಿನ ಮೂರು ತಿಂಗಳುಗಳಲ್ಲಿ ರಾಜ್ಯದಲ್ಲಿ ಈ ಉದ್ಯಮಕ್ಕೆ ₹150 ಕೋಟಿ ನಷ್ಟ ಆಗಬಹುದೆಂದು ಅಂದಾಜಿಸಲಾಗಿದೆ ಎಂದು ಇನ್ನೊಬ್ಬ ಹಾಳೆ ತಟ್ಟೆ ಉತ್ಪಾದಕರು ಅಭಿಪ್ರಾಯಪಟ್ಟರು.

ಮುಂದಿನ ಹೆಜ್ಜೆ ಏನು?: ಭಾರತದ ಹಾಳೆ ತಟ್ಟೆ ಖರೀದಿಸುವ ಅಮೆರಿಕದ ಸಂಸ್ಥೆಗಳು ಈ ಸಂಬಂಧ ವಕೀಲರನ್ನು ನೇಮಿಸಿ, ನ್ಯಾಯಾಲಯದ ಮೆಟ್ಟಿಲೇರಲು ಸಿದ್ಧತೆ ನಡೆಸಿವೆ. ಅದಕ್ಕೆ ಅಗತ್ಯವಿರುವ ಪರೀಕ್ಷಾ ವರದಿಗಳು, ಸಿಎಫ್‌ಟಿಆರ್‌ಐ, ಅನೇಕ ಸಂಸ್ಥೆಗಳು ನಡೆಸಿರುವ ಸಂಶೋಧನಾ ಪ್ರಬಂಧಗಳು ಹಾಗೂ ಪೂರಕ ಎಲ್ಲ ದಾಖಲೆಗಳನ್ನು ನಾವು ಅವರಿಗೆ ಒದಗಿಸಲಿದ್ದೇವೆ. ಹಾಳೆ ತಟ್ಟೆ ಉತ್ಪಾದಕ ಸಂಸ್ಥೆಗಳ ಪ್ರಮುಖರು ತಂಡ ರಚಿಸಿಕೊಂಡು ಈ ಕಾರ್ಯದಲ್ಲಿ ನಿರತರಾಗಿದ್ದೇವೆ ಎಂದು ಅವಿನಾಶ್ ರಾವ್ 'ಪ್ರಜಾವಾಣಿ'ಗೆ ತಿಳಿಸಿದರು.

ಅಡಿಕೆಗೆ ಅಂಟಿಕೊಂಡಿರುವ 'ಕ್ಯಾನ್ಸರ್ ಕಾರಕ' ಎಂಬ ಕಳಂಕದ ಮುಂದುವರಿದ ಭಾಗ ಇದಾಗಿದೆ. ಅಡಿಕೆ ಹಾಳೆ ಬಳಕೆಯಿಂದ ದುಷ್ಪರಿಣಾಮ ಇಲ್ಲ ಎಂಬುದನ್ನು ವೈಜ್ಞಾನಿಕವಾಗಿ ಸಾಬೀತು ಪಡಿಸಬೇಕಾಗಿದೆ. ರಾಜ್ಯದಲ್ಲಿ ಅಡಿಕೆ ವಹಿವಾಟು ನಡೆಸುವ ಅನೇಕ ಸಹಕಾರ ಸಂಸ್ಥೆಗಳು ಇವೆ. ಅವು ಅಡಿಕೆ ಕ್ಯಾನ್ಸರ್ ಕಾರಕವಲ್ಲ ಎಂಬ ಸಮಗ್ರ ವೈಜ್ಞಾನಿಕ ಸಂಶೋಧನೆಗೆ ಇಂಬು ನೀಡಿ, ಅದರ ಫಲಿತಾಂಶ ಪಡೆದಾಗ ಮಾತ್ರ, ಶಾಶ್ವತವಾಗಿ ಈ ಕಳಂಕದಿಂದ ಹೊರಬರಲು ಸಾಧ್ಯ ಎಂದು ಹಾಳೆ ತಟ್ಟೆ ಉತ್ಪಾದಕರೊಬ್ಬರು ತಿಳಿಸಿದರು.

'ಮಧ್ಯ ಪ್ರವೇಶಕ್ಕೆ ಕೇಂದ್ರಕ್ಕೆ ಮನವಿ'

ಹಾಳೆ ತಟ್ಟೆ ಉದ್ಯಮ ನಡೆಸುವ ರೈತರ ಹಿತಕಾಪಾಡುವ ದೃಷ್ಟಿಯಿಂದ ಮಧ್ಯ ಪ್ರವೇಶಿಸುವಂತೆ ಕೇಂದ್ರ ಕೈಗಾರಿಕಾ ಮತ್ತು ವಾಣಿಜ್ಯ ಸಚಿವ ಪೀಯೂಷ್ ಗೋಯಲ್ ಅವರಿಗೆ ಪತ್ರ ಬರೆಯಲಾಗಿದೆ. ಅಮೆರಿಕವು ಅಡಿಕೆ ಹಾಳೆ ತಟ್ಟೆ ನಿಷೇಧಿಸಿದ ಕಾರಣ ದೇಶದಲ್ಲಿರುವ ಈ ಉದ್ಯಮವು ₹250 ಕೋಟಿಯಷ್ಟು ನಷ್ಟ ಅನುಭವಿಸುತ್ತಿದೆ. ಮುಂದಿನ ದಿನಗಳಲ್ಲಿ ಇತರೆ ದೇಶಗಳು ಅದರಲ್ಲೂ ಯುರೋಪ್, ಇದೇ ನಿಲುವನ್ನು ತಳೆದರೆ, ನಷ್ಟದ ಪ್ರಮಾಣ ಇನ್ನಷ್ಟು ಹೆಚ್ಚಾಗುತ್ತದೆ. ಹೀಗಾಗಿ, ಕೇಂದ್ರ ಸರ್ಕಾರವು ರಾಜತಾಂತ್ರಿಕ ಚರ್ಚೆ ಮೂಲಕ ದೇಶದ ಉದ್ದಿಮೆಗಳ ಹಿತ ಕಾಪಾಡಬೇಕು ಎಂದು ಸಚಿವರನ್ನು ವಿನಂತಿಸಲಾಗಿದೆ ಎಂದು ದಕ್ಷಿಣ ಕನ್ನಡ ಸಂಸದ ಕ್ಯಾ. ಬ್ರಿಜೇಶ್ ಚೌಟ 'ಪ್ರಜಾವಾಣಿ'ಗೆ ಪ್ರತಿಕ್ರಿಯಿಸಿದರು.


ಕ್ಯಾ. ಬ್ರಿಜೇಶ್ ಚೌಟ

ಜಿಎಸ್‌ಟಿ: ಷೋಕಾಸ್ ನೋಟಿಸ್ ಪ್ರಕ್ರಿಯೆ ಮುಕ್ತಾಯ– ಇನ್ಫೊಸಿಸ್ ನಿರಾಳ

ನವದೆಹಲಿ(ಪಿಟಿಐ): ₹32,403 ಕೋಟಿ ಜಿಎಸ್‌ಟಿ ಬಾಕಿ ಪಾವತಿಗೆ ಸಂಬಂಧಿಸಿ ಜಿಎಸ್‌ಟಿ ಗುಪ್ತಚರ ಮಹಾನಿರ್ದೇಶನಾಲಯವು (ಡಿಜಿಜಿಐ) ಕಂಪನಿ ವಿರುದ್ಧದ ಷೋಕಾಸ್ ನೋಟಿಸ್ ಪೂರ್ವ ಪ್ರಕ್ರಿಯೆಗಳನ್ನು ಮುಕ್ತಾಯಗೊಳಿಸಿದೆ ಎಂದು ಐಟಿ ಕಂಪನಿ ಇನ್ಫೊಸಿಸ್ ಹೇಳಿದೆ.

'ಈ ಕುರಿತು ಡಿಜಿಜಿಐ ಮಾಹಿತಿ ನೀಡಿದೆ. ಇದರೊಂದಿಗೆ, ಜಿಎಸ್‌ಟಿಗೆ ಸಂಬಂಧಿಸಿದ ಪ್ರಕರಣ ಮುಕ್ತಾಯಗೊಂಡಂತಾಗಿದೆ' ಎಂದು ಷೇರುಪೇಟೆಗೆ ಇನ್ಫೊಸಿಸ್ ತಿಳಿಸಿದೆ.

2018–19ರಿಂದ 2021–22ರ ಆರ್ಥಿಕ ವರ್ಷದವರೆಗಿನ ₹32,403 ಕೋಟಿ ಜಿಎಸ್‌ಟಿ ಮೊತ್ತ ಪಾವತಿಗೆ ಸಂಬಂಧಿಸಿ, ಕಂಪನಿ ವಿರುದ್ಧ ಡಿಜಿಜಿಐ ಷೋಕಾಸ್ ನೋಟಿಸ್ ಪೂರ್ವ ಪ್ರಕ್ರಿಯೆ ಆರಂಭಿಸಿತ್ತು.

'2017ರ ಜುಲೈನಿಂದ 2022ರ ಮಾರ್ಚ್‌ವರೆಗೆ ವಿದೇಶಗಳಲ್ಲಿನ ತನ್ನ ಶಾಖೆಗಳ ಒದಗಿಸಿದ ಸೇವೆಗಳಿಗೆ ಸಂಬಂಧಿಸಿ ಸಮಗ್ರ ಸರಕು ಮತ್ತು ಸೇವಾ ತೆರಿಗೆ (ಐಜಿಎಸ್‌ಟಿ) ಪಾವತಿ ಕುರಿತಂತೆ ಕಳೆದ ವರ್ಷ ಆಗಸ್ಟ್ 3ರಂದು ಕಂಪನಿಗೆ ಡಿಜಿಜಿಐ ನೋಟಿಸ್ ನೀಡಿತ್ತು. ಇದಕ್ಕೆ ಪ್ರತಿಕ್ರಿಯಿಸಲಾಗಿದೆ' ಎಂದೂ ಇನ್ಫೊಸಿಸ್ ತಿಳಿಸಿದೆ.

ಬಡ್ಡಿ ದರ ಇಳಿಸಿದ ಪಿಎನ್‌ಬಿ

ನವದೆಹಲಿ (ಪಿಟಿಐ): ಭಾರತೀಯ ರಿಸರ್ವ್ ಬ್ಯಾಂಕ್ ರೆಪೊ ದರ ಕಡಿತಗೊಳಿಸಿದ ಬೆನ್ನಲ್ಲೇ ಸರ್ಕಾರಿ ಸ್ವಾಮ್ಯದ ಪಂಜಾಬ್ ನ್ಯಾಷನಲ್ ಬ್ಯಾಂಕ್ (ಪಿಎನ್‌ಬಿ) ಶೇ 0.50ರಷ್ಟು ಬಡ್ಡಿ ದರ ಕಡಿತಗೊಳಿಸಿದೆ.

ರೆಪೊ ದರ ಆಧರಿಸಿದ ಗೃಹ ಮತ್ತು ವಾಹನ ಸಾಲದ ಮೇಲಿನ ವಾರ್ಷಿಕ ಬಡ್ಡಿದರವು ಕ್ರಮವಾಗಿ ಶೇ 7.45 ಮತ್ತು ಶೇ 7.8ರಿಂದ ಆರಂಭವಾಗಲಿದೆ. ಪರಿಷ್ಕೃತ ಬಡ್ಡಿ ದರವು ಜೂನ್ 9ರಿಂದ ಅನ್ವಯ ಆಗಲಿದೆ ಎಂದು ಬ್ಯಾಂಕ್ ಸಾಮಾಜಿಕ ಜಾಲತಾಣ 'ಎಕ್ಸ್'ನಲ್ಲಿ ತಿಳಿಸಿದೆ.

ಆರ್‌ಬಿಐ ಶುಕ್ರವಾರ ರೆಪೊ ದರವನ್ನು ಶೇ 0.50ರಷ್ಟು ಇಳಿಕೆ ಮಾಡಿತ್ತು. ಇತರೆ ಬ್ಯಾಂಕ್‌ಗಳು ಸಹ ಶೀಘ್ರ ಬಡ್ಡಿ ದರ ಕಡಿತ ಮಾಡುವ ನಿರೀಕ್ಷೆಯಿದೆ.

'ಡಾರ್ಕ್ ಪ್ಯಾಟರ್ನ್ಸ್' ತೆಗೆದುಹಾಕಲು ಸೂಚನೆ

ನವದೆಹಲಿ (ಪಿಟಿಐ): ಅನುಚಿತ ವ್ಯಾಪಾರ ಪದ್ಧತಿಯಿಂದ ಗ್ರಾಹಕರನ್ನು ರಕ್ಷಿಸುವ ಸಲುವಾಗಿ, ಮೂರು ತಿಂಗಳ ಒಳಗಾಗಿ ವೇದಿಕೆಯಲ್ಲಿನ 'ಡಾರ್ಕ್ ಪ್ಯಾಟರ್ನ್'ಗಳನ್ನು ಗುರುತಿಸಿ, ತೆಗೆದು ಹಾಕುವಂತೆ ಇ–ಕಾಮರ್ಸ್ ಕಂಪನಿಗಳಿಗೆ ಕೇಂದ್ರ ಗ್ರಾಹಕ ಹಿತರಕ್ಷಣಾ ಪ್ರಾಧಿಕಾರ(ಸಿಸಿಪಿಎ) ನಿರ್ದೇಶನ ನೀಡಿದೆ.

ಎಲ್ಲ ಇ–ಕಾಮರ್ಸ್ ವೇದಿಕೆಗಳು ಕಡ್ಡಾಯವಾಗಿ ಮೂರು ತಿಂಗಳೊಳಗೆ ಸ್ವಯಂ ಪರಿಶೋಧನೆ ನಡೆಸಿ, 'ಡಾರ್ಕ್ ಪ್ಯಾಟರ್ನ್'ಗಳನ್ನು ಪತ್ತೆ ಹಚ್ಚಿ, ಅಗತ್ಯ ಕ್ರಮ ಕೈಗೊಳ್ಳಬೇಕು. ಅಲ್ಲದೆ ವೇದಿಕೆಯನ್ನು ಇವುಗಳಿಂದ ಮುಕ್ತಗೊಳಿಸಬೇಕು. 'ಡಾರ್ಕ್ ಪ್ಯಾಟರ್ನ್'ಗಳಿಂದ ವೇದಿಕೆ ಮುಕ್ತವಾಗಿದೆ ಎಂದು ಕಂಪನಿಗಳು ಸ್ವಯಂ ಘೋಷಣೆ ಮಾಡಬೇಕು ಎಂದು ಕೇಂದ್ರ ಗ್ರಾಹಕರ ವ್ಯವಹಾರಗಳ ಸಚಿವಾಲಯವು ತಿಳಿಸಿದೆ.

ಈ ಘೋಷಣೆಯು ಗ್ರಾಹಕರಲ್ಲಿ ವಿಶ್ವಾಸವನ್ನು ಹೆಚ್ಚಿಸುವುದಲ್ಲದೆ, ನ್ಯಾಯೋಚಿತ ಮಾರುಕಟ್ಟೆಯನ್ನು ಸೃಷ್ಟಿಸುತ್ತದೆ ಎಂದು ಸಚಿವಾಲಯ ಶನಿವಾರ ತಿಳಿಸಿದೆ.

ಗ್ರಾಹಕರಿಗೆ ಸುಳ್ಳು ಮಾಹಿತಿ ನೀಡುವುದು, ತುರ್ತಾಗಿ ಪ್ರತಿಕ್ರಿಯಿಸುವಂತೆ 'ಅಲರ್ಟ್'ಗಳನ್ನು ರವಾನಿಸುವುದು, ಚಂದಾದಾರರಾಗುವಂತೆ ಪ್ರೇರೇಪಿಸಿ, ನಂತರ ಚಂದಾದಾರಿಕೆ ರದ್ದು ಮಾಡಲು ಬರದಂತೆ ಮಾಡುವುದು, ಆರಂಭದಲ್ಲಿ ವಸ್ತುಗಳ ದರ ಕಡಿಮೆ ಇರುವಂತೆ ತೋರಿಸಿ ನಂತರ ಹೆಚ್ಚುವರಿ ವೆಚ್ಚಗಳನ್ನು ಸೇರಿಸಿ ಕೊನೆಯಲ್ಲಿ ಹೆಚ್ಚಿನ ದರ ವಸೂಲಿ ಮಾಡುವಂತಹ ಪರಿಪಾಟಗಳನ್ನು ಕೆಲ ಇ–ಕಾಮರ್ಸ್ ಕಂಪನಿಗಳು ಅನುಸರಿಸುತ್ತವೆ. ಇದನ್ನು 'ಡಾರ್ಕ್ ಪ್ಯಾಟರ್ನ್ಸ್' ಎನ್ನಲಾಗುತ್ತದೆ.

'ನಿಖರ ವಿಳಾಸ ತಿಳಿಯಲು ಡಿಜಿಪಿನ್ ಸೇವೆ ಆರಂಭ'

ನವದೆಹಲಿ (ಪಿಟಿಐ): ಮನೆಯ ನಿಖರ ವಿಳಾಸ ತಿಳಿದುಕೊಳ್ಳಲು ಭಾರತೀಯ ಅಂಚೆ ಇಲಾಖೆಯು ಜಿಪಿಎಸ್ ಆಧಾರಿತ 'ಡಿಜಿಪಿನ್' ಆರಂಭಿಸಿದೆ.

ಈ ಸೇವೆಯನ್ನು ಮತ್ತಷ್ಟು ಪರಿಷ್ಕರಿಸುವ ನಿಟ್ಟಿನಲ್ಲಿ ನಾಗರಿಕರು, ವಿವಿಧ ಸಂಸ್ಥೆಗಳು ಸಕ್ರಿಯವಾಗಿ ತೊಡಗಿಸಿಕೊಳ್ಳಬೇಕು ಎಂದು ಇಲಾಖೆಯು ಮನವಿ ಮಾಡಿದೆ.

ಡಿಜಿಪಿನ್ ಸ್ಥಳದ ಮ್ಯಾಪಿಂಗ್ ಅನ್ನು ಸರಳೀಕರಿಸಿದ್ದು, ಕೊನೆಯ ಹಂತದವರೆಗೂ ಸರಕು ಪೂರೈಕೆ ಹಾಗೂ ತುರ್ತು ಸಂದರ್ಭದಲ್ಲಿ ನೆರವಾಗುವ ಉದ್ದೇಶವಿದೆ. ವಿಶೇಷವಾಗಿ ಗ್ರಾಮೀಣ ಹಾಗೂ ಹಿಂದುಳಿದ ಪ್ರದೇಶಗಳನ್ನು ತ್ವರಿತ ಹಾಗೂ ನಿಖರವಾಗಿ ತಲುಪಲು ಸಹಾಯವಾಗಲಿದೆ. ಡಿಜಿಪಿನ್ (ಡಿಜಿಟಲ್ ಪೋಸ್ಟರ್ ಇಂಡೆಕ್ಸ್ ನಂಬರ್) ಅನ್ನು ಐಐಟಿ ಹೈದರಾಬಾದ್, ಎನ್‌ಆರ್‌ಎಸ್‌ಸಿ ಹಾಗೂ ಇಸ್ರೊ ನೆರವಿನೊಂದಿಗೆ 'ಜಿಯೋ ಕೋಡ್ ಗ್ರಿಡ್' ಆಧರಿತ ಡಿಜಿಟಲ್ ವಿಳಾಸವನ್ನು ಅಭಿವೃದ್ಧಿಪಡಿಸಿದೆ.

ಅಂಚೆಗಳನ್ನು ತಲುಪಿಸುವ ಪ್ರಮುಖ ಆಧಾರಸ್ತಂಭವಾದ ಆರು ಅಂಕಿಗಳ ಪಿನ್‌ಕೋಡ್ ವ್ಯವಸ್ಥೆಯು 1972ರಲ್ಲಿ ಜಾರಿಗೆ ತರಲಾಗಿತ್ತು.

'2022ರ ರಾಷ್ಟ್ರೀಯ ಭೂಗೋಳ ನೀತಿ'ಯಡಿಯಲ್ಲಿ ಅಂಚೆ ಇಲಾಖೆಯು 'ಡಿಜಿ–ಪಿನ್ ತಿಳಿಯಿರಿ', 'ಪಿನ್‌ಕೋಡ್ ತಿಳಿಯಿರಿ' ಸೇವೆಗೆ ಚಾಲನೆ ನೀಡಿತ್ತು. ಭಾರತೀಯ ಅಂಚೆ ಸೇವೆಯು ತನ್ನ ವೆಬ್‌ಸೈಟ್‌ನಲ್ಲಿ ಲಿಂಕ್ ಒದಗಿಸಿದ್ದು, ಸಾರ್ವಜನಿಕರು ಹೊಸ ಸೇವೆಯ ಕುರಿತು ಅಭಿಪ್ರಾಯಗಳನ್ನು ಸಲ್ಲಿಸಲು ಅವಕಾಶ ಕಲ್ಪಿಸಲಾಗಿದೆ.

ಖಾದ್ಯ ತೈಲ ಮುಂಬೈ (10 ಕೆಜಿಗೆ)
(ಆವರಣದಲ್ಲಿ ಹಿಂದಿನ ವಹಿವಾಟಿನ ದರ)

ಶೇಂಗಾ (ರಿಫೈನ್ಡ್)	₹1365 (1365)
ಸೋಯಾ (ರಿಫೈನ್ಡ್)	₹1175 (1170)
ಸೂರ್ಯಕಾಂತಿ (ರಿಫೈನ್ಡ್)	₹1335 (1330)
ಪಾಮೋಲಿನ್	₹1150 (1145)

ವಿನಿಮಯ ದರ

$ ಡಾಲರ್	85.79
£ ಪೌಂಡ್	115.72
€ ಯುರೊ	97.80
¥ ಯೆನ್ (100ಕ್ಕೆ)	59

ಮುಂಬೈ ಧಾರಣೆ (ಶೇಂಗಾ)
07-06-2025

ಜಾವಾ 70/80(ಹೊಸ)	9600-9700
ಜಾವಾ 80/90(ಹೊಸ)	9100-9200
ದಪ್ಪ ಮಧ್ಯಪ್ರದೇಶ(ಹೊಸ)	7600-7700
ದಪ್ಪ ಗುಜರಾತ್(ಹೊಸ)	7900-8000

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1375 (1375)
ಒಂದು ವಾರದ ಡೆಲಿವರಿ	1370 (1370)
ಪಾಮ್ ವಾರದ ಡೆಲಿವರಿ	1148 (1143)
ಸೂರ್ಯಕಾಂತಿ ಎಣ್ಣೆ ಕಚ್ಚಾ	1255 (1250)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಚಿನ್ನ 10ಗ್ರಾಂ	₹95,700 (96,650)
ಬೆಳ್ಳಿ ಕೆ.ಜಿ	₹1,05,000 (1,05,300)

ಆವರಣದಲ್ಲಿ ಹಿಂದಿನ ವಹಿವಾಟಿನ ದರ

ಬಾಂಗ್ಲಾದೇಶ: ಏಪ್ರಿಲ್‌ನಲ್ಲಿ ಚುನಾವಣೆಗೆ ಬಿಎನ್‌ಪಿ ವಿರೋಧ

ಢಾಕಾ (ಪಿಟಿಐ): 'ಬಾಂಗ್ಲಾದೇಶದಲ್ಲಿ ಸಾರ್ವತ್ರಿಕ ಚುನಾವಣೆಯನ್ನು 2026ರ ಏಪ್ರಿಲ್‌ನಲ್ಲಿ ನಡೆಸಲಾಗುವುದು ಎಂದು ಮಧ್ಯಂತರ ಸರ್ಕಾರದ ಮುಖ್ಯ ಸಲಹೆಗಾರ ಮೊಹಮ್ಮದ್ ಯೂನಸ್ ಮಾಡಿರುವ ಘೋಷಣೆಯಿಂದ ದೇಶದ ಜನರು ನಿರಾಸೆಗೊಂಡಿದ್ದಾರೆ' ಎಂದು ಬಾಂಗ್ಲಾದೇಶ ನ್ಯಾಷನಲಿಸ್ಟ್ ಪಾರ್ಟಿ (ಬಿಎನ್‌ಪಿ) ಹೇಳಿದೆ.


ಮೊಹಮ್ಮದ್ ಯೂನಸ್

ಇದೇ ವರ್ಷದ ಡಿಸೆಂಬರ್‌ನಲ್ಲಿ ಚುನಾವಣೆ ನಡೆಸಬೇಕು ಎಂದು ಬಿಎನ್‌ಪಿ ಒತ್ತಾಯಿಸಿದೆ.

'ವಿದ್ಯಾರ್ಥಿಗಳ ಮಹತ್ತರವಾದ ತ್ಯಾಗದ ಮೂಲಕ ದೇಶದ ಜನರಿಗೆ ಗೆಲುವು ಲಭಿಸಿದೆ. ಆದರೆ, ಚುನಾವಣೆಗೆ ಸಂಬಂಧಿಸಿದಂತೆ ಮಧ್ಯಂತರ ಸರ್ಕಾರ ಅನವಶ್ಯಕ ವಿಳಂಬ ಮಾಡುತ್ತಿರುವುದು ಜನರನ್ನು ತೀವ್ರ ನಿರಾಸೆಗೆ ದೂಡಿದೆ' ಎಂದು ಬಿಎನ್‌ಪಿಯ ಹೇಳಿಕೆ ಉಲ್ಲೇಖಿಸಿ ಢಾಕಾ ಟ್ರಿಬ್ಯೂನ್ ವರದಿ ಮಾಡಿದೆ.

ರಂಜಾನ್ ಮಾಸ, 10ನೇ ತರಗತಿ ಮತ್ತು ಪದವಿಪೂರ್ವ ತರಗತಿಗಳ ಪರೀಕ್ಷೆ, ಪ್ರತಿಕೂಲ ಹವಾಮಾನ ಮತ್ತಿತರ ಅಂಶಗಳನ್ನು ಗಮನದಲ್ಲಿಟ್ಟುಕೊಂಡು ಇದೇ ವರ್ಷದ ಡಿಸೆಂಬರ್‌ನಲ್ಲಿ ಚುನಾವಣೆ ನಡೆಸಬೇಕು ಎಂದು ಬಿಎನ್‌ಪಿ ಒತ್ತಾಯಿಸಿದೆ.

'ದೇಶದ ಜನರು ಸತತ ಹೋರಾಟದ ಮೂಲಕ ಗಳಿಸಿದ ಮತದಾನದ ಹಕ್ಕನ್ನು, ಅವರ ಆಶೋತ್ತರಗಳನ್ನು ಮುಖ್ಯ ಸಲಹೆಗಾರ ಮೊಹಮ್ಮದ್ ಯೂನಸ್ ಅವರು ಸಂಪೂರ್ಣವಾಗಿ ಕಡೆಗಣಿಸಿದ್ದಾರೆ. ಸುಮಾರು ಒಂದೂವರೆ ದಶಕದಿಂದ ಮತದಾನದ ಹಕ್ಕಿನಿಂದ ವಂಚಿತರಾಗಿದ್ದ ಜನರು ಚುನಾವಣೆಯ ಮೂಲಕ ಕಂಡಿದ್ದ ಪ್ರಜಾಪ್ರಭುತ್ವ ಮರುಸ್ಥಾಪನೆಯ ಕನಸು ಮರೆಯಾಗಿದೆ. ಜನರ ಪ್ರಾಥಮಿಕ ಮತದಾನದ ಹಕ್ಕನ್ನು ಕೊಲೆ ಮಾಡಲಾಗಿದೆ' ಎಂದು ಬಿಎನ್‌ಪಿ ಅಧ್ಯಕ್ಷ ತಾರಿಕ್ ರೆಹಮಾನ್ ಹೇಳಿದ್ದಾರೆ.

ಮಧ್ಯಂತರ ಸರ್ಕಾರವು ಏಪ್ರಿಲ್‌ನಲ್ಲಿ ಚುನಾವಣೆ ಘೋಷಣೆ ಮಾಡಿರುವುದರಿಂದ, ಮುಕ್ತ, ನ್ಯಾಯಸಮ್ಮತ ಚುನಾವಣೆ ನಡೆಯುವ ಸಾಧ್ಯತೆ ಕುರಿತು ಜನರಲ್ಲಿ ಆತಂಕ ಇದೆ. ರಂಜಾನ್ ತಿಂಗಳಾಗಿರುವುದರಿಂದ ಸಭೆ, ರ್‍ಯಾಲಿ ಸೇರಿ ಚುನಾವಣಾ ಕಾರ್ಯಗಳಿಗೆ ತೊಡಕಾಗಲಿದೆ. ಪ್ರತಿಕೂಲ ಹವಾಮಾನ ಸೇರಿ ಇನ್ನಿತರ ಸವಾಲುಗಳೂ ಎದುರಾಗಲಿವೆ' ಎಂದು ಬಿಎನ್‌ಪಿ ಹೇಳಿದೆ.

112 ದೇಶದಿಂದ ಭಾರತಕ್ಕೆ ಎಫ್‌ಡಿಐ

ನವದೆಹಲಿ (ಪಿಟಿಐ): 'ಪ್ರಸ್ತುತ ದೇಶವು 112 ರಾಷ್ಟ್ರಗಳಿಂದ ವಿದೇಶಿ ನೇರ ಬಂಡವಾಳವನ್ನು (ಎಫ್‌ಡಿಐ) ಸ್ವೀಕರಿಸುತ್ತಿದೆ' ಎಂದು ಕೇಂದ್ರ ವಾಣಿಜ್ಯ ಮತ್ತು ಕೈಗಾರಿಕಾ ಸಚಿವ ಪೀಯೂಷ್ ಗೋಯಲ್ ಹೇಳಿದ್ದಾರೆ.

2013–14ರಲ್ಲಿ 89 ರಾಷ್ಟ್ರಗಳಿಂದ ವಿದೇಶಿ ನೇರ ಬಂಡವಾಳ ಸ್ವೀಕರಿಸಿತ್ತು ಎಂದು ಇಲ್ಲಿ ನಡೆದ ಎಫ್‌ಡಿಐ ಕಾರ್ಯಕ್ರಮದಲ್ಲಿ ಹೇಳಿದರು. ಭಾರತವನ್ನು, ಜಗತ್ತಿನ ಅತ್ಯಂತ ಆದ್ಯತೆಯ ಹೂಡಿಕೆಯ ತಾಣವನ್ನಾಗಿ ಮಾಡಲು ಸರ್ಕಾರ ಬದ್ಧವಾಗಿದೆ ಎಂದರು.

'ದೇಶದೊಳಗೆ ಮರುಹೂಡಿಕೆ ಹೆಚ್ಚಬೇಕಿದೆ. ಕೈಗಾರಿಕಾ ಪಾರ್ಕ್ ಮೂಲಸೌಕರ್ಯವನ್ನು ಸುಧಾರಿಸಲು ಮತ್ತು ಹೊಸ ವಿಸ್ತರಣಾ ಅವಕಾಶಗಳ ಅನ್ವೇಷಣೆಗೆ ಹೂಡಿಕೆದಾರರಿಂದ ಅಭಿಪ್ರಾಯ ಮತ್ತು ಸಲಹೆಗಳು ಅಗತ್ಯ' ಎಂದು ಕೈಗಾರಿಕಾ ಮತ್ತು ಆಂತರಿಕ ವ್ಯಾಪಾರ ಉತ್ತೇಜನ ಇಲಾಖೆಯ ಕಾರ್ಯದರ್ಶಿ ಅಮರ್ ದೀಪ್ ಸಿಂಗ್ ಭಾಟಿಯಾ ಹೇಳಿದರು.

ಫ್ಲಾರಿಡಾದ ಕೆನಡಿ ಬಾಹ್ಯಾಕಾಶ ಕೇಂದ್ರದಿಂದ ಭಾರತೀಯ ಗಗನಯಾನಿ ಪಯಣ

10ರಂದು ಐಎಸ್‌ಎಸ್‌ನತ್ತ ಶುಕ್ಲಾ

ನವದೆಹಲಿ (ಪಿಟಿಐ): ಭಾರತದ ಶುಭಾಂಶು ಶುಕ್ಲಾ ಹಾಗೂ ಇತರ ಮೂವರು ಗಗನಯಾನಿಗಳು ಅಂತರ ರಾಷ್ಟ್ರೀಯ ಬಾಹ್ಯಾಕಾಶ ನಿಲ್ದಾಣದತ್ತ (ಐಎಸ್‌ಎಸ್) ಅಂತರಿಕ್ಷಯಾನ ಆರಂಭಿಸಲು ಕ್ಷಣಗಣನೆ ಆರಂಭವಾಗಿದೆ. ಫ್ಲಾರಿಡಾದಲ್ಲಿರುವ ನಾಸಾದ ಕೆನಡಿ ಬಾಹ್ಯಾಕಾಶ ಕೇಂದ್ರದಿಂದ ಜೂನ್ 10 ರಂದು ಅವರು ಪ್ರಯಾಣ ಬೆಳೆಸುವರು.



ಅಂದಾಜು 28 ಗಂಟೆ ಪ್ರಯಾಣದ ಬಳಿಕ, ಜೂನ್ 11ರಂದು ಭಾರತೀಯ ಕಾಲಮಾನ ರಾತ್ರಿ 10.30ರ ವೇಳೆಗೆ ಈ ಗಗನಯಾನಿಗಳು ಐಎಸ್‌ಎಸ್ ತಲುಪುವರು.

'ಆ್ಯಕ್ಸಿಯಂ–4' ಕಾರ್ಯಕ್ರಮದ ಭಾಗವಾಗಿ ಅಂತರರಾಷ್ಟ್ರೀಯ ಬಾಹ್ಯಾಕಾಶ ನಿಲ್ದಾಣಕ್ಕೆ ತೆರಳುತ್ತಿರುವ ಶುಕ್ಲಾ ಅವರೊಂದಿಗೆ, ಕಮಾಂಡರ್ ಪೆಗ್ಗಿ ವಿಟ್ಸನ್, ಹಂಗರಿಯ ಟಿಬೊರ್ ಕಾಪು ಹಾಗೂ ಪೋಲೆಂಡ್‌ನ ಸ್ಲಾವೋಸ್ ಯು.ವಿಸ್ನಿವ್ಸ್ಕಿ ಕೂಡ ಪಯಣಿಸಲಿದ್ದಾರೆ.

ಸ್ಪೇಸ್‌ಎಕ್ಸ್‌ನ ಫಾಲ್ಕನ್ –9 ರಾಕೆಟ್, ಗಗನಯಾನಿಗಳಿರುವ 'ಡ್ರ್ಯಾಗನ್' ವ್ಯೋಮನೌಕೆಯನ್ನು ಹೊತ್ತು ಐಎಸ್‌ಎಸ್‌ನತ್ತ ಹಾರಲಿದೆ. ಜೂನ್ 11ರಂದು ತಡರಾತ್ರಿ 12.30ಕ್ಕೆ (ಭಾರತೀಯ ಕಾಲಮಾನ ರಾತ್ರಿ 10.30) ಡ್ರ್ಯಾಗನ್ ಗಗನನೌಕೆಯನ್ನು ಐಎಸ್‌ಎಸ್ ನೊಂದಿಗೆ ಜೋಡಣೆ (ಡಾಕಿಂಗ್) ಮಾಡಲಾಗುವುದು' ಎಂದು ನಾಸಾ ಪ್ರಕಟಣೆಯಲ್ಲಿ ತಿಳಿಸಿದೆ.

1984ರಲ್ಲಿ ಭಾರತದ ರಾಕೇಶ್ ಶರ್ಮಾ ಅವರು ರಷ್ಯಾದ ಗಗನನೌಕೆಯಲ್ಲಿ ಗಗನಯಾನ ಕೈಗೊಂಡಿದ್ದರು. 41 ವರ್ಷಗಳ ಬಳಿಕ, ಭಾರತದ ಮತ್ತೊಬ್ಬ ಗಗನಯಾನಿ ಈ ಅಂತರಿಕ್ಷ ಯಾತ್ರೆ ಕೈಗೊಳ್ಳುತ್ತಿದ್ದಾರೆ.

ಇಸ್ರೊ ಅಧ್ಯಕ್ಷ ವಿ.ನಾರಾಯಣನ್ ಅವರು ಕಳೆದ ವಾರ ಅಮೆರಿಕಕ್ಕೆ ಭೇಟಿ ನೀಡಿ, 'ಆ್ಯಕ್ಸಿಯಂ–4' ಬಾಹ್ಯಾಕಾಶ ಕಾರ್ಯಕ್ರಮದ ಸಿದ್ಧತೆಯ ಪರಿಶೀಲನೆ ನಡೆಸಿದ್ದರು.

ಪ್ರಮುಖ ಅಂಶಗಳು

- ನಾಲ್ವರು ಗಗನಯಾನಿಗಳು ಮೇ 25ರಿಂದ ಪ್ರತ್ಯೇಕವಾಸದಲ್ಲಿ (ಕ್ವಾರಂಟೈನ್) ಇದ್ದಾರೆ
- 14 ದಿನ ಐಎಸ್‌ಎಸ್‌ನಲ್ಲಿ ವಾಸ್ತವ್ಯ. ಈ ವೇಳೆ, ಗಗನಯಾನಿಗಳು ಪ್ರಧಾನಿ ನರೇಂದ್ರ ಮೋದಿ, ಶಾಲಾ ವಿದ್ಯಾರ್ಥಿಗಳು ಹಾಗೂ ಬಾಹ್ಯಾಕಾಶ ಕ್ಷೇತ್ರದ ಕಂಪನಿಗಳ ಪ್ರತಿನಿಧಿಗಳೊಂದಿಗೆ ಸಂವಾದ ನಡೆಸುವ ಸಾಧ್ಯತೆ ಇದೆ
- ಶುಕ್ಲಾ ಅವರು ಐಎಸ್‌ಎಸ್‌ನಲ್ಲಿ ಆಹಾರ ಮತ್ತು ಪೌಷ್ಟಿಕತೆಗೆ ಸಂಬಂಧಿಸಿದ ಪ್ರಯೋಗಗಳನ್ನು ನಡೆಸುವರು. ಇಸ್ರೊ ಹಾಗೂ ಬಯೊಟೆಕ್ನಾಲಜಿ ಇಲಾಖೆ ಇದಕ್ಕೆ ಸಹಯೋಗ ನೀಡಲಿವೆ
- ಶುಕ್ಲಾ ಅವರ ಬಾಹ್ಯಾಕಾಶ ಅನುಭವವನ್ನು ಉದ್ದೇಶಿತ ಗಗನಯಾನ ಕಾರ್ಯಕ್ರಮಕ್ಕೆ ಬಳಸಿಕೊಳ್ಳಲು ಇಸ್ರೊ ಯೋಜಿಸಿದೆ.
- 'ಆ್ಯಕ್ಸಿಯಂ–4' ಬಾಹ್ಯಾಕಾಶ ಕಾರ್ಯಕ್ರಮಕ್ಕೆ ಇಸ್ರೊ ₹550 ಕೋಟಿ ವೆಚ್ಚ ಮಾಡಲಿದೆ

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete.

ವಿಶ್ವ ಆಹಾರ ಸುರಕ್ಷತೆ ದಿನದ ಕಾರ್ಯಕ್ರಮದಲ್ಲಿ ಕೇಂದ್ರ ಸಚಿವ ಜೆ.ಪಿ. ನಡ್ಡಾ ಕಳವಳ

‘ಅಪಾಯ ತರುತ್ತಿದೆ ಸಂಸ್ಕರಿಸಿದ ಆಹಾರ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಅತಿಯಾಗಿ ಸಂಸ್ಕರಿಸಿದ ಆಹಾರವು ಜೀವಕ್ಕೆ ಅಪಾಯ ತಂದೊಡ್ಡುತ್ತಿದೆ. ಭಾರತೀಯ ವೈದ್ಯಕೀಯ ಸಂಶೋಧನಾ ಸಂಸ್ಥೆಯ (ಐಸಿಎಂಆರ್) ಪ್ರಕಾರ ದೇಶದಲ್ಲಿ 2050ರ ವೇಳೆಗೆ ಮೂರನೇ ಒಂದರಷ್ಟು ಮಂದಿ ಸ್ಥೂಲಕಾಯ ಸಮಸ್ಯೆಗೆ ಒಳಗಾಗುವ ಸಾಧ್ಯತೆಯಿದೆ’ ಎಂದು ಕೇಂದ್ರ ಆರೋಗ್ಯ ಸಚಿವ ಜೆ.ಪಿ.ನಡ್ಡಾ ಕಳವಳ ವ್ಯಕ್ತಪಡಿಸಿದರು.

ಭಾರತೀಯ ಆಹಾರ ಸುರಕ್ಷತೆ ಮತ್ತು ಗುಣಮಟ್ಟ ಪ್ರಾಧಿಕಾರವು (ಎಫ್‌ಎಸ್‌ಎಸ್‌ಎಐ) ಶನಿವಾರ ಇಲ್ಲಿ ಹಮ್ಮಿಕೊಂಡಿದ್ದ ವಿಶ್ವ ಆಹಾರ ಸುರಕ್ಷತೆ ದಿನದ ಕಾರ್ಯಕ್ರಮ ಉದ್ಘಾಟಿಸಿ, ಮಾತನಾಡಿದರು.

‘ಸ್ಥೂಲಕಾಯ ಸಮಸ್ಯೆ ವೇಗವಾಗಿ ಬೆಳೆಯುತ್ತಿದೆ. 2008ರಿಂದ 2020ರ ಅವಧಿಯಲ್ಲಿ ಐಸಿಎಂಆರ್ ನಡೆಸಿರುವ ಅಧ್ಯಯನದ ಪ್ರಕಾರ ನಗರ ಪ್ರದೇಶದಲ್ಲಿ ಸ್ಥೂಲಕಾಯ ಶೇ 39.6 ರಷ್ಟು ಹೆಚ್ಚಳವಾದರೆ, ಗ್ರಾಮೀಣ ಪ್ರದೇಶದಲ್ಲಿ ಶೇ 23.1 ರಷ್ಟು ಏರಿಕೆಯಾಗಿದೆ. ನಮ್ಮಲ್ಲಿನ ಆಹಾರ ಪದ್ಧತಿ ಹೇಗೆ ಬದಲಾಗಿದೆ ಎನ್ನುವುದಕ್ಕೆ ಈ ಏರಿಕೆ ಉತ್ತಮ ನಿದರ್ಶನ’ ಎಂದರು.



ಆಹಾರ ಮಾದರಿಗಳ ಪರೀಕ್ಷೆಯನ್ನು ಜೆ.ಪಿ. ನಡ್ಡಾ ಪರಿಶೀಲಿಸಿದರು. ಶರಣ ಪ್ರಕಾಶ ಪಾಟೀಲ, ಆರೋಗ್ಯ ಸಚಿವಾಲಯದ ಕಾರ್ಯದರ್ಶಿ ಪುಣ್ಯ ಸಲಿಲ ಶ್ರೀವಾಸ್ತವ, ನಿಮ್ಹಾನ್ಸ್ ನಿರ್ದೇಶಕಿ ಡಾ. ಪ್ರತಿಮಾ ಮೂರ್ತಿ, ರಾಜ್ಯ ಆಹಾರ ಸುರಕ್ಷತೆ ಮತ್ತು ಗುಣಮಟ್ಟ ಇಲಾಖೆಯ ಆಯುಕ್ತ ಕೆ. ಶ್ರೀನಿವಾಸ ಉಪಸ್ಥಿತರಿದ್ದರು ಪ್ರಜಾವಾಣಿ ಚಿತ್ರ

‘ಅತಿಯಾಗಿ ಸಂಸ್ಕರಿಸಿದ ಆಹಾರದ ಬಳಕೆಗೆ ಕಡಿವಾಣ ಹಾಕಬೇಕಿದೆ. ಉತ್ತರಾಖಂಡದಲ್ಲಿ ಅಡುಗೆ ಎಣ್ಣೆ ಬಳಕೆಯನ್ನು ಶೇ 10ರಷ್ಟು ಕಡಿತಮಾಡಲಾಗಿದೆ. ಉಪ್ಪು ಬಳಕೆಯನ್ನೂ ಕಡಿಮೆ ಮಾಡಲಾಗಿದೆ. ಇದು ಜಾಗೃತಿಯಿಂದ ಸಾಧ್ಯವಾಗಿದೆ. ಆಹಾರ ಪದಾರ್ಥಗಳಲ್ಲಿ ಸಕ್ಕರೆ, ಎಣ್ಣೆ ಬಳಕೆಯನ್ನು ಕಡಿಮೆ ಮಾಡಬೇಕು. ಈ ಬಗ್ಗೆ ಶಾಲಾ–ಕಾಲೇಜುಗಳಲ್ಲಿಯೂ ಜಾಗೃತಿ ಮೂಡಿಸಲಾಗುತ್ತಿದೆ. ಸಾಂಪ್ರದಾಯಿಕ ಹಾಗೂ ಸಿರಿಧಾನ್ಯ ಯುಕ್ತ ಆಹಾರ ಪದಾರ್ಥಗಳ ಸೇವನೆಗೆ ಒತ್ತು ನೀಡಬೇಕು’ ಎಂದು ಹೇಳಿದರು.

ಆಹಾರದ ಬಗ್ಗೆ ಜಾಗೃತಿ: ವೈದ್ಯಕೀಯ ಶಿಕ್ಷಣ ಸಚಿವ ಶರಣ ಪ್ರಕಾಶ ಪಾಟೀಲ, ‘ಪ್ರಾಚೀನ ಆಹಾರ ಪದ್ಧತಿ ಅತ್ಯುತ್ತಮವಾದದ್ದಾಗಿದೆ. ಆದರೆ, ಮಕ್ಕಳು ಪಾಶ್ಚಾತ್ಯ ಆಹಾರ ಪದ್ಧತಿಗೆ ಆಕರ್ಷಿತರಾಗುತ್ತಿದ್ದಾರೆ. ರುಚಿ, ಬಣ್ಣಕ್ಕಾಗಿ ಆಹಾರ ಪದಾರ್ಥಗಳಿಗೆ ವಿವಿಧ ನಿಷೇಧಿತ ರಾಸಾಯನಿಕಗಳನ್ನು ಸೇರ್ಪಡೆ ಆಗುತ್ತಿದ್ದು, ಇದನ್ನು ತಡೆಯಲು ಕೇಂದ್ರ, ರಾಜ್ಯ ಸರ್ಕಾರ ಈ ಬಗ್ಗೆ ನಿಗಾವಹಿಸುತ್ತಿದೆ’ ಎಂದರು.

ಎಫ್‌ಎಸ್‌ಎಸ್‌ಎಐ ಕಾರ್ಯನಿರ್ವಾಹಕ ನಿರ್ದೇಶಕ ಯು.ಎಸ್.ಧ್ಯಾನಿ, ‘ಸರ್ವರಿಗೂ ಸುರಕ್ಷಿತ ಆಹಾರ ಲಭ್ಯವಾಗಬೇಕು. ಆಹಾರ ಪ್ರಯೋಗಾಲಯಗಳ ಜಾಲ ವಿಸ್ತರಣೆ, ಮೊಬೈಲ್ ವಾಹನಗಳ ಕಾರ್ಯಾಚರಣೆ, ತರಬೇತಿ ಸೇರಿ ವಿವಿಧ ಕಾರ್ಯ ಚಟುವಟಿಕೆಗಳನ್ನು ಹಮ್ಮಿಕೊಳ್ಳಲಾಗಿದೆ’ ಎಂದು ಹೇಳಿದರು.

ಆರೋಗ್ಯಕರ ಆಹಾರ ಪದ್ಧತಿಗಳ ಕುರಿತು ತರಬೇತಿ, ಪರೀಕ್ಷೆ ಮತ್ತು ಸಾರ್ವಜನಿಕ ಜಾಗೃತಿ ಮೂಡಿಸುವ ‘ಫುಡ್ ಸೇಫ್ಟಿ ಆನ್ ವೀಲ್ಸ್’ ಮೊಬೈಲ್ ಘಟಕವನ್ನು ಇದೇ ವೇಳೆ ಉದ್ಘಾಟಿಸಲಾಯಿತು.

ಮಾಜಿ ಸಚಿವ ಎಚ್‌.ಆಂಜನೇಯ ಆಗ್ರಹ

‘ಒಳಮೀಸಲು ಶೀಘ್ರ ಜಾರಿಯಾಗಲಿ’

ಪ್ರಜಾವಾಣಿ ವಾರ್ತೆ

ಹೊಸಪೇಟೆ (ವಿಜಯನಗರ): ‘ಒಳಮೀಸಲಾತಿ ಜಾರಿಗೆ ಅಗತ್ಯವಾದ ಜಾತಿ ಸಮೀಕ್ಷೆ ಕೊನೆ ಹಂತಕ್ಕೆ ಬಂದಿದ್ದು, 15 ದಿನಗಳಲ್ಲಿ ಪೂರ್ಣಗೊಳ್ಳಬಹುದು. ಹೀಗಾಗಿ ಜೂನ್ ಅಂತ್ಯದೊಳಗೆ ಒಳಮೀಸಲಾತಿಯನ್ನು ಸರ್ಕಾರ ಜಾರಿಗೊಳಿಸಬೇಕು’ ಎಂದು ಮಾಜಿ ಸಚಿವ ಎಚ್.ಆಂಜನೇಯ ಒತ್ತಾಯಿಸಿದರು.

‘ಬೆಂಗಳೂರು ನಗರ ಹೊರತುಪಡಿಸಿ ಉಳಿದೆಡೆ ಸಮೀಕ್ಷೆ ಮುಗಿಯುವ ಹಂತದಲ್ಲಿದೆ. ಬೆಂಗಳೂರಿನಲ್ಲಿ ಸರ್ಕಾರಿ ಶಾಲೆಗಳ ಶಿಕ್ಷಕರ ಸಂಖ್ಯೆ ಕಡಿಮೆ ಇರುವುದಕ್ಕೆ ಸಮೀಕ್ಷೆ ಸ್ವಲ್ಪ ವಿಳಂಬವಾಗಿದೆ. ಎಲ್ಲವೂ ಪೂರ್ಣಗೊಳಿಸಿ, ನ್ಯಾಯಮೂರ್ತಿ ನಾಗಮೋಹನ್‌ದಾಸ್ ಆಯೋಗವು ಶೀಘ್ರವೇ ಸರ್ಕಾರಕ್ಕೆ ವರದಿ ಸಲ್ಲಿಸುವ ಸಾಧ್ಯತೆ ಇದೆ’ ಎಂದು ಅವರು ಶನಿವಾರ ಸುದ್ದಿಗಾರರಿಗೆ ತಿಳಿಸಿದರು.

‘ಲಿಂಗಾಯತ ಸಮುದಾಯದ ಬೇಡ ಜಂಗಮರು, ನಕಲಿ ಜಾತಿ ಪ್ರಮಾಣಪತ್ರ ನೀಡಿ ಪರಿಶಿಷ್ಟ ಜಾತಿ ಪಟ್ಟಿಯಲ್ಲಿ ಸೇರಿದ್ದಾರೆ. 1931ರಲ್ಲಿ ಬ್ರಿಟಿಷ್ ಆಳ್ವಿಕೆಯಲ್ಲಿ ಆಗಿದ್ದ ಪ್ರಮಾದ ಮುಂದುವರಿದಿದೆ. ಇನ್ನುಮುಂದೆ ಇದಕ್ಕೆ ಅವಕಾಶ ಇಲ್ಲ. ಪರಿಶಿಷ್ಟ ಜಾತಿ ಪಟ್ಟಿಯಿಂದ ಬೇಡ ಜಂಗಮ ಜಾತಿಯನ್ನೇ ತೆಗೆದು ಹಾಕಬೇಕು ಎಂಬುದು ನಮ್ಮ ಇನ್ನೊಂದು ಪ್ರಮುಖ ಬೇಡಿಕೆ. ಅದನ್ನು ಸರ್ಕಾರ ಡಕಈಡೇರಿಸಬೇಕು’ ಎಂದು ಅವರು ಹೇಳಿದರು.

‘ಬೇಡ ಜಂಗಮರಿಗೆ ನಕಲಿ ಜಾತಿ ಪ್ರಮಾಣಪತ್ರ ನೀಡಿದ ತಹಶೀಲ್ದಾರ್‌ಗಳನ್ನು ಪತ್ತೆ ಮಾಡಿ, ಅವರನ್ನು ಜೈಲಿಗೆ ಕಳುಹಿಸಬೇಕು. ನಕಲಿ ಜಾತಿ ಪ್ರಮಾಣಪತ್ರ ಪಡೆದ ಎಲ್ಲರ ಮಾಹಿತಿ ಸಂಗ್ರಹವಾಗಬೇಕು. ಇದರ ಬಗ್ಗೆ ಪೂರ್ಣ ಪ್ರಮಾಣದಲ್ಲಿ ತನಿಖೆಯಾಗಬೇಕು’ ಎಂದು ಅವರು ಆಗ್ರಹಿಸಿದರು.



ಸಿಎಂ ಸಿದ್ದರಾಮಯ್ಯ ಎಸ್‌ಸಿ ನಾಯಕರಿಗಿಂತ ಹೆಚ್ಚು ಬದ್ಧತೆಯಿಂದ ಈ ಸಮುದಾಯಗಳಿಗಾಗಿ ಕೆಲಸ ಮಾಡುತ್ತಿದ್ದಾರೆ. ಅದಕ್ಕಾಗಿಯೇ ಅವರು ನಮ್ಮ ಪಾಲಿಗೆ ಅಂಬೇಡ್ಕರ್
ಎಚ್. ಆಂಜನೇಯ, ಮಾಜಿ ಸಚಿವ

‘ನೇಮಕಾತಿ ವಿಳಂಬ ಆಗಬಾರದು’

‘ಒಳಮೀಸಲಾತಿ ನಿರ್ಧರಿಸಿದ ಬಳಿಕವಷ್ಟೇ ವಿವಿಧ ಹುದ್ದೆಗಳಿಗೆ ನೇಮಕಾತಿಗಳನ್ನು ಮಾಡಬೇಕು ಎಂಬ ನಮ್ಮ ಒತ್ತಾಯಕ್ಕೆ ಮಣಿದ ಸರ್ಕಾರ ಕಳೆದ ಅಕ್ಟೋಬರ್‌ನಿಂದೀಚೆಗೆ ಯಾವುದೇ ನೇಮಕಾತಿ ಮಾಡಿಲ್ಲ. ಬ್ಯಾಕ್‌ಲಾಗ್ ಸಹ ಭರ್ತಿ ಮಾಡಿಲ್ಲ. ಎಂಟು ತಿಂಗಳ ಅವಧಿಯಲ್ಲಿ ನಮ್ಮ ಸಮುದಾಯ ಸಹಿತ ಇತರ ಸಮುದಾಯಗಳಲ್ಲಿ ಹಲವರು ವಯೋಮಿತಿ ಮೀರಿರುವ ಸಾಧ್ಯತೆ ಇದೆ. ಹೀಗಾಗಿ ಎಲ್ಲರಿಗೂ ಎಂಟು ತಿಂಗಳ ವಿನಾಯಿತಿ ನೀಡಬೇಕು. ಒಳ ಮೀಸಲಾತಿಯನ್ನು ಈ ತಿಂಗಳೊಳಗೆ ಜಾರಿಗೆ ತಂದು ಮುಂದಿನ ತಿಂಗಳಿನಿಂದಲೇ ನೇಮಕಾತಿ ಪ್ರಕ್ರಿಯೆ ಆರಂಭಿಸಬೇಕು’ ಎಂದು ಮಾಜಿ ಸಚಿವ ಆಂಜನೇಯ ಕೋರಿದರು.

ಸಂಕ್ಷಿಪ್ತ ಸುದ್ದಿ

ಡಿಕುನ್ಹ ಆಯೋಗದ ಅವಧಿ ವಿಸ್ತರಣೆ

ಬೆಂಗಳೂರು: ಕೋವಿಡ್ ಹಗರಣದ ತನಿಖೆಯ ಸಂಬಂಧ ರಚಿಸಲಾಗಿದ್ದ ಹೈಕೋರ್ಟ್ ನಿವೃತ್ತ ನ್ಯಾಯಮೂರ್ತಿ ಮೈಕಲ್ ಡಿಕುನ್ಹ ನೇತೃತ್ವದ ಆಯೋಗದ ಅವಧಿಯನ್ನು ಆಗಸ್ಟ್ 31ರವರೆಗೆ ವಿಸ್ತರಿಸಿ ಗೃಹ ಇಲಾಖೆ ಆದೇಶ ಹೊರಡಿಸಿದೆ.

ಚಿನ್ನಸ್ವಾಮಿ ಕ್ರೀಡಾಂಗಣದ ಬಳಿ ನಡೆದ ಕಾಲ್ತುಳಿತ ಪ್ರಕರಣಕ್ಕೆ ಸಂಬಂಧಿಸಿದಂತೆ ವಿಚಾರಣೆಗೆ ಮೈಕಲ್ ಡಿಕುನ್ಹ ನೇತೃತ್ವದ ಏಕ ಸದಸ್ಯ ಆಯೋಗವನ್ನು ರಚಿಸಲಾಗಿದ್ದು, ಒಂದು ತಿಂಗಳ ಒಳಗೆ ವರದಿ ಸಲ್ಲಿಸುವಂತೆ ಸೂಚಿಸಿದೆ. ಈ ವರದಿಯನ್ನು ತುರ್ತಾಗಿ ಸಲ್ಲಿಸಬೇಕಾಗಿರುವ ಕಾರಣ, ಕೋವಿಡ್ ಹಗರಣದ ತನಿಖೆಯ ಅವಧಿಯನ್ನು ಜುಲೈ 31ರಿಂದ ಒಂದು ತಿಂಗಳ ಅವಧಿಗೆ ವಿಸ್ತರಿಸಲಾಗಿದೆ ಎಂದು ಆದೇಶದಲ್ಲಿ ವಿವರಿಸಲಾಗಿದೆ.

ಹಿಂದಿನ ಬಿಜೆಪಿ ಸರ್ಕಾರದ ಅವಧಿಯಲ್ಲಿ ಕೋವಿಡ್ ಸಂದರ್ಭದಲ್ಲಿ ಚಾಮರಾಜನಗರ ಜಿಲ್ಲಾ ಆಸ್ಪತ್ರೆಯಲ್ಲಿ ಆಮ್ಲಜನಕದ ಕೊರತೆಯಿಂದ 30ಕ್ಕೂ ಹೆಚ್ಚು ಜನರು ಸಾವಿಗೀಡಾದ ಪ್ರಕರಣವನ್ನು ಡಿಕುನ್ಹ ನೇತೃತ್ವದ ಆಯೋಗ ಪರಿಶೀಲಿಸಿ ವರದಿ ನೀಡಬೇಕಿದೆ.

ಪುಸ್ತಕ ಪ್ರಶಸ್ತಿ ಪ್ರಕಟ

ಹುಬ್ಬಳ್ಳಿ: ಇಲ್ಲಿನ ಗಂಗಮ್ಮ ಸೋಮಪ್ಪ ಬೊಮ್ಮಾಯಿ ಟ್ರಸ್ಟ್ ನೀಡುವ 2023–24ನೇ ಸಾಲಿನ ಪ್ರಶಸ್ತಿಗೆ ಮೂರು ಕೃತಿಗಳು ಆಯ್ಕೆಯಾಗಿವೆ.

ಸೀತಾರಾಮನ್ ಅವರ ‘ಅಹಲ್ಯಾಬಾಯಿ ಹೋಳ್ಕರ್’ ಕೃತಿಗೆ ಅಕ್ಕ ಪ್ರಶಸ್ತಿ, ನವ್ಯಾ ಆರ್. ಕತ್ತಿ ಅವರ ‘ಮಾಯಾ ಗುಹೆ ಮತ್ತು ಇತರ ಮಕ್ಕಳ ಕತೆಗಳು’ ಕೃತಿಗೆ ಅರಳುಮೊಗ್ಗು ಪ್ರಶಸ್ತಿ ಮತ್ತು ಶರೀಫ ಮಾಕಪ್ಪನವರ ಅವರ ‘ಜನಪದ ಕಲಾವಿದರು ಸುಧಾರಿಸಿಕೊಳ್ಳಬಹುದಾದ ಮಾರ್ಗೋಪಾಯಗಳು’ ಕೃತಿಗೆ ‘ಜಾನಪದ ಸಿರಿ’ ಪ್ರಶಸ್ತಿ ಲಭಿಸಿದೆ. ಪ್ರಶಸ್ತಿಯು ತಲಾ ₹25 ಸಾವಿರ ಹಾಗೂ ಪ್ರಶಸ್ತಿ ಪತ್ರ ಒಳಗೊಂಡಿದೆ ಎಂದು ಟ್ರಸ್ಟ್ ಅಧ್ಯಕ್ಷ, ಸಂಸದ ಬಸವರಾಜ ಬೊಮ್ಮಾಯಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಚುಟುಕು ಸಮ್ಮೇಳನ ಕುಳಮರ್ವ ಅಧ್ಯಕ್ಷ

ಹುಬ್ಬಳ್ಳಿ: ಕರ್ನಾಟಕ ಚುಟುಕು ಸಾಹಿತ್ಯ ಪರಿಷತ್ತಿನ ಅಂತರರಾಜ್ಯ ಐದನೇ ಸಮ್ಮೇಳನದ ಅಧ್ಯಕ್ಷರಾಗಿ ಕಾಸರಗೋಡಿನ ಚಿಂತಕ ವಿ.ಬಿ. ಕುಳಮರ್ವ ಆಯ್ಕೆಯಾಗಿದ್ದಾರೆ.

‘ಜೂನ್ 29ರಂದು ಕಾಸರಗೋಡಿನ ವೆಂಕಪ್ಪಯ್ಯ ಕಲಾ ಗ್ಯಾಲರಿ ಸಭಾಂಗಣದಲ್ಲಿ ನಡೆಯುವ ಸಮ್ಮೇಳನದಲ್ಲಿ ವಿಚಾರ ಗೋಷ್ಠಿ, ಕವಿಗೋಷ್ಠಿ, ಪ್ರತಿಭಾ ಪುರಸ್ಕಾರ, ನೃತ್ಯ–ಸಂಗೀತ ಕಾರ್ಯಕ್ರಮ ಇರಲಿದೆ’ ಎಂದು ಪರಿಷತ್ತಿನ ಸಂಚಾಲಕ ಕೃಷ್ಣಮೂರ್ತಿ ಕುಲಕರ್ಣಿ ತಿಳಿಸಿದ್ದಾರೆ.



ವಿ.ಬಿ. ಕುಳಮರ್ವ

‘ಕೋರ್ಟ್ ಸೂಚನೆ ಪಾಲಿಸುವೆ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಕೋರ್ಟ್ ಆದೇಶದ ಬಗ್ಗೆ ನಾನು ಮಾತನಾಡುವುದಿಲ್ಲ. ಕೋರ್ಟ್ ನೀಡಿರುವ ಸೂಚನೆಗಳನ್ನು ಪಾಲಿಸಬೇಕಾಗುತ್ತದೆ’ ಎಂದು ಕಾಂಗ್ರೆಸ್ ಶಾಸಕ ವಿನಯ ಕುಲಕರ್ಣಿ ಹೇಳಿದರು.

ಬಿಜೆಪಿ ಮುಖಂಡ ಯೋಗೀಶ್‌ಗೌಡ ಗೌಡರ ಕೊಲೆ ಪ್ರಕರಣದ ಸಾಕ್ಷಿಗಳನ್ನು ಸಂಪರ್ಕಿಸಿ ಪ್ರಭಾವ ಬೀರಲು ಯತ್ನಿಸಿ, ಷರತ್ತುಗಳನ್ನು ಉಲ್ಲಂಘಿಸಿದ ಕಾರಣಕ್ಕೆ ವಿನಯ ಕುಲಕರ್ಣಿ ಅವರಿಗೆ ನೀಡಿದ್ದ ಜಾಮೀನನ್ನು ಸುಪ್ರೀಂ ಕೋರ್ಟ್ ಶುಕ್ರವಾರ ರದ್ದುಪಡಿಸಿತ್ತು. ಅಲ್ಲದೆ, ಒಂದು ವಾರದ ಒಳಗೆ ಸಂಬಂಧಪಟ್ಟ ವಿಚಾರಣಾ ನ್ಯಾಯಾಲಯದ ಮುಂದೆ ಶರಣಾಗುವಂತೆ ನಿರ್ದೇಶನ ನೀಡಿತ್ತು.

ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರನ್ನು ಶನಿವಾರ ಭೇಟಿ ಮಾಡಿದ ಬಳಿಕ ಸುದ್ದಿಗಾರರ ಜೊತೆ ಮಾತನಾಡಿದ ವಿನಯ ಕುಲಕರ್ಣಿ, ‘ಡಿ.ಕೆ. ಶಿವಕುಮಾರ್ ಅವರಿಗೆ ಎಲ್ಲ ವಿಚಾರ ತಿಳಿಸಿದ್ದೇನೆ. ಇದರ ಹಿಂದೆ ಹಲವರ ಕೈವಾಡ ಇದೆ. ಇದು ಸಮಸ್ಯೆಯೇನೂ ಇಲ್ಲ. ಕೋರ್ಟ್‌ನಲ್ಲಿ ಸಾಕ್ಷಿ ಬೇಕು. ಸಾಕ್ಷಿ ಮೇಲೆ ಕೋರ್ಟ್ ತೀರ್ಮಾನ ಮಾಡುತ್ತದೆ’ ಎಂದರು.



ವಿನಯ ಕುಲಕರ್ಣಿ

ಮುಂದಿನ ಕಾನೂನು ಹೋರಾಟದ ಬಗ್ಗೆ ಕೇಳಿದ ಪ್ರಶ್ನೆಗೆ, ‘ಇನ್ನೂ ಕೆಲವು ದಿನಗಳ ಕಾಲಾವಕಾಶವಿದೆ. ಈ ಪ್ರಕರಣದಲ್ಲಿ ನನ್ನ ಕೈವಾಡ ಇಲ್ಲ. ಪ್ರಕರಣಕ್ಕೆ ಸಂಬಂಧಿಸಿದಂತೆ ನಾನು ಯಾರಿಗೂ ಒಂದೇ ಒಂದು ಕರೆ ಮಾಡಿಲ್ಲ’ ಎಂದರು.

‘ಈ ಪ್ರಕರಣದ ವಿಚಾರದಲ್ಲಿ ಕೆಲವರು ರಾಜಕೀಯ ಮಾಡುತ್ತಿದ್ದಾರೆ, ಮಾಡಲಿ. ದೇವರಿದ್ದಾನೆ. ನನ್ನನ್ನು ಮತ್ತೆ ಜೈಲಿಗೆ ಕಳುಹಿಸಬೇಕು ಎನ್ನುವುದು ಇದೆ ಹಿಂದಿನ ಉದ್ದೇಶ ಉದ್ದೇಶ’ ಎಂದು ಪರೋಕ್ಷವಾಗಿ ಕೇಂದ್ರ ಸಚಿವರೊಬ್ಬರ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದರು. ‘ನಿಮ್ಮ ಭಾಗದ (ಧಾರವಾಡ) ನಾಯಕರೊಬ್ಬರು ಕೈವಾಡವೇ’ ಎಂಬ ಪ್ರಶ್ನೆಗೆ ‘ತುಂಬಾ ಜನ ಇದ್ದಾರೆ’ ಎಂದಷ್ಟೆ ಹೇಳಿದರು.



ಬಕ್ರೀದ್

ಬಕ್ರೀದ್ ಪ್ರಯುಕ್ತ ಹುಬ್ಬಳ್ಳಿಯಲ್ಲಿ ಶನಿವಾರ ಈದ್ಗಾ ಮೈದಾನ ಮತ್ತು ಅದರ ಪಕ್ಕದ ರಸ್ತೆಯಲ್ಲಿ ಮುಸ್ಲಿಮರು ಶನಿವಾರ ಸಾಮೂಹಿಕ ಪ್ರಾರ್ಥನೆ ಸಲ್ಲಿಸಿದರು ಚಿತ್ರ: ಗೋವಿಂದರಾಜ ಜವಳಿ

29ರಂದು ಕಸಾಪ ಸಭೆ

ಬಳ್ಳಾರಿ: ಕನ್ನಡ ಸಾಹಿತ್ಯ ಪರಿಷತ್ತಿನ ಕಾರ್ಯಕಾರಿ ಸಮಿತಿ ಸಭೆಯು ಪರಿಷತ್ತಿನ ಅಧ್ಯಕ್ಷ ಮಹೇಶ ಜೋಶಿ ಅವರ ಅಧ್ಯಕ್ಷತೆಯಲ್ಲಿ ಜೂನ್ 29ರಂದು ಬೆಳಿಗ್ಗೆ 9ಕ್ಕೆ ಸಂಡೂರಿನ ಆದರ್ಶ ಕಲ್ಯಾಣ ಮಂಟಪದಲ್ಲಿ ನಡೆಯಲಿದೆ.

‘ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಸಮ್ಮೇಳನಾಧ್ಯಕ್ಷರ ಬಗ್ಗೆ ಸಂಡೂರಿನಲ್ಲಿ ಚರ್ಚಿಸಿ, ನಿರ್ಣಯ ಕೈಗೊಂಡು, ಅದನ್ನು ಘೋಷಿಸುವ ಮೂಲಕ ಹೊಸ ಪರಂಪರೆಗೆ ನಾಂದಿ ಹಾಡಬೇಕು. ಸಮ್ಮೇಳನದ ಚಟುವಟಿಕೆಗಳಿಗೆ ಚಾಲನೆ ನೀಡಬೇಕು’ ಎಂದು ಬಳ್ಳಾರಿ ಜಿಲ್ಲಾ ಘಟಕದ ಅಧ್ಯಕ್ಷ ನಿಷ್ಠಿ ರುದ್ರಪ್ಪ ಕೋರಿದ್ದರು. ಅದರಂತೆ ಪರಿಷತ್ತಿನ ಗೌರವ ಕಾರ್ಯದರ್ಶಿ ಅವರು ಸಭೆ ಕುರಿತು ಸೂಚನಾ ಪತ್ರವನ್ನು ಹೊರಡಿಸಿದ್ದಾರೆ.

ನಾಳೆಯಿಂದ ಮಳೆ ಸಾಧ್ಯತೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದ ಹಲವೆಡೆ ಇದೇ ಸೋಮವಾರದಿಂದ ಮಳೆಯಾಗುವ ಬಗ್ಗೆ ಹವಾಮಾನ ಇಲಾಖೆ ಮುನ್ಸೂಚನೆ ನೀಡಿದೆ.

ತಗ್ಗಿದ ಮಳೆ ಮತ್ತೆ ಬಿರುಸು ಪಡೆಯುವ ಸಾಧ್ಯತೆಯಿದ್ದು, ಸೋಮವಾರದಿಂದ ಮೂರು ದಿನಗಳು ಉತ್ತರ ಕನ್ನಡ, ಉಡುಪಿ ಹಾಗೂ ದಕ್ಷಿಣ ಕನ್ನಡ ಜಿಲ್ಲೆಯನ್ನು ಹೊರತುಪಡಿಸಿ, ರಾಜ್ಯದ ಉಳಿದ ಜಿಲ್ಲೆಗಳಿಗೆ ‘ಯೆಲ್ಲೊ ಅಲರ್ಟ್’ ಘೋಷಿಸಲಾಗಿದೆ. ಉತ್ತರ ಒಳನಾಡಿನ ಕಲಬುರಗಿ, ಬಾಗಲಕೋಟೆ, ಗದಗ, ಬೆಳಗಾವಿ, ಧಾರವಾಡ, ವಿಜಯಪುರ, ಬೀದರ್, ರಾಯಚೂರು, ಯಾದಗಿರಿ, ಕೊಪ್ಪಳ ಮತ್ತು ಹಾವೇರಿ ಜಿಲ್ಲೆಯ ಹಲವೆಡೆ ಗುಡುಗು ಹಾಗೂ ಗಂಟೆಗೆ 30 ಕಿ.ಮೀನಿಂದ 40 ಕಿ.ಮೀ. ವೇಗದಲ್ಲಿ ಗಾಳಿ ಸಹಿತ ಮಳೆಯಾಗುವ ಸಾಧ್ಯತೆಯಿದೆ ಎಂದು ತಿಳಿಸಿದೆ.

ದಕ್ಷಿಣ ಒಳನಾಡಿನ ಬಳ್ಳಾರಿ, ಬೆಂಗಳೂರು ಗ್ರಾಮಾಂತರ, ಬೆಂಗಳೂರು ನಗರ, ಚಿಕ್ಕಬಳ್ಳಾಪುರ, ಕೋಲಾರ, ಚಿತ್ರದುರ್ಗ, ದಾವಣಗೆರೆ, ತುಮಕೂರು, ವಿಜಯನಗರ, ಶಿವಮೊಗ್ಗ, ಚಿಕ್ಕಮಗಳೂರು, ಚಾಮರಾಜನಗರ, ರಾಮನಗರ, ಮಂಡ್ಯ ಹಾಗೂ ಮೈಸೂರು ಜಿಲ್ಲೆಯ ಹಲವೆಡೆ ಭಾರಿ ಗಾಳಿಯೊಂದಿಗೆ ಮಳೆಯಾಗುವ ಸಂಭವವಿದೆ ಎಂದು ಹೇಳಿದೆ.

ಕರಾವಳಿಯ ಉತ್ತರ ಕನ್ನಡ, ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಯ ಹೆಚ್ಚಿನ ಸ್ಥಳಗಳಲ್ಲಿ ಸಾಧಾರಣ ಮಳೆಯಾಗುವ ಸಾಧ್ಯತೆಯಿದೆ. ಇದೇ 11ರಿಂದ ಮಳೆ ತೀವ್ರತೆ ಹೆಚ್ಚುವ ಸಂಭವವಿದೆ ಎಂದು ಇಲಾಖೆ ಮುನ್ಸೂಚನೆ ನೀಡಿದೆ.

ಶಿವಮೊಗ್ಗ: ಕಸಾಪ ಅಧ್ಯಕ್ಷರ ವಿರುದ್ಧ ನಿರ್ಣಯ

‘ಜೋಶಿ ಅಮಾನತು ಮಾಡಿ’

ಪ್ರಜಾವಾಣಿ ವಾರ್ತೆ

ಶಿವಮೊಗ್ಗ: ಕನ್ನಡ ಸಾಹಿತ್ಯ ಪರಿಷತ್‌ನಲ್ಲಿ ಅಧ್ಯಕ್ಷ ಮಹೇಶ್ ಜೋಶಿ ಆರ್ಥಿಕ ದುರ್ವ್ಯವಹಾರ ನಡೆಸಿದ್ದು, ಆ ಕುರಿತ ತನಿಖೆಗೆ ಆಯೋಗ ರಚಿಸಬೇಕು. ಅವರನ್ನು ಅಧ್ಯಕ್ಷ ಸ್ಥಾನದಿಂದ ಅಮಾನತುಗೊಳಿಸಿ ಆಡಳಿತಾಧಿಕಾರಿ ನೇಮಿಸಬೇಕು ಎಂದು ಸರ್ಕಾರವನ್ನು ಒತ್ತಾಯಿಸಲು ಶನಿವಾರ ಇಲ್ಲಿ ಕನ್ನಡ ನಾಡು– ನುಡಿ ಜಾಗೃತಿ ಸಮಿತಿಯಿಂದ ನಡೆದ ಕನ್ನಡಿಗರ ಜಾಗೃತಿ ಸಮಾವೇಶದಲ್ಲಿ ನಿರ್ಣಯಿಸಲಾಯಿತು.

‘ಕನ್ನಡ ಸಾಹಿತ್ಯ ಪರಿಷತ್ ಉಳಿಸಿ’ ಹೋರಾಟದ ಅಂಗವಾಗಿ ಆಯೋಜಿಸಿದ್ದ ಸಮಾವೇಶದಲ್ಲಿ ದಿಕ್ಸೂಚಿ ಭಾಷಣ ಮಾಡಿದ ಮಂಡ್ಯ ಕರ್ನಾಟಕ ಸಂಘದ ಅಧ್ಯಕ್ಷ ಜಯಪ್ರಕಾಶ ಗೌಡ, ‘ನಮ್ಮ ಯಾವುದೇ ಆಕ್ಷೇಪಣೆಗಳಿಗೂ ಮಹೇಶ್ ಜೋಶಿ ಈವರೆಗೂ ಉತ್ತರಿಸಿಲ್ಲ. ಬದಲಿಗೆ ನಾಡಿನ ಪ್ರಜೆಗಳ ಅಭಿಪ್ರಾಯಕ್ಕೆ ಮನ್ನಣೆ ಕೊಡದ ಎಡಪಂಥೀಯರು ತನ್ನನ್ನು ವಿರೋಧಿಸುತ್ತಿದ್ದಾರೆ ಎಂದು ಸಂದರ್ಶನವೊಂದರಲ್ಲಿ ಹೇಳಿದ್ದಾರೆ. ನಾವು ಎಡಪಂಥೀಯರೂ ಅಲ್ಲ, ಬಲಪಂಥೀಯರೂ ಅಲ್ಲ. ಬದಲಿಗೆ ನೇರಪಂಥೀಯರು ಎಂದರು.

ಬಳ್ಳಾರಿಯಲ್ಲಿ ನಡೆಯಲಿರುವ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನಕ್ಕೆ ಬುಕರ್ ಪ್ರಶಸ್ತಿ ಪುರಸ್ಕೃತ ಬಾನು ಮುಷ್ತಾಕ್ ಅವರನ್ನು ಅಧ್ಯಕ್ಷರನ್ನಾಗಿ ಆಯ್ಕೆ ಮಾಡಬೇಕು. ಸಾಹಿತ್ಯ ಪರಿಷತ್‌ನಲ್ಲಿ 10 ವರ್ಷಗಳಿಂದ ಕೈಗೊಂಡ ಎಲ್ಲಾ ಬೈಲಾ ತಿದ್ದುಪಡಿಗಳನ್ನು ರದ್ದು ಮಾಡಬೇಕು. ಪರಿಷತ್‌ನ ಜಿಲ್ಲಾ ಘಟಕದ ಅಧ್ಯಕ್ಷರು ಹಾಗೂ ಆಜೀವ ಸದಸ್ಯರಿಗೆ ನೀಡಿರುವ ಶೋಕಾಸ್ ನೋಟಿಸ್ ಹಿಂಪಡೆಯಬೇಕು. ಸಾಹಿತ್ಯ ಸಮ್ಮೇಳನಕ್ಕೆ ಸರ್ಕಾರದಿಂದ ಕೊಡುವ ಅನುದಾನ ₹5 ಕೋಟಿಗೆ ಸೀಮಿತಗೊಳಿಸಿ ಉಳಿದ ಹಣ ಸರ್ಕಾರಿ ಶಾಲೆಗಳ ಅಭಿವೃದ್ಧಿಗೆ ಕೊಡಬೇಕು. ತಾಲ್ಲೂಕು ಹಾಗೂ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಘಟಕಗಳಿಗೆ ಸರ್ಕಾರವೇ ನೇರವಾಗಿ ಅನುದಾನ ಬಿಡುಗಡೆ ಮಾಡಬೇಕು ಎಂಬ ನಿರ್ಣಯ ಕೈಗೊಳ್ಳಲಾಯಿತು.

ಸಾಹಿತ್ಯಿಕ ಮನಸ್ಸು ಇರುವವರು ಸರ್ವಾಧಿಕಾರಿ ಆಗಲು ಸಾಧ್ಯ ಇಲ್ಲ. ಆದರೆ, ಪಕ್ಷ ರಾಜಕಾರಣದ ಕೊಳಕನ್ನು ಸಾಹಿತ್ಯ ಪರಿಷತ್‌ಗೆ ಅಂಟಿಸಿದ ವ್ಯಕ್ತಿಯಿಂದ ಎಂದೂ ಬಾರದ ದುಷ್ಕಾಲ ಬಂದಿದೆ.
ಎಸ್.ಜಿ.ಸಿದ್ದರಾಮಯ್ಯ, ಹಿರಿಯ ಸಾಹಿತಿ

ಸಾಹಿತ್ಯ ಪರಿಷತ್ತು ಮಹೇಶ ಜೋಶಿಯವರ ಖಾಸಗಿ ಕಂಪೆನಿ ಅಲ್ಲ. ಬದಲಿಗೆ ಕನ್ನಡಿಗರ ಮಾಲೀಕತ್ವದ ಸಂಸ್ಥೆ. ಬೈಲಾ ತಿದ್ದುಪಡಿ ಮೂಲಕ ಜೋಶಿ ಅದರ ಆತ್ಮಗೌರವ ತಿರುಚಲು ಹೊರಟಿದ್ದಾರೆ.
ಬಂಜಗೆರೆ ಜಯಪ್ರಕಾಶ್, ಹಿರಿಯ ಸಾಹಿತಿ

‘ಗ್ಯಾರಂಟಿ: ಸಿಗುತ್ತಿಲ್ಲ ಕೃಷಿ ಕಾರ್ಮಿಕರು’

ಪ್ರಜಾವಾಣಿ ವಾರ್ತೆ

ಹುಬ್ಬಳ್ಳಿ: ‘ಗ್ಯಾರಂಟಿ’ ಯೋಜನೆಗಳ ಅನುಷ್ಠಾನದಿಂದ ಜಮೀನು ಕೆಲಸಕ್ಕೆ ಕೂಲಿ ಕಾರ್ಮಿಕರು ಸಿಗುತ್ತಿಲ್ಲ. ರೈತರ ಸ್ಥಿತಿ ಶೋಚನೀಯವಾಗಿದೆ’ ಎಂದು ವಿಧಾನ ಪರಿಷತ್ತು ಸಭಾಪತಿ ಬಸವರಾಜ ಹೊರಟ್ಟಿ ದೂರಿದರು.

ಇಲ್ಲಿ ಶನಿವಾರ ‘ಸಾವಯವ ಮಾವು ಮತ್ತು ಹಲಸು ಮೇಳ’ ಉದ್ಘಾಟಿಸಿ ಮಾತನಾಡಿದ ಅವರು, ‘ರೈತರ ಸಂಕಷ್ಟಕ್ಕೆ ಸ್ಪಂದಿಸುವ ಕೆಲಸ ಸರ್ಕಾರ ಮಾಡಬೇಕು. ಸಮಸ್ಯೆ ಪರಿಹರಿಸಬೇಕು’ ಎಂದರು.



ಬಸವರಾಜ ಹೊರಟ್ಟಿ

‘ರಾಜ್ಯ ಸರ್ಕಾರವು ಜನರಿಗೆ ಉಚಿತವಾಗಿ ಅಕ್ಕಿ ನೀಡುವುದರ ಜೊತೆಗೆ ಮಹಿಳೆಯರ ಖರ್ಚಿಗೆ ಉಚಿತವಾಗಿ ಹಣ ಕೊಡುತ್ತಿದೆ. ಅದಕ್ಕೆ ಕೃಷಿ ಕೆಲಸಕ್ಕೆ ಯಾರೂ ಬರುತ್ತಿಲ್ಲ. ಕೈಯಲ್ಲಿ ಬ್ಯಾಗ್ ಹಿಡಿದು ಓಡಾಡುವವರ ಸಂಖ್ಯೆ ಹೆಚ್ಚಾಗಿದೆ’ ಎಂದರು.

ಎಚ್‌ಡಿಕೆ ಆರೋಗ್ಯ ಸುಧಾರಣೆ ಆಗುವುದಾದರೆ ಟೀಕಿಸಲಿ: ಡಿಕೆಶಿ

ಬೆಂಗಳೂರು: ‘ನನ್ನನ್ನು ಟೀಕೆ ಮಾಡುವುದರಿಂದ, ನಿಂದಿಸುವುದರಿಂದ, ಅಸೂಯೆ ಪಡುವುದರಿಂದ ಕುಮಾರಸ್ವಾಮಿ ಅವರಿಗೆ ಖುಷಿಯಾಗಿ, ಅವರ ಆರೋಗ್ಯ ಸುಧಾರಣೆ ಆಗುವುದಾದರೆ ಆ ಕೆಲಸವನ್ನು ಅವರು ಮುಂದುವರಿಸಲಿ’ ಎಂದು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಹೇಳಿದರು.

ಸುದ್ದಿಗಾರರ ಜೊತೆ ಶನಿವಾರ ಮಾತನಾಡಿದ ಅವರು, ‘ನಾನು ಕುಮಾರಸ್ವಾಮಿ ಅವರನ್ನು ಗಮನಿಸುತ್ತಿದ್ದೇನೆ. ಅವರು ತಮ್ಮ ಖುಷಿಗೆ ಮಾತನಾಡುತ್ತಿದ್ದಾರೆ’ ಎಂದರು.

‘ಕುಮಾರಸ್ವಾಮಿ ಏನಾದರೂ ಮಾತನಾಡಲಿ. ಇದರಿಂದ ಅವರಿಗೆ ಖುಷಿಯಾಗಿ ಆರೋಗ್ಯ ಸುಧಾರಣೆ ಆಗುವುದಾದರೆ ಆಗಲಿ. ಅವರ ಆರೋಗ್ಯ ಸುಧಾರಣೆಯಾಗುವುದು ನನಗೆ ಮುಖ್ಯ’ ಎಂದರು.

ಗೋವಿಂದ ರಾಜು ಕಿತ್ತು ಹಾಕಿರುವುದು ಒಳ್ಳೆಯ ಕ್ರಮ: ಎಚ್‌ಡಿಕೆ

ಗೆಲ್ಲುತ್ತೇವೆಂದು ಕನಸು ಬಿದ್ದಿತ್ತೇ?

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಫೈನಲ್ ಪಂದ್ಯ ಆರಂಭವಾಗುವುದಕ್ಕೆ ಮುನ್ನವೇ ಆರ್‌ಸಿಬಿ ಆಡಳಿತ ಮಂಡಳಿ ವಿಜಯೋತ್ಸವ ಮಾಡುತ್ತೇವೆ ಎಂದು ಪೊಲೀಸರಿಗೆ ಅರ್ಜಿ ಸಲ್ಲಿಸಿರುವುದು ಅಚ್ಚರಿ ತಂದಿದೆ. ಗೆಲ್ಲುವ ಬಗ್ಗೆ ಅವರಿಗೇನಾದರೂ ಕನಸು ಬಿದ್ದಿತ್ತಾ’ ಎಂದು ಕೇಂದ್ರ ಸಚಿವ ಎಚ್.ಡಿ. ಕುಮಾರಸ್ವಾಮಿ ಪ್ರಶ್ನಿಸಿದ್ದಾರೆ.

‘ಅಹಮದಾಬಾದ್‌ನಲ್ಲಿ ಫೈನಲ್ಸ್ ಪಂದ್ಯ ಆರಂಭವಾಗಿದ್ದು ಜೂನ್ 3ರಂದು ಸಂಜೆ ಏಳೂವರೆ ಗಂಟೆಗೆ. ಆದರೆ, ಬೆಂಗಳೂರಿನ ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ವಿಜಯೋತ್ಸವ ಮಾಡುತ್ತೇವೆ, ಅನುಮತಿ ಕೊಡಿ ಎಂದು ಅಂದು ಸಂಜೆ 6 ಗಂಟೆಗೇ ಆರ್‌ಸಿಬಿಯವರು ಅರ್ಜಿ ಹಾಕಿಕೊಂಡಿದ್ದಾರೆ ಎನ್ನಲಾಗಿದೆ. ಇದು ಹೇಗೆ ಸಾಧ್ಯ’ ಎಂದು ಪ್ರಶ್ನಿಸಿದರು.

‘ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆಗೆ ಇನ್ನೊಂದು ಅರ್ಜಿ ಕೊಟ್ಟು, ವಿಧಾನಸೌಧದ ಮುಂಭಾಗದಲ್ಲಿ ಕಾರ್ಯಕ್ರಮ ಮಾಡೋಕೆ ಅವಕಾಶ ಕೊಡಿ ಎಂದು ಕೇಳುತ್ತಾರೆ. ಇದು ಹೇಗೆ ಸಾಧ್ಯ. ಈ ಎಲ್ಲಾ ಪತ್ರಗಳನ್ನು ಯಾರು ಬರೆದಿದ್ದರು? ಪಂದ್ಯ ಮುಗಿದ ಮರುದಿನ ಬೆಳಗ್ಗೆ 7.30ಕ್ಕೆ, ನಗರ ಪೊಲೀಸ್ ಕಮಿಷನರ್ ಮೇಲೆ ಒತ್ತಡ ಹಾಕಿದ್ದು ಯಾರು ಎನ್ನುವುದನ್ನೂ ಹೇಳಿದ್ದೇನೆ. ನಾನು ವಾಸ್ತವಾಂಶ ತಿಳಿದು ಮಾತಾಡಿದ್ದೇನೆ. ಅಸೂಯೆಯಿಂದ, ಸರ್ಕಾರವನ್ನು ಇಕ್ಕಟ್ಟಿಗೆ ಸಿಲುಕಿಸಲು ನಾನು ಮಾತನಾಡಿಲ್ಲ’ ಎಂದು ಸುದ್ದಿಗಾರರಿಗೆ ತಿಳಿಸಿದರು.


ಒಳ್ಳೆಯ ಕ್ರಮ: ‘ಮುಖ್ಯಮಂತ್ರಿಯವರ ರಾಜಕೀಯ ಕಾರ್ಯದರ್ಶಿ ಹುದ್ದೆಯಿಂದ ಗೋವಿಂದ ರಾಜು ಅವರನ್ನು ಕಿತ್ತು ಹಾಕಿರುವುದು ಒಳ್ಳೆಯ ಕ್ರಮ. ಈ ಸೂಕ್ಷ್ಮ ಜ್ಞಾನೋದಯವಾಗಿರೋದಕ್ಕೆ ಸರ್ಕಾರಕ್ಕೆ ಅಭಿನಂದನೆ ಸಲ್ಲಿಸುತ್ತೇನೆ. ಆದರೆ, ಐವರು ಪೊಲೀಸ್ ಅಧಿಕಾರಿಗಳನ್ನು ಅಮಾನತು ಮಾಡಿದ್ದು ಸರಿಯಲ್ಲ. ಈ ರೀತಿ ಸರ್ಕಾರ ನಡೆದುಕೊಂಡರೆ ಅಧಿಕಾರಿಗಳು ಕೆಲಸ ಮಾಡುವುದಕ್ಕೆ ಸಾಧ್ಯವಿಲ್ಲ. ಅವರ ತಪ್ಪುಗಳನ್ನು ಮುಚ್ಚಿಕೊಳ್ಳೋಕೆ ಅಧಿಕಾರಿಗಳ ತಲೆದಂಡ ಮಾಡಿರುವುದು ಸರಿಯಲ್ಲ. ಈ ಘಟನೆಯ ಮೂಲ ಕಾರಣಗಳನ್ನು ಸರ್ಕಾರ ಮರೆಮಾಚುತ್ತದೆ’ ಎಂದು ಟೀಕಿಸಿದರು.

‘ಹೆಣದ ಮೇಲೆ ಬಿಜೆಪಿ-ಜೆಡಿಎಸ್ ರಾಜಕೀಯ ಮಾಡುತ್ತಿವೆ’ ಎಂಬ ಮುಖ್ಯಮಂತ್ರಿ, ಉಪ ಮುಖ್ಯಮಂತ್ರಿಯವರ ಹೇಳಿಕೆಗೆ ಪ್ರತಿಕ್ರಿಯಿಸಿದ ಕುಮಾರಸ್ವಾಮಿ, ‘ಹೆಣದ ಮೇಲೆ ರಾಜಕೀಯ ಮಾಡುವ ಅವಶ್ಯಕತೆ ನಮಗೆ ಇಲ್ಲ. ಇದ್ದ ವಿಷಯವನ್ನೇ ನಾನು ಹೇಳಿದ್ದೇನೆ. ನನ್ನ ಮಿತ್ರ ಪಕ್ಷವೂ ಹೇಳಿದೆ. ಇದರಲ್ಲಿ ರಾಜಕೀಯ ಏನಿದೆ? ಕ್ರೀಡಾಂಗಣದ ಮುಂದೆ ಮೃತದೇಹಗಳು ಬಿದ್ದ ಮೇಲೆಯೂ ಕ್ರೀಡಾಂಗಣಕ್ಕೆ ಹೋಗಿ ಕಪ್‌ಗೆ ಮುತ್ತಿಕ್ಕಿ ಶೋ ಮಾಡಿದ್ದು ಯಾರು? ಜನರೇ ಎಲ್ಲವನ್ನೂ ನೋಡಿದ್ದಾರೆ’ ಎಂದರು.

‘ತರಾತುರಿ ಏಕೆ ಬೇಕಿತ್ತು’

‘ಚಿನ್ನಸ್ವಾಮಿ ಕ್ರೀಡಾಂಗಣ ಕಾಲ್ತುಳಿತ ಪ್ರಕರಣದಲ್ಲಿ ತಪ್ಪು ಮಾಡಿರುವ ಮುಖ್ಯಮಂತ್ರಿ, ಉಪ ಮುಖ್ಯಮಂತ್ರಿ ಹಾಗೂ ಗೃಹ ಸಚಿವರೇ ಸಂಪೂರ್ಣ ಹೊಣೆಯನ್ನು ಹೊರಬೇಕು. ಪಂದ್ಯ ಗೆದ್ದ 24 ಗಂಟೆಯೊಳಗೆ ಆತುರಾತುರವಾಗಿ ಸನ್ಮಾನ ಮಾಡೋ ಅಗತ್ಯ ಏನಿತ್ತು? ಸನ್ಮಾನವನ್ನು ಕಾಟಾಚಾರಕ್ಕೆ ಮಾಡಿದರು. ಆಟಗಾರರನ್ನು ಕೂಡ ಸರಿಯಾಗಿ ನಡೆಸಿಕೊಳ್ಳಲಿಲ್ಲ. ಇವರು ಕೊಟ್ಟ ಶಾಲು, ಟೋಪಿ ಎಲ್ಲವನ್ನು ಅವರು ತಗೊಂಡು ಹೋದರೋ ಬಿಸಾಡಿ ಹೋದರೋ ಗೊತ್ತಿಲ್ಲ. ಈ ಪುರುಷಾರ್ಥಕ್ಕೆ ತರಾತುರಿಯಲ್ಲಿ ಕಾರ್ಯಕ್ರಮ ಬೇಕಿತ್ತಾ’ ಎಂದು ಕೇಂದ್ರ ಸಚಿವ ಎಚ್.ಡಿ. ಕುಮಾರಸ್ವಾಮಿ ಪ್ರಶ್ನಿಸಿದರು.

‘ಸದನದಲ್ಲಿ ಎಲ್ಲರ ಕಾಲದಲ್ಲಿ ಆಗಿದ್ದು ಮಾತಾಡ್ತೀನಿ’ ಎಂಬ ಡಿ.ಕೆ. ಶಿವಕುಮಾರ್ ಹೇಳಿಕೆಗೆ ಪ್ರತಿಕ್ರಿಯಿಸಿ, ‘ಸದನದಲ್ಲಿ ಅವರು ಏನು ಮಾತನಾಡುತ್ತಾರೆ? ತಮ್ಮ ಬಳಿ ಏನು ದಾಖಲೆ ಇದೆ ಎನ್ನುವುದನ್ನು ಇಡಲಿ. ಹಿಂದೆ ನಡೆದ ಕಲಾಪಗಳಲ್ಲಿ ಅವರು ಏನೇನು ಮಾಡಿದ್ದರು ಎಂಬುದು ಗೊತ್ತಿದೆ. ಏನ್ ಸಾಧನೆ ಮಾಡಿದ್ದೀನಿ ಅಂತ ಸದನದಲ್ಲಿ ಮಾತಾಡ್ತಾರೆ. ಈ ಘಟನೆ ಬಿಡಿ, ಎರಡು ವರ್ಷಗಳಲ್ಲಿ ಇವರ ಸಾಧನೆ ಏನು? ಬೆಂಗಳೂರು ನಗರಕ್ಕೆ, ರಾಜ್ಯಕ್ಕೆ ಇವರ ಕೊಡುಗೆ ಏನಿದೆ’ ಎಂದು ಆಕ್ರೋಶ ವ್ಯಕ್ತಪಡಿಸಿದರು.



ಕಾಲ್ತುಳಿತ: ಸಿಐಡಿ ತನಿಖೆ ಆರಂಭ

ಬೆಂಗಳೂರು: ಆರ್‌ಸಿಬಿ ತಂಡದ ವಿಜಯೋತ್ಸವದ ವೇಳೆ ಕಾಲ್ತುಳಿತದಿಂದ ಉಂಟಾದ ಸಾವು–ನೋವು ಪ್ರಕರಣದ ತನಿಖೆ ಆರಂಭಿಸಿರುವ ಸಿಐಡಿ ಅಧಿಕಾರಿಗಳು, ಶನಿವಾರ ಚಿನ್ನಸ್ವಾಮಿ ಕ್ರೀಡಾಂಗಣಕ್ಕೆ ಭೇಟಿ ನೀಡಿ ಪರಿಶೀಲಿಸಿದರು.

ವಿವಿಧ ಗೇಟ್‌ಗಳ ಬಳಿ ತೆರಳಿ ದುರಂತಕ್ಕೆ ಸಂಬಂಧಿಸಿದಂತೆ ಮಾಹಿತಿ ಕಲೆ ಹಾಕಿದರು. ಕೆಎಸ್‌ಸಿಎ ಕಚೇರಿಗೂ ತನಿಖಾಧಿಕಾರಿಗಳು ಭೇಟಿ ಕೊಟ್ಟಿದ್ದರು. ಪ್ರಕರಣದ ತನಿಖೆಯನ್ನು ರಾಜ್ಯ ಸರ್ಕಾರ ಸಿಐಡಿಗೆ ವರ್ಗಾವಣೆ ಮಾಡಿದ ಬೆನ್ನಲ್ಲೇ ವಿಶೇಷ ತನಿಖಾ ದಳದ ಎಸ್‌ಪಿ ಶುಭನ್ವಿತಾ, ಡಿವೈಎಸ್ಪಿಗಳಾದ ಪುರುಷೋತ್ತಮ್, ಗೌತಮ್ ಅವರ ನೇತೃತ್ವದ ತಂಡವು ತನಿಖೆ ಆರಂಭಿಸಿದೆ.

‘ಆರ್‌ಸಿಬಿಯ ಮಾರುಕಟ್ಟೆ ವಿಭಾಗದ ಮುಖಸ್ಥ ನಿಖಿಲ್ ಸೋಸಲೆ, ಡಿಎನ್‌ಎ ಮ್ಯಾನೇಜ್‌ಮೆಂಟ್ (ಇವೆಂಟ್ ಮ್ಯಾನೇಜ್‌ಮೆಂಟ್) ಸಿಬ್ಬಂದಿ ಸುನಿಲ್ ಮ್ಯಾಥ್ಯು, ಕಿರಣ್ ಮತ್ತು ಸುಮಂತ್ ಎಂಬುವವರನ್ನು ಕೇಂದ್ರ ಅಪರಾಧ ದಳ ಹಾಗೂ ಕಬ್ಬನ್‌ಪಾರ್ಕ್ ಠಾಣೆ ಪೊಲೀಸರು ಶುಕ್ರವಾರ ಬಂಧಿಸಿದ್ದರು. ನಾಲ್ವರು ಆರೋಪಿಗಳು ಪರಪ್ಪನ ಅಗ್ರಹಾರ ಕೇಂದ್ರ ಕಾರಾಗೃಹದಲ್ಲಿದ್ದು, ಅವರನ್ನು ಬಾಡಿ ವಾರಂಟ್ ಮೇಲೆ ವಶಕ್ಕೆ ಪಡೆದು ವಿಚಾರಣೆ ನಡೆಸಲಾಗುವುದು. ಈ ಸಂಬಂಧ ಸೋಮವಾರ ನ್ಯಾಯಾಲಯಕ್ಕೆ ಅರ್ಜಿ ಸಲ್ಲಿಸಲಾಗುವುದು’ ಎಂದು ಮೂಲಗಳು ತಿಳಿಸಿವೆ.

‘ಕಾಲ್ತುಳಿತ ಘಟನೆಗೆ ಸಂಬಂಧಿಸಿದಂತೆ ಕೆಎಸ್‌ಸಿಎ ಪದಾಧಿಕಾರಿಗಳ ವಿರುದ್ಧ ಬಲವಂತದ ಕ್ರಮಕ್ಕೆ ಮುಂದಾಗಬಾರದು ಎಂದು ಹೈಕೋರ್ಟ್ ಆದೇಶಿಸಿದೆ. ನ್ಯಾಯಾಲಯದ ಮುಂದಿನ ಆದೇಶ ನೋಡಿಕೊಂಡು ಕೆಎಸ್‌ಸಿಎ ವಿರುದ್ಧ ದಾಖಲಾಗಿರುವ ಪ್ರಕರಣದ ತನಿಖೆ ನಡೆಸಲಾಗುವುದು’ ಎಂದು ತಿಳಿಸಿವೆ.

ಪತ್ನಿ ರುಂಡ ಕತ್ತರಿಸಿ ಠಾಣೆಗೆ ತಂದ

ಆನೇಕಲ್‌ನಲ್ಲಿ ಕೃತ್ಯ: ಶೀಲ ಶಂಕಿಸಿ ಮಚ್ಚಿನಿಂದ ಬರ್ಬರ ಹತ್ಯೆ • ಮನೆಯಲ್ಲಿಯೇ ಇತ್ತು ಮುಂಡ

ಪ್ರಜಾವಾಣಿ ವಾರ್ತೆ


ಮಾನಸ


ಶಂಕರ್

ಅಪರಾಧ ಸುದ್ದಿ

ಆನೇಕಲ್: ತಾಲ್ಲೂಕಿನ ಚಂದಾಪುರ ಬಳಿಯ ಹೀಲಲಿಗೆ ಗ್ರಾಮದಲ್ಲಿ ಶುಕ್ರವಾರ ರಾತ್ರಿ ವ್ಯಕ್ತಿಯೊಬ್ಬ ಪತ್ನಿಯ ರುಂಡವನ್ನು ಮಚ್ಚಿನಿಂದ ಕತ್ತರಿಸಿದ್ದಾನೆ. ನಂತರ ರುಂಡವನ್ನು ಸ್ಕೂಟರ್‌ನಲ್ಲಿಟ್ಟುಕೊಂಡು ಹೋಗಿ ಪೊಲೀಸರಿಗೆ ಶರಣಾಗಿದ್ದಾನೆ.

ಹೆಬ್ಬಗೋಡಿ ನಿವಾಸಿ ಮಾನಸ (26) ಹತ್ಯೆಯಾಗಿದ್ದು, ಪತಿ ಶಂಕರ್ (28) ರುಂಡದೊಂದಿಗೆ ಸೂರ್ಯಸಿಟಿ ಪೊಲೀಸ್ ಠಾಣೆಗೆ ತೆರಳಿ ಶರಣಾಗಿದ್ದಾನೆ. ತಾನೇ ಪತ್ನಿಯನ್ನು ಕೊಲೆ ಮಾಡಿದ್ದಾಗಿ ಪೊಲೀಸರಿಗೆ ತಿಳಿಸಿದ್ದಾನೆ.

ಖಾಸಗಿ ಕಂಪನಿಯಲ್ಲಿ ಕೆಲಸ ಮಾಡುತ್ತಿದ್ದ ದಂಪತಿ ಐದು ವರ್ಷದ ಹಿಂದೆ ಮದುವೆಯಾಗಿ ದ್ದರು. ದಂಪತಿಗೆ ನಾಲ್ಕು ವರ್ಷದ ಪುತ್ರಿ ಇದ್ದಾಳೆ. ಮಾನಸ ಬೊಮ್ಮಸಂದ್ರದಲ್ಲಿ ಮತ್ತು ಶಂಕರ್ ಕೋರಮಂಗಲದ ಖಾಸಗಿ ಕಂಪನಿಯಲ್ಲಿ ಕೆಲಸ ಮಾಡುತ್ತಿದ್ದರು. 'ಪತ್ನಿ ಕೆಲಸ ಮಾಡುತ್ತಿದ್ದ ಕಂಪನಿಯಲ್ಲಿ ಕೆಲಸ ಮಾಡುತ್ತಿದ್ದ ಮುಗಿಲನ್ ಎಂಬಾತನ ಜೊತೆ ಪತ್ನಿಗೆ ಸಲುಗೆ ಇತ್ತು. ಮುಗಿಲನ್ ಆಗಾಗ ಮನೆಗೂ ಹೋಗುತ್ತಿದ್ದ. ಇದೇ ವಿಷಯವಾಗಿ ಇಬ್ಬರ ನಡುವೆ ಆಗಾಗ ಜಗಳ ನಡೆಯುತ್ತಿತ್ತು ಎಂದು ಶಂಕರ್ ತಪ್ಪೊಪ್ಪಿಗೆ ಹೇಳಿಕೆ ನೀಡಿದ್ದಾನೆ' ಎಂದು ಪೊಲೀಸರು ತಿಳಿಸಿದ್ದಾರೆ.

'ಜೂನ್ 3ರಂದು ರಾತ್ರಿ ಪಾಳಿ ಕೆಲಸ ಮುಗಿಸಿಕೊಂಡು ಮರುದಿನ ಬರುವುದಾಗಿ ಹೇಳಿ ಕಂಪನಿ ಕೆಲಸಕ್ಕೆ ಹೋಗಿದ್ದೆ. ರಾತ್ರಿ ಪಾಳಿ ಮುಗಿಸಿ ತಡರಾತ್ರಿಯೇ ಹೀಲಲಿಗೆ ಮನೆಗೆ ಮರಳಿದ್ದೆ. ಮನೆಯಲ್ಲಿ ಮಾನಸ ಪ್ರಿಯಕರನೊಂದಿಗೆ ಇದ್ದುದ್ದನ್ನು ಕಂಡು ಕೋಪ ಬಂತು. ಇಬ್ಬರ ಮೇಲೆ ಹಲ್ಲೆ ನಡೆಸಿದೆ. ಮುಗಿಲನ್ ತಪ್ಪಿಸಿಕೊಂಡ. ಈ ಘಟನೆ ನಂತರ ಪ್ರಿಯಕರನೊಂದಿಗೆ ಹೋಗಲು ಹೇಳಿ ಪತ್ನಿಯನ್ನು ಮನೆಯಿಂದ ಹೊರ ಹಾಕಿದ್ದೆ' ಎಂದು ಹೇಳಿಕೆ ನೀಡಿದ್ದಾನೆ.

ತವರು ಮನೆಗೆ ಹೋಗುವುದಾಗಿ ಹೇಳಿದ್ದ ಮಾನಸ ಮೂರು ದಿನ ಪಿ.ಜಿ.ಯೊಂದರಲ್ಲಿ ವಾಸವಿದ್ದರು. ಪ್ರತಿದಿನ ಮನೆಗೆ ಬಂದು ಮನೆಗೆ ಸೇರಿಸಿಕೊಳ್ಳುವಂತೆ ಪೀಡಿಸುತ್ತಿದ್ದಳು. ಅದೇ ರೀತಿ ಶುಕ್ರವಾರ ರಾತ್ರಿ 8ಕ್ಕೆ ಬಂದ ಮಾನಸ ಮನೆಗೆ ಸೇರಿಸಿಕೊಳ್ಳುವಂತೆ ಕೇಳಿಕೊಂಡಿದ್ದಳು. ಮಗಳ ಭವಿಷ್ಯದ ದೃಷ್ಟಿಯಿಂದ ದಂಪತಿ ಪರಸ್ಪರ ಸಂಧಾನ ಮಾಡಿಕೊಂಡಿದ್ದರು.

ಬಳಿಕ ಮಾತುಕತೆ ವೇಳೆ, ಮುಗಿಲನ್ ಜೊತೆ ಹೇಗೆ ಸಂಬಂಧ ಬೆಳೆಯಿತು ಎಂದು ಶಂಕರ್ ಪ್ರಶ್ನಿಸಿದ್ದ. ಇದು, ವಕೋಪಕ್ಕೆ ಹೋಗಿ, ಕೊಲೆ ಮಾಡಲೆಂದೇ ಖರೀದಿಸಿ ಮನೆಯಲ್ಲಿ ತಂದಿಟ್ಟುಕೊಂಡಿದ್ದ ಮಚ್ಚಿನಿಂದ ಹಲ್ಲೆ ನಡೆಸಿದ್ದ ಎಂದು ಪೊಲೀಸರು ಹೇಳಿದ್ದಾರೆ. ಮುಂಡ ಮತ್ತು ಠಾಣೆಗೆ ತಂದಿದ್ದ ರುಂಡವನ್ನು ವೈದ್ಯಕೀಯ ಪರೀಕ್ಷೆಗಾಗಿ ಕಳಿಸಲಾಗಿದೆ. ಕೊಲೆ ಪ್ರಕರಣ ದಾಖಲಿಸಿಕೊಂಡು, ಆರೋಪಿಯನ್ನು ಬಂಧಿಸಲಾಗಿದೆ. ತನಿಖೆ ನಡೆಯುತ್ತಿದೆ ಎಂದು ಹಿರಿಯ ಪೊಲೀಸ್ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಮಡೆನೂರು ಮನು ಬಿಡುಗಡೆ

ಪ್ರಜಾವಾಣಿ ವಾರ್ತೆ


ಮಡೆನೂರು ಮನು

ಬೆಂಗಳೂರು: ಸಹ ಕಲಾವಿದೆ ಮೇಲೆ ಅತ್ಯಾಚಾರ ನಡೆಸಿದ ಆರೋಪದ ಪ್ರಕರಣದಲ್ಲಿ ಪರಪ್ಪನ ಅಗ್ರಹಾರ ಜೈಲು ಸೇರಿದ್ದ ನಟ ಮಡೆನೂರು ಮನು ಶನಿವಾರ ಬಿಡುಗಡೆ ಆಗಿದ್ದಾರೆ. ಶುಕ್ರವಾರ ಮನುಗೆ ನ್ಯಾಯಾಲಯ ಜಾಮೀನು ಮಂಜೂರು ಮಾಡಿತ್ತು.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 'ನಟರಾದ ಶಿವಣ್ಣ, ದರ್ಶನ್ ಹಾಗೂ ಧ್ರುವ ಸರ್ಜಾ ಅವರ ಕುರಿತು ಮಾತನಾಡಿರುವ ಆಡಿಯೊ ನನ್ನದಲ್ಲ. ಮೊದಲು ಶಿವಣ್ಣ ಅವರನ್ನು ಭೇಟಿ ಮಾಡಿ ನಡೆದ ಎಲ್ಲಾ ಘಟನೆ ತಿಳಿಸುತ್ತೇನೆ' ಎಂದು ತಿಳಿಸಿದರು.

'ಮೂರು ವರ್ಷಗಳ ನನ್ನ ಶ್ರಮವನ್ನು ಹಾಳು ಮಾಡಿದ್ದಾರೆ. ಐದಾರು ಮಂದಿ ನನ್ನ ವಿರುದ್ಧ ಪ್ರತಿ ಹಂತದಲ್ಲಿ ಸಂಚು ನಡೆಸಿದ್ದಾರೆ. ಸಿನಿಮಾ ಬಿಡುಗಡೆಗೂ ಮೊದಲೇ ಕುಣಿಗಲ್ ಬಳಿ ಮೊಟ್ಟೆಯಿಂದ ಹೊಡೆದು, ಹಲ್ಲೆ ನಡೆಸಿ ಬಟ್ಟೆಗಳನ್ನು ಹರಿದಿದ್ದರು. ಅವರೇ ಪ್ರಕರಣ ದಾಖಲಿಸಿದ್ದಾರೆ. ಅತ್ಯಾಚಾರ ಪ್ರಕರಣದಲ್ಲಿ ಕಾನೂನು ಹೋರಾಟ ಮಾಡುತ್ತೇನೆ. ಕೋರ್ಟ್ ಮೇಲೆ ನಂಬಿಕೆ ಇದೆ' ಎಂದರು.

ವಿದ್ಯುತ್ ತಗುಲಿ ಜೆಸ್ಕಾಂ ಅಧಿಕಾರಿ ಸಾವು

ಪ್ರಜಾವಾಣಿ ವಾರ್ತೆ


ಪ್ರಶಾಂತ್

ಯರಗೋಳ (ಯಾದಗಿರಿ ಜಿಲ್ಲೆ): ಜೆಸ್ಕಾಂ ಯಾದಗಿರಿ ವಿಭಾಗ ಹತ್ತಿಕುಣಿ ಶಾಖೆಯ ಪ್ರಭಾರ ಶಾಖಾಧಿಕಾರಿ ಪ್ರಶಾಂತ್ ದೇವಾಪುರ (30) ಶನಿವಾರ ಮಧ್ಯಾಹ್ನ ವಿದ್ಯುತ್ ತಗುಲಿ ಮೃತಪಟ್ಟಿದ್ದಾರೆ.

ಯಡ್ಡಳ್ಳಿ-ಬಂದಳ್ಳಿ ಗ್ರಾಮಗಳ ಸೀಮೆಯಲ್ಲಿ ವಿದ್ಯುತ್ ಪರಿವರ್ತಕ ದುರಸ್ತಿ ವೇಳೆ ಹರಿಯುತ್ತಿದ್ದ ವಿದ್ಯುತ್ ಸ್ಪರ್ಶಿಸಿ ಮೃತಪಟ್ಟಿದ್ದಾರೆ ಎಂದು ಸ್ಥಳೀಯರು 'ಪ್ರಜಾವಾಣಿ'ಗೆ ಮಾಹಿತಿ ನೀಡಿದರು. ಯಾದಗಿರಿ ಗ್ರಾಮೀಣ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಉತ್ತರ ಪ್ರದೇಶದ ಬಾಲಕಿ ರಕ್ಷಣೆ

ತುಮಕೂರು: ಉತ್ತರ ಪ್ರದೇಶದ ಮಾಲ್ವಾ ಜಿಲ್ಲೆಯ 15 ವರ್ಷದ ಬಾಲಕಿಯನ್ನು ಕ್ಯಾತ್ಸಂದ್ರ ಠಾಣೆ ಪೊಲೀಸರು ನಗರದಲ್ಲಿ ಶನಿವಾರ ರಕ್ಷಿಸಿ, ಬಾಲಕಿಯರ ಬಾಲ ಮಂದಿರಕ್ಕೆ ಸೇರಿಸಿದ್ದಾರೆ.

ಬಾಲಕಿ ಕಾಣೆಯಾದ ಬಗ್ಗೆ ಮಾಲ್ವಾ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿತ್ತು. ಪೊಲೀಸರು ಬಾಲಕಿಗಾಗಿ ಹುಡುಕಾಟ ನಡೆಸುತ್ತಿದ್ದರು. ಉತ್ತರ ಪ್ರದೇಶ ಪೊಲೀಸರು ನೀಡಿದ ಮಾಹಿತಿ ಮೇರೆಗೆ ಬಾಲಕಿಯನ್ನು ರಕ್ಷಿಸಿ, ಆಕೆಯ ಜತೆಗಿದ್ದ ಶಾನವಾಜ್ (25) ಎಂಬ ಯುವಕನನ್ನು ವಶಕ್ಕೆ ಪಡೆದಿದ್ದಾರೆ. 'ಬಾಲಕಿ ಒಪ್ಪಿ ಯುವಕನ ಜತೆ ಬಂದಿದ್ದಳು ಎಂದು ಕ್ಯಾತ್ಸಂದ್ರ ಠಾಣೆ ಪೊಲೀಸರು ತಿಳಿಸಿದ್ದಾರೆ.

ಬ್ಯಾಂಕ್ ಉದ್ಯೋಗಿಯ ಕೊಲೆ


ದರ್ಶನ್

ನೆಲಮಂಗಲ: ಪಟ್ಟಣದ ಖಾಸಗಿ ಬ್ಯಾಂಕ್ ಉದ್ಯೋಗಿಯೊಬ್ಬರನ್ನು ಚಾಕುವಿನಿಂದ ಇರಿದು ಕೊಲೆ ಮಾಡಿರುವ ಘಟನೆ ಶುಕ್ರವಾರ ರಾತ್ರಿ 9 ಗಂಟೆಗೆ ಸುಮಾರಿಗೆ ನಡೆದಿದೆ. ಗೊಲ್ಲಹಳ್ಳಿ ಗ್ರಾಮದ ದರ್ಶನ್ (25) ಕೊಲೆಯಾದವರು.

ಶುಕ್ರವಾರ ಮನೆಯಲ್ಲೇ ಇದ್ದ ದರ್ಶನ್ ಅವರು ರಾತ್ರಿ 7.30ರ ಸುಮಾರಿಗೆ ಮನೆಯಿಂದ ಹೊರಗೆ ಹೋಗಿದ್ದರು. ಈ ಸಮಯದಲ್ಲಿ ಆರೋಪಿಗಳ ಜತೆಗೆ ಮಾತಿನ ಚಕಮಕಿ ನಡೆದು ಕೊಲೆ ಆಗಿದೆ ಎಂದು ಶಂಕಿಸಲಾಗಿದೆ.

ಗೊಲ್ಲಹಳ್ಳಿ ಗ್ರಾಮದ ವೇಣು ಗೋಪಾಲ್ ಎಂಬಾತ ಕೃತ್ಯ ಎಸಗಿರುವ ಶಂಕೆಯಿದ್ದು, ಆತ ತಲೆಮರೆಸಿಕೊಂಡಿದ್ದಾನೆ ಎಂದು ಪೊಲೀಸರು ಹೇಳಿದರು.

ಪ್ರೇಮದ ವಿಚಾರಕ್ಕೆ ಕೊಲೆ ನಡೆದಿದೆ ಎಂಬುದು ಪ್ರಾಥಮಿಕ ತನಿಖೆಯಿಂದ ಗೊತ್ತಾಗಿದೆ ಎಂದು ಪೊಲೀಸರು ಹೇಳಿದರು. ಗ್ರಾಮಾಂತರ ಪೊಲೀಸರು ಪ್ರಕರಣ ದಾಖಲಿಸಿಕೊಂಡು ತನಿಖೆ ಕೈಗೊಂಡಿದ್ದಾರೆ.

ವಿದ್ಯುತ್ ಆಘಾತ: ಮಗು ಸಾವು

ಬೆಂಗಳೂರು: ಕಲ್ಯಾಣ ಮಂಟಪದಲ್ಲಿದ್ದ ಕೂಲರ್‌ನ ವೈರ್ ತಗುಲಿ ಐದು ವರ್ಷದ ಬಾಲಕ, ಗವಿಪುರ ಗುಟ್ಟಹಳ್ಳಿ ನಿವಾಸಿ ಪ್ರದೀಪ್ ಮತ್ತು ದೀಪಾ ದಂಪತಿ ಪುತ್ರ ಶಿವಂ (5) ಮೃತಪಟ್ಟಿದ್ದಾನೆ.

ಬಸವೇಶ್ವರನಗರದ ಕಲ್ಯಾಣದ ಮಂಟಪದಲ್ಲಿ ಜೂನ್ 4ರಂದು ಅವಘಡ ಸಂಭವಿಸಿದೆ. ಮೃತನ ತಾಯಿ ದೀಪಾ ನೀಡಿದ ದೂರಿನ ಮೇರೆಗೆ ಹಾಲ್‌ನ ವ್ಯವಸ್ಥಾಪಕ ಸತೀಶ್, ಎಲೆಕ್ಟ್ರಿಷಿಯನ್ ಸಂತೋಷ್ ಹಾಗೂ ಮಾಲೀಕ ದಿವಾಕರ್ ವಿರುದ್ಧ ಬಸವೇಶ್ವರನಗರ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿದೆ.

ಡಿಕ್ಕಿ: ಟಿಪ್ಪರ್ ಚಾಲಕ ಸಾವು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಲಾರಿ ಮತ್ತು ಟಿಪ್ಪರ್ ಲಾರಿ ನಡುವೆ ಸಂಭವಿಸಿದ ರಸ್ತೆ ಅಪಘಾತದಲ್ಲಿ ಟಿಪ್ಪರ್ ಲಾರಿ ಚಾಲಕ, ಮಧ್ಯಪ್ರದೇಶ ಮೂಲದ ಬ್ರಿಜೇಶ್ ಕುಶ್ವಾಹ (24) ಮೃತಪಟ್ಟಿದ್ದಾರೆ.

ಶನಿವಾರ ಮುಂಜಾನೆ 3.30ಕ್ಕೆ ನೈಸ್ ರಸ್ತೆಯ ಹಿಲ್ ರಾಕ್ ಸ್ಕೂಲ್ ಬಳಿ ಈ ದುರ್ಘಟನೆ ನಡೆದಿದ್ದು, ಅಪಘಾತದಲ್ಲಿ ಎರಡೂ ವಾಹನಗಳು ಜಖಂಗೊಂಡಿವೆ.

ಮೈಸೂರು ರಸ್ತೆ ಕಡೆಯಿಂದ ಮಾಗಡಿ ಕಡೆಗೆ ಚಾಲಕ ಬ್ರಿಜೇಶ್ ಕುಶ್ವಾಹ ವೇಗವಾಗಿ ಲಾರಿ ಚಲಾಯಿಸಿಕೊಂಡು ಬರುವಾಗ ನೈಸ್ ರಸ್ತೆಯ ಹಿಲ್ ರಾಕ್ ಸ್ಕೂಲ್ ಬಳಿ ಮುಂದೆ ಹೋಗುತ್ತಿದ್ದ ಮತ್ತೊಂದು ಲಾರಿ ಡಿಕ್ಕಿ ಹೊಡೆದಿದ್ದಾರೆ. ಡಿಕ್ಕಿಯ ರಭಸಕ್ಕೆ ಟಿಪ್ಪರ್ ಲಾರಿಯ ಮುಂಭಾಗ ನಜ್ಜುಗುಜ್ಜಾಗಿ ಬ್ರಿಜೇಶ್ ಗಂಭೀರವಾಗಿ ಗಾಯಗೊಂಡರು. ಆಸ್ಪತ್ರೆಗೆ ಒಯ್ಯುವ ಮಾರ್ಗದಲ್ಲಿ ಮೃತಪಟ್ಟರು. ಸಂಚಾರ ಪೊಲೀಸರು ಎರಡೂ ಲಾರಿ ಜಪ್ತಿ ಮಾಡಿದರು. ಟಿಪ್ಪರ್ ಚಾಲಕನ ಅತಿವೇಗ ಹಾಗೂ ನಿರ್ಲಕ್ಷ್ಯದ ಚಾಲನೆ ಅಪಘಾತಕ್ಕೆ ಕಾರಣ ಎಂಬುದು ಪ್ರಾಥಮಿಕ ತನಿಖೆಯಿಂದ ತಿಳಿದು ಬಂದಿದೆ. ಜ್ಞಾನಭಾರತಿ ಸಂಚಾರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಪದವಿ ಕಾಲೇಜು ಕಟ್ಟಡಕ್ಕೆ ಶಂಕುಸ್ಥಾಪನೆ

ಯಲಹಂಕ: ಬ್ಯಾಟರಾಯನಪುರದಲ್ಲಿ ನೂತನ ಸರ್ಕಾರಿ ಪದವಿ ಕಾಲೇಜು ಉದ್ಘಾಟಿಸಿದ ಕಂದಾಯ ಸಚಿವ ಕೃಷ್ಣಬೈರೇಗೌಡ ಹಾಗೂ ಉನ್ನತ ಶಿಕ್ಷಣ ಸಚಿವ ಡಾ.ಎಂ.ಸಿ.ಸುಧಾಕರ್, ಜಕ್ಕೂರು ಸರ್ಕಾರಿ ಶಾಲೆ ಆವರಣದಲ್ಲಿ ಸರ್ಕಾರಿ ಪದವಿ ಕಾಲೇಜು ನಿರ್ಮಾಣಕ್ಕೆ ಗುದ್ದಲಿಪೂಜೆ ನೆರವೇರಿಸಿದರು.

ಈ ವೇಳೆ ಮಾತನಾಡಿದ ಕೃಷ್ಣ ಬೈರೇಗೌಡ, 'ಖಾಸಗಿ ಕಾಲೇಜುಗಳನ್ನು ಮೀರಿಸುವಂತೆ ಸರ್ಕಾರಿ ಕಾಲೇಜುಗಳಲ್ಲಿ ಮೂಲಸೌಲಭ್ಯಗಳನ್ನು ಕಲ್ಪಿಸಲಾಗುತ್ತಿದೆ. ವಿದ್ಯಾರ್ಥಿಗಳು ಸರ್ಕಾರಿ ಶಾಲಾ-ಕಾಲೇಜುಗಳಲ್ಲಿ ಶಿಕ್ಷಣ ಪಡೆಯಲು ಮುಂದಾಗಬೇಕು' ಎಂದು ಸಲಹೆ ನೀಡಿದರು.

'ಜಕ್ಕೂರಿನಲ್ಲಿ ₹ 4 ಕೋಟಿ ವೆಚ್ಚದಲ್ಲಿ ಸರ್ಕಾರಿ ಪದವಿ ಪೂರ್ವ ಕಾಲೇಜು ನಿರ್ಮಾಣಕ್ಕೆ ಚಾಲನೆ ನೀಡಲಾಗಿದೆ. ಈ ಕಟ್ಟಡದಲ್ಲಿ ಕನಿಷ್ಠ 30 ಕೊಠಡಿಗಳು, ಲ್ಯಾಬ್ ಹಾಗೂ ಇತರೆ ಸೌಲಭ್ಯಗಳಿರಲಿವೆ ಎಂದರು.

ಸಚಿವ ಡಾ.ಎಂ.ಸಿ.ಸುಧಾಕರ್ ಅವರು, 'ಈ ಭಾಗದ ಜನರು ಸರ್ಕಾರಿ ಶಾಲಾ-ಕಾಲೇಜುಗಳಲ್ಲಿ ಶಿಕ್ಷಣ ಪಡೆಯುವ ಮೂಲಕ ಸರ್ಕಾರದ ಸೌಲಭ್ಯಗಳನ್ನು ಬಳಸಿಕೊಳ್ಳಬೇಕು' ಎಂದರು.

ಕಲ್ಯಾಣ ಕರ್ನಾಟಕ ಅಭಿವೃದ್ಧಿ ಮಂಡಳಿ ಅಧ್ಯಕ್ಷ ಅಜಯ್ ಸಿಂಗ್, ಕಾಲೇಜು ಶಿಕ್ಷಣ ಇಲಾಖೆಯ ಆಯುಕ್ತೆ ಎನ್.ಮಂಜುಶ್ರೀ, ಜಿಲ್ಲಾಪಂಚಾಯಿತಿ ಮಾಜಿ ಅಧ್ಯಕ್ಷ ರವಿಕುಮಾರ್ ಅವರು ಉಪಸ್ಥಿತರಿದ್ದರು.

'ಪದ್ಮಶ್ರೀ' ಪುರಸ್ಕೃತೆ ಡಾ.ವಿಜಯಲಕ್ಷ್ಮಿ ಅವರಿಗೆ ಸನ್ಮಾನ

'ನಿಜ ಸಾಧಕರಿಂದ ಪ್ರಶಸ್ತಿಗೆ ಮೌಲ್ಯ'

ಪ್ರಜಾವಾಣಿ ವಾರ್ತೆ


ಪ್ರಲ್ಹಾದ ಜೋಶಿ ಅವರು ಡಾ.ವಿಜಯಲಕ್ಷ್ಮಿ ದೇಶಮಾನೆ ಅವರನ್ನು ಗೌರವಿಸಿದರು

ಬೆಂಗಳೂರು: 'ಪ್ರಧಾನಿ ನರೇಂದ್ರ ಮೋದಿ ಅವರ ಆಡಳಿತದಲ್ಲಿ 'ಪದ್ಮ ಪ್ರಶಸ್ತಿ'ಯು ನಿಜ ಸಾಧಕರನ್ನು ಪುರಸ್ಕರಿಸುತ್ತಿದೆ. ಇದರಿಂದಾಗಿ ಪ್ರಶಸ್ತಿಯ ಮೌಲ್ಯವೂ ಹೆಚ್ಚುತ್ತಿದೆ' ಎಂದು ಕೇಂದ್ರ ಸಚಿವ ಪ್ರಲ್ಹಾದ ಜೋಶಿ ಪ್ರತಿಪಾದಿಸಿದರು.

ಅಬಲಾಶ್ರಮದ 120ನೇ ವರ್ಷಾಚರಣೆ ಪ್ರಯುಕ್ತ ನಗರದಲ್ಲಿ ಶನಿವಾರ ಹಮ್ಮಿಕೊಳ್ಳಲಾದ ಕಾರ್ಯಕ್ರಮದಲ್ಲಿ ಸಂಸ್ಥೆಯ ಅಧ್ಯಕ್ಷೆ, 'ಪದ್ಮಶ್ರೀ ಪ್ರಶಸ್ತಿ' ಪುರಸ್ಕೃತೆ ಡಾ.ವಿಜಯಲಕ್ಷ್ಮಿ ದೇಶಮಾನೆ ಅವರನ್ನು ಗೌರವಿಸಿ, ಮಾತನಾಡಿದರು.

'ಹಿಂದೆ ಪ್ರಶಸ್ತಿ-ಪುರಸ್ಕಾರಕ್ಕೆ ಅರ್ಜಿ, ಶಿಫಾರಸು ಪ್ರಮುಖ ಪಾತ್ರ ವಹಿಸುತ್ತಿತ್ತು. ಆದರೆ, ಈಗ ಕೇಂದ್ರ ಮಟ್ಟದ ಗೌರವ-ಪುರಸ್ಕಾರಗಳು ನೈಜ ಸಾಧಕರನ್ನು ಅರಸಿ ಬರುತ್ತಿವೆ. ಸ್ಥಳೀಯ ಆಡಳಿತ, ಅಧಿಕಾರಿಗಳಿಗೇ ನೈಜ ಸಾಧಕರ ಬಗ್ಗೆ ಮಾಹಿತಿ ಇರುವುದಿಲ್ಲ. ಅಂಥ ಸಮಾಜ ಸೇವಕರನ್ನು, ಸಾಧಕರನ್ನು ಪ್ರಧಾನಿ ನರೇಂದ್ರ ಮೋದಿ ಅವರು ಗುರುತಿಸಿ, 'ಪದ್ಮಶ್ರೀ'ಯಂತಹ ಅತ್ಯುನ್ನತ ಪ್ರಶಸ್ತಿ ನೀಡಿ ಪುರಸ್ಕರಿಸುತ್ತಿದ್ದಾರೆ' ಎಂದು ಹೇಳಿದರು.

'ಅಬಲಾಶ್ರಮದ ಅಧ್ಯಕ್ಷೆ ವಿಜಯಲಕ್ಷ್ಮಿ ದೇಶಮಾನೆ ಅವರ ಸೇವಾ ಕೈಂಕರ್ಯ ನಿಜಕ್ಕೂ ಇಂದಿನ ಸಮಾಜಕ್ಕೆ ಮಾದರಿ ಮತ್ತು ಆದರ್ಶನೀಯ. ಅಬಲೆಯರಿಗೆ ಸ್ತ್ರೀಶಕ್ತಿಯಾಗಿ ನಿಂತಿದ್ದು, ಅತ್ಯುನ್ನತ 'ಪದ್ಮಶ್ರೀ' ಗೌರವ ಪುರಸ್ಕಾರಕ್ಕೆ ಭಾಜನರಾಗಿರುವುದು ಹೆಮ್ಮೆಯ ಸಂಗತಿ' ಎಂದು ಶ್ಲಾಘಿಸಿದರು,

'ಮಹಿಳೆಯರು ಇಂದು ರೈಫಲ್ ಹಿಡಿಯುವುದರಿಂದ ಹಿಡಿದು, ಡ್ರೋನ್, ಕ್ಷಿಪಣಿ ಉಡಾಯಿಸುವಂತಹ ಮಹತ್ತರ ಎತ್ತರಕ್ಕೆ ಬೆಳೆದಿದ್ದಾರೆ. ಕೀಳರಿಮೆ, ಅವಹೇಳನವನ್ನೆಲ್ಲ ಮೆಟ್ಟಿ ನಿಂತು ಸಮಾಜದಲ್ಲಿ ಸಮಾನತೆ ಸಾಧಿಸುತ್ತಿದ್ದಾರೆ. ಅವಕಾಶ ಕೊಟ್ಟರೆ ಮುಗಿಲೆತ್ತರ ತಲುಪುತ್ತೇವೆ ಎಂಬುದನ್ನು ಸಾಧಿಸುತ್ತಿದ್ದಾರೆ. 'ಆಪರೇಷನ್ ಸಿಂಧೂರ್' ಮೂಲಕ ಭಾರತೀಯ ಮಹಿಳೆಯರು ಇಂದು ಜಗತ್ಪ್ರಸಿದ್ಧರಾಗಿದ್ದಾರೆ' ಎಂದರು.

ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾದ ಮುಖ್ಯ ಆಡಳಿತಾಧಿಕಾರಿ ಜೂಹಿ ಸ್ಮಿತಾ ಸಿನ್ಹಾ, ಕ್ಲೂಬೆರ್ ಲೂಬ್ರಿಕೇಷನ್ ಇಂಡಿಯಾದ ಹಣಕಾಸು ಮುಖ್ಯಸ್ಥ ವಿಶಾಲ್ ಅಲ್‌ಮಲ್, ಅಬಲಾಶ್ರಮದ ಗೌರವ ಕಾರ್ಯದರ್ಶಿ ಆರ್.ಎಸ್. ಭಾರತೀಶ ರಾವ್ ಉಪಸ್ಥಿತರಿದ್ದರು.



ಕರ್ನಾಟಕ ನಾಟಕ ಅಕಾಡೆಮಿ ಶನಿವಾರ ಆಯೋಜಿಸಿದ್ದ ರಂಗಸಂವಾದ ಕಾರ್ಯಕ್ರಮದಲ್ಲಿ ರಿಚರ್ಡ್ ಲೂಯಿಸ್ ಮಾತನಾಡಿದರು. ಜಗದೀಶ್ ಜಾಲ, ಕೆ.ವಿ. ನಾಗರಾಜಮೂರ್ತಿ ಹಾಜರಿದ್ದರು

ಕಮಲ್ ಚಿತ್ರ ಪ್ರದರ್ಶನ 'ನಿಷೇಧ' ಪ್ರಶ್ನಿಸಿ ಪಿಐಎಲ್

ಪ್ರಜಾವಾಣಿ ವಾರ್ತೆ



ನವದೆಹಲಿ: ಕಮಲ್ ಹಾಸನ್ ನಟನೆಯ 'ಥಗ್ ಲೈಫ್' ಚಿತ್ರಪ್ರದರ್ಶನಕ್ಕೆ ಕರ್ನಾಟಕದಲ್ಲಿ ನಿಷೇಧ ಹೇರಿರುವುದನ್ನು ಪ್ರಶ್ನಿಸಿ ಸುಪ್ರೀಂ ಕೋರ್ಟ್‌ನಲ್ಲಿ ಸಾರ್ವಜನಿಕ ಹಿತಾಸಕ್ತಿ ಅರ್ಜಿ (ಪಿಐಎಲ್) ಸಲ್ಲಿಸಲಾಗಿದೆ.

'ಈ ಚಿತ್ರವನ್ನು ಸಿಬಿಎಫ್‌ಸಿ ಪ್ರಮಾಣೀಕರಿಸಿದೆ. ಆದರೆ, ಕೆಲ ಸಂಘಟನೆಗಳು ಹಿಂಸಾಚಾರದ ಬೆದರಿಕೆ ಒಡ್ಡಿವೆ. ಈ ಕಾರಣಕ್ಕೆ ಚಿತ್ರ ಪ್ರದರ್ಶನದ ಮೇಲೆ ವಸ್ತುತಃ ನಿಷೇಧ ಹೇರಿದಂತಾಗಿದೆ' ಎಂದು ಆರೋಪಿಸಿ ಬೆಂಗಳೂರಿನ ಎಂ.ಮಹೇಶ ರೆಡ್ಡಿ ಪಿಐಎಲ್ ಸಲ್ಲಿಸಿದ್ದಾರೆ.

'ಚಿತ್ರ ಪ್ರದರ್ಶನಕ್ಕೆ ಅವಕಾಶ ನೀಡದಿರುವುದು ಸಂವಿಧಾನದ 14, 19(1)(ಎ), 19(1)(ಜಿ) ಹಾಗೂ 21ನೇ ವಿಧಿಗಳ ಉಲ್ಲಂಘನೆ' ಎಂದು ಅರ್ಜಿಯಲ್ಲಿ ಹೇಳಲಾಗಿದೆ.

ನಿಧನ ವಾರ್ತೆ

ಎಂ.ಎಸ್. ಸ್ವರ್ಣಾಂಬ



ಬೆಂಗಳೂರು: ಪ್ರಾಚಾರ್ಯ ಕೆ.ಎಸ್. ರಾಜಯ್ಯ ನವರ ಪತ್ನಿ, ವಿಜಯ ನಗರದ ಹೊಸಹಳ್ಳಿ ನಿವಾಸಿ ಎಂ.ಎಸ್. ಸ್ವರ್ಣಾಂಬ (89) ಅವರು ಶನಿವಾರ ನಿಧನರಾದರು. ಡಾ. ಚಿರಂತ್ ಸೇರಿದಂತೆ ಇಬ್ಬರು ಮಕ್ಕಳು ಇದ್ದಾರೆ. ಚಾಮರಾಜಪೇಟೆಯ ಲಿಂಗಾಯತ ರುದ್ರಭೂಮಿಯಲ್ಲಿ ಭಾನುವಾರ ಮಧ್ಯಾಹ್ನ 2.30ಕ್ಕೆ ಅಂತ್ಯಕ್ರಿಯೆ ನಡೆಯಲಿದೆ ಎಂದು ಕುಟುಂಬ ಮೂಲ ತಿಳಿಸಿವೆ. ಸಂಪರ್ಕ: 9845016112

ರುದ್ರಮ್ಮ



ಪೀಣ್ಯ ದಾಸರಹಳ್ಳಿ: ನೆಲಗದರನಹಳ್ಳಿ ನಿವಾಸಿ ಮತ್ತು ನಿಸರ್ಗ ವಿದ್ಯಾವಾಹಿನಿ ಶಾಲೆಯ ಸಂಸ್ಥಾಪಕಿ ರುದ್ರಮ್ಮ (80) ಅವರು ವಯೋಸಹಜ ಕಾಯಿಲೆಯಿಂದ ಶನಿವಾರ ನಿಧನರಾದರು. ಮೃತರಿಗೆ ಪುತ್ರಿ ಮತ್ತು ಇಬ್ಬರು ಪುತ್ರರಿದ್ದಾರೆ. ಅಂತ್ಯಸಂಸ್ಕಾರವನ್ನು ಭಾನುವಾರ ಬೆಳಿಗ್ಗೆ 10 ಗಂಟೆಗೆ ನೆಲಗದರನಹಳ್ಳಿಯ ನಿಸರ್ಗ ಹಾಲೋ ಬ್ಲಾಕ್ ಇಟ್ಟಿಗೆ ಫ್ಯಾಕ್ಟರಿ ಆವರಣದಲ್ಲಿ ನಡೆಸಲಾಗುವುದು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಕಂಟೋನ್ಮೆಂಟ್ ರೈಲ್ವೆ ಕಾಲೊನಿಯಲ್ಲಿರುವ ಮರಗಳು • ಜೀವವೈವಿಧ್ಯ ವನವಾಗಿ ಅಭಿವೃದ್ಧಿಗೆ ಒತ್ತಾಯ

368 ಮರ ಉಳಿಸಲು ಸಿ.ಎಂಗೆ ಮನವಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಕಂಟೋನ್ಮೆಂಟ್ ರೈಲ್ವೆ ಕಾಲೊನಿಯಲ್ಲಿರುವ 368 ಮರಗಳನ್ನು ಉಳಿಸಬೇಕು' ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ 'ಪರಿಸರಕ್ಕಾಗಿ ನಾವು' ಸಂಘಟನೆಯ ಅಧ್ಯಕ್ಷ ಎ.ಟಿ. ರಾಮಸ್ವಾಮಿ ಮನವಿ ಮಾಡಿಕೊಂಡಿದ್ದಾರೆ.

ಈ ಸಂಬಂಧ ಮುಖ್ಯಮಂತ್ರಿಗೆ ಪತ್ರ ಬರೆದಿರುವ ಅವರು, 'ಮರಗಳನ್ನು ಕಡಿಯಲು ಅನುಮತಿ ನೀಡದಂತೆ ಬಿಬಿಎಂಪಿಯ ಅರಣ್ಯ ವಿಭಾಗದ ಉಪ ಅರಣ್ಯ ಸಂರಕ್ಷಣಾಧಿಕಾರಿ (ಡಿಸಿಎಫ್) ಅವರಿಗೆ ನಿರ್ದೇಶನ ನೀಡಬೇಕು. ಈ ಪ್ರದೇಶವನ್ನು ಜೀವ ವೈವಿಧ್ಯ ವನವನ್ನಾಗಿ ಮಾಡಬೇಕು' ಎಂದು ಕೋರಿದ್ದಾರೆ.

'368 ಮರಗಳನ್ನು ಉಳಿಸಲು ಕ್ರಮಕೈಗೊಳ್ಳುವಂತೆ ಅರಣ್ಯ ಸಚಿವರಿಗೆ ಏಪ್ರಿಲ್ 29 ಮತ್ತು ಮೇ 17ರಂದು ನಮ್ಮ ಸಂಘಟನೆ ವತಿಯಿಂದ ಪತ್ರ ಬರೆಯಲಾಗಿತ್ತು. ಸಂಘಟನೆಯ ಸದಸ್ಯರು, ಸಚಿವರನ್ನು ಭೇಟಿ ಮಾಡಿ ಕ್ರಮ ಕೈಗೊಳ್ಳಲು ವಿನಂತಿಸಿದ್ದರು. ಬಿಬಿಎಂಪಿ ಅರಣ್ಯ ವಿಭಾಗ, ತಮ್ಮ ವ್ಯಾಪ್ತಿಯಲ್ಲಿ ಬರುವುದಿಲ್ಲ, ಬೆಂಗಳೂರು ನಗರಾಭಿವೃದ್ಧಿ ಇಲಾಖೆಯ ವ್ಯಾಪ್ತಿಗೆ ಬರುತ್ತದೆ ಎಂದು ಅರಣ್ಯ ಸಚಿವರು ಅಸಹಾಯಕತೆ ವ್ಯಕ್ತಪಡಿಸಿದರು. ಆದ್ದರಿಂದ ತಾವು ಕೂಡಲೇ ಕ್ರಮ ಕೈಗೊಳ್ಳಬೇಕು' ಎಂದು ಒತ್ತಾಯಿಸಿದ್ದಾರೆ.

'ರೈಲ್ ಲ್ಯಾಂಡ್ ಡೆವಲಪ್ಮೆಂಟ್ ಅಥಾರಿಟಿ'ಯವರು, ಕಂಟೋನ್ಮೆಂಟ್ ರೈಲ್ವೆ ಕಾಲೊನಿಯಲ್ಲಿ ಐದು ಎಕರೆ ಜಾಗವನ್ನು ಬಾಗ್ಮನೆ ಟೆಕ್ ಕಂಪನಿಯವರಿಗೆ ಗುತ್ತಿಗೆ ಕೊಡುತ್ತಿದ್ದಾರೆ ಎಂದು ತಿಳಿದು ಬಂದಿದೆ. 'ಇದಕ್ಕೆ ಪೂರಕವಾಗಿ, ಈ ಜಾಗದಲ್ಲಿ ಕಟ್ಟಡ ನಿರ್ಮಾಣ ಮಾಡಲು ಅಡ್ಡಿಯಾಗಿರುವ 368 ಮರಗಳನ್ನು ಕಡಿಯಲು ಅನುಮತಿ ನೀಡುವಂತೆ ರೈಲ್ವೆ ಅಧಿಕಾರಿಗಳು ಬಿಬಿಎಂಪಿ ಅರಣ್ಯ ಇಲಾಖೆಯ ಉಪ ಅರಣ್ಯ ಸಂರಕ್ಷಣಾಧಿಕಾರಿಗಳಿಗೆ ಮನವಿ ಮಾಡಿದ್ದರು. ಇದನ್ನು ಪರಿಗಣಿಸಿದ ಡಿಸಿಎಫ್ ಮರಗಳನ್ನು ಕಡಿಯಲು ಸಾರ್ವಜನಿಕರ ಆಕ್ಷೇಪಣೆ ಮೇ 20ರಂದು ಸಭೆ ನಡೆಸಿದರು. ಮರಗಳನ್ನು ಕಡಿಯಲು ಅನುಮತಿ ಕೊಡಬಾರದು, ಐಟಿ ಕಂಪನಿ ಕಟ್ಟಡ ಕಟ್ಟಲು ಬೇರೆ ಕಡೆ ಜಾಗ ಕೊಡಿ ಎಂದು ನೂರಾರು ಜನರು ಒಕ್ಕೊರಲಿನಿಂದ ಆಗ್ರಹಿಸಿದ್ದರು. ಮರಗಳನ್ನು ಕಡಿಯಲು ಇಷ್ಟು ವಿರೋಧ ಇದ್ದರೂ ಬಿಬಿಎಂಪಿಯ ಡಿಸಿಎಫ್ ಮರಗಳನ್ನು ಕಡಿಯಲು ಅನುಮತಿ ನಿರಾಕರಿಸಿ ಇನ್ನೂ ಆದೇಶ ಹೊರಡಿಸಿಲ್ಲ' ಎಂದು ಹೇಳಿದ್ದಾರೆ.



ಪರಿಸರ ಸಂರಕ್ಷಣೆಯು ವ್ಯಕ್ತಿ, ಸಮಾಜ ಮತ್ತು ಸರ್ಕಾರದ ಆದ್ಯತೆಯಾಗಬೇಕಾಗಿದೆ. ಜೀವ ವೈವಿಧ್ಯ ಉಳಿದರೆ ಸಕಲ ಜೀವ ಸಂಕುಲ ಉಳಿಯಲಿದೆ

ಎ.ಟಿ. ರಾಮಸ್ವಾಮಿ, ಅಧ್ಯಕ್ಷ 'ಪರಿಸರಕ್ಕಾಗಿ ನಾವು' ಸಂಘಟನೆ



ರಸ್ತೆ, ಚರಂಡಿ ನಿರ್ಮಿಸುವಂತೆ ಒತ್ತಾಯಿಸಿ ಕಲ್ಕೆರೆ ನಿವಾಸಿಗಳು ಖಾನೆ ರಸ್ತೆಯಲ್ಲಿ ಪ್ರತಿಭಟನೆ ನಡೆಸಿದರು

ಕಲ್ಕೆರೆ: ರಸ್ತೆ, ಚರಂಡಿ ನಿರ್ಮಾಣಕ್ಕೆ ಒತ್ತಾಯಿಸಿ ನಿವಾಸಿಗಳ ಪ್ರತಿಭಟನೆ

ಪ್ರಜಾವಾಣಿ ವಾರ್ತೆ

ಕೆ.ಆರ್.ಪುರ: ಹದಗೆಟ್ಟ ರಸ್ತೆಯ ಅಭಿವೃದ್ಧಿ ಮತ್ತು ಸಮರ್ಪಕ ಚರಂಡಿ ನಿರ್ಮಿಸಲು ಒತ್ತಾಯಿಸಿ ಕಲ್ಕೆರೆ ನಿವಾಸಿಗಳು ಖಾನೆ ರಸ್ತೆಯಲ್ಲಿ, ರಸ್ತೆ ಗುಂಡಿಗಳ ಮಧ್ಯೆ ನಿಂತು ಬಿಬಿಎಂಪಿ ಅಧಿಕಾರಿಗಳ ವಿರುದ್ಧ ಪ್ರತಿಭಟನೆ ನಡೆಸಿದರು.

ಖಾನೆ ರಸ್ತೆಯು ಕೆಲ ವರ್ಷಗಳಿಂದ ಹದಗೆಟ್ಟಿದೆ. ದಿನನಿತ್ಯ ಸಂಚಾರಕ್ಕೆ ಅಡಚಣೆಯಾಗಿ ಸಾರ್ವಜನಿಕರು ತೊಂದರೆಯಾಗಿದೆ. ಸಮರ್ಪಕ ಚರಂಡಿ ವ್ಯವಸ್ಥೆ ಇಲ್ಲದೆ ಓಂ ಶಕ್ತಿ ಬಡಾವಣೆ, ಬಂಜಾರ ಬಡಾವಣೆ, ಕನಕಗಿರಿ ಬಡಾವಣೆ ಹಾಗೂ ಇನ್ನಿತರ ಬಡಾವಣೆಗಳ ಸುಮಾರು 2 ಕಿ.ಮೀ ದೂರದಿಂದ ಚರಂಡಿ ನೀರು, ರಸ್ತೆಗೆ ಬರುತ್ತದೆ ಎಂದು ದೂರಿದರು.

ಖಾನೆ ರಸ್ತೆಯಿಂದ ಗೌಡ್ರ ಪಿಳ್ಳಂಜನಪ್ಪ ಬಡಾವಣೆ ಹಾಗೂ ಸುತ್ತಲಿನ ಬಡಾವಣೆಯ ಮನೆಗಳಿಗೆ ಚರಂಡಿ ನೀರು ಹರಿಯುವುದರಿಂದ ದುರ್ವಾಸನೆ ಮತ್ತು ಸೊಳ್ಳೆಗಳ ಹಾವಳಿ ಹೆಚ್ಚಾಗಿದೆ. ಬಿಬಿಎಂಪಿ ಅಧಿಕಾರಿಗಳ ಗಮನಕ್ಕೆ ಹಲವು ಬಾರಿ ತಂದರೂ ಪ್ರಯೋಜನ ಆಗುತ್ತಿಲ್ಲ ಗೌಡ್ರ ಪಿಳ್ಳಂಜನಪ್ಪ ಬಡಾವಣೆ ನಿವಾಸಿ ದೇವರಾಜ್ ಆಕ್ರೋಶ ಹೊರ ಹಾಕಿದರು.

ಮಳೆ ಬಂದಾಗ ಬಡಾವಣೆಯ ಹಲವು ಮನೆಗಳಿಗೆ ಮಳೆ ನೀರಿನ ಜೊತೆಗೆ ಚರಂಡಿ ನೀರು ನುಗ್ಗುತ್ತದೆ. ಇದರಿಂದ ಮನೆಗಳಲ್ಲಿನ ಬೆಲೆ ಬಾಳುವ ಪೀಠೋಪಕರಣಗಳು ಎಲೆಕ್ಟ್ರಾನಿಕ್ ವಸ್ತುಗಳು ನೀರು ಪಾಲಾಗುವುದು ಸಾಮಾನ್ಯವಾಗಿದೆ. ಆದಷ್ಟು ಬೇಗ ರಸ್ತೆ ಅಭಿವೃದ್ಧಿ ಮತ್ತು ಚರಂಡಿ ನಿರ್ಮಾಣ ಮಾಡುವಂತೆ ಸ್ಥಳೀಯ ನಿವಾಸಿ ಶೋಭಾ ಆಗ್ರಹಿಸಿದರು.

ಸಮಸ್ಯೆಗಳನ್ನು ಪರಿಹರಿಸುವಂತೆ ಬಿಬಿಎಂಪಿ ಎಇಇ ಅರ್ಪಿತಾ ಅವರಿಗೆ ಮನವಿ ಮಾಡಿದರೆ ಯಾವುದೇ ರೀತಿಯಲ್ಲಿ ಸ್ಪಂದಿಸುತ್ತಿಲ್ಲ. ಪರಿಶೀಲಿಸಲೂ ಸ್ಥಳಕ್ಕೆ ಬರುತ್ತಿಲ್ಲ. ಕುಂಟುನೆಪ ಹೇಳುತ್ತಿದ್ದಾರೆ. ಸಮಸ್ಯೆ ಬಗೆಹರಿಸದಿದ್ದರೆ ಬಿಬಿಎಂಪಿ ಕಚೇರಿಗೆ ಮುತ್ತಿಗೆ ಹಾಕಲಾಗುವುದು ಎಂದು ಸ್ಥಳೀಯ ಮುಖಂಡ ಕಲ್ಕೆರೆ ಶ್ರೀನಿವಾಸ್ ಎಚ್ಚರಿಸಿದರು.

ಪ್ಲಾಸ್ಟಿಕ್ ಮುಕ್ತ 'ಜ್ಞಾನಭಾರತಿ'ಗಾಗಿ ಸಂಕಲ್ಪ

ಅಭಿಯಾನಕ್ಕೆ ಚಾಲನೆ • ಸಹಕರಿಸಲು ಬಿಸ್ಲೆರಿ ಸಂಸ್ಥೆ ಸೂರಜ್ ಕುಮಾರ್ ಮನವಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಬೆಂಗಳೂರು ವಿಶ್ವವಿದ್ಯಾಲಯದ ಆವರಣವನ್ನು ಪ್ಲಾಸ್ಟಿಕ್ ಮುಕ್ತವಾಗಿಸಲು ಪ್ರತಿಯೊಬ್ಬರು ಶ್ರಮಿಸಬೇಕು. ಪ್ಲಾಸ್ಟಿಕ್ ಮರುಬಳಕೆಗೆ ಕಾಳಜಿವಹಿಸಬೇಕು' ಎಂದು ಬಿಸ್ಲೆರಿ ಇಂಟರ್‌ನ್ಯಾಷನಲ್ ಸಂಸ್ಥೆಯ ಕರ್ನಾಟಕ ವಿಭಾಗದ ಸಿಎಸ್‌ಆರ್ ಎಕ್ಸಿಕ್ಯೂಟಿವ್ ಸೂರಜ್‌ಕುಮಾರ್ ಮನವಿ ಮಾಡಿದರು.

ವಿಶ್ವ ಪರಿಸರ ದಿನಾಚರಣೆ ಅಂಗವಾಗಿ ಬೆಂಗಳೂರು ವಿಶ್ವವಿದ್ಯಾಲಯದ ಜೀವವಿಜ್ಞಾನ ವಿಭಾಗದಿಂದ ಶುಕ್ರವಾರ ಆಯೋಜಿಸಿದ್ದ 'ಪ್ಲಾಸ್ಟಿಕ್ ಮರುಬಳಕೆ ತರಬೇತಿ ಅಭಿಯಾನ' ಕಾರ್ಯಕ್ರಮದಲ್ಲಿ ಭಾಗವಹಿಸಿ ಅವರು ಮಾತನಾಡಿದರು.

ಜ್ಞಾನಭಾರತಿ ಆವರಣವನ್ನು ಪ್ಲಾಸ್ಟಿಕ್ ಹಾಗೂ ಕಸ ಮುಕ್ತವಾಗಿಸಲು ಬೆಂಗಳೂರು ವಿಶ್ವವಿದ್ಯಾಲಯ, ಬಿಸ್ಲೆರಿ ಇಂಟರ್‌ನ್ಯಾಷನಲ್ ಪ್ರೈವೇಟ್ ಲಿಮಿಟೆಡ್ ಕಂಪನಿಯೊಂದಿಗೆ ಒಡಂಬಡಿಕೆ ಮಾಡಿಕೊಂಡಿದೆ. ಇದರ ಭಾಗವಾಗಿ ಕೈಗೊಳ್ಳಬೇಕಾದ ಕ್ರಮಗಳ ಕುರಿತು ಇದೇ ಸಂದರ್ಭದಲ್ಲಿ ಅವರು ವಿದ್ಯಾರ್ಥಿಗಳಿಗೆ ಮಾಹಿತಿ ನೀಡಿದರು.



ಕಾರ್ಯಕ್ರಮದಲ್ಲಿ ಜ್ಞಾನಭಾರತಿ ಆವರಣವನ್ನು ಪ್ಲಾಸ್ಟಿಕ್ ಮುಕ್ತವಾಗಿಸಲು ಬೆಂಗಳೂರು ವಿಶ್ವವಿದ್ಯಾಲಯದ ಸಿಬ್ಬಂದಿ, ವಿದ್ಯಾರ್ಥಿಗಳು ಪ್ರತಿಜ್ಞೆ ಮಾಡಿದರು

'ಪ್ಲಾಸ್ಟಿಕ್ ಮರುಬಳಕೆಗೆ ಪ್ರಯತ್ನಿಸಬೇಕು. ಮನೆಯಲ್ಲಿಯೂ ಕಸವನ್ನು ವಿಂಗಡಿಸಿ ಪೌರ ಕಾರ್ಮಿಕರಿಗೆ ನೀಡಬೇಕು. ಬಾಟಲ್ ಫಾರ್ ಚೇಂಜ್ ಎಂಬ ಆ್ಯಪ್ ಮೂಲಕ ನೀರಿನ ಬಾಟಲ್‌ಗಳನ್ನು ಮರುಬಳಕೆಗೆ ನೀಡಬಹುದು' ಎಂದು ಸಲಹೆ ನೀಡಿದರು.

'ವಿಶ್ವವಿದ್ಯಾಲಯದ ಪ್ರಮುಖ ಸ್ಥಳಗಳು, ಶೈಕ್ಷಣಿಕ ವಿಭಾಗ, ಆಡಳಿತ ಕಟ್ಟಡ, ವಿದ್ಯಾರ್ಥಿ ನಿಲಯಗಳ ಹೊರಗೆ ಕಸದ ಬುಟ್ಟಿ ಅಳವಡಿಸಲಾಗುತ್ತದೆ. ಜ್ಞಾನಭಾರತಿ ಆವರಣದಲ್ಲಿ ಏಳು ವಿಧದ ಪ್ಲಾಸ್ಟಿಕ್ ತ್ಯಾಜ್ಯಗಳನ್ನು ಬಿಸ್ಲೆರಿ ಸಂಸ್ಥೆಯ ವತಿಯಿಂದ ನಿರಂತರವಾಗಿ ಸಂಗ್ರಹಿಸಿ ಮರುಬಳಕೆ ಮಾಡಲಾಗುವುದು' ಎಂದು ಭವಿಷ್ಯದ ಯೋಜನೆಯನ್ನು ತಿಳಿಸಿದರು.

ಕಾರ್ಯಕ್ರಮದಲ್ಲಿ ಪರಿಸರ ವಿಜ್ಞಾನ ವಿಭಾಗದ ಮುಖ್ಯಸ್ಥರಾದ ಬಿ.ಸಿ. ನಾಗರಾಜ, ಡೀನ್ ಪ್ರೊ.ಅಶೋಕ್ ಡಿ. ಹಂಜಗಿ, ಪ್ರಾಧ್ಯಾಪಕರಾದ ಪಿ.ಸಿ. ಕೃಷ್ಣಸ್ವಾಮಿ, ನಿರ್ಮಲ, ವಾಹಿನಿ, ಪುಟ್ಟಸ್ವಾಮಯ್ಯ ಸೇರಿದಂತೆ ಶಿಕ್ಷಕರು, ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

ಬೆಂಗಳೂರು ನಗರ ವಿ.ವಿ ಕುಲಸಚಿವರಿಗೆ ಬೀಳ್ಕೊಡುಗೆ

ಬೆಂಗಳೂರು: ಚಾಮರಾಜನಗರ ಜಿಲ್ಲೆ ಹೆಚ್ಚುವರಿ ಜಿಲ್ಲಾಧಿಕಾರಿಯಾಗಿ ವರ್ಗಾವಣೆ ಆಗಿರುವ ಬೆಂಗಳೂರು ನಗರ ವಿಶ್ವ ವಿದ್ಯಾಲಯದ ಕುಲಸಚಿವ ಟಿ.ಜವರೇಗೌಡ ಅವರಿಗೆ ವಿಶ್ವ ವಿದ್ಯಾಲಯದ ಆಡಳಿತವರ್ಗ, ಬೋಧಕ-ಬೋಧಕೇತರ ಸಿಬ್ಬಂದಿ ಬೀಳ್ಕೊಟ್ಟರು.

ಎರಡು ವರ್ಷಗಳಿಂದ ಬೆಂಗಳೂರು ನಗರ ವಿಶ್ವವಿದ್ಯಾನಿಲಯದ ಆಡಳಿತ ವಿಭಾಗದ ಕುಲಸಚಿವರಾಗಿ ಜವರೇಗೌಡ ಅವರು ದಕ್ಷತೆ ಮತ್ತು ಪ್ರಾಮಾಣಿಕತೆಯಿಂದ ಕಾರ್ಯನಿರ್ವಹಿಸಿದ್ದಾರೆ ಎಂದು ಪ್ರಭಾರ ಕುಲಪತಿ ಪ್ರೊ.ಕೆ.ಆರ್. ಜಲಜಾ ಪ್ರಶಂಸಿಸಿದರು.

ಬಿಸಿಯು ಕುಲಸಚಿವ (ಮೌಲ್ಯಮಾಪನ) ಪ್ರೊ. ಬಿ. ರಮೇಶ್, ಸಿಂಡಿಕೇಟ್ ಸದಸ್ಯರಾದ ಪ್ರೊ.ಎಂ. ಆರ್.ಲಕ್ಷ್ಮಿನಾರಾಯಣ, ಕೃಷ್ಣರಾಮ್ ಮತ್ತು ಕೆ.ಪಿ.ಪಾಟೀಲ್ ಅಭಿನಂದಿಸಿದರು.

ಈ ಸಂದರ್ಭದಲ್ಲಿ ಮಾತನಾಡಿದ ಟಿ.ಜವರೇಗೌಡ, 'ನನ್ನ ಆಡಳಿತ ಅವಧಿಯಲ್ಲಿ ವಿಶ್ವವಿದ್ಯಾಲಯದ ಶೈಕ್ಷಣಿಕ ವಾತಾವರಣದ ಒಡನಾಟ ತೃಪ್ತಿ ತಂದಿದೆ' ಎಂದರು.

ಬಿಸಿಯು ವಿತ್ತಾಧಿಕಾರಿ ಎಂ.ವಿಜಯಲಕ್ಷ್ಮಿ, ಡೀನ್, ಹಿರಿಯ ಪ್ರಾಧ್ಯಾಪಕರು, ವಿವಿಧ ವಿಭಾಗಗಳ ಮುಖ್ಯಸ್ಥರು, ಆಡಳಿತ ಅಧೀಕ್ಷಕರಾದ ಪದ್ಮಮ್ಮ ಹಾಗೂ ಅನೇಕ ಉಪನ್ಯಾಸಕರು ಕಾರ್ಯಕ್ರದಲ್ಲಿ ಉಪಸ್ಥಿತರಿದ್ದರು.

'ಪ್ರತಿಯೊಬ್ಬರೂ ಮನೆ ಮುಂದೆ ಒಂದು ಗಿಡ ನೆಡಿ'

ಪೀಣ್ಯ ದಾಸರಹಳ್ಳಿ: 'ಬೆಂಗಳೂರು ಕಾಂಕ್ರಿಟ್ ನಗರವಾಗುತ್ತಿದ್ದು, ಪರಿಸರ ಸಂರಕ್ಷಣೆಗೆ ಎಚ್ಚರವಹಿಸದಿದ್ದರೆ, ಬೆನ್ನಿಗೆ ಆಕ್ಸಿಜನ್ ಕಿಟ್ ಕಟ್ಟಿಕೊಂಡು ಓಡಾಡುವ ಸ್ಥಿತಿ ಬರಲಿದೆ' ಎಂದು ಜಯ ಕರ್ನಾಟಕ ಸಂಘಟನೆಯ ರಾಜ್ಯಾಧ್ಯಕ್ಷ ಬಿ.ಎನ್.ಜಗದೀಶ್ ಎಚ್ಚರಿಸಿದರು.

ಹೆಸರಘಟ್ಟ ಮುಖ್ಯರಸ್ತೆಯಲ್ಲಿ ರುವ ಎಂ.ಎಸ್. ಕಾಲೇಜು, ಜಯ ಕರ್ನಾಟಕ ರಾಜ್ಯ ಸಂಘಟನೆ, ಲೈನ್ಸ್ ಕ್ಲಬ್ ವೀರ ಹೊಯ್ಸಳ ಸಹಯೋಗದಲ್ಲಿ ಹಮ್ಮಿಕೊಂಡಿದ್ದ ಪರಿಸರ ದಿನಾಚರಣೆಯ ಕಾರ್ಯಕ್ರಮದಲ್ಲಿ ಭಾಗವಹಿಸಿ ಮಾತನಾಡಿದರು.

'ನಗರದ ಪ್ರತಿಯೊಬ್ಬ ನಾಗರಿಕ ಮನೆ ಬಳಿ ಒಂದು ಗಿಡವನ್ನಾದರೂ ನೆಟ್ಟಿ ಬೆಳೆಸಲು ಯತ್ನಿಸಬೇಕು' ಎಂದು ಸಲಹೆ ಮಾಡಿದರು.

ಕಾಲೇಜಿನ ಚೇರ್ಮನ್ ವಾಲ್ಟರ್ ಜೈ ಸಿಂಗ್ ಮಾತನಾಡಿ, 'ವಾಹನಗಳ ದಟ್ಟಣೆ ಹೆಚ್ಚಾಗಿದ್ದು, ವಾಯುಮಾಲಿನ್ಯವೂ ಉಂಟಾಗುತ್ತಿದೆ. ಇದನ್ನು ತಪ್ಪಿಸಲು ಹೆಚ್ಚು ಹೆಚ್ಚು ವಿದ್ಯುತ್ ಚಾಲಿತ ವಾಹನಗಳನ್ನು ಬಳಸಿ' ಎಂದು ಮನವಿ ಮಾಡಿದರು.

ಕಾರ್ಯಕ್ರಮದಲ್ಲಿ ಲಯನ್ಸ್ ಕ್ಲಬ್ ಅಧ್ಯಕ್ಷ ಮಧುಸೂದನ್, ಎನ್.ಜಿ.ಗುರುಪ್ರಸಾದ್, ಕಾಲೇಜಿನ ಶಿಕ್ಷಕ ಶಿಕ್ಷಕೇತರ ಸಿಬ್ಬಂದಿ ವರ್ಗದವರು ಭಾಗವಹಿಸಿದ್ದರು

ಕಾರ್ಯಕ್ರಮಕ್ಕೂ ಮುನ್ನ ದಾಸರಹಳ್ಳಿಯ ಎಂಟನೇ ಮೈಲಿ ವೃತ್ತದಿಂದ ಸಪ್ತಗಿರಿ ಕಾಲೇಜ್ ಹಿಂಭಾಗದಲ್ಲಿರುವ ಎಜಿಬಿ ಬಡಾವಣೆವರೆಗೂ 500ಕ್ಕೂ ಹೆಚ್ಚು ವಿದ್ಯಾರ್ಥಿಗಳು ಪರಿಸರದ ಬಗ್ಗೆ ಘೋಷಣೆಗಳನ್ನು ಕೂಗುತ್ತಾ ಭಿತ್ತಿಪತ್ರ ಹಿಡಿದು ಜಾಥಾ ನಡೆಸಿದರು.

'ಐಐಎಸ್‌ಸಿಯಲ್ಲಿ ಓದುವಾಸೆ'

ಮೂಡುಬಿದಿರೆ (ದಕ್ಷಿಣ ಕನ್ನಡ): ಕಾಮೆಡ್-ಕೆ ಪರೀಕ್ಷೆಯಲ್ಲಿ ಪ್ರಥಮ ರ‍್ಯಾಂಕ್ ಪಡೆದಿರುವ ಮೂಡುಬಿದಿರೆ ಕಲ್ಲಬೆಟ್ಟುವಿನ ಎಕ್ಸಲೆಂಟ್ ಪದವಿ ಪೂರ್ವ ಕಾಲೇಜಿನ ವಿದ್ಯಾರ್ಥಿ ಶಿಶಿರ್ ಶೆಟ್ಟಿ ಅವರು ಭಾರತೀಯ ವಿಜ್ಞಾನ ಸಂಸ್ಥೆಯಲ್ಲಿ (ಐಐಎಸ್‌ಸಿ) ಬಿ.ಟೆಕ್ ವ್ಯಾಸಂಗ ಮಾಡುವ ಇಂಗಿತ ವ್ಯಕ್ತಪಡಿಸಿದ್ದಾರೆ.

'ಎಕ್ಸಲೆಂಟ್‌ನ ಶೈಕ್ಷಣಿಕ ವಾತಾವರಣ, ಉಪನ್ಯಾಸಕರ ಉತ್ತಮ ಬೋಧನೆ ಮತ್ತು ಹೆತ್ತವರ ಪ್ರೋತ್ಸಾಹ ನನ್ನ ಸಾಧನೆಗೆ ಪ್ರೇರಣೆಯಾಯಿತು' ಎಂದು ಶಿಶಿರ್ ಶೆಟ್ಟಿ ಅವರು ತಿಳಿಸಿದ್ದಾರೆ.



ಶಿಶಿರ್ ಶೆಟ್ಟಿ

ಶಿಶಿರ್ ದ್ವಿತೀಯ ಪಿಯು ಪರೀಕ್ಷೆಯಲ್ಲಿ ರಾಜ್ಯಕ್ಕೆ 7ನೇ ಸ್ಥಾನ, ಜೆಇಇ ಮೇನ್ಸ್‌ನಲ್ಲಿ 99.971 ಪರ್ಸಂಟೈಲ್ ಹಾಗೂ ಸಿಇಟಿ ಎಂಜಿನಿಯರಿಂಗ್ ವಿಭಾಗದಲ್ಲಿ 4ನೇ ರ‍್ಯಾಂಕ್ ಪಡೆದಿದ್ದರು.

ಅವರು ಬೆಳ್ತಂಗಡಿಯವರಾಗಿದ್ದು ತಂದೆ ಹರೀಶ್ ಶೆಟ್ಟಿ ಬಂಟ್ವಾಳದ ಎಲ್‌ಐಸಿ ಶಾಖೆಯ ಉದ್ಯೋಗಿಯಾಗಿ. ತಾಯಿ ಸುಮಿತ ಶೆಟ್ಟಿ ಮೂಡುಬಿದಿರೆಯ ಮೂಡುಮಾರ್ನಾಡು ಸರ್ಕಾರಿ ಪ್ರೌಢಶಾಲೆಯ ಶಿಕ್ಷಕಿ.



ಕೆಎಸ್‌ಸಿಎ ಟಿ20 ಲೀಗ್ ಕಮ್ ನಾಕೌಟ್ ಟೂರ್ನಿಯಲ್ಲಿ ಜಿ. ಕಸ್ತೂರಿರಂಗನ್ ಸ್ಮರಣಾರ್ಥ ಟ್ರೋಫಿ ಗೆದ್ದ ಸ್ವಸ್ತಿಕ್ ಯೂನಿಯನ್ ಕ್ರಿಕೆಟ್ ಕ್ಲಬ್ ತಂಡ. (ನಿಂತವರು) ಎಡದಿಂದ; ಯಶವಂತ್ ಬಿ.ಎನ್; ಅಥೋಕ್ಷ್ ಹೆಗ್ಡೆ, ಅನೀಶ್ವರ್ ಗೌತಮ್; ಗೌರವ್ ಶಾನ್‌ಭಾಗ್; ಸುಜಯ್ ಸಾತೇರಿ, ನಾಥನ್ ಡಿಮೆಲ್ಲೊ, ಕಾರ್ತಿಕ್ ಸಿ.ಎ, ಸಾತ್ವಿಕ್ ಸಾಯಿರಾಜ್; ತನೀಷ್ ಮಹೇಶ್; ಆರ್ಯನ್ ನಂಬಿಯಾರ್; ಪ್ರಣವ್ ಎನ್‌ವಿ, ಮೊಹ್ಸಿನ್ ಖಾನ್; (ಮಂಡಿಯೂರಿದವರು) ಮೊಹಮ್ಮದ್ ತಾಹಾ, ವಿಜಯರಾಜ್ ಬಿ, ಹಾರ್ದಿಕ್ ರಾಜ್; ಆಶಿಶ್ ಮಹೇಶ್

ಕಾರ್ತಿಕ್ ಶತಕ: ಸ್ವಸ್ತಿಕ್ ಯೂನಿಯನ್ ಕ್ರಿಕೆಟ್ ಕ್ಲಬ್ ತಂಡ ಚಾಂಪಿಯನ್

ಬೆಂಗಳೂರು: ಕಾರ್ತಿಕ್ ಸಿ.ಎ (ಔಟಾಗದೇ 132) ಅವರ ಅಮೋಘ ಶತಕದ ನೆರವಿನಿಂದ ಸ್ವಸ್ತಿಕ್ ಯೂನಿಯನ್ ಕ್ರಿಕೆಟ್ ಕ್ಲಬ್ ತಂಡವು ಕೆಎಸ್‌ಸಿಎ ಟಿ20 ಲೀಗ್ ಕಮ್ ನಾಕೌಟ್ ಟೂರ್ನಿಯ ಫೈನಲ್‌ನಲ್ಲಿ ನಾಲ್ಕು ವಿಕೆಟ್‌ಗಳಿಂದ ಮೌಂಟ್ ಜಾಯ್ ಕ್ರಿಕೆಟ್ ಕ್ಲಬ್ ತಂಡವನ್ನು ಮಣಿಸಿ ಜಿ. ಕಸ್ತೂರಿರಂಗನ್ ಸ್ಮರಣಾರ್ಥ ಟ್ರೋಫಿಯನ್ನು ಗೆದ್ದುಕೊಂಡಿತು.

ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಶನಿವಾರ ನಡೆದ ಪಂದ್ಯದಲ್ಲಿ ಮೊದಲು ಬ್ಯಾಟಿಂಗ್ ಮಾಡಿದ ಮೌಂಟ್ ತಂಡವು ಚಿರಾಗ್ ಆರ್. ನಾಯಕ್ (58) ಮತ್ತು ಸುಚಿತ್ ಜೆ (ಔಟಾಗದೇ 52) ಅವರ ಅರ್ಧಶತಕಗಳ ಬಲದಿಂದ 20 ಓವರ್‌ಗಳಲ್ಲಿ 5 ವಿಕೆಟ್‌ಗೆ 213 ರನ್ ಗಳಿಸಿತು. ಸವಾಲಿನ ಗುರಿಯನ್ನು ಬೆನ್ನಟ್ಟಿದ ಸ್ವಸ್ತಿಕ್ ತಂಡವು 19.3 ಓವರ್‌ಗಳಲ್ಲಿ 6 ವಿಕೆಟ್‌ಗೆ 218 ರನ್‌ಗಳಿಸಿ ಜಯ ಸಾಧಿಸಿತು. ಕಾರ್ತಿಕ್ ಅವರೊಂದಿಗೆ ಅನೀಶ್ವರ್ ಗೌತಮ್ (47) ಗೆಲುವಿಗೆ ಉಪಯುಕ್ತ ಕಾಣಿಕೆ ನೀಡಿದರು.

ಸಂಕ್ಷಿಪ್ತ ಸ್ಕೋರ್: ಮೌಂಟ್ ಜಾಯ್ ಕ್ರಿಕೆಟ್ ಕ್ಲಬ್: 20 ಓವರ್‌ಗಳಲ್ಲಿ 5ಕ್ಕೆ 213 (ಚಿರಾಗ್ ಆರ್.ನಾಯಕ್ 58, ಶರತ್ ಬಿ.ಆರ್. 42, ಸುಚಿತ್ ಜೆ. ಔಟಾಗದೇ 52). ಸ್ವಸ್ತಿಕ್ ಯೂನಿಯನ್ ಕ್ರಿಕೆಟ್ ಕ್ಲಬ್: 19.3 ಓವರ್‌ಗಳಲ್ಲಿ 6ಕ್ಕೆ 218 (ಕಾರ್ತಿಕ್ ಸಿ.ಎ ಔಟಾಗದೇ 132, ಅನೀಶ್ವರ್ ಗೌತಮ್ 47, ದರ್ಶನ್ ಎಂ.ಬಿ. 29ಕ್ಕೆ 3, ಗೌತಮ್ ಮಿಶ್ರಾ 31ಕ್ಕೆ 2).

ಫಲಿತಾಂಶ: ಸ್ವಸ್ತಿಕ್ ಯೂನಿಯನ್ ಕ್ರಿಕೆಟ್ ಕ್ಲಬ್‌ಗೆ 4 ವಿಕೆಟ್‌ಗಳ ಗೆಲುವು.

ದೊಡ್ಡಜಾಲ ಗ್ರಾ.ಪಂ. ಅಧ್ಯಕ್ಷ ಬೈರೇಗೌಡ ಸಲಹೆ

'ಗ್ರಾಮಸಭೆಗೆ ಕಡ್ಡಾಯವಾಗಿ ಭಾಗವಹಿಸಿ'

ಪ್ರಜಾವಾಣಿ ವಾರ್ತೆ

ಯಲಹಂಕ: ವಾರ್ಡ್ ಸಭೆ ಮತ್ತು ಗ್ರಾಮ ಸಭೆಗಳಲ್ಲಿ ಸ್ಥಳೀಯ ನಾಗರಿಕರು ಕಡ್ಡಾಯವಾಗಿ ಭಾಗವಹಿಸಿ, ಗ್ರಾಮದ ಸಮಸ್ಯೆಗಳು ಮತ್ತು ಮೂಲ ಸೌಕರ್ಯಗಳ ಬೇಡಿಕೆಗಳ ಬಗ್ಗೆ ಸಲಹೆ ನೀಡಬೇಕು. ಆಗ ಸಮಸ್ಯೆಗಳಿಗೆ ಸಭೆಯಲ್ಲೇ ಪರಿಹಾರ ನೀಡಲು ಅನುಕೂಲವಾಗುತ್ತದೆ'ಎಂದು ದೊಡ್ಡಜಾಲ ಗ್ರಾಮ ಪಂಚಾಯಿತಿ ಅಧ್ಯಕ್ಷ ಆರ್. ಬೈರೇಗೌಡ ತಿಳಿಸಿದರು.

ದೊಡ್ಡಜಾಲ ಗ್ರಾಮ ಪಂಚಾಯಿತಿ ವತಿಯಿಂದ ಆಯೋಜಿಸಿದ್ದ 2025-26ನೇ ಸಾಲಿನ ಮೊದಲಸುತ್ತಿನ ಗ್ರಾಮ ಸಭೆಯನ್ನು ಉದ್ದೇಶಿಸಿ ಮಾತನಾಡಿದ ಅವರು ಮಾತನಾಡಿದರು.

'ಪಂಚಾಯಿತಿ ವ್ಯಾಪ್ತಿಯಲ್ಲಿ ಸ್ವಚ್ಛ ಗ್ರಾಮ, ಕಸವಿಲೇವಾರಿ, ಸಿಸಿ ಟಿವಿ ಮತ್ತು ಎಲ್‌ಇಡಿ ಬೀದಿ ದೀಪಗಳ ಅಳವಡಿಕೆ, ಈಜುಕೊಳ, ಬ್ಯಾಡ್ಮಿಂಟನ್ ಕೋರ್ಟ್, ನಮ್ಮ ಮೆಡಿಕಲ್ಸ್ ಸೇರಿ ಹಲವು ಕಾರ್ಯಗಳನ್ನು ಕೈಗೊಳ್ಳಲಾಗಿದೆ' ಎಂದು ಮಾಹತಿ ನೀಡಿದರು.

ಪಂಚಾಯಿತಿ ಸದಸ್ಯ ಎನ್.ಕೆ. ಮಹೇಶ್‌ಕುಮಾರ್ ಮಾತನಾಡಿ, 'ವಾರ್ಡ್‌ಮಟ್ಟದಸಭೆಗಳಲ್ಲಿಸಾರ್ವಜನಿಕರಿಂದ ಸಲ್ಲಿಕೆಯಾಗಿರುವ ಅರ್ಜಿಗಳನ್ನು ಪರಿಗಣಿಸಿ, ಕಾಮಗಾರಿಗಳಿಗೆ ಕ್ರಿಯಾ ಯೋಜನೆಯನ್ನು ಸಿದ್ಧಪಡಿಸಲಾಗಿದೆ. ಹಣಕಾಸಿನ ಲಭ್ಯತೆಗೆ ಅನುಗುಣವಾಗಿ ಅನುಷ್ಠಾನಗೊಳಿಸಲು ನಿರ್ಣಯ ಕೈಗೊಳ್ಳಲಾಗುವುದು' ಎಂದರು.

ಎಸ್‌ಎಸ್‌ಎಲ್‌ಸಿ ಮತ್ತು ಪಿಯುಸಿ ಪರೀಕ್ಷೆಯಲ್ಲಿ ಉತ್ಕೃತ್ತಮ ಅಂಕಗಳಿಸಿದ ವಿದ್ಯಾರ್ಥಿಗಳಿಗೆ ಪ್ರತಿಭಾಪುರಸ್ಕಾರ, ಪ್ರೋತ್ಸಾಹಧನದ ಚೆಕ್ ಹಾಗೂ ಟ್ಯಾಬ್ ಮತ್ತು ಲ್ಯಾಪ್‌ಟಾಪ್ ಅನ್ನು ಇದೇ ಸಂದರ್ಭದಲ್ಲಿ ವಿತರಿಸಲಾಯಿತು. ಫಲಾನುಭವಿಗಳಿಗೆ ಭಾಗ್ಯಲಕ್ಷ್ಮಿ ಬಾಂಡ್, ವಿಶೇಷಚೇತನರಿಗೆ ಸಹಾಯಧನದ ಚೆಕ್ ನೀಡಲಾಯಿತು.

ಪಂಚಾಯಿತಿ ಉಪಾಧ್ಯಕ್ಷೆ ಎ.ಸಿ. ಗೌರಮ್ಮ ಕೃಷ್ಣಪ್ಪ, ಸದಸ್ಯರಾದ ಎಂ.ನಾಗರಾಜ್, ಚೇತನ್‌ಕುಮಾರ್, ನರಸಿಂಹಯ್ಯ, ಎಸ್.ಪ್ರಕಾಶ್, ಹಂಸವೇಣಿ ಮಂಜುನಾಥ್, ಹರಿಪ್ರಕಾಶ್.ಎಂ, ಶೃತಿ ಪುರುಷೋತ್ತಮ್, ಮಾಲಾ.ಎಂ, ರತ್ನಮ್ಮ, ಸೌಭಾಗ್ಯಮ್ಮ, ಗೀತಾ ಶಂಕರ್, ಪಿಡಿಒ ವೆಂಕಟರಂಗನ್ ಮತ್ತಿತರರು ಉಪಸ್ಥಿತರಿದ್ದರು.

ಬ್ಯಾಸ್ಕೆಟ್‌ಬಾಲ್: ವ್ಯಾನ್ಗಾರ್ಡ್ಸ್ ತಂಡಕ್ಕೆ ಗೆಲುವು

ಬೆಂಗಳೂರು: ಸಾಂಘಿಕ ಆಟ ಪ್ರದರ್ಶಿಸಿದ ಬೆಂಗಳೂರು ವ್ಯಾನ್ಗಾರ್ಡ್ಸ್ ತಂಡವು ಡಿ.ಎನ್. ರಾಜಣ್ಣ ಸ್ಮರಣಾರ್ಥ ಟ್ರೋಫಿಗಾಗಿ ನಡೆಯುತ್ತಿರುವ ರಾಜ್ಯ ಜೂನಿಯರ್ (18 ವರ್ಷದೊಳಗಿನವರ) ಬ್ಯಾಸ್ಕೆಟ್‌ಬಾಲ್ ಟೂರ್ನಿಯ ಬಾಲಕಿಯರ ವಿಭಾಗದ ಪಂದ್ಯದಲ್ಲಿ 50-40 ಅಂತರದಿಂದ ವಿವೇಕ್ಸ್ ಎಸ್.ಸಿ ವಿರುದ್ಧ ಗೆಲುವು ಸಾಧಿಸಿತು.

ಕಂಠೀರವ ಕ್ರೀಡಾಂಗಣದ ಬ್ಯಾಸ್ಕೆಟ್‌ಬಾಲ್ ಕೋರ್ಟ್‌ನಲ್ಲಿ ಶನಿವಾರ ನಡೆದ ರೌಂಡ್ ರಾಬಿನ್ ಸೂಪರ್ ಲೀಗ್‌ನ ಪಂದ್ಯದಲ್ಲಿ ವಿರಾಮದ ವೇಳೆ 7 (21-28) ಅಂಕಗಳ ಹಿನ್ನಡೆಯಲ್ಲಿದ್ದ ವ್ಯಾನ್ಗಾರ್ಡ್ಸ್ ತಂಡವು ನಂತರದಲ್ಲಿ ಅಮೋಘ ಆಟ ಪ್ರದರ್ಶಿಸಿತು.

ಫಲಿತಾಂಶ: ರೌಂಡ್ ರಾಬಿನ್ ಸೂಪರ್ ಲೀಗ್: **ಬಾಲಕಿಯರು:** ಮೌಂಟ್ಸ್ ಕ್ಲಬ್ 72-68ರಿಂದ ಮಂಡ್ಯ ಜಿಲ್ಲೆ ವಿರುದ್ಧ; ಬೆಂಗಳೂರು ವ್ಯಾನ್ಗಾರ್ಡ್ಸ್ 50-40ರಿಂದ ವಿವೇಕ್ಸ್ ಎಸ್.ಸಿ ವಿರುದ್ಧ ಗೆಲುವು ಸಾಧಿಸಿತು.

ಬಾಲಕರು: ಎಚ್‌ಬಿಆರ್ ಬಿ.ಸಿ 75-60ರಿಂದ ಮೈಸೂರು ಜಿಲ್ಲೆ ಎ ಎದುರು; ಚಿಕ್ಕಮಗಳೂರು ಜಿಲ್ಲೆ 92-74ರಿಂದ ಎಂಎನ್‌ಕೆ ರಾವ್ ಪಾರ್ಕ್ ಎದುರು; ಡಿವೈಇಎಸ್ ಬೆಂಗಳೂರು 63-31ರಿಂದ ಹೂಪ್ಸ್ 7 ಬಿ.ಸಿ ಎದುರು ಜಯ ಸಾಧಿಸಿತು.



ಎಂಎನ್‌ಕೆ ರಾವ್ ಪಾರ್ಕ್ ತಂಡದ ವಿಜಯೇಂದ್ರ (ಎಡ) ಮತ್ತು ಚಿಕ್ಕಮಗಳೂರು ತಂಡದ ರಿಷಭ್ ಕುಮಾರ್ (ಬಲ) ಚೆಂಡಿಗಾಗಿ ಪೈಪೋಟಿ ನಡೆಸಿದರು ಚಿತ್ರ: ಎಸ್.ಕೆ.ದಿನೇಶ್

ಉದ್ಯಾನಕ್ಕೆ 'ರಾಷ್ಟ್ರಕವಿ ಕುವೆಂಪು' ನಾಮಕರಣ

ಪೀಣ್ಯ ದಾಸರಹಳ್ಳಿ: ರಾಜಗೋಪಾಲ ವಾರ್ಡ್‌ನ ಜಿ.ಕೆ.ಡಬ್ಲೂ ಬಡಾವಣೆಯ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಉದ್ಯಾನಕ್ಕೆ ಶುಕ್ರವಾರ 'ರಾಷ್ಟ್ರ ಕವಿ ಕುವೆಂಪು ಉದ್ಯಾನ' ಎಂದು ಹೆಸರಿಡಲಾಯಿತು.

'ರಾಷ್ಟ್ರ ಕವಿ ಕುವೆಂಪು ಉದ್ಯಾನ' ನಾಮಫಲಕ ಉದ್ಘಾಟಿಸಿದ ಶಾಸಕ ಎಸ್. ಮುನಿರಾಜು, 'ಕುವೆಂಪು ತಮ್ಮ ಸಾಹಿತ್ಯದ ಮೂಲಕ ವೈಚಾರಿಕ ಚಿಂತನೆಯನ್ನು ಬಿತ್ತಿದವರು. ಅಂತಹ ದಾರ್ಶನಿಕರ ಹೆಸರನ್ನು ಉದ್ಯಾನಕ್ಕೆ ಇಡಲು ನನಗೆ ಹೆಮ್ಮೆ ಎನಿಸುತ್ತದೆ' ಎಂದರು.

ಹಸಿರು ಪ್ರತಿಷ್ಠಾನದ ಅಧ್ಯಕ್ಷ ಕೆ.ಜಿ. ಕುಮಾರ್, ಸಮೃದ್ಧಿ ಪ್ರತಿಷ್ಠಾನದ ಅಧ್ಯಕ್ಷ ದಿನೇಶ್, ವಿತಾ ದಿನೇಶ್, ನರಸಿಂಹ ಮೂರ್ತಿ, ಪತ್ರಕರ್ತ ಗೋವಿಂದ ರಾಜು ಪಟೇಲ್, ನಾಗೇಶ್, ವೈ.ಜಿ.ನಾಗರಾಜ್, ವಿಜಯ್, ಕಮಲ, ಬಿ. ಕೆ. ರಂಗಸ್ವಾಮಿ. ಸುರೇಶ್, ಕನ್ನಡಪರ, ಕುವೆಂಪು ಅಭಿಮಾನಿಗಳು, ಜಿ.ಕೆ ಡಬ್ಲೂ ಬಡಾವಣೆಯ ನಿವಾಸಿಗಳು ಭಾಗವಹಿಸಿದ್ದರು.

ಪ್ರಾಣ ಗೆಲ್ಲುವ ನಿರೀಕ್ಷೆ

ಎಚ್.ಎಚ್.ಕೃಷ್ಣರಾಜ ಒಡೆಯರ್ ಕಪ್ ಭಾನುವಾರದ ಬೆಂಗಳೂರು ರೇಸ್‌ಗಳ ಪ್ರಧಾನ ಆಕರ್ಷಣೆಯಾಗಿದ್ದು, ಪ್ರಾಣ ಈ ರೇಸ್‌ನಲ್ಲಿ ಗೆಲ್ಲುವ ನಿರೀಕ್ಷೆಯಿದೆ. ಮಧ್ಯಾಹ್ನ 1:30ಕ್ಕೆ ಪ್ರಾರಂಭವಾಗಲಿರುವ ದಿನದ ಎಂಟು ರೇಸ್‌ಗಳಿಗೆ ನಮ್ಮ ಆಯ್ಕೆ ಈ ಕೆಳಕಂಡಂತಿವೆ:

1. ಎವರಿನ್‌ಸ್ಕಿ ಪ್ಲೇಟ್-ಡಿ.2; 1200 ಮೀ. ರಿಫೈನ್ಡ್ ಅಗ್ರೆಷನ್ 3, ಮಾಯ್ ಟಾಯ್ 7, ಸೊಲಾರ 8
2. ನಂದಿ ಪ್ಲೇಟ್; 1400 ಮೀ. ಲೇಡಿ ಇನ್ವಿಕ್ಟಸ್ 2, ಸ್ಟಾರ್ ಅಡ್ಮಿರಲ್ 3, ಫಾರ್ಚೂನೇಟಸ್ 1
3. ಎವರಿನ್‌ಸ್ಕಿ ಪ್ಲೇಟ್-ಡಿ.1; 1200 ಮೀ. ಮಿಡ್‌ನೈಟ್ ಬ್ಲೂ 5, ವಿಂಗ್ಸ್ ಆಫ್ ಫ್ಯೂರಿ 6, ಅಥರ್ವ್ 1
4. ಅಸ್ಟೌಂಡಿಂಗ್ ಪ್ಲೇಟ್; 1600 ಮೀ. ಚರಿಸ್ಮಾಟಿಕ್ 1, ಆರ್ಟ್ ಆಫ್ ರೊಮಾನ್ಸ್ 5, ಎನ್ಜಾಯಬಲ್ 6
5. ಸ್ಪೀಕರ್ಸ್ ಕಪ್; 1200 ಮೀ. ಡಿವೈನ್ ಆರ್ಟ್ 7, ಆರ್ಟ್ ಕಲೆಕ್ಟರ್ 6, ಡೆಲ್ ಅವಿಜ್ 11
6. ಎಚ್.ಎಚ್.ಕೃಷ್ಣರಾಜ ಒಡೆಯರ್ ಕಪ್; 1600 ಮೀ. ಪ್ರಾಣ 6, ಶ್ಯಾಮ್‌ರಾಕ್ 2, ಸೂಪರ್‌ನ್ಯಾಚುರಲ್ 8
7. ಡಿಯಾಬ್ಲೊ ಪ್ಲೇಟ್; 1400 ಮೀ. ಮನಿ ಬ್ಯಾಗ್ಸ್ 2, ಲಕ್ಸ್ ಅಟರ್ನಾ 5, ಗ್ಯಾಂಡೊಲ್ಫಿನಿ 9
8. ಮಿಸ್ಟಿಕ್ ಮೆಮೋರಿ ಪ್ಲೇಟ್; 1400 ಮೀ. ಕನೆಕ್ಟಿಂಗ್ ಡಾಟ್ಸ್ 4, ಪವರ್ ಆಫ್ ಬ್ಯೂಟಿ 6, ಜೂರಿ 2

ಉತ್ತಮ ಬೆಟ್: ರಿಫೈನ್ಡ್ ಅಗ್ರೆಷನ್

ಜಾಕ್‌ಪಾಟ್‌ಗೆ	1ನೇ ಟ್ರಿಬಲ್	2ನೇ ಟ್ರಿಬಲ್
4,5,6,7,8	3,4,5	6,7,8

ಜಿಲ್ಲಾ ಪಂಚಾಯಿತಿ ಸಿಇಒ ಲತಾಕುಮಾರಿ ಸಲಹೆ

ಏಕಾಗ್ರತೆಯಿಂದ ಅಧ್ಯಯನ ಮಾಡಿ

ಪ್ರಜಾವಾಣಿ ವಾರ್ತೆ

ಯಲಹಂಕ: 'ಆಸಕ್ತಿ, ಏಕಾಗ್ರತೆ ಹಾಗೂ ನಿರಂತರ ಅಭ್ಯಾಸ ಶಿಕ್ಷಣದ ಮೂಲಾಧಾರ ಆಗಿದ್ದು, ವಿದ್ಯಾರ್ಥಿಗಳು ಇವುಗಳನ್ನು ರೂಢಿಸಿಕೊಳ್ಳಬೇಕು' ಎಂದು ಬೆಂಗಳೂರು ನಗರ ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯ ನಿರ್ವಹಣಾಧಿಕಾರಿ ಲತಾಕುಮಾರಿ ಅವರು ಹೇಳಿದರು.

ರಾಜಾನುಕುಂಟೆ ಸರ್ಕಾರಿ ಶಾಲೆ, ಪದವಿಪೂರ್ವ ಕಾಲೇಜು ಹಾಗೂ ಗ್ರಾಮ ಪಂಚಾಯಿತಿ ಆಶ್ರಯದಲ್ಲಿ ಆಯೋಜಿಸಿದ್ದ 2025- 26ನೇ ಸಾಲಿನ ಶೈಕ್ಷಣಿಕ ಚಟುವಟಿಕೆಗಳ ಪ್ರಾರಂಭೋತ್ಸವ ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ವಿದ್ಯಾರ್ಥಿಗಳ ಸರ್ವಾಂಗೀಣ ಶೈಕ್ಷಣಿಕ ಪ್ರಗತಿಗಾಗಿ ಸರ್ಕಾರ, ಮಕ್ಕಳಿಗೆ ಉಚಿತವಾಗಿ ಪಠ್ಯಪುಸ್ತಕ, ಸಮವಸ್ತ್ರ, ಮಧ್ಯಾಹ್ನದ ಬಿಸಿಯೂಟ, ಹಾಲು, ಮೊಟ್ಟೆ ಮತ್ತಿತರ ಪೌಷ್ಟಿಕ ಆಹಾರ ವಿತರಿಸುತ್ತಿದೆ. ವಿದ್ಯಾರ್ಥಿಗಳು ಇದರ ಸದುಪಯೋಗ ಪಡೆಯಬೇಕು' ಎಂದು ಹೇಳಿದರು.

ಪಿಯುಸಿ ಪರೀಕ್ಷೆಯಲ್ಲಿ ಅತ್ಯುತ್ತಮ ಅಂಕ ಪಡೆದ ರಾಜಾನುಕುಂಟೆ ಪಿಯು ಕಾಲೇಜಿನ ವಿದ್ಯಾರ್ಥಿನಿ ಅನುಷಾ ಅವರಿಗೆ ದಾನಿ ಇಟಗಲ್‌ಪುರದ ಎಂ.ಮೋಹನ್‌ಕುಮಾರ್ ಅವರು ₹50 ಸಾವಿರ ಪ್ರೋತ್ಸಾಹಧನದ ಚೆಕ್ ವಿತರಿಸಿದರು. ಇದೇ ವೇಳೆ ವಿದ್ಯಾರ್ಥಿಗಳಿಗೆ ಪಠ್ಯಪುಸ್ತಕ, ಸಮವಸ್ತ್ರ ಹಾಗೂ ಲೇಖನಸಾಮಗ್ರಿಗಳ ಕಿಟ್ ವಿತರಿಸಲಾಯಿತು.

ಕಾರ್ಯಕ್ರಮದಲ್ಲಿ ಪದವಿಪೂರ್ವ ಶಿಕ್ಷಣ ಇಲಾಖೆಯ ಬೆಂಗಳೂರು ಉತ್ತರ ಜಿಲ್ಲಾ ಉಪನಿರ್ದೇಶಕ ಆಂಜಿನಪ್ಪ, ಬಿಇಒ ರಾಮಮೂರ್ತಿ ಮತ್ತು ಬಿಆರ್‌ಸಿ ಪ್ರಕಾಶ್ ಅವರು ಉಪಸ್ಥಿತರಿದ್ದರು.



ದ್ವಿತೀಯ ಪಿಯುಸಿ ಪರೀಕ್ಷೆಯಲ್ಲಿ ಅತ್ಯುತ್ತಮ ಅಂಕಪಡೆದ ರಾಜಾನುಕುಂಟೆ ಪಿಯು ಕಾಲೇಜಿನ ವಿದ್ಯಾರ್ಥಿನಿ ಅನುಷಾ ಅವರಿಗೆ ಮುಂದಿನ ವಿಧ್ಯಾಭ್ಯಾಸಕ್ಕಾಗಿ ದಾನಿ ಇಟಗಲ್ ಪುರ ಎಂ.ಮೋಹನ್‌ಕುಮಾರ್ ಪ್ರೋತ್ಸಾಹಧನದ ಚೆಕ್ ವಿತರಿಸಿದರು. ನಗರ ಜಿ.ಪಂ ಸಿಇಒ ಲತಾಕುಮಾರಿ, ರಾಜಾನುಕುಂಟೆ ಗ್ರಾಮ ಪಂಚಾಯಿತಿ ಅಧ್ಯಕ್ಷೆ ಭವಾನಿ ಶ್ರೀನಿವಾಸ್, ಸದಸ್ಯ ಚಿಕ್ಕಣ್ಣ, ಪದವಿ ಪೂರ್ವ ಕಾಲೇಜಿನ ಪ್ರಾರಚಾರ್ಯೆ ರಂಗಲಕ್ಷ್ಮಿ.ಎಚ್.ಆರ್ ಹಾಜರಿದ್ದರು.

ಮಹಾ ಅವಘಡಕ್ಕೆ ತೆರೆದ ಹೆದ್ದಾರಿ...

ಆರ್‌ಸಿಬಿ ತಂಡವು ಜೂನ್ 3ರ ತಡರಾತ್ರಿ ಐಪಿಎಲ್ ಫೈನಲ್ ಪಂದ್ಯದಲ್ಲಿ ಗೆದ್ದು, ಟ್ರೋಫಿ ಎತ್ತಿ ಹಿಡಿದಿತ್ತು. ಬೆಂಗಳೂರು ಸೇರಿ ರಾಜ್ಯದಾದ್ಯಂತ ಆರ್‌ಸಿಬಿ ಅಭಿಮಾನಿಗಳು ಜೂನ್ 4ರ ಬೆಳಗಿನ ಜಾವದವರೆಗೂ ರಸ್ತೆಗಳಲ್ಲಿ ಸಂಭ್ರಮಾಚರಣೆ ನಡೆಸಿದ್ದರು. ಜೂನ್ 4ರ ಬೆಳಿಗ್ಗೆ 7ರ ವೇಳೆಗೆ 'ಎಕ್ಸ್'ನಲ್ಲಿ ಪೋಸ್ಟ್ ಮಾಡಿದ್ದ ಆರ್‌ಸಿಬಿ, 'ಬೆಂಗಳೂರಿನಲ್ಲಿ ವಿಜಯೋತ್ಸವ ಮೆರವಣಿಗೆ' ನಡೆಸುತ್ತೇವೆ ಎಂದು ಘೋಷಿಸಿತ್ತು. ಆನಂತರ ವಿಜಯೋತ್ಸವದ ಬಗ್ಗೆ ಮುಖ್ಯಮಂತ್ರಿ, ಉಪ ಮುಖ್ಯಮಂತ್ರಿ, ಗೃಹ ಸಚಿವ, ಆರ್‌ಸಿಬಿ ಸಾಮಾಜಿಕ ಜಾಲತಾಣಗಳಲ್ಲಿ ನೀಡಿದ ಮಾಹಿತಿ ಹಂಚಿಕೊಂಡ ಬೆನ್ನಲ್ಲೇ ಅಭಿಮಾನಿಗಳು ವಿಧಾನಸೌಧ ಮತ್ತು ಕ್ರೀಡಾಂಗಣದತ್ತ ಬರಲಾರಂಭಿಸಿದರು. ಅವಘಡ ಸಂಭವಿಸುವುದಕ್ಕೂ ಮುನ್ನ ನಡೆದ ಪ್ರಮುಖ ಬೆಳವಣಿಗೆಗಳನ್ನು ತೆರೆದಿಡುವ ವಿವರ ಇಲ್ಲಿದೆ. 11 ಅಮಾಯಕರ ಜೀವಗಳನ್ನು ಬಲಿ ಪಡೆದೇ ಬಿಟ್ಟ ಮಹಾ ಅವಘಡ ಬಾಯ್ತೆರೆದುಕೊಂಡಿದ್ದಕ್ಕೆ ಇವೇ ಪ್ರಮುಖ ಕಾರಣಗಳು ಎಂದರೆ ತಪ್ಪಾಗಲಿಲ್ಲ...

1 Royal Chal... @RCBTweets Follow

🚨 RCB Victory Parade in Bengaluru ‼️

This one's for you, 12th Man Army.
For every cheer, every tear, every year.
Loyalty is Royalty and today, the crown is yours. 🏆

More deta...

ಬೆಳಿಗ್ಗೆ 7.01ಕ್ಕೆ ಆರ್‌ಸಿಬಿ 'ಎಕ್ಸ್' ಪೋಸ್ಟ್



7:01 AM · 04 Jun 25 · 1.6M Views

2 ಬೆಳಿಗ್ಗೆ 9.30ರಲ್ಲಿ ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಮಾಹಿತಿ

ಆರ್‌ಸಿಬಿ ಆಟಗಾರರಿಗೆ ವಿಧಾನಸೌಧದಲ್ಲಿ ಸನ್ಮಾನ ನಡೆಸುವ ಬಗ್ಗೆ ನಾನು, ಮುಖ್ಯಮಂತ್ರಿ ಮತ್ತು ಗೃಹ ಸಚಿವರು ಚರ್ಚಿಸಿ ನಿರ್ಧಾರ ಹೇಳುತ್ತೇವೆ. ಇನ್ನೂ ಏನೂ ಅಂತಿಮವಾಗಿಲ್ಲ. ಆರ್‌ಸಿಬಿಯವರು ಟ್ವೀಟ್ ಮಾಡಿಬಿಟ್ಟಿದ್ದಾರೆ. ನಾವು ಸಿದ್ಧತೆ ಮಾಡಿಕೊಳ್ಳಬೇಕಲ್ಲವೇ? ಸಮಯ ಆನಂತರ ತಿಳಿಸುತ್ತೇವೆ: **ಡಿ.ಕೆ.ಶಿವಕುಮಾರ್**

3 ಬೆಳಿಗ್ಗೆ 9.50ರಲ್ಲಿ ಗೃಹ ಸಚಿವ ಜಿ.ಪರಮೇಶ್ವರ

ಆರ್‌ಸಿಬಿ ಆಟಗಾರರು ಮೆರವಣಿಗೆ ನಡೆಸುತ್ತೇವೆಂದು ಕೋರಿದ್ದಾರೆ. ಮೆರವಣಿಗೆ ವೇಳೆ ಆಟಗಾರರ ಹತ್ತಿರ ಹೋಗಲು ಅಭಿಮಾನಿಗಳು ನುಗ್ಗಬಹುದು, ಮತ್ತೇನನ್ನಾದರೂ ಎಸೆಯಬಹುದು. ಹೀಗಾಗಿ ಮೆರವಣಿಗೆಗೆ ಅವಕಾಶ ನೀಡಲು ಸಾಧ್ಯವಿಲ್ಲ: **ಜಿ.ಪರಮೇಶ್ವರ**

4 ಮಧ್ಯಾಹ್ನ 1.09ಕ್ಕೆ ಮುಖ್ಯಮಂತ್ರಿ ಸಿದ್ದರಾಮಯ್ಯ 'ಎಕ್ಸ್' ಪೋಸ್ಟ್

Siddaramaiah @siddaramaiah

ನಿನ್ನೆಯ ಐಪಿಎಲ್ ಫೈನಲ್ ಪಂದ್ಯದಲ್ಲಿ ಭರ್ಜರಿ ಜಯಗಳಿಸಿ ತವರೂರಿಗೆ ಆಗಮಿಸುತ್ತಿರುವ ಕರ್ನಾಟಕದ ಹೆಮ್ಮೆಯ ಆರ್‌ಸಿಬಿ ತಂಡವನ್ನು ಸಮಸ್ತ ಕನ್ನಡಿಗರ ಪರವಾಗಿ ಇಂದು ಸಂಜೆ 4 ಗಂಟೆಗೆ ವಿಧಾನಸೌಧದ ಭವ್ಯ ಮೆಟ್ಟಿಲುಗಳ ಮೇಲೆ ಅಭಿನಂದಿಸಿ, ಸನ್ಮಾನಿಸಲಿದ್ದೇನೆ.

ಕೋಟ್ಯಂತರ ಅಭಿಮಾನಿಗಳ 18 ವರ್ಷಗಳ ಕಾತುರ, ಕಾಯುವಿಕೆ ಕೊನೆಗೊಂಡು, ಇಡೀ ರಾಜ್ಯದಲ್ಲೇ ಹಬ್ಬದ ವಾತಾವರಣ ಸೃಷ್ಟಿಸಿದ ಈ ಐತಿಹಾಸಿಕ ಗೆಲುವಿನ ಸಂಭ್ರಮದಲ್ಲಿ ನೀವೂ ಭಾಗಿಯಾಗಿ.

@RCBTweets #rcbwin #RoyalChallengersBengaluru #EeSalaCupNamdu

Translate post

5 ಮಧ್ಯಾಹ್ನ 1.40ಕ್ಕೆ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಮಾಹಿತಿ

ಭದ್ರತೆ ದೃಷ್ಟಿಯಿಂದ ಮೆರವಣಿಗೆಗೆ ಅವಕಾಶ ನೀಡುತ್ತಿಲ್ಲ. ವಿಧಾನಸೌಧದಲ್ಲಿ ಕಾರ್ಯಕ್ರಮ ನಡೆಸುತ್ತೇವೆ. ಅಭಿಮಾನಿಗಳು ಚಿನ್ನಸ್ವಾಮಿ ಕ್ರೀಡಾಂಗಣಕ್ಕೆ ಬರಲಿ. ಇದನ್ನು ಬಹಳ ಎಚ್ಚರಿಕೆಯಿಂದ ನಡೆಸಬೇಕಿದೆ. ಏನಾದರೂ ಹೆಚ್ಚೂ ಕಡಿಮೆ ಆಗಿ ಯಾರದಾದರೂ ಕೈಕಾಲು ಮುರಿದರೆ ಅಥವಾ ಪ್ರಾಣ ಹೋದರೆ ದೇಶದಲ್ಲೇ ಕೆಟ್ಟ ಹೆಸರು ತೆಗೆದುಕೊಳ್ಳಬೇಕಾಗುತ್ತದೆ. ಅಭಿಮಾನಿಗಳು ಸಂಯಮದಿಂದ ವರ್ತಿಸಬೇಕು: **ಡಿ.ಕೆ.ಶಿವಕುಮಾರ್**

6 ಮಧ್ಯಾಹ್ನ 1.50ರಿಂದ 3ರವರೆಗೆ

ವಿಧಾನಸೌಧ ಸನ್ಮಾನ ಮತ್ತು ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ವಿಜಯೋತ್ಸವ ಕಾರ್ಯಕ್ರಮ ಎಂದು ಸುದ್ದಿ ವಾಹಿನಿಗಳಲ್ಲಿ ಪ್ರಸಾರ. ಆನಂತರದಲ್ಲಿ ವಿಧಾನಸೌಧ ಮತ್ತು ಕಬ್ಬನ್‌ಪಾರ್ಕ್‌ನತ್ತ ಅಭಿಮಾನಿಗಳು ಹೆಚ್ಚಿನ ಸಂಖ್ಯೆಯಲ್ಲಿ ಬರಲಾರಂಭಿಸಿದರು.

7 ಮಧ್ಯಾಹ್ನ 3.14ಕ್ಕೆ ಆರ್‌ಸಿಬಿ 'ಎಕ್ಸ್' ಪೋಸ್ಟ್

Royal Chal... @RCBTweets Follow

🚨 RCB Victory Parade: Today at 5 pm IST. ‼️

Victory Parade will be followed by celebrations at the Chinnaswamy stadium.

We request all fans to follow guidelines set by police and other authorities, so that everyone can enjoy the roadshow peacefully.

Free passes (limited entry) available on shop.royalchallengers.com

GET YOUR FREE VICTORY DAY PASSES!

Post your reply

8 ಮಧ್ಯಾಹ್ನ 3.32ಕ್ಕೆ ಜೆಡಿಎಸ್ 'ಎಕ್ಸ್' ಪೋಸ್ಟ್

Janata Dal... @JanataDal_S Follow

ಭದ್ರತೆಯ ನೆಪವೊಡ್ಡಿ RCB ತಂಡದ ವಿಜಯೋತ್ಸವ ಮೆರವಣಿಗೆಗೆ @INCKarnataka ಸರ್ಕಾರದ ತಡೆ ಸರಿಯಲ್ಲ.

18 ವರ್ಷಗಳ ಬಳಿಕ ಕರ್ನಾಟಕದ ಬೆಂಗಳೂರು ತಂಡ ಚೊಚ್ಚಲ ಐಪಿಎಲ್ ಗೆದ್ದ ಸಂಭ್ರಮಾಚರಣೆಯಲ್ಲಿರುವ ಆರ್‌ಸಿಬಿ ಅಭಿಮಾನಿಗಳಿಗೆ ನಿರಾಸೆ ಮಾಡದಿರಿ.

ಸಿಎಂ @siddaramaiah , ಡಿಸಿಎಂ @DKShivakumar ಹಾಗೂ ಗೃಹ ಸಚಿವ @DrParameshwara ಅವರೇ , ಕಾಂಗ್ರೆಸ್ ಕಾರ್ಯಕ್ರಮಗಳಿಗೆ ಇರುವ ಭದ್ರತೆ, ಬೆಂಗಳೂರಿನಲ್ಲಿ ಆರ್‌ಸಿಬಿ ತಂಡದ ವಿಜಯೋತ್ಸವ ಮೆರವಣಿಗೆಗೆ ಯಾಕಿಲ್ಲ ? ಭದ್ರತೆಯ ದೃಷ್ಟಿಯಿಂದ ರದ್ದು ಮಾಡಿದ್ದು ಎಷ್ಟು ಸರಿ ?

9 ಸಂಜೆ 4ರ ವೇಳೆಗೆ ಕಾಲ್ತುಳಿತ ಮತ್ತು ಅಭಿಮಾನಿಗಳ ಸಾವಿನ ಬಗ್ಗೆ ಸುದ್ದಿವಾಹಿನಿಗಳಲ್ಲಿ, ಸಾಮಾಜಿಕ ಜಾಲತಾಣಗಳಲ್ಲಿ ಮಾಹಿತಿ

10 ಸಂಜೆ 5.05ಕ್ಕೆ ಬಿಜೆಪಿ 'ಎಕ್ಸ್' ಪೋಸ್ಟ್

BJP Karnat... @BJP4Karnat... Follow

ಹಲವಾರು ವರ್ಷಗಳ ಅಭಿಮಾನಿಗಳ ಕನಸನ್ನು @RCBTweets ಈ ವರ್ಷ ನನಸು ಮಾಡಿದೆ!!

ಆದರೆ ತೆರೆದ ಬಸ್‌ನಲ್ಲಿ ಆಟಗಾರರ ವಿಜಯೋತ್ಸವಕ್ಕೆ ಅನುಮತಿ ನಿರಾಕರಿಸುವ ಮೂಲಕ ಆಕಸ್ಮಿಕ ಗೃಹ ಸಚಿವ @DrParameshwara ಅವರು ತಾವೊಬ್ಬ ಅಸಮರ್ಥ ಹಾಗೂ ಅದಕ್ಷ ಎಂಬುದನ್ನು ಮತ್ತೊಮ್ಮೆ ಸಾಬೀತು ಪಡಿಸಿದ್ದಾರೆ.

ತಮ್ಮ ನೆಚ್ಚಿನ ಆಟಗಾರರನ್ನು ಅತಿ ಹತ್ತಿರದಿಂದ ಕಣ್ತುಂಬಿಕೊಳ್ಳಲು ಅಭಿಮಾನಿಗಳು ಕಾಯುತ್ತಿದ್ದು,

'ಚಿನ್ನಸ್ವಾಮಿ ಕ್ರೀಡಾಂಗಣದ ಬಳಿ ಕಾಲ್ತುಳಿತಕ್ಕೆ ಅಭಿಮಾನಿಯೊಬ್ಬರು ಮೃತಪಟ್ಟಿದ್ದಾರೆ ಎಂಬ ಮಾಹಿತಿ ಜೂನ್ 4ರ ಮಧ್ಯಾಹ್ನ 3.10ಕ್ಕೆ ನಮಗೆ ದೊರೆತ್ತಿತ್ತು. ಮುಖ್ಯಮಂತ್ರಿಗೆ ಸಿಕ್ಕಿರಲಿಲ್ಲವೇ' ಎಂದು ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿ ಮತ್ತು ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ.ವಿಜಯೇಂದ್ರ ಅವರು ಶುಕ್ರವಾರದ ಸುದ್ದಿಗೋಷ್ಠಿಯಲ್ಲಿ ಹೇಳಿದ್ದರು. ಆದರೆ, ವಿಜಯೋತ್ಸವ ಮೆರವಣಿಗೆ ನಡೆಸಲು ಅವಕಾಶ ನೀಡಬೇಕು ಎಂದು ಜೂನ್ 4ರ ಮಧ್ಯಾಹ್ನ 3.32ಕ್ಕೆ ಜೆಡಿಎಸ್, 5.05ಕ್ಕೆ ಬಿಜೆಪಿ ತಮ್ಮ ಅಧಿಕೃತ 'ಎಕ್ಸ್' ಖಾತೆಗಳಲ್ಲಿ ಒತ್ತಾಯಿಸಿದ್ದವು. ಮೆರವಣಿಗೆಗೆ ಅವಕಾಶ ನಿರಾಕರಿಸುವ ಮೂಲಕ ಸರ್ಕಾರವು ಆರ್‌ಸಿಬಿ ಅಭಿಮಾನಿಗಳಿಗೆ ನಿರಾಸೆ ಉಂಟುಮಾಡಿದೆ ಎಂದು ಟೀಕಿಸಿದ್ದವು.

ಸಾವಿನ ಬಾಗಿಲು ತೆರೆದವರಾರು?

ಒಂದನೇ ಪುಟದಿಂದ...

ಮತ್ತೆ ಮತ್ತೆ ಒತ್ತಡ ತಂದಾಗ ತೆರೆದ ವಾಹನದಲ್ಲಿ ಆಟಗಾರರ ಮೆರವಣಿಗೆ ಕೈಬಿಟ್ಟು ವಿಧಾನಸೌಧ ಹಾಗೂ ಕ್ರೀಡಾಂಗಣದಲ್ಲಿ ಕಾರ್ಯಕ್ರಮ ನಡೆಸುವ ತೀರ್ಮಾನ ತೆಗೆದುಕೊಳ್ಳಲಾಯಿತು.

'ಆರ್‌ಸಿಬಿ ಫ್ರಾಂಚೈಸಿ ತನ್ನ ಅಧಿಕೃತ 'ಎಕ್ಸ್' ಖಾತೆಯಲ್ಲಿ ಸಕ್ಷಮ ಪ್ರಾಧಿಕಾರದಿಂದ ಯಾವುದೇ ಅನುಮತಿ ಪಡೆಯದೇ ಬುಧವಾರ ಬೆಳಿಗ್ಗೆ ಕ್ರೀಡಾಂಗಣದಲ್ಲಿ ವಿಜಯೋತ್ಸವ, ವಿಧಾನಸೌಧದಿಂದ ಕ್ರೀಡಾಂಗಣದ ವರೆಗೆ ವಿಕ್ಟರಿ ಪರೇಡ್‌ಗೆ (ಆಟಗಾರರ ಮೆರವಣಿಗೆ) ಸಾರ್ವಜನಿಕರು ಹಾಗೂ ಅಭಿಮಾನಿಗಳು ಸೇರಬೇಕೆಂದು ಏಕಪಕ್ಷೀಯ ನಿರ್ಧಾರ ಕೈಗೊಂಡು 'ಎಕ್ಸ್' ಕರೆ ನೀಡಿತ್ತು. ಕ್ರೀಡಾಂಗಣದ ಪ್ರವೇಶಕ್ಕೆ ಉಚಿತ ಟಿಕೆಟ್ ನೀಡಲಾಗುವುದು ಎಂದೂ ತನ್ನ ವೆಬ್‌ಸೈಟ್‌ನಲ್ಲಿ ಆರ್‌ಸಿಬಿ ಪ್ರಕಟಣೆ ಹೊರಡಿಸಿತ್ತು. ಅತ್ತ ಸರ್ಕಾರವು ಪೊಲೀಸ್ ಇಲಾಖೆಯ ಸಲಹೆಯನ್ನು ಗಂಭೀರವಾಗಿ ಪರಿಗಣಿಸದೇ ವಿಧಾನಸೌಧ ಮೆಟ್ಟಿಲುಗಳ ಮೇಲೆ ಆರ್‌ಸಿಬಿ ಆಟಗಾರರನ್ನು ಸನ್ಮಾನಿಸುವುದಾಗಿ ಹೇಳಿತ್ತು.

ಈ ಮಧ್ಯೆ, ಅಹಮದಾಬಾದಿನಲ್ಲಿ ಟ್ರೋಫಿ ಗೆದ್ದ ನಂತರ ಸಂಭ್ರಮದ ಭರದಲ್ಲಿ ವಿರಾಟ್ ಕೊಹ್ಲಿ ಅವರು 'ನಾಳೆ ನಮ್ಮೊಂದಿಗೆ ಇವರಿಬ್ಬರು (ಕ್ರಿಸ್ ಗೇಲ್ ಮತ್ತು ಎಬಿ ಡಿವಿಲಿಯರ್ಸ್) ಬರಲಿದ್ದಾರೆ ಎಂಬ ವಿಶ್ವಾಸವಿದೆ. ಇದು ನಂಬಲಾಗದ ಮತ್ತು ವಿಶೇಷವೆನಿಸುವ ಸಂದರ್ಭವಾಗಲಿದೆ' ಎಂಬರ್ಥದಲ್ಲಿ ಮಾತನಾಡಿದ್ದು, ಬೆಂಗಳೂರಿನ ಎಲ್ಲ ರಸ್ತೆಗಳು ಚಿನ್ನಸ್ವಾಮಿ ಕ್ರೀಡಾಂಗಣದತ್ತ ಮುಖ ಮಾಡಲು ಕಾರಣವಾಯಿತು.

ಇದರ ಬೆನ್ನಲ್ಲೇ, ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಹೇಳಿಕೆ, ಅದರ ಬೆನ್ನಲ್ಲೇ ಮುಖ್ಯಮಂತ್ರಿ ಸಿದ್ದರಾಮಯ್ಯನವರ 'ಎಕ್ಸ್' ಹೇಳಿಕೆಗಳು ಹೊರಬಿದ್ದು, ವಿಧಾನಸೌಧದ ಮೆಟ್ಟಿಲಿನ ಮೇಲೆ ಆರ್‌ಸಿಬಿ ತಂಡವನ್ನು ಸನ್ಮಾನಿಸುವ ಸುದ್ದಿ ಕಾಳ್ಗಿಚ್ಚಿನಂತೆ ಹಬ್ಬಿತು. ಎಚ್‌ಎಎಲ್ ವಿಮಾನ ನಿಲ್ದಾಣಕ್ಕೆ ವಿಶೇಷ ವಿಮಾಣದಲ್ಲಿ ಬಂದಿಳಿದ ಆರ್‌ಸಿಬಿ ತಂಡವನ್ನು ಎದುರುಗೊಳ್ಳಲು ಅಲ್ಲಿಗೆ ತೆರಳಿದ ಡಿ.ಕೆ. ಶಿವಕುಮಾರ್, ಆಟಗಾರರನ್ನು ವಿಶೇಷ ಭದ್ರತೆಯಡಿ ನಗರಕ್ಕೆ ಕರೆತಂದರು. ಈ ವಿಡಿಯೊ, ಭಾವಚಿತ್ರಗಳು ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡಿದವು. ಬೆಂಗಳೂರು ನಗರ ಹಾಗೂ ಸುತ್ತಮುತ್ತಲಿನ ಜಿಲ್ಲೆಗಳಿಂದ ಸಾಗರೋಪಾದಿಯಲ್ಲಿ ಅಭಿಮಾನಿಗಳು ನಗರದ ಹೃದಯಭಾಗದತ್ತ ನುಗ್ಗಲು ಇದು ಪ್ರಮುಖ ಕಾರಣವಾಯಿತು.

ಹೆಜ್ಜೆ ಹೆಜ್ಜೆಗೂ ತಪ್ಪುಗಳು: ಗೆದ್ದು ಬೀಗಿದ ಆರ್‌ಸಿಬಿ ತಂಡವನ್ನು ಕಣ್ತುಂಬಿಕೊಳ್ಳುವ ತವಕ ಸಹಜವಾಗಿಯೇ ಅಭಿಮಾನಿಗಳಲ್ಲಿ ಇತ್ತು. ಗುಜರಾತ್‌ನ ಅಹಮದಾಬಾದ್‌ನ ನರೇಂದ್ರ ಮೋದಿ ಕ್ರೀಡಾಂಗಣದಲ್ಲಿ ಐಪಿಎಲ್ ಅಂತಿಮ ಪಂದ್ಯದ ಟಾಸ್ ಪ್ರಕ್ರಿಯೆ ಆರಂಭವಾಗುವ ಹೊತ್ತಿನಲ್ಲೇ ವಿಜಯೋತ್ಸವ ಆಚರಣೆ ಬಗ್ಗೆ ನಿರ್ಧಾರವಾಯಿತು. ತರಾತುರಿಯಲ್ಲಿ ಕರ್ನಾಟಕ ರಾಜ್ಯ ಕ್ರಿಕೆಟ್ ಸಂಸ್ಥೆಯ (ಕೆಎಸ್‌ಸಿಎ) ಮುಖ್ಯ ಕಾರ್ಯ ನಿರ್ವಾಹಕ ಅಧಿಕಾರಿ ಶುಭೇಂದ್ ಘೋಷ್ ಅವರು ಕಬ್ಬನ್ ಪಾರ್ಕ್ ಠಾಣೆಗೆ ತೆರಳಿ, ಆರ್‌ಸಿಬಿ ತಂಡದ ವಿಜಯೋತ್ಸವ ಕಾರ್ಯಕ್ರಮವನ್ನು ಜೂನ್ 4ರಂದು ಸಂಜೆ ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಆಯೋಜಿಸಲು ನಿರ್ಧರಿಸಲಾಗಿದ್ದು, ಬಂದೋಬಸ್ತ್ ವ್ಯವಸ್ಥೆ ಮಾಡುವಂತೆ ಠಾಣೆಯ ಇನ್‌ಸ್ಪೆಕ್ಟರ್ ಎ.ಕೆ.ಗಿರೀಶ್ ಅವರಿಗೆ ಮನವಿ ಸಲ್ಲಿಸಿದ್ದರು.

'ನೀವು ತಿಳಿಸಿದಂತೆ ಕಾರ್ಯಕ್ರಮ ಆಯೋಜಿಸಿದರೆ ಲಕ್ಷಾಂತರ ಜನರು ಜಮಾವಣೆಗೊಂಡು ಸಾರ್ವಜನಿಕರ ಸಂಚಾರಕ್ಕೆ ಅಡಚಣೆ ಉಂಟಾಗುತ್ತದೆ. ಅಲ್ಲದೇ ಸಮರ್ಪಕ ಬಂದೋಬಸ್ತ್ ವ್ಯವಸ್ಥೆಗೂ ಸಮಯಬೇಕಿದೆ' ಎಂದು ಪೊಲೀಸರು ಹೇಳಿ ಅನುಮತಿ ನಿರಾಕರಿಸಿದ್ದರು ಎಂಬ ಮಾಹಿತಿ ಪೊಲೀಸ್ ಎಫ್‌ಐಆರ್‌ನಲ್ಲಿದೆ.

ಅತ್ತ ಆರ್‌ಸಿಬಿ ತಂಡ ಜಯಗಳಿಸುತ್ತಿದ್ದಂತೆಯೇ ರಾಜ್ಯದಲ್ಲೂ ಸಂಭ್ರಮಾಚರಣೆಗಳು ರಾತ್ರಿಯಿಡೀ ನಡೆದವು. ರಾತ್ರಿಯಿಡಿ ಬಂದೋಬಸ್ತ್ ನಡೆಸಿದ್ದ ಪೊಲೀಸರು ಬೆಳಗಿನ ಜಾವದ ಸುಮಾರಿಗೆ ಮನೆಗೆ ಹೋಗಿ ನಿದ್ರೆಗೆ ಜಾರಿದ್ದರು. ಅದೇ ಹೊತ್ತಿನೊಳಗೆ, ಅದೇ ದಿನ ವಿಜಯೋತ್ಸವ ಆಚರಿಸಬೇಕೆಂಬ ತೀರ್ಮಾನವೂ ಹೊರಬಿತ್ತು.

ಹೀಗೆ ದಿಢೀರ್ ಆಯೋಜನೆ ಮಾಡಿದರೆ ಎಷ್ಟು ಜನ ಸೇರಬಹುದು; ಲಕ್ಷಾಂತರ ಜನ ಸೇರಿದ ಅವರನ್ನು ನಿಯಂತ್ರಿಸಲು ಬೇಕಾದ ಪೂರ್ವ ತಯಾರಿ ಏನು ಎಂಬ ವ್ಯವಧಾನಕ್ಕೂ ಅವಕಾಶ ಕೊಡದೇ ಕಾರ್ಯಕ್ರಮ ನಡೆಸಿಯೇ ಬಿಡುವ ಆತುರವನ್ನು ಸರ್ಕಾರ ಹಾಗೂ ಆರ್‌ಸಿಬಿ ತಂಡ, ಕರ್ನಾಟಕ ರಾಜ್ಯ ಕ್ರಿಕೆಟ್ ಸಂಸ್ಥೆ ಹಾಗೂ ಈವೆಂಟ್ ಮ್ಯಾನೇಜ್‌ಮೆಂಟ್ ನಡೆಸುವ ಡಿಎನ್‌ಎ ಸಂಸ್ಥೆ ಕೈಗೊಂಡವು. ಪೊಲೀಸ್ ಮುಖ್ಯಸ್ಥರು ಕೇಳಿಕೊಂಡರೂ ಅದನ್ನು ಒಪ್ಪದೇ ವಿಜಯೋತ್ಸವ ನಡೆಸಿಯೇ ಬಿಡುತ್ತವೆ ಎಂಬ ಹಟವೇ ಅನಾಹುತಕ್ಕೆ ದಾರಿಯಾಯಿತು ಎಂದು ಪೊಲೀಸ್ ಅಧಿಕಾರಿಗಳು ಹೇಳಿದ್ದಾರೆ.

ವಿಧಾನಸೌಧದ ಎದುರು ಆರ್‌ಸಿಬಿ ತಂಡವನ್ನು ಸನ್ಮಾನಿಸಿದರೆ ಸರ್ಕಾರದ ವರ್ಚಸ್ಸು ಹೆಚ್ಚಾಗುತ್ತದೆ ಎಂದು ಕೆಲವರು ನೀಡಿದ ಸಲಹೆ ಪಾಲಿಸಲು ಮುಂದಾದ ಆಡಳಿತಾರೂಢರು ತರಾತುರಿಯಲ್ಲಿ ಎಲ್ಲದಕ್ಕೂ ಅನುಮತಿ ಕೊಡಿಸಿದರು. ಕೆಲವೇ ಗಂಟೆಗಳಲ್ಲಿ ವೇದಿಕೆ ನಿರ್ಮಾಣಗೊಂಡು ಎಲ್ಲವೂ ಸಜ್ಜಾಯಿತು.

ಮೆಟ್ಟಿಲುಗಳ ಮೇಲೆ ಹಾಕಲಾದ ವೇದಿಕೆಯಲ್ಲಿ ಮೇಲೆ 25-30 ಅತಿಥಿಗಳಿಗೆ ಮಾತ್ರ ಅನುಮತಿಸಬಹುದು ಎಂದು ಲೋಕೋಪಯೋಗಿ ಇಲಾಖೆ ಸಹಾಯಕ ಕಾರ್ಯಪಾಲಕ ಎಂಜಿನಿಯರ್ ಅವರು ವಿಧಾನಸೌಧ ಭದ್ರತಾ ವಿಭಾಗದ ಪೊಲೀಸ್ ಇನ್‌ಸ್ಪೆಕ್ಟರ್‌ಗೆ ಅಭಿಪ್ರಾಯ ನೀಡಿದ್ದರು. ಆದರೆ ವೇದಿಕೆ ಮೇಲೆ ಸುಮಾರು 200ಕ್ಕೂ ಅಧಿಕ ಜನರು ಜಮಾವಣೆಯಾಗಿದ್ದರು. ಆರ್‌ಸಿಬಿ ತಂಡದ ಸದಸ್ಯರ ಸನ್ಮಾನ ವೇಳೆ ಅವರ ಜೊತೆ ಫೋಟೊ, ಸೆಲ್ಫಿ ಕ್ಲಿಕ್ಕಿಸಲು ಸಚಿವರು, ಶಾಸಕರು, ಅವರ ಕುಟುಂಬಸ್ಥರು, ಮಕ್ಕಳು ಸೇರಿ ನೂರಾರು ಜನರು ಜಮಾವಣೆಯಾಗಿದ್ದರು.

ಹೀಗೆ ಕಾರ್ಯಕ್ರಮಕ್ಕೆ ನಡೆಸಲು ಸಲಹೆ ಹಾಗೂ ಒತ್ತಡ ಹೇರಿದ್ದು ಮುಖ್ಯಮಂತ್ರಿ ರಾಜಕೀಯ ಕಾರ್ಯದರ್ಶಿ ಕೆ. ಗೋವಿಂದರಾಜು ಅವರು, ಅನಾಹುತ ನಡೆಯಲು ಕಾರಣರಾಗಿದ್ದಾರೆ. ಇದರಿಂದ ಸರ್ಕಾರಕ್ಕೆ ಮುಜುಗರವಾಗಿದ್ದು ಅವರನ್ನು ಆ ಹುದ್ದೆಯಿಂದ ಕೈಬಿಡಬೇಕು ಎಂದು ಎಂದು ಗುರುವಾರ ನಡೆದ ಸಚಿವ ಸಂಪುಟ ಸಭೆಯಲ್ಲಿ ಕೆಲವು ಸಚಿವರು ಒತ್ತಡ ಹೇರಿದ್ದರು. ಹೀಗಾಗಿ, ಶುಕ್ರವಾರವೇ ಗೋವಿಂದರಾಜು ಅವರಿಗೆ ನೀಡಿದ್ದ ವಿಶೇಷ ಸ್ಥಾನವನ್ನು ವಾಪಸ್ ಪಡೆಯಲಾಯಿತು ಎಂದು ಮೂಲಗಳು ಹೇಳಿವೆ.

ವಿಧಾನಸೌಧದ ಎದುರು ಕಾರ್ಯಕ್ರಮ ನಡೆಸಿ, ರಾಜ್ಯದ ಜನರಿಂದ ಭೇಷ್ ಎನ್ನಿಸಿಕೊಳ್ಳುವ ಉಮೇದು ಆಡಳಿತಾರೂಢರಲ್ಲಿತ್ತು. ಅದೇ ಕಾರಣಕ್ಕೆ, ವಿಧಾನಸೌಧದ ಎದುರಿನ ಸಮಾರಂಭಕ್ಕೆ ಜನ ಬನ್ನಿ ಎಂಬ ಆಹ್ವಾನವನ್ನೂ ಸಾಮಾಜಿಕ ಜಾಲತಾಣಗಳಲ್ಲಿ ಹರಡಲಾಯಿತು. ಚಿನ್ನಸ್ವಾಮಿ ಕ್ರೀಡಾಂಗಣದೊಳಗೆ ಹೋಗಿ ತಮ್ಮ ನೆಚ್ಚಿನ ಆಟಗಾರರನ್ನು ನೋಡಲಾಗುವುದಿಲ್ಲ; ವಿಧಾನಸೌಧ ಎದುರಾದರೆ ನೋಡಬಹುದು ಎಂಬ ಲೆಕ್ಕಾಚಾರ ಹಾಕಿದ ಅಭಿಮಾನಿಗಳು ಪ್ರವಾಹೋಪಾದಿಯಲ್ಲಿ ಹರಿದುಬಂದರು. ಅನಿರೀಕ್ಷಿತ ಹಾಗೂ ಅನಿಯಂತ್ರಿತ ಜನಸಾಗರವು ಸಮಸ್ಯೆ ಸೃಷ್ಟಿಯಾಗಲು ಕಾರಣವಾಯಿತು.



ತಕ್ಷಣದ ಶಿಸ್ತು ಕ್ರಮ

- ಬೆಂಗಳೂರು ನಗರ ಪೊಲೀಸ್ ಕಮಿಷನರ್ ಬಿ.ದಯಾನಂದ, ಪಶ್ಚಿಮ ವಿಭಾಗದ ಹೆಚ್ಚುವರಿ ಪೊಲೀಸ್ ಆಯುಕ್ತ ವಿಕಾಸ್ ಕುಮಾರ್, ಕೇಂದ್ರ ವಿಭಾಗದ ಡಿಸಿಪಿ ಶೇಖರ್ ಎಚ್.ತೆಕ್ಕಣ್ಣವರ, ಕಬ್ಬನ್ ಪಾರ್ಕ್ ಉಪವಿಭಾಗದ ಎಸಿಪಿ ಸಿ.ಬಾಲಕೃಷ್ಣ ಸೇರಿ ನಾಲ್ವರು ಐಪಿಎಸ್ ಅಧಿಕಾರಿಗಳು ಮತ್ತು ಕಬ್ಬನ್ ಪಾರ್ಕ್ ಇನ್‌ಸ್ಪೆಕ್ಟರ್ ಎ.ಕೆ.ಗಿರೀಶ್ ಅಮಾನತು
- ಕಾರ್ಯಕ್ರಮ ಆಯೋಜಿಸಲು ಒತ್ತಡ ತಂದಿದ್ದರು ಎಂಬ ಆರೋಪ ಬಂದ ಬೆನ್ನಲ್ಲೇ ಮುಖ್ಯಮಂತ್ರಿಯ ರಾಜಕೀಯ ಕಾರ್ಯದರ್ಶಿ ಕೆ.ಗೋವಿಂದರಾಜು ಅವರಿಗೆ ಆ ಹುದ್ದೆಯಿಂದ ಬಿಡುಗಡೆ
- ಗುಪ್ತಚರ ವೈಫಲ್ಯ ಕಾರಣ ಎಂಬ ಆರೋಪದಿಂದ ಗುಪ್ತಚರ ವಿಭಾಗದ ಮುಖ್ಯಸ್ಥ ಹೇಮಂತ್ ನಿಂಬಾಳ್ಕರ್ ಎತ್ತಂಗಡಿ

'ಸಮೂಹ ಮನಃಸ್ಥಿತಿಯೇ ಕಾರಣ'



ಒಂದೆಡೆ ನಿರ್ದಿಷ್ಟ ವಯೋಮಾನದವರು ಗುಂಪಾಗಿ ಸೇರಿದಾಗ ನೇರವಾಗಿ ಅಥವಾ ಪರೋಕ್ಷವಾಗಿ ಒಬ್ಬರಿಗೊಬ್ಬರು ಪ್ರಭಾವಿಸುತ್ತಾರೆ. ಇದನ್ನು ಸಮೂಹ ಮನಃಸ್ಥಿತಿ ಎನ್ನುತ್ತಾರೆ. ಯಾವುದೇ ಒಬ್ಬ ವ್ಯಕ್ತಿ ದುಡುಕಿನ ನಿರ್ಧಾರ ಕೈಗೊಂಡರೆ ಅದು ಉಳಿದವರ ಮನಃಸ್ಥಿತಿಯ ಮೇಲೆ ಗಂಭೀರ ಪರಿಣಾಮ ಬೀರಿ, ಅವರು ಸಹ ಅದೇ ಹಾದಿಯಲ್ಲಿ ಸಾಗುವ ಸಾಧ್ಯತೆ ಇರುತ್ತದೆ. ಈ ಮನಃಸ್ಥಿತಿ ಯುವಜನರಲ್ಲಿ ಇತ್ತೀಚೆಗೆ ಸಾಮಾನ್ಯವಾಗಿದ್ದು, ಕೆಲ ಸಂದರ್ಭದಲ್ಲಿ ವಿಕೋಪಕ್ಕೆ ಹೋಗಿ ಅವಘಡಗಳು ಸಂಭವಿಸುತ್ತಿವೆ.

ಅತಿಯಾದ ಉತ್ಸಾಹದಿಂದಲೂ ಮನಸ್ಸಿನ ಮೇಲಿನ ನಿಯಂತ್ರಣ ತಪ್ಪಲಿದೆ. ಗುಂಪಾಗಿ ಸೇರಿದಾಗ ಅತಿಯಾದ ಕ್ರಿಯಾಶೀಲತೆ, ಆಕ್ರಮಣಕಾರಿ ಮನೋಭಾವ ವ್ಯಕ್ತವಾಗುವ ಸಾಧ್ಯತೆಯೂ ಇರುತ್ತದೆ.

ಈಗ ಪ್ರವೃತ್ತಿ ಬದಲಾಗುತ್ತಿದೆ. ಹಿಂದೆ ತಾರೆಗಳ ನಡೆ–ನುಡಿಯನ್ನು ಅನುಸರಿಸುತ್ತಿದ್ದರು. ಈಗ ಅವರನ್ನು ನೋಡಲು ಮುಗಿಬೀಳುವವರ ಸಂಖ್ಯೆ ಹೆಚ್ಚಾಗಿದೆ. ಸಾಮಾಜಿಕ ಜಾಲತಾಣಗಳು ನೀಡುವ ಪ್ರಚೋದನೆಗಳು ಇದಕ್ಕೆ ಕಾರಣ. ಪೋಷಕರು ಮಕ್ಕಳಲ್ಲಿನ ಬದಲಾವಣೆಯನ್ನು ಬಾಲ್ಯದಿಂದಲೇ ಗುರುತಿಸಿ, ಸೂಕ್ತ ಮಾರ್ಗದರ್ಶನ ನೀಡಬೇಕು. ಇದರಿಂದ ಮುಂದೆ ಆಗಬಹುದಾದ ಅನಾಹುತ ತಡೆಯಲು ಸಾಧ್ಯ.

ಎಚ್.ಎನ್.ಶಶಿಧರ್, ನಿಮ್ಹಾನ್ಸ್‌ನ ಸ್ಥಾನಿಕ ವೈದ್ಯಾಧಿಕಾರಿ (ಆರ್‌ಎಂಒ)

ಅಸಹಾಯಕ ಪೊಲೀಸರು

ಸರ್ಕಾರ ಹಾಗೂ ಆಯೋಜಕರಿಂದ ಒತ್ತಡ ಬರುತ್ತಿದ್ದಂತೆ ಅಣಿಯಾದ ಪೊಲೀಸ್ ಅಧಿಕಾರಿಗಳ ಬಂದೋಬಸ್ತ್‌ಗೆ ಸಿದ್ಧತೆ ನಡೆಸಿದರು.

'ಬುಧವಾರ ಬೆಳಿಗ್ಗೆ ಹಿರಿಯ ಅಧಿಕಾರಿಗಳ ಜತೆಗೆ ಚರ್ಚಿಸಿ ಥಣಿಸಂದ್ರದಲ್ಲಿ ತರಬೇತಿಯಲ್ಲಿದ್ದ ಪೊಲೀಸ್ ಸಿಬ್ಬಂದಿಯನ್ನು ಬಂದೋಬಸ್ತ್‌ಗೆ ಕರೆಸಿಕೊಳ್ಳಲಾಗಿತ್ತು. ಆದರೆ, ದೂರದ ಜಿಲ್ಲೆಗಳ ಸಿಬ್ಬಂದಿ ಹಾಗೂ ನಗರದಲ್ಲಿ ರಾತ್ರಿ ಕರ್ತವ್ಯದಲ್ಲಿದ್ದ ಸಿಬ್ಬಂದಿಯನ್ನು ಕರೆಸಿಕೊಳ್ಳಲು ಸಾಧ್ಯವಾಗಲಿಲ್ಲ. ಪೂರ್ವ ತಯಾರಿ ಇಲ್ಲದೇ ಹೀಗೆ ಕಾರ್ಯಕ್ರಮ ಆಯೋಜಿಸಿದ್ದರಿಂದಾಗಿ, ಜನರನ್ನು ನಿಯಂತ್ರಿಸುವ ಯಾವ ಸೂತ್ರ ಹಾಗೂ ಅಸ್ತ್ರವೂ ಇರಲಿಲ್ಲ' ಎಂದು ಪೊಲೀಸರು ಹೇಳುತ್ತಾರೆ.

ವಿಧಾನಸೌಧದ ಎದುರು ನಡೆಯಲಿರುವ ಕಾರ್ಯಕ್ರಮಕ್ಕೆ ಹೋಗಿಯೇ ತೀರಬೇಕೆಂಬ ಹಟಕ್ಕೆ ಬಿದ್ದ ಅಭಿಮಾನಿಗಳು ಬಸ್ಸು, ಸ್ವಂತ ವಾಹನ, ದ್ವಿಚಕ್ರ, ಲಾರಿ ಹಿಡಿದು ದೌಡಾಯಿಸಿದರು. ಮೆಟ್ರೊ ರೈಲಂತೂ ಜನಸಾಗರವನ್ನೇ ತುಂಬಿಕೊಂಡು ವಿಧಾನಸೌಧ ಹಾಗೂ ಚಿನ್ನಸ್ವಾಮಿ ಕ್ರೀಡಾಂಗಣದತ್ತ ಜನ ಸುನಾಮಿಯನ್ನೇ ಚಿಮ್ಮಿಸಿತು. ಸರಾಸರಿ 5 ನಿಮಿಷಕ್ಕೆ ಒಂದು ಬಾರಿ ಚಲಿಸುವ ಮೆಟ್ರೊ ಅಂದು, ಎರಡು ನಿಮಿಷಕ್ಕೆ ಒಂದರಂತೆ ಸಂಚರಿಸಿ ಜನರನ್ನು ಹೊತ್ತು ತಂದಿತು. ಇದರಿಂದಾಗಿ, ಮೆಜೆಸ್ಟಿಕ್‌ನ ನಾಡಪ್ರಭು ಕೆಂಪೇಗೌಡ ಮೆಟ್ರೊ ನಿಲ್ದಾಣದಲ್ಲಿ ನೂಕುನುಗ್ಗಲು ಉಂಟಾಯಿತು. ಜನದಟ್ಟಣೆಯನ್ನು ತಡೆಯಲು ಕೊನೆಗೆ ವಿಧಾನಸೌಧ, ಕಬ್ಬನ್ ಪಾರ್ಕ್ ನಿಲ್ದಾಣಗಳಲ್ಲಿ ಮೆಟ್ರೊ ನಿಲ್ಲಿಸುವುದಕ್ಕೆ ನಿರ್ಬಂಧ ಹೇರಲಾಯಿತು. ಆದರೂ ಸಾವಿರಾರು ಜನ ನುಗ್ಗಿದರು.

ವಿಧಾನಸೌಧದ ಎದುರು ಕಾರ್ಯಕ್ರಮ ನಡೆಯುವ ಹೊತ್ತಿನಲ್ಲೇ, ಚಿನ್ನಸ್ವಾಮಿ ಕ್ರೀಡಾಂಗಣದ ಕೆಲವು ಗೇಟ್‌ಗಳಲ್ಲಿ ಉಚಿತ ಪ್ರವೇಶವಿದೆ ಎಂಬ ಸುದ್ದಿ ಹರಿದಾಡಿತು. ಅಣತಿ ದೂರದಲ್ಲಿರುವ ಚಿನ್ನಸ್ವಾಮಿ ಕ್ರೀಡಾಂಗಣದ ಕಡೆ ಜನ ನುಗ್ಗಿದರು. ಕ್ರೀಡಾಂಗಣದ ಬಳಿ ಏಕಾಏಕಿ ಲಕ್ಷಾಂತರ ಜನರು ಜಮಾವಣೆಗೊಂಡರು. ಕ್ರೀಡಾಂಗಣದ ಒಳಕ್ಕೆ ತೆರಳಲು ಆಯೋಜಕರು ಸೂಕ್ತ ವ್ಯವಸ್ಥೆ ಮಾಡಿರಲಿಲ್ಲ. ಕೆಲವರು ಪೊಲೀಸರ ಮೇಲೆ ಚಪ್ಪಲಿ ಎಸೆದರು. ಗೇಟ್‌ವೊಂದರ ಬಳಿ ಸ್ಲ್ಯಾಬ್ ಕುಸಿದು ಬಿತ್ತು. ಜನರು ಗಾಬರಿಯಿಂದ ಓಡಿದರು. ಆಗ ಲಾಠಿ ಪ್ರಹಾರ ಮಾಡುವ ಪರಿಸ್ಥಿತಿ ನಿರ್ಮಾಣವಾಗಿತ್ತು. ಅಲ್ಲಿ ಸೇರಿದ್ದ ಜನರಲ್ಲಿ ಯುವಕ–ಯುವತಿಯೇ ಹೆಚ್ಚಿನ ಸಂಖ್ಯೆಯಲ್ಲಿದ್ದು, ಯಾರ ಮಾತನ್ನೂ ಕೇಳದೇ ಹೇಗಾದರೂ ಒಳ ನುಗ್ಗಲೇ ಬೇಕೆಂಬ ಹಪಹಪಿಯಲ್ಲಿದ್ದರು. ಅವರನ್ನು ನಿಯಂತ್ರಿಸಲು ಸಾಕಷ್ಟು ಪೊಲೀಸರು ಇರಲಿಲ್ಲ. ಹೀಗಾಗಿ, ಕಾಲ್ತುಳಿತ ಸಂಭವಿಸಿ 11 ಜನ ಪ್ರಾಣ ಕಳೆದುಕೊಂಡರು.

'ಕ್ರೀಡಾಂಗಣದ ಪ್ರವೇಶಕ್ಕೆ ಉಚಿತ ಟಿಕೆಟ್ ನೀಡಲಾಗುವುದು ಎಂದು ಹೇಳಿದ್ದು, ವಿಕ್ಟರಿ ಪರೇಡ್ ವೇಳೆ ನೆಚ್ಚಿನ ಆಟಗಾರರನ್ನು ಸಮೀಪದ ನೋಡಬಹುದೆಂದು ಬೆಂಗಳೂರು ಸೇರಿ ರಾಜ್ಯದ ಹಲವು ಜಿಲ್ಲೆಗಳಿಂದ ಸಾಗರೋಪಾದಿಯಲ್ಲಿ ಅಭಿಮಾನಿಗಳು ಕ್ರೀಡಾಂಗಣದತ್ತ ಧಾವಿಸಿದ್ದರು. ವಿಧಾನಸೌಧದ ಎದುರು ಅಪಾರ ಸಂಖ್ಯೆಯ ಅಭಿಮಾನಿಗಳು ಕಾಣಿಸಬೇಕು ಎನ್ನುವ ಕಾರಣಕ್ಕೆ ಕೆಲವರು ಒತ್ತಡ ತಂದು ಕ್ರೀಡಾಂಗಣದ ಗೇಟ್‌ಗಳನ್ನು ಬಂದ್ ಮಾಡಿಸಿದ್ದರು. ಮಧ್ಯಾಹ್ನ 3 ಗಂಟೆಯ ನಂತರ ಒಂದೊಂದೇ ಗೇಟ್ ತೆರೆದು ಪ್ರವೇಶ ನೀಡಲಾಯಿತು. ಆ ವೇಳೆಗೆ ಹೆಚ್ಚಿನ ಜನರು ಜಮಾವಣೆ ಆಗಿದ್ದರು. ಅದರಿಂದ ತಳ್ಳಾಟ, ನೂಕುನುಗ್ಗಲು ನಡೆಯಿತು. ಮತ್ತೆ ಗೇಟ್ ಬಂದ್ ಮಾಡಿದ್ದು, ಅಭಿಮಾನಿಗಳ ಆಕ್ರೋಶಕ್ಕೆ ಕಾರಣವಾಗಿ ಗೇಟ್ ಅನ್ನು ತಳ್ಳಿದರು. ಕೆಲವರು ಕಾಂಪೌಂಡ್ ಹತ್ತಿದರು. ಕೆಲವೇ ನಿಮಿಷಗಳ ಅಂತರದಲ್ಲಿ ಗೇಟ್ ನಂಬರ್ 6, 7, 2, 2ಎ, 17, 18, 21, 16ನೇ ಗೇಟ್‌ಗಳಲ್ಲಿ ಕಾಲ್ತುಳಿತ ಸಂಭವಿಸಿತು' ಎಂದು ಸ್ಥಳದಲ್ಲಿದ್ದ ಅಧಿಕಾರಿಯೊಬ್ಬರು ಘಟನೆಯ ಬಗ್ಗೆ ವಿವರಿಸಿದರು.

'ಆರ್‌ಸಿಬಿ ವಿಜಯೋತ್ಸವ ಬಗ್ಗೆ ಅಧಿಕೃತ ಟ್ವಿಟರ್ ಮತ್ತು ಜಾಲತಾಣದಲ್ಲಿ ಪೋಸ್ಟ್ ನೋಡಿದೆ. ಟಿಕೆಟ್ ಇಲ್ಲದೆಯೂ ಪ್ರವೇಶ ನೀಡುವ ಮಾಹಿತಿ ಹಂಚಿಕೊಳ್ಳಲಾಗಿತ್ತು. ಹಾಗಾಗಿ, ಚಿನ್ನಸ್ವಾಮಿ ಕ್ರೀಡಾಂಗಣದ ಗೇಟ್ ನಂ.6ರ ಬಳಿ ಬಂದಾಗ ಜನಸಂದಣಿ ಇತ್ತು. ಸಂಜೆ 5 ಗಂಟೆಗೆ ಗೇಟ್ ತೆರೆಯುತ್ತಿದ್ದಂತೆ ಜನರು ಒಮ್ಮೆಲೆ ಕ್ರೀಡಾಂಗಣ ಪ್ರವೇಶಿಸಲು ಯತ್ನಿಸಿದರು. ಗೇಟ್ ಕಿರಿದಾಗಿತ್ತು. ಒಳ ಪ್ರವೇಶಿಸುವ ವೇಳೆ ಹಲವರು ಎಡವಿಬಿದ್ದರು. ನಂತರ, ಅವರನ್ನು ತುಳಿದುಕೊಂಡೇ ಹೋದರು. ಬ್ಯಾರಿಕೇಡ್ ನನ್ನ ಬಲಗಾಲಿನ ಮೇಲೆ ಬಿತ್ತು. ಆಟೊದಲ್ಲಿ ಆಸ್ಪತ್ರೆಗೆ ತೆರಳಿ ಚಿಕಿತ್ಸೆ ಪಡೆದೆ' ಎಂದು ಗಾಯಾಳು ವೇಣು ಘಟನೆ ಬಗ್ಗೆ ವಿವರಿಸಿದರು.

'ಆರ್‌ಸಿಬಿ ತಂಡದ ಆಟಗಾರರನ್ನು ತೆರೆದ ವಾಹನದಲ್ಲಿ ಮೆರವಣಿಗೆ ಮಾಡಲಾಗುವುದು ಎಂದು ಅಧಿಕೃತ ಟ್ವಿಟರ್ ಮತ್ತು ಜಾಲತಾಣದಲ್ಲಿ ಪೋಸ್ಟ್ ಮಾಡಲಾಗಿತ್ತು. ಚಿನ್ನಸ್ವಾಮಿ ಗೇಟ್ ನಂ.17ರ ಬಳಿ ಬಂದಾಗ ಸಾವಿರಾರು ಜನರು ಸೇರಿದ್ದರು. ಮಧ್ಯಾಹ್ನ 3.10ಕ್ಕೆ ಗೇಟ್ ತೆರೆಯುತ್ತಿದ್ದಂತೆ ನುಗ್ಗಲು ಯತ್ನಿಸಿದರು. ಗೇಟ್ ಕಿರಿದಾಗಿದ್ದರಿಂದ ಒಳ ಪ್ರವೇಶಿಸುವಾಗ ಉಂಟಾದ ನೂಕು–ನುಗ್ಗಲಿನಲ್ಲಿ ಹಲವರು ಕೆಳಗೆ ಬಿದ್ದರು. ಅವರನ್ನು ತುಳಿದುಕೊಂಡು ಹೋದರು. ನನ್ನ ಬಲಗೈ ಮುರಿದಿದೆ. ಅಪರಿಚಿತರು ನನ್ನನ್ನು ಆಸ್ಪತ್ರೆಗೆ ಕರೆತಂದು ದಾಖಲಿಸಿದರು' ಎಂದು ಗಾಯಾಳು ರೋಲಾನ್ ಗೋಮ್ಸ್ ಹೇಳಿದರು.

ಕ್ರಿಕೆಟ್‌ನ ಗಂಧ ಗಾಳಿ ಗೊತ್ತಿಲ್ಲದ ಭಾರದ್ವಾಜ್ ತನ್ನ ಸ್ನೇಹಿತರ ಜತೆ ಆಟಗಾರರನ್ನು ನೋಡಲು ಬಂದು ಜನಸಂದಣಿಯಲ್ಲಿ ಸಿಲುಕಿ ಪರದಾಡಿದರು. 'ನನಗೆ ಕ್ರಿಕೆಟ್ ಆಸಕ್ತಿ ಇಲ್ಲ. ಸ್ನೇಹಿತರ ಒತ್ತಾಯಕ್ಕೆ ಆಟಗಾರರನ್ನು ನೋಡಲು ಬಂದೆ. ಆದರೆ, ಜನಸಂದಣಿಯಲ್ಲಿ ಎಲ್ಲರೂ ಸಿಲುಕಿಕೊಂಡೆವು. ಉಸಿರಾಡಲು ಕಷ್ಟವಾಯಿತು. ಹೇಗೋ ಹೊರ ಬಂದು ಜೀವ ಉಳಿಸಿಕೊಂಡೆವು' ಎಂದು ನಿಟ್ಟುಸಿರುಬಿಟ್ಟರು.

ಸಮಯಾವಕಾಶ ಕೊಟ್ಟು ಕಾರ್ಯಕ್ರಮಕ್ಕೆ ಬಂದೋಬಸ್ತ್‌ಗೆ ಬೇಕಾದ ಬ್ಯಾರಿಕೇಡ್ ಅಳವಡಿಕೆ, ಆಂಬುಲೆನ್ಸ್, ಆರೋಗ್ಯ ಸಿಬ್ಬಂದಿ ಎಲ್ಲರನ್ನೂ ಸೇರಿಸ ಬಹುದಿತ್ತು. ಏಕಾಏಕಿ ಸಮಾರಂಭ ಆಯೋಜನೆಗೊಂಡಿದ್ದರಿಂದ ಅಕ್ಕಪಕ್ಕದ ಜಿಲ್ಲೆಗಳಿಂದ ಪೊಲೀಸರನ್ನು ಕರೆಸಲು ಸಾಧ್ಯವಿತ್ತು. ತರಬೇತಿಯಲ್ಲಿದ್ದ ಪೊಲೀಸ್ ಸಿಬ್ಬಂದಿಗೆ ಪರಿಸ್ಥಿತಿ ನಿಭಾಯಿಸುವ ತಂತ್ರಗಳೇ ಗೊತ್ತಿರಲಿಲ್ಲ. ಇದು ಜನಸಾಗರ ನುಗ್ಗಲು ದಾರಿ ಮಾಡಿಕೊಟ್ಟಿತು ಎಂದು ಪೊಲೀಸ್ ಅಧಿಕಾರಿಯೊಬ್ಬರು ಹೇಳಿದರು.

ನೆರವು: ಜಯಸಿಂಹ ಆರ್., ವರುಣ ಹೆಗಡೆ, ಬಾಲಕೃಷ್ಣ ಪಿ. ಎಚ್.,

'ಪೊಲೀಸರು ಹರಕೆಯ ಕುರಿ'



ಸಾಮೂಹಿಕ ವೈಫಲ್ಯದಿಂದಾಗಿ ದುರಂತ ಸಂಭವಿಸಿದೆ. ನಿರ್ದಿಷ್ಟವಾಗಿ ಪೊಲೀಸರನ್ನು ಹೊಣೆ ಮಾಡಿ, ಪ್ರಾಥಮಿಕ ವರದಿಯ ಬಗ್ಗೆ ಯಾವ ಆದೇಶ ಮಾಡದೇ ಏಕಾಏಕಿ ಹಿರಿಯ ಪೊಲೀಸ್ ಅಧಿಕಾರಿಗಳನ್ನು ಅಮಾನತು ಮಾಡಿರುವುದು ಅನ್ಯಾಯ. ನಗರ ಪೊಲೀಸ್ ಕಮಿಷನರ್ ಅವರು ಸಮಾರಂಭಕ್ಕೆ ಅನುಮತಿ ನಿರಾಕರಿಸಿರುವುದನ್ನು ಲಿಖಿತವಾಗಿ ನೀಡಿಲ್ಲ ಎಂದು ನೀಡಿರುವ ಕಾರಣ ಸರಿಯಲ್ಲ. ಹಾಗಿದ್ದರೆ ಸಮಾರಂಭಕ್ಕೆ ಅನುಮತಿ ಕೊಟ್ಟಿರುವ ದಾಖಲೆ ಎಲ್ಲಿದೆ? ಆರ್‌ಸಿಬಿ ಆಡಳಿತ ಮಂಡಳಿ ತಪ್ಪು ಮಾಡಿದೆ. ಆದರೆ ಪೊಲೀಸರನ್ನು ಹರಕೆಯ ಕುರಿ ಮಾಡಲಾಗಿದೆ. ದೊಡ್ಡ ಸಮಾರಂಭ ಆಯೋಜಿಸಲು ಸಾಕಷ್ಟು ಸಮಯ, ಹೆಚ್ಚಿನ ಸಿಬ್ಬಂದಿ ಅಗತ್ಯ. ವಿಧಾನಸೌಧ ಮತ್ತು ಚಿನ್ನಸ್ವಾಮಿ ಕ್ರೀಡಾಂಗಣಕ್ಕೆ ಜನರು ಸಾಗರೋಪಾದಿಯಲ್ಲಿ ಬಂದಿದ್ದರು. ಜನಸಂಖ್ಯೆಗೆ ತಕ್ಕಂತೆ ಬಂದೋಬಸ್ತ್‌ಗೆ ಅಗತ್ಯ ಸಿಬ್ಬಂದಿ ಇರಲಿಲ್ಲ. ಶನಿವಾರ ಅಥವಾ ಭಾನುವಾರ ಸಮಾರಂಭ ಮಾಡಿದ್ದರೆ ಸಮಸ್ಯೆ ಆಗುತ್ತಿರಲಿಲ್ಲ.

ಎಸ್.ಟಿ. ರಮೇಶ್, ರಾಜ್ಯ ನಿವೃತ್ತ ಪೊಲೀಸ್ ಮಹಾನಿರ್ದೇಶಕ



ವಿಧಾನಸೌಧದ ಎದುರು ಜೂನ್ 4ರಂದು ನಡೆದ ಕಾರ್ಯಕ್ರಮದಲ್ಲಿ ಸಿದ್ದರಾಮಯ್ಯ, ಥಾವರಚಂದ್ ಗೆಹಲೋತ್ ಹಾಗೂ ಡಿ.ಕೆ.ಶಿವಕುಮಾರ್ ಅವರು ವಿರಾಟ್ ಕೊಹ್ಲಿ ಅವರನ್ನು ಸನ್ಮಾನಿಸಿದ್ದರು

ಜೂನ್ 3 ರಂದೇ ಪತ್ರ ಬರೆದಿದ್ದ ಕೆಎಸ್‌ಸಿಎ

ಬೆಂಗಳೂರು: ಆರ್‌ಸಿಬಿ ತಂಡ ಐಪಿಎಲ್ ಟ್ರೋಫಿ ಗೆದ್ದರೆ ವಿಧಾನಸೌಧದ ಭವ್ಯ ಮೆಟ್ಟಿಲುಗಳ ಮೇಲೆ ಸನ್ಮಾನ ಕಾರ್ಯಕ್ರಮ ಆಯೋಜಿಸಲು ಅನುಮತಿ ನೀಡಬೇಕು ಎಂದು ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆಯ ಕಾರ್ಯದರ್ಶಿಗೆ ಜೂನ್ 3ರಂದೇ ಕರ್ನಾಟಕ ರಾಜ್ಯ ಕ್ರಿಕೆಟ್ ಅಸೋಷಿಯೇಷನ್ (ಕೆಎಸ್‌ಸಿಎ) ಪತ್ರ ಬರೆದಿತ್ತು.

ಕೆಎಸ್‌ಸಿಎ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಶುಭೇಂದು ಘೋಷ್ ಅವರು ಈ ಪತ್ರ ಬರೆದಿದ್ದರು.

ಪತ್ರದಲ್ಲಿ ಏನಿತ್ತು?: 'ಟಾಟಾ ಐಪಿಎಲ್ –2025 ಅಂತಿಮ ಪಂದ್ಯದಲ್ಲಿ ಒಂದೊಮ್ಮೆ ಆರ್‌ಸಿಬಿ ತಂಡ ಟ್ರೋಫಿಯನ್ನು ಗೆದ್ದರೆ ವಿಧಾನಸೌಧದ ಭವ್ಯ ಮೆಟ್ಟಿಲುಗಳ ಮೇಲೆ ಅಭಿನಂದನೆ ಸಮಾರಂಭವನ್ನು ಆಯೋಜಿಸಲು ಡಿಎನ್‌ಎ ಎಂಟರ್‌ಟೈನ್ಮೆಂಟ್ ನೆಟ್‌ವರ್ಕ್ ಪ್ರೈವೇಟ್ ಸಂಸ್ಥೆ ಯೋಜನೆ ಹಾಕಿಕೊಂಡಿದೆ. ಆರ್‌ಸಿಬಿ ಆಟಗಾರರನ್ನು ಮುಖ್ಯಮಂತ್ರಿ ಮತ್ತು ಉಪ ಮುಖ್ಯಮಂತ್ರಿ ಸತ್ಕರಿಸಲಿದ್ದಾರೆ. ಕಾರ್ಯಕ್ರಮ ಆಯೋಜನೆಗೆ ಅಗತ್ಯವಾದ ಸಿದ್ಧತೆಗಳನ್ನು ಮಾಡಿಕೊಳ್ಳಲು ಡಿಎನ್‌ಎ ಸಂಸ್ಥೆಗೆ ಅನುಮತಿ ನೀಡಬೇಕೆಂದು ಕೆಎಸ್‌ಸಿಎ ತಮ್ಮಲ್ಲಿ ಮನವಿ ಮಾಡುತ್ತಿದೆ' ಎಂದು ಈ ಪತ್ರದಲ್ಲಿದೆ.

ಬೆಟ್ಟಿಂಗ್ ಆಕರ್ಷಣೆಯೋ, ವ್ಯಸನವೋ?

● ಗಿರೀಶ ದೊಡ್ಡಮನಿ


ಬೆಂಗಳೂರು: ಇಂಡಿಯನ್ ಪ್ರೀಮಿಯರ್ ಲೀಗ್ ಕ್ರಿಕೆಟ್ ಪಂದ್ಯಗಳಿಗೆ ಅಪಾರ ಕ್ರೇಜ್ ಹೆಚ್ಚಲು ಕೆಲವು ಕಾಣದ ಕೈಗಳ ಕೈವಾಡವೂ ಇರುವುದನ್ನು ಅಲ್ಲಗಳೆಯಲಾಗದು. ಅದರಲ್ಲಿ ಪ್ರಮುಖವಾಗಿ ಅಕ್ರಮ ಬೆಟ್ಟಿಂಗ್ ಜಾಲದ್ದು ಎಂಬುದು ಗುಟ್ಟೇನಲ್ಲ. ಪೊಲೀಸ್ ಇಲಾಖೆಯಲ್ಲಿ ದಾಖಲಾಗಿರುವ ಹಲವಾರು ಪ್ರಕರಣಗಳೇ ಇದಕ್ಕೆ ಸಾಕ್ಷಿ.

ಪ್ರತಿವರ್ಷವೂ ಈ ಜಾಲವನ್ನು ಮಟ್ಟ ಹಾಕಲು ಮಾಡುವ ಪ್ರಯತ್ನಗಳು ಪೂರ್ಣಫಲ ಕೊಡುತ್ತಿಲ್ಲ. ವರ್ಷದಿಂದ ವರ್ಷಕ್ಕೆ ಅಕ್ರಮ ಬೆಟ್ಟಿಂಗ್‌ನಲ್ಲಿ ಹೂಡುವ ಹಣದ ಪ್ರಮಾಣವೂ ಗಣನೀಯವಾಗಿ ಏರುತ್ತಿದೆ. ಇತ್ತೀಚೆಗೆ ಡಿಜಿಟಲ್ ಇಂಡಿಯಾ ಫೌಂಡೇಷನ್ ನಡೆಸಿದ್ದ ಸಮೀಕ್ಷೆಯ ಪ್ರಕಾರ, ಐಪಿಎಲ್ ನಡೆಯುವ ಎರಡು ಅಥವಾ ಎರಡೂವರೆ ತಿಂಗಳಲ್ಲಿ ಬೆಟ್ಟಿಂಗ್ ತಾರಕಕ್ಕೇರುತ್ತದೆ. ಅಂದಾಜು ₹7 ಲಕ್ಷ ಕೋಟಿ ಹಣ ತೊಡಗಿರುತ್ತದೆ. ಈ ವರದಿಯನ್ನು ಈಚೆಗೆ ಸಿಎನ್‌ಬಿಸಿ ಟಿವಿ18 ವೆಬ್‌ಸೈಟ್ ಪ್ರಕಟಿಸಿತ್ತು. ಸ್ಮಾರ್ಟ್‌ಫೋನ್ ಕ್ರಾಂತಿಯಿಂದಾಗಿ ಇವತ್ತು ಹಳ್ಳಿಯಲ್ಲಿಯೂ ಬೆಟ್ಟಿಂಗ್ ಜಾಲ ಬೆಳೆದಿದೆ.

ಇವತ್ತು ಬೆಟ್ಟಿಂಗ್ ಕೇವಲ ಪಂದ್ಯದ ಸೋಲು ಅಥವಾ ಗೆಲುವಿಗಾಗಿಯಷ್ಟೇ ನಡೆಯುವುದಿಲ್ಲ. ಟಾಸ್, ಪ್ಲೇಯಿಂಗ್ ಇಲೆವನ್, ಇಂಪ್ಯಾಕ್ಟ್ ಪ್ಲೇಯರ್ ಆಯ್ಕೆ, ವಿಕೆಟ್ ಪತನ, ಬಾಲ್ ಟು ಬಾಲ್, ನೋಬಾಲ್, ಕ್ಯಾಚ್ ಡ್ರಾಪ್, ಬೌಂಡರಿ, ಸಿಕ್ಸರ್ ಇತ್ಯಾದಿಗಳಿಗೆ ಬೆಟ್ಟಿಂಗ್ ಕಟ್ಟುತ್ತಾರೆ. ಅದರಲ್ಲೂ ಇನಿಂಗ್ಸ್‌ನ ಅಥವಾ ಪಂದ್ಯದ ಕೊನೆಯ ಓವರ್‌ಗಳಲ್ಲಿ ಬೆಟ್ಟಿಂಗ್ ಪ್ರಮಾಣ ತಾರಕಕ್ಕೇರಿರುತ್ತದೆ. ಇದಲ್ಲದೇ ಯಾವ ಬ್ಯಾಟರ್ ಎಷ್ಟು ರನ್ ಗಳಿಸಬಹುದು ಅಥವಾ ಬೌಲರ್ ವಿಕೆಟ್ ಪಡೆಯಬಹುದು ಎಂಬ ಊಹೆಗಳ ಸುತ್ತಲೂ ಬಾಜಿ ನಡೆಯುತ್ತದೆ. ಅಷ್ಟೇ ಅಲ್ಲ. ಕಳೆದ 2–3 ವರ್ಷಗಳಿಂದ ಡಾಟ್‌ಬಾಲ್‌ಗಳ ಮೇಲೂ ಹಣ ಹೂಡುತ್ತಾರಂತೆ!

ಇದಕ್ಕೆಲ್ಲ ಮೂಲ ಕಾರಣ ಪಂದ್ಯಗಳ ನೇರಪ್ರಸಾರದಲ್ಲಿ ಬಾಜಿಕುಳಗಳು ಕಂಡುಕೊಂಡಿರುವ ಒಂದು ಸೂಕ್ಷ್ಮ ಸಂಗತಿ. ಅದೇಂದರೆ ಮೈದಾನದಲ್ಲಿ ಪ್ರಯೋಗವಾಗುವ ಪ್ರತಿಯೊಂದು ಎಸೆತವು ಏಳು ಸೆಕೆಂಡುಗಳ ನಂತರ ಟಿ.ವಿ. ಪರದೆಯ ಮೇಲೆ ಮೂಡುತ್ತದೆ. ಇಷ್ಟು ಸಣ್ಣ ಅಂತರವೇ ಬೆಟ್ಟಿಂಗ್ ಲೋಕಕ್ಕೆ ಬಂಡವಾಳ.ಕ್ರೀಡಾಂಗಣದೊಳಗೇ ಪ್ರೇಕ್ಷಕರ ನಡುವೆ ಇರುವ ಮಾಫಿಯಾ ಏಜೆಂಟ್‌ಗಳು, ಜಾಮರ್ ಇದ್ದರೂ ಕೆಲಸ ಮಾಡುವ ಅತ್ಯಾಧುನಿಕ ತ್ರೀಡಿ ತಂತ್ರಾಂಶದ ಫೋನ್‌ಗಳ ಮುಖಾಂತರ ತಮ್ಮ ಧಣಿಗಳಿಗೆ ಸಂದೇಶ ಮುಟ್ಟಿಸುತ್ತಾರೆ. ಅಲ್ಲಿಯವರು ಸ್ಪಾಟ್ ಬೆಟ್ಟಿಂಗ್ ಮಾಡುತ್ತಾರೆ. ಈಗ ತಂತ್ರಜ್ಞಾನ ಮುಂದುವರಿದಿರುವುದರಿಂದ ತಮಗೆ ಬೇಕಾದ ಹಾಗೆ ಆ್ಯಪ್‌ಗಳನ್ನು ಮಾಡಿಸಿಕೊಳ್ಳುತ್ತಾರೆ.

ಕೆಲವು ವರ್ಷಗಳ ಹಿಂದೆ ಇಂತಹದೇ ಆ್ಯಪ್‌ನಲ್ಲಿ ನಡೆಯುತ್ತಿದ್ದ ದಂಧೆಯನ್ನು ಬೆಂಗಳೂರು ಪೊಲೀಸರು ಪತ್ತೆ ಹಚ್ಚಿದ್ದರು. ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ನಡೆಯುತ್ತಿದ್ದ ಪಂದ್ಯವೊಂದರ ವೇಳೆ ನಾಲ್ವರನ್ನು ಬಂಧಿಸಲಾಗಿತ್ತು.



ಬೆಟ್ಟಿಂಗ್‌ನಲ್ಲಿ ಇನ್ನೊಂದು ಬಗೆ ಇದೆ. ಅದು ಪಂದ್ಯದ ಫಲಿತಾಂಶದ ಮೇಲೆ ಕಟ್ಟುವುದು. ಪಂದ್ಯದಲ್ಲಿ ಕಠಿಣ ಪೈಪೋಟಿ ಶುರುವಾದಂತೆ, ರೋಚಕ ಫಲಿತಾಂಶ ಹೊರಹೊಮ್ಮುವಂತಹ ಪಂದ್ಯಗಳಲ್ಲಿ ಬಾಜಿ ಕಟ್ಟಿದವರ ಮನಸ್ಸೂ ಅತ್ತಿತ್ತ ಹೊಯ್ದಾಡುತ್ತಾ, ಹೂಡುವ ದುಡ್ಡು ಹೆಚ್ಚುತ್ತದೆ. ಇದರಲ್ಲಿ ಬುಕ್ಕಿಗಳು ಯಥೇಚ್ಛ ಲಾಭ ಗಳಿಸುತ್ತಾರೆ.

ಮುಂಬೈ, ದೆಹಲಿ ಹರಿಯಾಣ, ರಾಜಸ್ಥಾನ ಮತ್ತಿತರ ರಾಜ್ಯಗಳಿಂದ, ಮಾಲ್ಡೀವ್ಸ್, ಶ್ರೀಲಂಕಾ ಮತ್ತಿತರ ದೇಶಗಳಿಂದ ಬಾಜಿಯನ್ನು ನಿಯಂತ್ರಿಸುತ್ತಾರೆ. ಪ್ರತಿ ಊರಿನಲ್ಲಿಯೂ ಇವರಿಗೆ ಏಜೆಂಟರು ಇದ್ದಾರೆ. ಇಲ್ಲವೇ ಆನ್‌ಲೈನ್ ಆ್ಯಪ್‌ಗಳ ಮೂಲಕ ವ್ಯವಹಾರ ಕುದುರಿಸುತ್ತಾರೆ. ಹಣ ವಸೂಲಿ ಮಾಡಲು ಕಲೆಕ್ಷನ್ ಏಜೆಂಟರೂ ಇರುತ್ತಾರೆ.

ಆನ್‌ಲೈನ್ ಗೇಮಿಂಗ್ ಆ್ಯಪ್‌ಗಳು ಈಗ ಅಪಾರ ಸಂಖ್ಯೆಯಲ್ಲಿ ಲಭ್ಯ ಇವೆ. ಕೋವಿಡ್ ಕಾಲಘಟ್ಟದಲ್ಲಿ ಮಕ್ಕಳಿಗೆ ಆನ್‌ಲೈನ್ ಮೂಲಕವೇ ಶಾಲೆ ತರಗತಿಗಳು ನಡೆದವು. ಇದರಿಂದಾಗಿ ಮೊಬೈಲ್ ಮತ್ತು ಇಂಟರ್‌ನೆಟ್ ಬಳಕೆ ಹೆಚ್ಚಾಯಿತು. ಅದರೊಂದಿಗೆ ಗೇಮಿಂಗ್ ಆ್ಯಪ್‌ಗಳ ಭರಾಟೆಯೂ ಹೆಚ್ಚಾಯಿತು.

ಕಳೆದ ಮೂರ್ನಾಲ್ಕು ವರ್ಷಗಳಲ್ಲಿ ಕ್ರಿಕೆಟ್‌ಗೆ ಸಂಬಂಧಿತ ಫ್ಯಾಂಟಸಿ ಆ್ಯಪ್‌ಗಳೇ ಹೆಚ್ಚಾಗಿವೆ. ಅಲ್ಲೆಲ್ಲೋ ಪಂದ್ಯ ನಡೆಯುತ್ತಿದ್ದರೆ, ಆ ತಂಡಗಳ ಹನ್ನೊಂದರ ಬಳಗವನ್ನು ಇಲ್ಲಿ ಕುಳಿತವರು ತಮ್ಮ ಮೊಬೈಲ್‌ಗಳಲ್ಲಿ ರಚಿಸಿಕೊಳ್ಳುತ್ತಾರೆ. ಇವರ ಫ್ಯಾಂಟಸಿ ತಂಡದಲ್ಲಿರುವ ಆಟಗಾರರು ಕ್ರೀಡಾಂಗಣದಲ್ಲಿ ನೀಡುವ ಪ್ರದರ್ಶನದ ಆಧಾರದಲ್ಲಿ ಪಾಯಿಂಟ್ಸ್ ಅಥವಾ ಹಣ ಗಳಿಕೆಯಾಗುತ್ತದೆ. ಇಲ್ಲಿ 30–40 ರೂಪಾಯಿ ಕಟ್ಟಿ ಆಡಲು ಆರಂಭಿಸಬಹುದು. ಆದರೆ ಇದು ದಿನಗಳೆದಂತೆ ಚಟವಾಗಿಬಿಡುವ ಅಪಾಯವೂ ಇದೆ.

ಬಿಹಾರದಲ್ಲೂ ಮ್ಯಾಚ್ ಫಿಕ್ಸಿಂಗ್: ರಾಹುಲ್

ಪ್ರಜಾವಾಣಿ ವಾರ್ತೆ/ಪಿಟಿಐ

ನವದೆಹಲಿ/ನಾಗ್ಪುರ: 'ಮಹಾರಾಷ್ಟ್ರ ಚುನಾವಣೆ ಸಂದರ್ಭದಲ್ಲಿ ನಡೆದ ಮ್ಯಾಚ್ ಫಿಕ್ಸಿಂಗ್ ರೀತಿಯಲ್ಲೇ ಬಿಹಾರದಲ್ಲಿಯೂ ನಡೆಯಲಿದೆ. ಬಿಜೆಪಿ ತಾನು ಸೋಲುವ ಎಲ್ಲ ಕಡೆಗಳಲ್ಲಿಯೂ ಮುಂದೆ ಇದೇ ರೀತಿ ಮ್ಯಾಚ್ ಫಿಕ್ಸಿಂಗ್ ಮಾಡಿಕೊಳ್ಳುತ್ತದೆ' ಎಂದು ಲೋಕಸಭೆ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ಶನಿವಾರ ಆರೋಪಿಸಿದರು.

ಮಹಾರಾಷ್ಟ್ರದಲ್ಲಿ ನಡೆದ ವಿಧಾನಸಭಾ ಚುನಾವಣಾ ಪ್ರಕ್ರಿಯೆಯ ಕುರಿತು ಅನೇಕ ಆಕ್ಷೇಪಗಳನ್ನು ವ್ಯಕ್ತಪಡಿಸಿ ನಾನಾ ಪತ್ರಿಕೆಗಳಿಗೆ ರಾಹುಲ್ ಗಾಂಧಿ ಅವರು ಸುದೀರ್ಘ ಲೇಖನ ಬರೆದಿದ್ದಾರೆ.

ಪತ್ರಿಕೆಯೊಂದರಲ್ಲಿ ಪ್ರಕಟವಾದ ಈ ಲೇಖನವನ್ನು ಜಾಲತಾಣಗಳಲ್ಲಿ ಹಂಚಿಕೊಂಡಿರುವ ಅವರು ಮುಂಬರುವ ಬಿಹಾರ ಚುನಾವಣೆಯಲ್ಲಿಯೂ ಬಿಜೆಪಿ ಮ್ಯಾಚ್ ಫಿಕ್ಸಿಂಗ್ ಮಾಡಿಕೊಳ್ಳಲಿದೆ ಎಂದು ಹೇಳಿ ಪೋಸ್ಟ್ ಹಂಚಿಕೊಂಡಿದ್ದಾರೆ. ರಾಹುಲ್ ಅವರ ಲೇಖನ ಮತ್ತು ಅವರ ಪೋಸ್ಟ್‌ಗೆ ಬಿಜೆಪಿ ನಾಯಕರು ತೀವ್ರ ವಿರೋಧ ವ್ಯಕ್ತಪಡಿಸಿದ್ದಾರೆ.

'ನಾಚಿಕೆಗೆಟ್ಟು ಸುಳ್ಳು ಹೇಳುತ್ತಾರೆ'



ರಾಹುಲ್ ಗಾಂಧಿ ಅವರು ವಿವಿಧ ಪತ್ರಿಕಗಳಿಗೆ ಬರೆದಿರುವ ಲೇಖನವು ಸುಳ್ಳು ಸಂಕಥನಗಳನ್ನು ಹುಟ್ಟುಹಾಕುತ್ತಿದೆ. ಸಾಲು ಸಾಲು ಚುನಾವಣೆಗಳನ್ನು ಸೋತಿರುವ ಅವರ ದುಃಖ ಮತ್ತು ಹತಾಶೆಯನ್ನು ಈ ಬರಹ ತೋರಿಸುತ್ತದೆ. ಅವರು ಹೇಗೆ ಸುಳ್ಳು ಹೇಳುತ್ತಾರೆ ಎಂದು ನೋಡೋಣ:

ಮೊದಲ ಹಂತ: ರಾಹುಲ್ ಅವರ ಅವಿವೇಕದಿಂದಲೇ ಕಾಂಗ್ರೆಸ್ ಪಕ್ಷವು ಚುನಾವಣೆಗಳಲ್ಲಿ ಸಾಲು ಸಾಲು ಸೋಲು ಕಾಣುತ್ತಿದೆ
ಎರಡನೇ ಹಂತ: ಆತ್ಮಾವಲೋಕನ ಮಾಡಿಕೊಳ್ಳುವ ಬದಲು ಅವರು ವಿಚಿತ್ರವಾದ ಪಿತೂರಿಗಳನ್ನು ಮಾಡುತ್ತಾರೆ ಮತ್ತು ಚುನಾವಣೆಯಲ್ಲಿ ಮೋಸ ಆಗಿದೆ ಎಂದು ಅಳುತ್ತಾರೆ
ಮೂರನೇ ಹಂತ: ಎಲ್ಲ ಸತ್ಯಾಂಶವನ್ನು ಮತ್ತು ದತ್ತಾಂಶವನ್ನು ಅವರು ನಿರ್ಲಕ್ಷಿಸುತ್ತಾರೆ
ನಾಲ್ಕನೇ ಹಂತ: ಯಾವುದೇ ಸಾಕ್ಷ್ಯಗಳಿಲ್ಲದೆ ಸಂಸ್ಥೆಗಳನ್ನು ಅವಮಾನಿಸುತ್ತಾರೆ
ಐದನೇ ಹಂತ: ಸತ್ಯಾಂಶಕ್ಕಿಂತ ಪತ್ರಿಕೆಗಳಲ್ಲಿ ತಲೆಬರಹ ಬರಲಿ ಎಂದು ಆಶಿಸುತ್ತಾರೆ

ಅವರು ಹೇಳುವ ಸುಳ್ಳುಗಳನ್ನು ಪದೇ ಪದೇ ಬಯಲಿಗೆಳೆಯುತ್ತಿದ್ದರೂ ನಾಚಿಕೆಗೆಟ್ಟು ಅವರು ಸುಳ್ಳುಗಳನ್ನು ಹೇಳುತ್ತಲೇ ಇರುತ್ತಾರೆ. ಬಿಹಾರದಲ್ಲಿ ಅವರು ಸೋಲುವುದು ಖಚಿತ. ಅದಕ್ಕಾಗಿಯೇ ಹೀಗೆ ಹೇಳುತ್ತಿದ್ದಾರೆ. ಪ್ರಜಾಪ್ರಭುತ್ವಕ್ಕೆ ನಾಟಕ ಬೇಡ. ಅದಕ್ಕೆ ಸತ್ಯ ಬೇಕು

ಜೆ.ಪಿ. ನಡ್ಡಾ, ಬಿಜೆಪಿ ಅಧ್ಯಕ್ಷ

'ಮಹಿಳೆಯರನ್ನು ಅವಮಾನಿಸಿದ್ದಾರೆ'

ಬಿಹಾರದಲ್ಲಿ ಕಾಂಗ್ರೆಸ್ ಸೋಲಲಿದೆ ಎಂಬುದನ್ನು ರಾಹುಲ್ ಒಪ್ಪಿಕೊಂಡಿದ್ದಾರೆ. ಕಾಂಗ್ರೆಸ್ ಪಕ್ಷವು ಎಂದಿಗೂ ಗೆಲುವು ಸಾಧಿಸುವುದಿಲ್ಲ. ಅವರು ಮಹಾರಾಷ್ಟ್ರದ ಮತದಾರರನ್ನು ಮತ್ತು ಪ್ರಮುಖವಾಗಿ ಮಹಿಳೆಯರನ್ನು ಅವಮಾನಿಸಿದ್ದಾರೆ

ದೇವೇಂದ್ರ ಫಡಣವೀಸ್, ಮಹಾರಾಷ್ಟ್ರ ಮುಖ್ಯಮಂತ್ರಿ

'ಸೋಲಿನ ಕರಿ ನೆರಳಿನಿಂದ ಹೊರಬರಲಿ'

2009 ಮತದಾರರ ಪಟ್ಟಿಯನ್ನು ರಾಹುಲ್ ಅಧ್ಯಯನ ಮಾಡಬೇಕು. ಆಗಿನ ಲೋಕಸಭೆ ಚುನಾವಣೆ ಹೊತ್ತಿಗೆ 7.29 ಕೋಟಿ ಮತದಾರರು ಪಟ್ಟಿಗೆ ಸೇರ್ಪಡೆಗೊಂಡಿದ್ದರು. ವಿಧಾನಸಭೆ ಚುನಾವಣೆ ಹೊತ್ತಿಗೆ ಈ ಸಂಖ್ಯೆಯು 7.59 ಕೋಟಿಯಾಯಿತು. ಆಗ ಕೇಂದ್ರ ಮತ್ತು ರಾಜ್ಯದಲ್ಲಿ ಅವರದ್ದೇ ಸರ್ಕಾರ ಅಧಿಕಾರದಲ್ಲಿತ್ತು. 30 ಲಕ್ಷ ಮತದಾರರು ಹೇಗೆ ಏರಿಕೆಯಾದರು? ಆ ವರ್ಷವೂ ಚುನಾವಣಾ ಆಯೋಗವು ಮನೆ ಮನೆಗೆ ತೆರಳಿ ಮತದಾರರನ್ನು ನೋಂದಾಯಿಸಿಕೊಂಡಿತ್ತು. ಈ ಬಾರಿಯೂ ಆಯೋಗ ಅದನ್ನೇ ಮಾಡಿದೆ. ಸೋಲಿನ ಕರಿನೆರಳಿನಿಂದ ರಾಹುಲ್ ಅವರು ಹೊರಬರದ ಹೊರತೂ ಪಕ್ಷ ಬೆಳವಣಿಗೆ ಕಾಣುವುದಿಲ್ಲ

ಚಂದ್ರಶೇಖರ್ ಬವನ್‌ಕುಲೆ, ಮಹಾರಾಷ್ಟ್ರ ಬಿಜೆಪಿ ಅಧ್ಯಕ್ಷ

'ಅಸಂಬದ್ಧ ಆರೋಪ'

ರಾಹುಲ್ ಗಾಂಧಿ ಅವರ ಲೇಖನದ ಕುರಿತು ಶನಿವಾರ ಪ್ರತಿಕ್ರಿಯಿಸಿರುವ ಚುನಾವಣಾ ಆಯೋಗವು, 'ತಮ್ಮ ಪರವಾಗಿ ಜನರು ತೀರ್ಪು ನೀಡಿಲ್ಲ ಎನ್ನುವ ಕಾರಣಕ್ಕೆ ಆಯೋಗದ ಮೇಲೆ 'ಆಧಾರರಹಿತ' ಆರೋಪ ಮಾಡುವುದು ಅಸಂಬದ್ಧ' ಎಂದಿದೆ.

'ಯಾರೇ ಸುಳ್ಳು ಸುದ್ದಿ ಹರಡಿದರೂ ಅದು ಕಾನೂನಿಗೆ ತೋರುವ ಅಗೌರವ ಮಾತ್ರವಲ್ಲ, ಅವರ ಪಕ್ಷವೇ ನೇಮಕ ಮಾಡಿರುವ ಸಾವಿರಾರು ಪ್ರತಿನಿಧಿಗಳಿಗೆ ಮಾಡುವ ಅವಮಾನ. ವಾಸ್ತವಾಂಶಗಳ ಕುರಿತು 2024ರ ಡಿಸೆಂಬರ್‌ನಲ್ಲಿಯೇ ಕಾಂಗ್ರೆಸ್‌ಗೆ ಪತ್ರ ಬರೆದಿದ್ದೇವೆ. ಆದರೆ, ನಾವು ನೀಡಿದ ಸತ್ಯಾಂಶಗಳನ್ನು ನಿರ್ಲಕ್ಷಿಸಿ ಮತ್ತೊಮ್ಮೆ ಅದೇ ಪ್ರಶ್ನೆಗಳನ್ನು ಎತ್ತುತ್ತಿದ್ದಾರೆ' ಎಂದು ಅಧಿಕಾರಿಗಳು ಹೇಳಿದರು.

ಆಯೋಗ ಹೇಳಿದ್ದು...

- **76 ಲಕ್ಷ ಹೆಚ್ಚುವರಿ ಮತದಾರರು ಎಂಬ ಆರೋಪ:** ಮತದಾನದ ದಿನ ಬೆಳಿಗ್ಗೆ 7 ಗಂಟೆಯಿಂದ ಸಂಜೆ 6ರವರೆಗೆ 6.4 ಕೋಟಿ ಜನರು ತಮ್ಮ ಮತ ಚಲಾಯಿಸಿದ್ದಾರೆ. ಪ್ರತೀ ಗಂಟೆಗೆ ಸುಮಾರು 58 ಲಕ್ಷ ಮತದಾರರು ಮತದಾನ ಮಾಡಿದ್ದಾರೆ. ಇದೇ ಲೆಕ್ಕಾಚಾರದಲ್ಲಿ, 1.16 ಕೋಟಿ ಮತದಾರರು ಮತದಾನದ ಕೊನೇ ಎರಡು ತಾಸಿನಲ್ಲಿ ಮತಚಲಾಯಿಸಿರಬಹುದು. ಆದ್ದರಿಂದ ಎರಡು ಗಂಟೆಯಲ್ಲಿ 65 ಲಕ್ಷ ಮತದಾರರು ಮತದಾನ ಮಾಡುವುದು ಆ ದಿನದ ಸರಾಸರಿಗಿಂತ ಕಡಿಮೆಯೇ ಆದಂತಾಗಿದೆ
- ಎಲ್ಲ ಮತಗಟ್ಟೆಯಲ್ಲಿಯೂ ಮತಗಟ್ಟೆ ಏಜೆಂಟರ ಮತ್ತು ಕಾಂಗ್ರೆಸ್ ಅಭ್ಯರ್ಥಿಗಳ ಅಥವಾ ಅವರ ಏಜೆಂಟರ ಸಮುಖದಲ್ಲಿಯೇ ಮತದಾನ ನಡೆದಿದೆ. ಆಗಲೇ ಯಾಕೆ ಆ ಪಕ್ಷದ ಏಜೆಂಟರು ಪ್ರಶ್ನಿಸಲಿಲ್ಲ?
- **ಮಹಾರಾಷ್ಟ್ರದಲ್ಲಿ ದೊಡ್ಡ ಮಟ್ಟದಲ್ಲಿ ಮತದಾರರ ಏರಿಕೆ ಆರೋಪ:** 2019ರ ಚುನಾವಣೆ ಮತ್ತು 2024ರ ಚುನಾವಣೆ ಮಧ್ಯೆ ಮಹಾರಾಷ್ಟ್ರದಲ್ಲಿ ಶೇ 8.14ರಷ್ಟು ಮತದಾರರು ಏರಿಕೆಯಾಗಿದ್ದಾರೆ. ಇದೇ ಅವಧಿಯಲ್ಲಿ ಜಾರ್ಖಂಡ್‌ನಲ್ಲಿ ಶೇ 13.4, ಛತ್ತೀಸಗಢದಲ್ಲಿ ಶೇ 9.93ರಷ್ಟು ಮತದಾರರು ಏರಿಕೆಯಾಗಿದ್ದಾರೆ. 2018ರಿಂದ 2023ರ ಮಧ್ಯೆ, ಮಧ್ಯ ಪ್ರದೇಶದಲ್ಲಿ ಶೇ 7.2, ತೆಲಂಗಾಣದಲ್ಲಿ ಶೇ 16.6ರಷ್ಟು ಮತದಾರರು ಏರಿಕೆಯಾಗಿದ್ದಾರೆ
- ಪಟ್ಟಿ ಸಿದ್ಧಗೊಂಡ ಬಳಿಕ ಪಟ್ಟಿಯಲ್ಲಿನ ಸಮಸ್ಯೆಗಳ ಕುರಿತು 9.77 ಕೋಟಿ ಮತದಾರರ ಪೈಕಿ ಕೇವಲ 89 ಜನರು ಜಿಲ್ಲಾ ಮ್ಯಾಜಿಸ್ಟ್ರೇಟರ್‌ನಲ್ಲಿ ಅರ್ಜಿ ಸಲ್ಲಿಸಿದ್ದರು. ಇವರ ಪೈಕಿ ಒಬ್ಬರು ಮಾತ್ರವೇ ಮುಖ್ಯ ಚುನಾವಣಾ ಮ್ಯಾಜಿಸ್ಟ್ರೇಟರ್ ಮುಂದೆ ಹಾಜರಾದರು. ಕಾಂಗ್ರೆಸ್ ಅಥವಾ ಯಾವುದೇ ಪಕ್ಷವು ಯಾವ ಆಕ್ಷೇಪವನ್ನೂ ಸಲ್ಲಿಸಿಲ್ಲ

ಪ್ರೀತಿಯ ಆಯೋಗ,



ನಿಮ್ಮದು ಸಾಂವಿಧಾನಿಕ ಸಂಸ್ಥೆ. ಅಧಿಕೃತ ಸಹಿ ಇಲ್ಲದ, ಆರೋಪಗಳಿಗೆ ಬೆನ್ನು ತೋರಿಸಿ ಯಾವುದೋ ಮಧ್ಯವರ್ತಿ ಮುಖೇನ ಹೇಳಿಕೆ ಬಿಡುಗಡೆ ಮಾಡುವುದು ಸರಿಯಲ್ಲ. ಗಂಭೀರ ಪ್ರಶ್ನೆಗಳಿಗೆ ಉತ್ತರಿಸುವ ರೀತಿ ಇದಲ್ಲ. ನಿಮ್ಮ ಬಳಿ ಮುಚ್ಚಿಟ್ಟುಕೊಳ್ಳಲು ಏನೂ ಇಲ್ಲ ಎಂದಾದರೆ, ನನ್ನ ಲೇಖನದಲ್ಲಿ ಎತ್ತಿರುವ ಪ್ರಶ್ನೆಗಳಿಗೆ ಸಾಕ್ಷ್ಯಗಳ ಒದಗಿಸುವ ಮೂಲಕ ಉತ್ತರಿಸಿ. ಯಾವೆಲ್ಲಾ ಸಾಕ್ಷ್ಯಗಳು ಬೇಕು:

- ಇತ್ತೀಚೆಗೆ ನಡೆದ ಲೋಕಸಭಾ ಚುನಾವಣೆ ಮತ್ತು ಮಹಾರಾಷ್ಟ್ರ ಒಳಗೊಂಡಂತೆ ಎಲ್ಲ ವಿಧಾನಸಭಾ ಚುನಾವಣೆಗಳ ಮತದಾರರ ಪಟ್ಟಿಯನ್ನು ನೀಡಿ. ಇದು ಡಿಜಿಟಲ್ ಸ್ವರೂಪದಲ್ಲಿ ಇರಬೇಕು. ಜೊತೆಗೆ, ಕಂಪ್ಯೂಟರ್ ಸ್ವಯಂ ಚಾಲಿತವಾಗಿ ಪರಿಶೀಲಿಸಬಹುದಾಗಿ ಸ್ವರೂಪದಲ್ಲಿಯೂ ಇರಲಿ
- ಮಹಾರಾಷ್ಟ್ರದಲ್ಲಿ ಸಂಜೆ 5ರ ಬಳಿಕ ಎಲ್ಲ ಮತಗಟ್ಟೆಗಳಲ್ಲಿ ನಡೆದ ಮತದಾನದ ಸಿಸಿಟಿವಿ ಕ್ಯಾಮೆರಾ ದೃಶ್ಯಾವಳಿಗಳನ್ನು ಬಹಿರಂಗಗೊಳಿಸಿ

ಆರೋಪಗಳಿಗೆ ಬೆನ್ನು ಹಾಕಿ ನೀಡುವ ಉತ್ತರಗಳು ನಿಮ್ಮ ವಿಶ್ವಾಸಾರ್ಹತೆಯನ್ನು ರಕ್ಷಿಸುವುದಿಲ್ಲ. ಸತ್ಯ ಮಾತ್ರವೇ ರಕ್ಷಿಸುತ್ತದೆ

ರಾಹುಲ್ ಗಾಂಧಿ, ಲೋಕಸಭೆ ವಿರೋಧ ಪಕ್ಷದ ನಾಯಕ

ಕೆಲಸದ ಅವಧಿ 1 ಗಂಟೆ ಹೆಚ್ಚಿಸಲು ಆಂಧ್ರ ನಿರ್ಧಾರ

ಅಮರಾವತಿ(ಪಿಟಿಐ): ಹೂಡಿಕೆದಾರರನ್ನು ಆಕರ್ಷಿಸುವ ಉದ್ದೇಶದಿಂದ ದಿನದ ಗರಿಷ್ಠ ಕೆಲಸದ ಅವಧಿಯನ್ನು ಒಂದು ಗಂಟೆಯಷ್ಟು ಹೆಚ್ಚಳ ಮಾಡುವುದಕ್ಕೆ ಆಂಧ್ರಪ್ರದೇಶದ ಟಿಡಿಪಿ ನೇತೃತ್ವದ ಸರ್ಕಾರ ನಿರ್ಧರಿಸಿದೆ.

'ಸದ್ಯ ಕೆಲಸದ ಅವಧಿ ದಿನಕ್ಕೆ 9 ಗಂಟೆ ಇದೆ. ಇದನ್ನು ದಿನಕ್ಕೆ 10 ಗಂಟೆಗೆ ಹೆಚ್ಚಿಸಲಾಗುವುದು. ನೂತನ ವ್ಯವಸ್ಥೆಯನ್ನು ಹೂಡಿಕೆದಾರರು ಮತ್ತು ಕಾರ್ಮಿಕ ಸ್ನೇಹಿಯನ್ನಾಗಿ ಮಾಡುವ ಸಂಬಂಧ ಕಾರ್ಮಿಕ ಕಾಯ್ದೆಗಳಿಗೆ ತಿದ್ದುಪಡಿ ತರಲಾಗುವುದು' ಎಂದು ಮಾಹಿತಿ ಮತ್ತು ಸಾರ್ವಜನಿಕ ಸಂಪರ್ಕ ಸಚಿವ ಕೆ.ಪಾರ್ಥಸಾರಥಿ ಹೇಳಿದ್ದಾರೆ.

'ಇಂತಹ ತಿದ್ದುಪಡಿಗಳಿಂದ, ಹೂಡಿಕೆದಾರರು ರಾಜ್ಯದತ್ತ ಮುಖ ಮಾಡುವರು. ನೂತನ ನಿಯಮಗಳು ಕೂಡ ಕಾರ್ಮಿಕ ಸ್ನೇಹಿಯಾಗರಲಿದ್ದು, ಹೂಡಿಕೆ ಹೆಚ್ಚಳಕ್ಕೆ ಅನುಕೂಲವಾಗಲಿವೆ. ಜಾಗತಿಕ ಮಟ್ಟದ ನಿಯಮಗಳಿಗೆ ಅನುಗುಣವಾಗಿಯೇ ಈ ತಿದ್ದುಪಡಿಗಳನ್ನು ತರಲಾಗುತ್ತಿದೆ' ಎಂದು ಪಾರ್ಥಸಾರಥಿ ಹೇಳಿದ್ದಾರೆ.

ಟೀಕೆ: ರಾಜ್ಯ ಸರ್ಕಾರದ ಉದ್ದೇಶಿತ ನಡೆಯನ್ನು ಸಿಪಿಐ ಟೀಕಿಸಿದೆ.

'ಕೇಂದ್ರ ಮತ್ತು ರಾಜ್ಯದಲ್ಲಿ ಅಧಿಕಾರದಲ್ಲಿರುವ ಎನ್‌ಡಿಎ ಸರ್ಕಾರಗಳು ಕಾರ್ಮಿಕ ವಿರೋಧಿ ನೀತಿ ಅನುಸರಿಸುತ್ತಿವೆ' ಎಂದು ಸಿಪಿಐ ರಾಜ್ಯ ಕಾರ್ಯದರ್ಶಿ ಕೆ.ರಾಮಕೃಷ್ಣ ಟೀಕಿಸಿದ್ದಾರೆ.

'ಕಾರ್ಮಿಕ ಕಾಯ್ದೆಗೆ ತಿದ್ದುಪಡಿ ತರುವುದನ್ನು ವಿರೋಧಿಸಿ ಎಲ್ಲ ಟ್ರೇಡ್ ಯೂನಿಯನ್‌ಗಳು ಜುಲೈ 9ರಂದು ದೇಶದಾದ್ಯಂತ ಪ್ರತಿಭಟನೆ ನಡೆಸಲಿವೆ' ಎಂದು ಹೇಳಿದ್ದಾರೆ.

ಅಧಿಕ ರಕ್ತದೊತ್ತಡ: ಸೋನಿಯಾ ಗಾಂಧಿ ಆರೋಗ್ಯ ತಪಾಸಣೆ

ಶಿಮ್ಲಾ (ಪಿಟಿಐ): ಅಧಿಕ ರಕ್ತದೊತ್ತಡ ಸಮಸ್ಯೆಯಿಂದ ಬಳಲುತ್ತಿದ್ದ ಕಾಂಗ್ರೆಸ್ ನಾಯಕಿ ಸೋನಿಯಾ ಗಾಂಧಿ (78) ಇಲ್ಲಿನ ಇಂದಿರಾ ಗಾಂಧಿ ವೈದ್ಯಕೀಯ ಕಾಲೇಜು ಆಸ್ಪತ್ರೆಯಲ್ಲಿ ಶನಿವಾರ ತಪಾಸಣೆಗೆ ಒಳಗಾದರು.

ಪುತ್ರಿ ಪ್ರಿಯಾಂಕಾ ಗಾಂಧಿ ಅವರೊಂದಿಗೆ ಶಿಮ್ಲಾಗೆ ಖಾಸಗಿ ಭೇಟಿ ನೀಡಿರುವ ಅವರು, ರಕ್ತದೊತ್ತಡ ಸಮಸ್ಯೆ ಕಾಣಿಸಿಕೊಂಡಿದ್ದರಿಂದ ಇಲ್ಲಿನ ಆಸ್ಪತ್ರೆಯಲ್ಲಿ ಕೆಲವು ಪರೀಕ್ಷೆಗಳನ್ನು ಮಾಡಿಸಿಕೊಂಡು ಮನೆಗೆ ಮರಳಿದ್ದಾರೆ. ಅವರ ಆರೋಗ್ಯ ಸ್ಥಿರವಾಗಿದೆ' ಎಂದು ಆಸ್ಪತ್ರೆಯ ವೈದ್ಯಕೀಯ ಅಧೀಕ್ಷಕ ಡಾ. ಅಮನ್ ತಿಳಿಸಿದ್ದಾರೆ.

'ಇದು ವಾಡಿಕೆಯ ತಪಾಸಣೆ. ತಪಾಸಣೆಗೆ ಒಳಗಾಗಿ ಅವರು ಮನೆಗೆ ಮರಳಿದರು' ಎಂದು ಹಿಮಾಚಲ ಪ್ರದೇಶದ ಮುಖ್ಯಮಂತ್ರಿಯ ಮಾಧ್ಯಮ ಸಲಹೆಗಾರ ನರೇಶ್ ಚೌವಾಣ್ ತಿಳಿಸಿದ್ದಾರೆ.

ಶಿಮ್ಲಾ ಹೊರವಲಯದ ಛಾಬ್ರಾದಲ್ಲಿರುವ ಪ್ರಿಯಾಂಕಾ ಅವರ ನಿವಾಸದಲ್ಲಿ ಸೋನಿಯಾ ಗಾಂಧಿ ತಂಗಿದ್ದಾರೆ ಎಂದು ಮೂಲಗಳು ತಿಳಿಸಿವೆ.

ಕೋವಿಡ್-19 ಪಿಡುಗು: 2021ರಲ್ಲಿ ಸತ್ತವರ ಸಂಖ್ಯೆ 1.02 ಕೋಟಿ

'ಸಾವು: 2022ರಲ್ಲಿ ಶೇ 15ರಷ್ಟು ಇಳಿಕೆ'

ನವದೆಹಲಿ(ಪಿಟಿಐ): ದೇಶದಲ್ಲಿ ಕಾಣಿಸಿಕೊಂಡಿದ್ದ ಕೋವಿಡ್-19 ಪಿಡುಗಿನ ವೇಳೆ, 2021ರಲ್ಲಿ 1.02 ಕೋಟಿ ಸಾವುಗಳು ಸಂಭವಿಸಿದ್ದರೆ, 2022ರಲ್ಲಿ ಮೃತಪಟ್ಟವರ ಸಂಖ್ಯೆ 86.5 ಲಕ್ಷ. 2021ಕ್ಕೆ ಹೋಲಿಸಿದಲ್ಲಿ, 2022ರಲ್ಲಿ ಸಂಭವಿಸಿದ ಸಾವುಗಳ ಸಂಖ್ಯೆಯಲ್ಲಿ ಇಳಿಕೆಯಾಗಿದ್ದು, ಈ ಪ್ರಮಾಣ ಶೇ 15ಕ್ಕಿಂತಲೂ ಹೆಚ್ಚು ಎಂದು ಹೊಸ ದತ್ತಾಂಶ ಹೇಳುತ್ತದೆ.

ನಾಗರಿಕ ನೋಂದಣಿ ವ್ಯವಸ್ಥೆ (ಸಿಆರ್‌ಎಸ್)ನಲ್ಲಿನ ಹೊಸ ದತ್ತಾಂಶಗಳನ್ನು ಕ್ರೋಡೀಕರಿಸಿ ರಜಿಸ್ಟ್ರಾರ್ ಜನರಲ್ ಆಫ್ ಇಂಡಿಯಾ ಸಿದ್ಧಪಡಿಸಿರುವ ವರದಿಯಲ್ಲಿ ಈ ಮಾಹಿತಿ ಇದೆ.

2022ರಲ್ಲಿ ಮರಣ ಹೊಂದಿದವರ ಸಂಖ್ಯೆ 86.5 ಲಕ್ಷ. ಅಂದರೆ, 2021ಕ್ಕೆ ಹೋಲಿಸಿದರೆ, ಸತ್ತವರ ಸಂಖ್ಯೆಯಲ್ಲಿನ ಇಳಿಕೆ 15.74 ಲಕ್ಷ ಇರುವುದು ದಾಖಲಾಗಿದೆ. ಹೀಗಾಗಿ, ಮರಣ ಪ್ರಮಾಣವು ಕೋವಿಡ್ ಪಿಡುಗಿಗೂ ಮುಂಚೆ 2020ರಲ್ಲಿ ಇದ್ದ ಪ್ರಮಾಣದಷ್ಟೇ ಇರುವುದು ಕಂಡು ಬರುತ್ತದೆ ಎಂದು ವರದಿಯಲ್ಲಿ ಹೇಳಲಾಗಿದೆ.

ಲೋಕಸಭೆಗೆ ಮಾಹಿತಿ: 2022ರ ಜುಲೈ 26ರ ವರೆಗೆ, ಕೋವಿಡ್‌ನಿಂದಾಗಿ ದೇಶದಲ್ಲಿ 5.26 ಲಕ್ಷ ಜನರು ಮೃತಪಟ್ಟಿದ್ದರು ಎಂದು ಅದೇ ವರ್ಷ ಜುಲೈ 29ರಂದು ಲೋಕಸಭೆಗೆ ಕೇಂದ್ರ ಸರ್ಕಾರ ಮಾಹಿತಿ ನೀಡಿತ್ತು. ಈ ಅವಧಿಯಲ್ಲಿ, ಭಾರತದಲ್ಲಿ ಕೋವಿಡ್-19 ಸಂಬಂಧಿತ ಸಾವುಗಳ ಸಂಖ್ಯೆ 47 ಲಕ್ಷ ಎಂಬುದಾಗಿ ವಿಶ್ವ ಆರೋಗ್ಯ ಸಂಸ್ಥೆ ಹೇಳಿತ್ತು. ಸರ್ಕಾರ ಈ ವರದಿಯನ್ನು ಬಲವಾಗಿ ತಳ್ಳಿ ಹಾಕಿತ್ತು.

ವರದಿಯಲ್ಲಿನ ಪ್ರಮುಖ ಅಂಶಗಳು

- 2018ರಲ್ಲಿ ಸತ್ತವರ ಸಂಖ್ಯೆ 69.5 ಲಕ್ಷ ಇದ್ದರೆ, 2019ರಲ್ಲಿ 76.4 ಲಕ್ಷ, 2020ರಲ್ಲಿ 81.1 ಲಕ್ಷ ಜನರು ಮೃತಪಟ್ಟಿದ್ದಾರೆ. 2021ರಲ್ಲಿ 1.02 ಕೋಟಿ ಜನರು ಮೃತಪಟ್ಟಿದ್ದಾರೆ. ಸಾವುಗಳ ಸಂಖ್ಯೆಯಲ್ಲಿ ಹೆಚ್ಚಳವು ಕೋವಿಡ್-19ನ ಪರಿಣಾಮವನ್ನು ತೋರಿಸುತ್ತದೆ
- ಗುಜರಾತ್, ಮಹಾರಾಷ್ಟ್ರ, ಮಧ್ಯಪ್ರದೇಶ, ಆಂಧ್ರಪ್ರದೇಶ, ತಮಿಳುನಾಡು, ಉತ್ತರ ಪ್ರದೇಶ, ಕರ್ನಾಟಕ, ಪಶ್ಚಿಮ ಬಂಗಾಳ, ಬಿಹಾರ, ಹರಿಯಾಣ 2022ರಲ್ಲಿ ಮರಣ ಪ್ರಮಾಣ ತಗ್ಗುವುದಕ್ಕೆ ಗಮನಾರ್ಹ ಕೊಡುಗೆ ನೀಡಿವೆ
- 2022ರಲ್ಲಿ 2.54 ಜನನಗಳ ಕುರಿತು ನೋಂದಣಿ ಮಾಡಿಸಲಾಗಿದೆ. 2021ರಲ್ಲಿ ನೋಂದಣಿಯಾದ ಜನನಗಳ ಸಂಖ್ಯೆ 2.42 ಕೋಟಿ. ಇದು ಜನನ ಪ್ರಮಾಣದಲ್ಲಿ ಶೇ 5.1ರಷ್ಟು ಹೆಚ್ಚಳ ತೋರುತ್ತದೆ
- ಉತ್ತರ ಪ್ರದೇಶ, ಮಧ್ಯಪ್ರದೇಶ, ಮಹಾರಾಷ್ಟ್ರ, ಜಾರ್ಖಂಡ್, ಕರ್ನಾಟಕ, ಗುಜರಾತ್, ತೆಲಂಗಾಣ, ಛತ್ತೀಸಗಢ ಮತ್ತು ಅಸ್ಸಾಂ ರಾಜ್ಯಗಳು 2022ರಲ್ಲಿ ಜನನ ಪ್ರಮಾಣದಲ್ಲಿನ (ನೋಂದಣಿಯಾದ ಜನನಗಳು) ಹೆಚ್ಚಳಕ್ಕೆ ಗಮನಾರ್ಹ ಕೊಡುಗೆ ನೀಡಿವೆ

'ಜಾಮೀನು ಷರತ್ತುಗಳ ಉಲ್ಲಂಘನೆ ಮುನ್ನೆಚ್ಚರಿಕೆ ಬಂಧನಕ್ಕೆ ಆಧಾರವಾಗದು'

ಪ್ರಜಾವಾಣಿ ವಾರ್ತೆ



ನವದೆಹಲಿ: ಆರೋಪಿಗೆ ಮಂಜೂರಾಗಿರುವ ಜಾಮೀನು ರದ್ದುಗೊಳಿಸುವುದಕ್ಕೆ ಷರತ್ತುಗಳ ಉಲ್ಲಂಘನೆಯು ಆಧಾರವಾಗಬಹುದು. ಆದರೆ, ಮುನ್ನೆಚ್ಚರಿಕೆ ಕ್ರಮವಾಗಿ ಆರೋಪಿಯನ್ನು ಬಂಧಿಸುವುದಕ್ಕೆ ಇದು ಆಧಾರ ಆಗುವುದಿಲ್ಲ ಎಂದು ಸುಪ್ರೀಂ ಕೋರ್ಟ್ ಹೇಳಿದೆ.

ಯಾವುದೇ ಆರೋಪಿಯನ್ನು ಮುನ್ನೆಚ್ಚರಿಕೆ ಕ್ರಮವಾಗಿ ಬಂಧಿಸುವ ಕುರಿತ ಅವಕಾಶವು ಸರ್ಕಾರದ ಕೈಯಲ್ಲಿನ ಅಸಾಧಾರಣ ಅಧಿಕಾರ. ಈ ಅಧಿಕಾರವನ್ನು ಅಪರೂಪದ ಸಂದರ್ಭಗಳಲ್ಲಿ ಮಾತ್ರ ಬಳಸಬೇಕು ಎಂದು ಹೇಳಿದೆ.

ನ್ಯಾಯಮೂರ್ತಿಗಳಾದ ಸಂಜಯ್ ಕರೋಲ್ ಹಾಗೂ ಮನಮೋಹನ್ ಅವರಿದ್ದ ನ್ಯಾಯಪೀಠ, ಈ ಕುರಿತ ಅರ್ಜಿ ವಿಚಾರಣೆ ನಡೆಸಿತು.

ರಾಜೇಶ್ ಅವರನ್ನು, ಕೇರಳ ಸಮಾಜ ವಿರೋಧಿ ಚಟುವಟಿಕೆಗಳ ತಡೆ ಕಾಯ್ದೆ, 2007ರ ಸೆಕ್ಷನ್‌3ರ ಅಡಿ ಮುನ್ನೆಚ್ಚರಿಕೆ ಕ್ರಮವಾಗಿ ಬಂಧಿಸಲಾಗಿತ್ತು. ಈ ಕ್ರಮವನ್ನು ಎತ್ತಿ ಹಿಡಿದು ಕೇರಳ ಹೈಕೋರ್ಟ್ ಕಳೆದ ವರ್ಷ ಸೆಪ್ಟೆಂಬರ್ 4ರಂದು ಆದೇಶಿಸಿತ್ತು. ಹೈಕೋರ್ಟ್‌ನ ಈ ಆದೇಶ ಪ್ರಶ್ನಿಸಿ ರಾಜೇಶ್ ಅವರ ಪತ್ನಿ ಧನ್ಯಾ ಎಂ. ಮೇಲ್ಮನವಿ ಸಲ್ಲಿಸಿದ್ದಾರೆ.

'ಅಪರಾಧ ಕೃತ್ಯಗಳು ಸಂಭವಿಸಬಹುದು ಎಂಬ ನಿರೀಕ್ಷೆಯಿಂದ ಯಾವುದೇ ವ್ಯಕ್ತಿಯನ್ನು ಮುನ್ನೆಚ್ಚರಿಕೆ ಕ್ರಮವಾಗಿ ಬಂಧಿಸಿದಲ್ಲಿ ಅದು ಆತನ ಸ್ವಾತಂತ್ರ್ಯವನ್ನು ಮೊಟಕುಗೊಳಿಸಿದಂತಾಗುವುದು. ಕಾನೂನಿನಲ್ಲಿನ ಈ ಅವಕಾಶವನ್ನು ಸಾಮಾನ್ಯ ಸಂದರ್ಭಗಳಲ್ಲಿ ಬಳಕೆ ಮಾಡಬಾರದು' ಎಂದು ಪೀಠವು, ಜೂನ್ 6ರಂದು ಪ್ರಕಟಿಸಿರುವ 12 ಪುಟಗಳ ತೀರ್ಪಿನಲ್ಲಿ ಹೇಳಿದೆ.



ಕೇದಾರನಾಥಕ್ಕೆ ತೆರಳುತ್ತಿದ್ದ ಹೆಲಿಕಾಪ್ಟರ್ ರುದ್ರಪ್ರಯಾಗ ಹೆದ್ದಾರಿಯಲ್ಲಿ ಶನಿವಾರ ತುರ್ತು ಭೂಸ್ಪರ್ಶ ಮಾಡಿತು – ಪಿಟಿಐ ಚಿತ್ರ

ಹೆಲಿಕಾಪ್ಟರ್ ಭೂಸ್ಪರ್ಶ: 6 ಜನ ಪಾರು

ರುದ್ರಪ್ರಯಾಗ (ಪಿಟಿಐ): ಕೇದಾರನಾಥಕ್ಕೆ ತೆರಳುತ್ತಿದ್ದ ಹೆಲಿಕಾಪ್ಟರ್ ರುದ್ರಪ್ರಯಾಗ ಜಿಲ್ಲೆಯ ಹೆದ್ದಾರಿಯಲ್ಲಿ ಶನಿವಾರ ತುರ್ತು ಭೂಸ್ಪರ್ಶ ಮಾಡಿದೆ.

ಟೇಕ್ ಆಫ್ ವೇಳೆ ತಾಂತ್ರಿಕ ದೋಷ ಕಾಣಿಸಿಕೊಂಡಿದ್ದೇ ಈ ಘಟನೆಗೆ ಕಾರಣ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಹೆಲಿಕಾಪ್ಟರ್‌ನಲ್ಲಿದ್ದ ಪೈಲಟ್, ಐವರು ಯಾತ್ರಾರ್ಥಿಗಳು ಪ್ರಾಣಾಪಾಯದಿಂದ ಪಾರಾಗಿದ್ದಾರೆ. ಗಾಯಗೊಂಡಿದ್ದ ಪೈಲಟ್ ಅವರನ್ನು ಆಸ್ಪತ್ರೆಗೆ ದಾಖಲಿಸಲಾಗಿದೆ. ಟೇಕ್ ಆಫ್ ಆಗುತ್ತಿದ್ದಂತೆಯೇ ನಿಯಂತ್ರಣ ಕಳೆದುಕೊಂಡ ಕಾರಣ ರುದ್ರಪ್ರಯಾಗ ಜಿಲ್ಲೆಯ ಸಿರಸಿ ಬಳಿಯ ಹೆದ್ದಾರಿಯಲ್ಲಿ ಹೆಲಿಕಾಪ್ಟರ್ ಭೂಸ್ಪರ್ಶ ಮಾಡಿದೆ.

ಗುಂಡಣ್ಣ



25 ವರ್ಷಗಳ ಹಿಂದೆ

ಗುರುವಾರ, 8-6-2000

● ಸಿಂಧೂ ನದಿ ಮೂಲಕ ಪಾಕ್‌ಗೆ ಸ್ನೇಹ ಹಸ್ತ

ಲಡಾಖ್ ಜೂನ್ 7 (ಪಿಟಿಐ): ಭಾರತ ತನ್ನ ಗೆಳೆತನದ ಹಸ್ತವನ್ನು ಪಾಕಿಸ್ತಾನಕ್ಕೆ ಯಾವಾಗಲೂ ಚಾಚಿಯೇ ಇರುತ್ತದೆ ಎಂದು ಇಂದು ಇಲ್ಲಿ ಹೇಳಿದ ಪ್ರಧಾನಿ ವಾಜಪೇಯಿ, ಆ ದೇಶದ ಜತೆಗೆ ಶಾಶ್ವತ ಶಾಂತಿ ಮತ್ತು ಗೆಳೆತನ ಸ್ಥಾಪಿಸಲು ಸರಿಯಾದ ಸಮಯಕ್ಕಾಗಿ ಕಾಯಲು ಬಯಸುವುದಾಗಿ ಹೇಳಿದರು. ಸಿಂಧೂ ನದಿಯ ಮೂಲಕ, ಭಾರತ ಸದಾ ಬದ್ಧವಾಗಿರುವ ಸ್ನೇಹ ಸಂಬಂಧದ ಸಂದೇಶವನ್ನು ಕಳುಹಿಸಿ ಕೊಡುತ್ತಿದ್ದೇವೆ. ಈ ನಿರೀಕ್ಷೆ ಇಂದಲ್ಲ ನಾಳೆ ನಿಜವಾಗಿ ಈ ಪ್ರದೇಶದಲ್ಲಿ ಶಾಂತಿ ನೆಲೆಸಬಹುದೆಂಬ ಆಶಯ ನಮ್ಮದು ಎಂದರು.

50 ವರ್ಷಗಳ ಹಿಂದೆ

ಭಾನುವಾರ, 8-6-1975

● ಬಾಂಗ್ಲಾದಲ್ಲಿ ಏಕಪಕ್ಷ ರಾಜಕೀಯ ವ್ಯವಸ್ಥೆ

ಢಾಕಾ, ಜೂ 7– ಬಾಂಗ್ಲಾದೇಶದಲ್ಲಿ ಬಹಳ ಕಾಲದಿಂದ ನಿರೀಕ್ಷಿಸಿದ್ದ ಏಕ ಪಕ್ಷ ರಾಜಕೀಯ ವ್ಯವಸ್ಥೆ ನಿನ್ನೆ ಮಧ್ಯರಾತ್ರಿ ಗೆಜೆಟ್ ಪ್ರಕಟಣೆ ಮೂಲಕ ಅಧಿಕೃತವಾಗಿ ಅಸ್ತಿತ್ವಕ್ಕೆ ಬಂದಿತು. ಏಕೈಕ ರಾಜಕೀಯ ಪಕ್ಷವಾದ ಕೃಷಿಕ್ ಶ್ರಮಿಕ್ ಅವಾಮಿ ಲೀಗ್ ಅದರ ಅಂಗಸಂಸ್ಥೆಗಳು, ವಿವಿಧ ಘಟಕಗಳ ಪ್ರಕಟಣೆಯೊಂದಿಗೆ ಷೇಖ್ ಮುಜೀಬರ್ ರಹಮಾನ್ ಅವರಿಗೆ ಪಕ್ಷದ ಅಧ್ಯಕ್ಷ ಸ್ಥಾನವೇ ಅಲ್ಲದೆ, ಅದರ ಕಾರ್ಯ ನಿರ್ವಾಹಕ ಮತ್ತು ಕೇಂದ್ರ ಸಮಿತಿಯ ಅಧ್ಯಕ್ಷ ಸ್ಥಾನ ದೊರೆತಿರುವುದರ ಜತೆಗೆ ಪಕ್ಷದ ಮೇಲೆ ಬಿಗಿ ಹತೋಟಿಯೂ ದೊರೆತಂತಾಗಿದೆ.

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ, ಕಮ್ಮರಡಿ

ಭಾನುವಾರ ಜೂನ್ 8, 2025

ಶ್ರೀ ವಿಶ್ವಾವಸು ನಾಮ ಸಂವತ್ಸರ ಉತ್ತರಾಯಣ ಗ್ರೀಷ್ಮ ಋತು ತಿಥಿ: ಜ್ಯೇಷ್ಠ ಶುಕ್ಲ ದ್ವಾದಶಿ ಗಂ 7-18 ನಕ್ಷತ್ರ: ಸ್ವಾತಿ ಗಂ.12-42 ಯೋಗ: ಪರಿಘ ಗಂ. 12-18 ಕರಣ: ಬಾಲವ ಗಂ.7-19, ವೃಷಭ ಮಾಸದ 25 ನೇ ದಿನ. ಮಳೆ ನಕ್ಷತ್ರ : ರೋಹಿಣಿ 4ನೇ ಪಾದ.
ರಾಹುಕಾಲ : ಸಾಯಂಕಾಲ 04-30 – 06-00
ಸೂರ್ಯೋದಯ : 06-07 **ಸೂರ್ಯಾಸ್ತ :** 06-52
ಮುಸ್ಲಿಂ ದಿನಾಂಕ : 11 ಜುಲ್‌ಹಿಜಾ ದಿನ ವಿಶೇಷ : ಪಕ್ಷ ಪ್ರದೋಷ
ಅದೃಷ್ಟ ಸಂಖ್ಯೆ : 2, 5

ಮೇಷ: ಸ್ಪಷ್ಟ ನಿರ್ಧಾರ ಮಾಡಿದ ವಿಚಾರವನ್ನು ಮತ್ತೊಮ್ಮೆ ಯೋಚಿಸಲು ಅವಕಾಶಗಳು ಒದಗಿ ಬರುತ್ತವೆ. ಹಿಂದಿನ ನಿಲುವನ್ನು ಬದಲಾಯಿಸಬೇಡಿ. ಮಕ್ಕಳ ಖರ್ಚುವೆಚ್ಚಗಳನ್ನು ಸರಿದೂಗಿಸುವಲ್ಲಿ ಯಶಸ್ವಿಯಾಗುವಿರಿ.

ವೃಷಭ: ಪರಿಶ್ರಮಕ್ಕೆ ತಕ್ಕ ಆದಾಯವಿಲ್ಲದೆ ಸೊರಗಿರುವ ನಿಮಗೆ ಹಲವಾರು ಕನಸುಗಳು ಈಡೇರುವ ಅವಕಾಶವನ್ನು ಅಪರಿಚಿತ ವ್ಯಕ್ತಿ ತೋರುವರು. ಮೋಸ ಹೋಗುವ, ದಾರಿ ತಪ್ಪುವ ಸಾಧ್ಯತೆಯಿದೆ ಜಾಗ್ರತೆವಹಿಸಿ.

ಮಿಥುನ: ರಸಗೊಬ್ಬರ ಮತ್ತು ಕೀಟನಾಶಕಗಳ ವ್ಯಾಪಾರ ಮಾಡುವವರಿಗೆ ಲಾಭದ ಜೊತೆ ಅಧಿಕವಾದ ಆಯಾಸವೂ ಕಾಡಲಿದೆ. ಆರೋಗ್ಯದಲ್ಲಿ ಮತ್ತು ಧನವ್ಯಯದಲ್ಲಿ ಹೆಚ್ಚಿನ ಗಮನವಿರಲಿ. ಆಕಸ್ಮಿಕವಾಗಿ ಧನ ಲಾಭವಾಗಲಿದೆ.

ಕರ್ಕಾಟಕ: ಅನಾವಶ್ಯಕ ಖರ್ಚು ಹಾಗೂ ಹಾಳು ವ್ಯಸನಗಳು ಕಡಿಮೆಯಾಗಲಿವೆ. ದೈವಬಲದ ಕಾರಣ ಕೈಗೊಂಡ ಕೆಲಸ-ಕಾರ್ಯಗಳಲ್ಲಿ ಜಯ ಪ್ರಾಪ್ತಿಯಾಗುವುದು. ಹೊಸ ಕಾರ್ಯ ಕೈಗೊಳ್ಳಲು ಧೈರ್ಯ ಮತ್ತು ಸಕಾಲ.

ಸಿಂಹ: ನಿಮ್ಮ ಆಶ್ವಾಸನೀಯ ವರ್ತನೆಯಿಂದ ಇತರರಿಗೆ ಬಹಳ ಸಂತಸ ಉಂಟಾಗುವುದು. ಪ್ರವಾಸಿ ಯೋಜನೆಗಳು ಕಾರ್ಯ ರೂಪಕ್ಕೆ ಬರಲಿವೆ. ನಿಮ್ಮ ಕಾರ್ಯ ವೈಖರಿಯಿಂದ ಕೆಲವರು ಮತ್ಸರ ಪಡುವಂತಾಗುತ್ತದೆ.

ಕನ್ಯಾ: ಪಾಲುದಾರಿಕೆ ವ್ಯವಹಾರದಲ್ಲಿ ತೊಡಗುವುದಕ್ಕೆ ಸುದಿನ. ಭಾವನೆಗಳಿಗೆ ಸಂಬಂಧಿಸಿದ ವಿಷಯಗಳಲ್ಲಿ ಕೊಂಚ ಹಿನ್ನಡೆಯಾಗಲಿದೆ. ತಾಯಿಯ ಆರೋಗ್ಯದ ಬಗ್ಗೆ ಎಚ್ಚರವಹಿಸಿ. ಅವಿವಾಹಿತರಿಗೆ ಕಂಕಣ ಭಾಗ್ಯ ಒದಗುವುದು.

ತುಲಾ: ಈ ದಿನ ನಿಮಗೆ ನಿಮ್ಮ ಜೀವನದಲ್ಲಿನ ಧನಾತ್ಮಕ ಚಿಂತನೆಯಿಂದ ಮನಸ್ಸು ಆಹ್ಲಾದಕರವಾಗಿರುತ್ತದೆ. ಪ್ರತಿನಿತ್ಯದ ದಿನಚರಿಯ ಹೊರತಾಗಿ ಹೊಸ ಕೆಲಸವು ನಿಮ್ಮ ಹೆಗಲೇರುವುದು. ವಾಹನ ಚಾಲನೆಯಲ್ಲಿ ನಿಗಾವಿರಲಿ.

ವೃಶ್ಚಿಕ: ಮಾನಸಿಕ ಚಿಂತೆಗಳು ಮತ್ತು ಬಾಹ್ಯ ತೊಂದರೆಗಳು ದೂರಾಗಿ ಹಿಂದಿನ ಸಂತೋಷವನ್ನು ಪುನಃ ಪಡೆಯುವಿರಿ. ಭೂಮಿ ಹಾಗೂ ಕಟ್ಟಡದ ವಿಚಾರಕ್ಕೆ ಸಂಬಂಧಿಸಿದ ನಿರ್ಧಾರಗಳನ್ನು ತೆಗೆದುಕೊಳ್ಳುವಲ್ಲಿ ಆತುರ ಮಾಡದಿರಿ.


ಧನು: ಮಕ್ಕಳ ಹೊಸ ವ್ಯವಹಾರದಲ್ಲಿ ತಂದೆ-ತಾಯಿಯ ಆಶೀರ್ವಾದ ಮತ್ತು ಸಹಕಾರ ದೊರೆಯಲಿದೆ. ನಿಮ್ಮ ಆಲೋಚನೆಯಂತೆಯೇ ನೂತನ ಮನೆಯನ್ನು ಕೊಳ್ಳಲು ಹಣದ ವ್ಯವಸ್ಥೆಯಾಗಲಿದೆ.

ಮಕರ: ನಿಮ್ಮ ಉತ್ತಮ ಗುಣಗಳು ಪರಿಸ್ಥಿತಿಯೊಂದಿಗೆ ಹೊಂದಾಣಿಕೆ ಮಾಡಿಕೊಳ್ಳಲು ಸಹಾಯಕವಾಗುವುದು. ಗೌರವ ಕಾಪಾಡಿಕೊಳ್ಳುವ ಬಗ್ಗೆ ಗಮನಹರಿಸಿ. ಹಣಕಾಸಿನ ಹೊಸ ಮೂಲವೊಂದು ಸೃಷ್ಟಿಯಾಗುವುದು.

ಕುಂಭ: ಉದ್ಯೋಗಕ್ಕೆ ಸಂಬಂಧಿಸಿದ ಸಂಶೋಧನಾತ್ಮಕ ಪ್ರಯತ್ನಗಳು ಫಲಕಾರಿಯಾಗಿ ಆರ್ಥಿಕಾನುಕೂಲದ ಜೊತೆಗೆ ಘನತೆಯನ್ನು ಪಡೆಯುವಿರಿ. ಅಪವಾದದಿಂದ ಕುಗ್ಗಿದ ಮನಸ್ಸಿಗೆ ಸ್ವಲ್ಪ ಮಟ್ಟಿನ ಚೇತರಿಕೆ ಕಾಣಲಿದೆ.

ಮೀನ: ನಿಸ್ವಾರ್ಥ ಬುದ್ಧಿಯನ್ನು ತ್ಯಜಿಸಿ ಇಂದು ಸ್ವಾರ್ಥಿಗಳಾಗುವಂತಹ ಪರಿಸ್ಥಿತಿ ಎದುರಾಗಬಹುದು. ಸಜ್ಜನರ ಒಡನಾಟದಿಂದ ಮನಸ್ಸಿಗೆ ನೆಮ್ಮದಿ ಇರುವುದು. ಇಂದು ಗೃಹಿಣಿಗೆ ಸಂತೋಷದ ಸಮಯ.

ಪದಬಂಧ 6067 – ವಿದ್ಯಾ ವಿನಯ್



ಎಡದಿಂದ ಬಲಕ್ಕೆ

1.ರಸ ಒಸರುವ ಜಿಹ್ವೆ (3)
3.ತತ್ತರಿಸುತ್ತಾ ಪ್ರಶ್ನೆಗೆ ನೀಡಿದ ಜವಾಬು (3)
5.ಅಭಾವದಲ್ಲಿ ಅಕ್ಕನ ಗಂಡ ಬಂದಿಹನಲ್ಲಾ? (2)
6.ಸರಾಸರಿಯಾಗಿ ಹೇಳಿರುವುದು ತಪ್ಪಲ್ಲ! (2)
8.ಕೂಸು ಎದ್ದಿದ್ದುಬೆಳಗಿನ ಜಾವ! (3)
9.ತಕ ತಕ ಕುಣಿಯಲು ಈ ಅತೀ ಆತುರ (3)
11.ಕರಿಯ ಮರಿ ಬಿದ್ದಿರುವ ಆಳವಾದ ಗುಂಡಿ (3)
12.ವಿಧಿ ನಿರ್ಣಯಿಸುವಾತ (3)
13.ಮಲಗುವಾಗ ಬಂದಿರುವ ಅಡಿಯಾಳು (3)
15.ಪಾದದ ಬಳಿಯಿರುವ ಮರದ ಮೆಟ್ಟು (3)
17.ನಿಯಮ ಹೇಳಿರುವ ನರಕಾಧಿಪತಿ (2)
19.ನಿಹಾರಿಕೆ ನೋಡಿದ್ದಕ್ಕೇ ಈ ಕೇಡು! (2)
20.ತಿಕ್ಕಲನಿರಿಕೊಂಡಿರುವ ಹಣೆ ಬೊಟ್ಟು (3)
21.ಮಾಲು ತರುವಾಗ ತಲೆಗೆ ಸುತ್ತಿಕೊಂಡಿರುವ ಬಟ್ಟೆ (3)

ಮೇಲಿಂದ ಕೆಳಕ್ಕೆ

1.ವರನಿಗೆ ಕೇಳಿಸಿದ ಧ್ವನಿ (2)
2.ನಯವಾಗಿ ಹೊಳೆಯುವ ಅಕ್ಷಿ (3)
3.ಕುಸುಕ್ಕನೆ ಜಾರಿದ ಜಾಗದಲ್ಲಿನ ಮರಳು (3)
4.ಅವಸರದಲ್ಲಿ ಚಲ್ಲಿದ ದ್ರವ (2)
5.ಭಾರ ಹೊತ್ತಿರುವ ನಮ್ಮ ದೇಶ (3)
7.ಪೇರಿ ಕೀಳುವ ಮೊದಲು ಮಾಡಿದ ದುರಸ್ತಿ (3)
10.ತಕ್ಕಡಿ ಹಿಡಿದಿದ್ದಕ್ಕೇ ಈ ತುರಿಕೆ! (3)
11.ಕರದಿಂದ ನೀರಾಗಿಸು (3)
12.ವಿಷದಿಂದ ಕೂಡಿರುವ ಸಂಗತಿ (3)
14.ಯಮನ ಸೂತ್ರವೇ ಉಲ್ಟಾ ಆಗಿದೆಯಲ್ಲಾ? (3)
15.ಪಾಕದಲ್ಲಿರುವ ದೋಷ (3)
16.ಮೊಸರು ಮಾರುವಾಗ ಹತ್ತಿರುವ ರಾಡಿ (3)
18.ಮಧುಮತಿಯ ಬುದ್ಧಿ (2)
19.ಹಾಲಾಹಲದಲ್ಲಿ ಬೆರೆತಿರುವ ಕ್ಷೀರ (2)

6066ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
2.ಕಪ್ಪಡ 4.ಪದರ
5.ಯವನಿಕೆ 6.ತಾರಾಪುಂಜ
7.ನವ 9.ನಗ
13.ವಾತಾಯನ 14.ಸಹಮಾಸ
15.ಚುಂಬನ 16.ಗುಲಾಬಿ.

ಮೇಲಿಂದ ಕೆಳಕ್ಕೆ:
1.ತಾಪತ್ರಯ 2.ಕರತಾಡನ
3.ವನಿತ 5.ಯಜಮಾನ
8.ವನವಾಸ 10.ಗಗನಚುಂಬಿ
11.ನವನಟ 12.ಮಹಲು

ಸುಡೊಕು 6451

	3		6		2		4	
6		2				8		3
	4		3		9		1	
4		8			5		2	
						4		7
2		5	4				6	
			8		3		9	
7		3				6		5
	8		7		6		3	2

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

6450 ಸುಡೊಕು

6	8	4	5	7	1	2	9	3
9	7	1	2	4	3	6	5	8
5	2	3	8	6	9	1	4	7
2	9	5	4	1	7	3	8	6
1	6	8	3	9	5	4	7	2
3	4	7	6	2	8	5	1	9
4	1	6	9	8	2	7	3	5
8	3	2	7	5	4	9	6	1
7	5	9	1	3	6	8	2	4

ಪ್ರಜಾವಾಣಿ ಕ್ಲಾಸಿಫೈಡ್ಸ್
ಪ್ರಯೋಜನಕಾರಿ ಉಪಯುಕ್ತ
email: classifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

WEEKEND CORNER ಕ್ಲಾಸಿಫೈಡ್ಸ್

REAL ESTATE SELLING

Sites

Anjanapura

WANTED ANJANAPURA Banashankari 6th Stage JPNagar Near Kanakapura Road Any Measurement Immediate Settlement Call:9964627255

ANJANAPURA 10TH Block BDA Site For Sale 30x40 East No.1384 Price. 9,000/- Negotiable. Contact: 9845298419

Banashankari

AVAILABLE BDA Sites Banashankari 6th Stage,7th Block 50x80,East 8th Blk,40x60, East 5th Blk 40x60,East 40' Road:- 9902764626/ 9513332646

BANASHANKARI 6TH STAGE- BDA- AVAILABLE/ WANTED 20x30, 30x40 40x60, 50x80 SITES. BRINDAVAN ASSOCIATES- 9980863245/ 9945333993

MANTRALAYA ENTERPRISES: BUYING And SELLING BDA/A Khatha SITES/ BANASHANKARI 6th Stage, Anjanapura, Vishweswaraiah Layout. 9945724472.

BANASHANKARI 6TH Stage, 9th Block, #33/A, 40x60 S/F, 100 Feet Parallel, 2.60Cr. Negotiable. OWNER: 9799099699, 9740075563.

BANASHANKARI 6TH Stage, 10th Block, 50x80,100 Feet Road Price 16500/-7th Block, 40x60, Price 12500/- Call:9845704509

SITE FOR SALE BANASHANKARI 6TH STAGE 2ND BLOCK 20x30 EAST FACING 40FT Road CONTACT: 9535575774

AVAILABLE BSK 6th Stage 50x80 100ft Road NF, 50x80 60ft Road EF 7th Block Contact: 9845062822/ 8660751654

SITE SALE BDA Banashankari 5th Stage Near NPS SCHOOL 30X40 North 40ft Road: 8618385836/ 9241082155

Basaweshwaranagar

40*60 SITE for sale SF BBMP E khata with 40 ft road Rs 22000/- per sq/ft sl neg Sharada Colony, Basaveshwaranagar. Contact : 7892059756

Devanahalli

DC CONVERSION DTCP Approved A KATHA 20x40 site 7,00,000/-. Gated Community Ready Registration. DEVANAHALLI 9663884211

SALE: 30X50 'A' Khata, Vacant site Vijayapura near Devanahalli Airport. 2000/- Sqft. Negotiable. Contact:- 9035260431.

DEVANAHALLI TO Doddabalapura Main Road E-Katha Bank Loan Property 3100 Sqft. Sale 5250/- PSft: 9342552428

HSR Layout

HSR LAYOUT RELIABLE LAKE DEW 40x70 South East corner Plot for Sale. Contact Owner- 9845067070

Jayanagar

30X40,EAST With Old House Jayanagara 5th Block, Full Cheque Payment Brokers Excuse Contact: 9448508410

Koramangala

FOR-SALE KORAMANGALA 40X60 East Facing 2 Adjacent Sites Clear Documents Suitable For Apartment & PG Building: 9845074355.

KORAMANGALA SALE, 2,200 sft. North West Corner Site with Borewell and Plan Sanctioned. David V.A. 9845855663.

K R Puram

RESIDENTIAL VACANT Plots FOR SALE in a well developed layout at KR Puram, BLR, 1 Km from Railway Station and close to IT park, (adjacent plots 2957 sft and 4800 sft totally 7760 sft) contact Ph: 9845674424.

Kempegowda Layout

SITE FOR SALE KEMPEGOWDA LAYOUT 50/80, East facing 4 Site's in a Same Row 7th block 300 feet PRR Road Close to Challaghatta Metro Station Commercial Property Owner Meeting: 8884709409/ 7899570235

"NADAPRABHU KEMPEGOWDA" LAYOUT 1st Block 30X40 WEST FACING SITE FOR SALE Contact: 6366610999

KEMPEGOWDA LAYOUT, Commercial/ Residential BDA Site for Sale 20x30, 30x40, 40x60, 50x80 Contact Kumar 9945119449

Magadi Road

3000 SFT East Facing site for sale at Syndicate Bank Layout Govindarajnagar Magadi Road. Contact Rajendra:- 9449604358.

Mathikere

SALE MATHIKERE 4Floors of 3 & 2 BHK BBMP A Katha Very Close to MS. Ramaiah College, Suitable For PG/ School/ Residences 4500 Sft Built on 1200 Sft North Facing Site 3Cr 7022106263/ 8970433064

FOR SALE BDA site 30X45 west facing Residential property in Gokula Ist-stage, I phase, Bengaluru 560054 opp. Raghavendraswamy Mutt, contact: 9740016633, 9448031007, 9341122514

Nagarabhavi

"NAGARABHAVI BDA Complex Backside 30x40 West (old House) 40 Feet Road BDA Site for Sale. 9448432633"

SALE: SITE 30x60 Nagarabhavi 2nd Stage, 'A' Khata. Immediate Registration. Genuine Buyers. Contact: 6361819741.

Out-Station



50x100 4 UNITS
Residential Converted,
Gated Community Resort
Property at Penukonda
8310681025

Ramanagar

RESIDENTIAL CONVERTED RCUDA Approved (Semi-Commercial) Site For Sale in Ramanagar 10000Sqft 400Meters from highway 40 FeetRoad, 2000/P.Sft Owner- 9900115519

Srinagar

SITE FOR Sale 30x50 west Facing BDA Property.Clear title @ Srinagar.Near Srinagar Bus stop Contact :7892586674/9343742082

Vijayanagar

VIJAYNAGAR 35X51, 40x60, 30x65, 60x90 South, Vyalikaval 30x40 South, Marenahalli 30x50 South, Hampinagar 40x70 East, 40x60 Northwest. 30x40 GKW. 9008267445.

Vishweshwariah Layout

"VISVESHWARAIAH LAYOUT: A).30x40 SF 1st`Block, B).40x60 WF 6th`Block, C).50x80`SF`6th Block with 7500`Sqft Building. 9845500019/ 7019314962"

"BUYING/ SELLING" 20x30,30x40,40x60 50x80 BDA sites at VISHVESHWARAIAH LAYOUT, BSK 6th-stage. Contact: 9844533371/ 9341733480

"COMMERCIAL SITE for sale 33x65 North facing Upkar Layout near 41 RTO Office 60`feet Road Direct Owner. 9663356556"

BDA-SITE FOR-SALE 30x40 East Facing at Sir.M Vishveshwaraiya Layout 1st & 3rd Block Good Location Call:7676900174 6363496142

50X80 NORTH Facing Commercial 60 Feet Road Muddinapalya Main Road Vishweshwaraiah Layout 7th Block: 9980409820

30X40 BDA Site Vishveshwaraiah Lyt 8750, 40x60 BDA Site Sale 7000 Near Amma School: 9844845864

Mysore

NANDI BY SANDS MYSORE



SALE MUDA SITES
Ready for Registration Rs.3700/-.
Well-developed layout, Bandipalya Village, Mysore
CONTACT 7619606688

KHB ALLOTTED 30x40 Site at Kenchalgudu, Mysore City 46 Lakhs Clear Documents Owner Contact: 9606866368

FOR RENTAL
GODOWN / SHOWROOM AVAILABLE SPACE
5000 SFT
MUDDINAPALYA
(Close to Nagarbhavi)
60 feet Road Facing
9845178264

EDUCATIONAL TRUST WITH 23000 SFT
CIVIC AMENITIES SITE-LAND PROPERTY IN
HANUMANTHA NAGAR
is available for Transfer/ Handing over.
Contact
87226-02222/ 78293-49730

Ramanagara

SITE MEASURING 1859 Sq ft for SaleBMICAPA ApprovedBosch welfare Association layoutNear Manchanabele DamGenuine buyersContact owner 9845656926/9845595706.

Andrahalli

SITE FOR SALE DC Conversion 30x40 N/F Andralli Main Road Price Rs.75L Negotiable Contact: 8095449249

Srirampura

SITE 30X100 - 30X50 SRIRAMPURAM
30X100 North facing Site, 30x50 also available on split basis, 1st Cross, A Khata, Single Owner, 2mins from Metro, 17000/sqft, SALE ONLY.
OWNER 9916800300

House

Basaveshwaranagar

SALE SITE 1600 SQFT A KHATHA WITH EASTHI READY FOR REGISTRATION WITH 5BHK HOUSE 1 CRORE 90 LAKHS 9035883017

HRBR Layout

KAMMANHALLI HOUSE For Sale 30x40 Corner Building Ground /Frist 2BHK Each RS.2.25 CR. 73493 22223

Jayanagar

SPOT SALE of Property No.14,4th Main,Tata Silk Farm,Bengaluru-560082(2houses)on 13.6.2025 at 10:30AM.Bidders:register by 10:00AM.Base Price: 2,24,25,000/- .Successful bidder to pay 50% by cheque to Registrar.Subject to court approval.-SUHAS.T.L.,9986199519

JAYANAGAR 1ST BLOCK, 40x45 East Facing, Old House for Sale. Contact: Dr.Naik's Realty. 9341867148.

J P Nagar

J.P.NAGAR 7TH Phase, Puttenhalli, 30x40 North 18,000/-, 2 BHK 2 unit, 1 BHK 1 Unit, E-Katha, Sale- 9845144365

Magadi Road

ANDRAHALLI 'D' GROUP LAYOUT- Ground: Parking, 1BHK. First: 2BHK spacious for Rent. Third & Fourth: Duplex house. Owner- 9845067070

ನಿವೇಶನಗಳು ಮಾರಾಟಕ್ಕಿವೆ
LAND OWNER SHARE
ಕೆಹೆಚ್‌ಬಿ ಸೂರ್ಯ ಸಿಟಿ
ಎಲೆಕ್ಟ್ರಾನಿಕ್ ಸಿಟಿ ಹತ್ತಿರ ಮತ್ತು ಬನ್ನೇರುಘಟ್ಟ ರಸ್ತೆ
ನೋಂದಣಿ ಮತ್ತು ನಿರ್ಮಾಣಕ್ಕೆ ಸಿದ್ಧವಾಗಿದೆ
ಎಸ್‌ಬಿಐ ಮತ್ತು ರಾಷ್ಟ್ರೀಕೃತ ಬ್ಯಾಂಕುಗಳಿಂದ ಸಾಲ ಸೌಲಭ್ಯ
ಸಂಪರ್ಕಿಸಿ: 7411554412

INDEPENDENT HOUSE FOR SALE
SEMI COMMERCIAL
Vijayanagar 3rd Stage, Sangam Circle, Mysore.
- 50/80,100 Feet Road,
- East facing,
- Ground floor Commercial space & Personal office space
- Total 5 floors,
- Five Shoot Rooms
- Nine Bathrooms,
- Lift, Home theatre,
- Gym, and Spa Room,
- Fully Centralised AC, and Automation,
- 1BHK Servant House.

Price: Rs. 13 Cr. (Negotiable)
Location: Vijayanagar 3rd Stage, Mysore
Contact: 72592 22979

DS MARCOM Properties and Promoter Presents
CRS Enclave
SITES FOR SALE
BMRDA Approved 'A' KHATA
Bank Loan Available upto 80% Nationalised Bank
NPA Approved Individual sites for sale Ready for Registration and Constructions
@ Nelamangala Near Nelamangala Railway Station
9611166681, 9606342643
web:dsmarcom.com Email: info@dsmarcom.com



UNLOCK PRIME INVESTMENT POTENTIAL IN
BENGALURU SOUTH
+91 9113578870 Ready For Registration
STRATEGIC LOCATION WITH CLOSE PROXIMITY TO KEY LANDMARKS
Asia's Largest Cocoon Market • Rajiv Gandhi University • Railway Station
3 Parks outdoor gym an children's park | Open space of 46%
PRM/KA/RERA/1270/302/PR/280325/007633

MONSOON SALE UPTO 70% OFF*
Biggest Handloom & Handicraft Expo
ಇಂಡಿಯನ್ ದಸ್ತಕಾರ್ ಹ್ಯಾಂಡ್ಲೂಮ್ ಮತ್ತು ಹ್ಯಾಂಡಿಕ್ರಾಫ್ಟ್ ಹಾಟ್
Indian Dastkaar Handloom & Handicraft Haat
Recognized by - Government of India, Ministry of Textiles, Office of the Development Commissioner (Handicrafts)
Exhibition & Sale
of indigenous handlooms and handicrafts from across the country
10-May'25 to 22-Jun'25
HMT Ground
Opp. Hotel Kadamba Gardenia
Jalahalli, Bengaluru - 13
Time: 10:30 am to 9:30 pm
SAREES | DRESSES | TOPS | SHAWLS | JEWELLERY | FOOTWEAR | FASHION ACCESSORIES | HOME FURNISHINGS
SEDSHEETS | CARPETS | FURNITURE | METAL & BRASS HOME DECOR | CROCKERY & MUCH MORE.
Scan here to reach
Dastkaar Haat!
90+ Shopping stalls | 50000+ Varieties on display
Festive discounts & offers | Artisian from across India
For Details: 98865 07007
ENTRY FREE | FREE PARKING

Mallathalli

ITI LAYOUT MALLATHAHALLI 30X50 SOUTH FACING DUPLEX 3 BEDROOM HOUSE 2,40,00,000/- NEGOTIABLE. ABHILASHA CONSULTANT: 9480565758

Mathikere

HOUSE FOR sale at Mathikere at 9th Cross 30×40, East. Contact Mobile No. 9341225019.

Vijayanagar

FOR SALE- House on 30 by 40 at Attiguppe, Vijaynagar 3 cr negotiable. Contact: 9900856033

Vidyaranyapura

INDEPENDENT 4 BHK Duplex (60'x40') S/F, BEL layout, 2nd Block, Immediate registration. 15500/- sq.ft :9844264852

Flat

Banashankari

"LUXURY NEW- FLATS 3BHK Banashankari 2nd Stage near K.R.Road. for more details Contact: 9845286505"

Kanakapura Road

SALE LUXURY 2/3 BHK Apartment Starts from 8599/-sft at Doddakalasandra, Near Forum Mall. Contact:7204020888 7204030888

Old Airport Road

GOLDEN ENCLAVE 2BHK Flat`Sale 5th Floor, East`Entrance 1720 Sqft. Pool`Facing 1 Covered Parking Old Airport Road. Call:Owner 9822928189 9845022810 info@deepstone.in

Vijayanagar

FLATS FOR sale at Vijayanagara. Contact No 9341225019.

Commerical

Hebbal

ON BELLARY Main Road Commercial Property East 25,000Sft Converted Near Nandi Upchar Hotel Clear-Titles Call:9341260828

Jayanagar

SALE COMMERCIAL 50x80 Jayanagar 5th Block on 80feet Road With old House Ct 9844134068 8073859758

SALE COMMERICAL Running Petrol Bunk 9600 Sqft at J.P.Nagar Ring Road Contact 9844134068 8073859758

Koramangala

KORAMANGALA PURE Commercial 50x72 Old Building 1st Block Service Road, 12 crs. David V.A. 9845855663.

Kanakapura Road

SALE COMMERCIAL Site 40x60 Narayan Nagara 1st Block, Shankara Regency near Silk Institute Metro 50x60 & 30x45, Contact- 9448533341.

Seshadripuram

SHALIMAR GALAXY Sheshdripuram 675sft Office Space For Sale 110 Lacs or Rent 2nd Floor Sunil: 9845201710

Commercial Land

Mysore Road

2 ACRES PRIME Commercial with Farm Land sale. BANGALORE- MYSORE HIGHWAY, Attached Service Road. 9535868695

Residential/ Commercial

Bannerghatta Road

4,800 & 2,400 Sqft Residential Plot Facing East and West for Sale in Arekere Shanthinikethan Layout. Call Owner 7483853190

HSR Layout

BDA SINGASANDRA 40x60 Plot Sale. 14800/- per sft whatsapp owner 918978282072

Industrial & Factory

Mysore Road

"4730 SQFT West facing with shed`& Power for-sale New`Timber Yard Layout, Mysore Road. 9902973903/ 8197225837"

General

South

5 BHK Bungalow @ BSK 2nd Stage, 30x40 Independent House @ ISRO Layout. Luxury 2, 3 & 4 BHK Apartments for SALE @ BSK. Mob: 9741445209/ 9739150900.

REAL ESTATE BUYING

General

General

WANTED/ AVAILABLE INDEPENDENT HOUSES/ FLATS/ SHOPS/ COMPLEX FOR RENTAL/ LEASE, BUYING/ SELLING. CONTACT VICTORY PROPERTIES:- 7411692219/ 8618576685. info@victoryproperties.in, www.victoryproperties.in

Sites

Banashankari

BDA SITES WANTED ARKAVATHY ANJANAPURA BANASHANKRI 6TH STAGE VISHWESHWARAIAH KEMPEGOWDA ANY BDA LAYOUT: 9845062822/ 8660751654

Jakkur

MCECHS LAYOUT Shivramkaranth nagar, wanted site 30x40 Eastor North only. Call 9535479091

Multiple Locations

WANTED BDA SITES Anjanapura- Arkavathi Banashankari 6th.Stage, Vishweswaraiah, Kempegowda, Dr.Shivaramkaranth Layout.Contact: SAPTHAGIRI. 9900268073 9448068073.

Nagarabhavi

WANTED BDA SITE 30x40, 40x60, 50x80 Visweshwarayya Layout, Nagarabhavi RHCS Layout, NGF, Banashankari 6th Stage. 8105688602.

RENTAL PROPERTIES

Accommodation Available

Commercial

PLUG-&-PLAY OFFICE Space 45+65 Seater GF+FF Near BDA Complex, BANASHANKARI 2nd Stage. Call-9901453477

Flats

PRIME GUEST House /staff quarters Space for Lease in Jaya Mahal extension, BangaloreLocated in a peaceful and central area, this new building is ideal for corporates, PSUs, and large institutions to house their guests or staff.Available•2 spacious 3-bedroom apartments•1 elegant 2-bedroom apartment•Adequate parking and modern lift facilitiesReach out now for more details.ph 9848128438

House

KORAMANGALA ONE Bedroom Attached Bath Studio Flat For Rent. Suitable For Single/ All Amenities: 9916763727

Accommodation Wanted

House

WANTED 4 Bedroom House for Lease/ Rent around RMV II Stage, Sanjay Nagar. Contact:- 9606949809.

BUILDERS ESSENTIAL

Water Proofing

LEAKAGE... LEAKAGE... Old/New Building, Sump, Bathroom, Wallcrack, Skylight, Terrace Waterproofing done by New Technology- 9880916988

EDUCATIONAL

Special Courses

PHYSICS FACULTY cum Project Promotor-IITJAM, MSc/PhD, Malleswaram. Contact- centreforphysics001@gmail.com

AUTOMOTIVE

Four Wheelers Selling

Others

SALE-SCHOOL-BUS. VEHICLE Inspection Between 9am to 2Pm. STRACEY MEMORIAL COMP. P.U COLLEGE 52,St. Mark's Road(Opp. Indian Oil) Bangalore-560001

BUSINESS

Business to Business

Business

BRANDING & SOCIAL MEDIA MARKETING FOR ALL BUSINESS/ EDUCATIONAL INSTITUTIONS/ CORPORATE/ POLITICAL/ SHOPS/ SMALL EATERIES THROUGHOUT BANGALORE FOR AUTO BACK, BUS BACK, HOARDINGS, DIGITAL BOARDS, CYCLE, VAN BRANDING, NO PARKING BOARDS. CONTACT VENUSCAST TECHNOLOGIES PVT LTD 8722123445, 9538123445 balaji@venuscast.com

FOR HOME/ PERSONAL/ BUSINESS/ USED AND NEW CARS LOANS CONTACT VICTORY INDIA & CO 8722123445/ 9538123445. victoryindia63@gmail.com

MICRO WAREHOUSE IN VV. Puram, Heart of City: Smart Storage & Fast Shipping. Call- 9148711123

Couriers

ONTIME DELIVERY
Worried about ontime delivery to customers give to us and sit back we deliver safely, we offer Courier, Cargo be it a air, surface modes. with door step pick up and door step delivery with best price. Packing facility will also provided.
What's up 81519 58772
Call +91 78990 39851

Finance

BUSINESS UNSECURED Loans for biz expansion new Project NPA & all other business min 1 Crore Above. 7736821639/ 7736631639.

ಪ್ರಜಾವಾಣಿ ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
email: classifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331







ಪ್ರಜಾವಾಣಿ ಭಾನುವಾರದ ಪುರವಣಿ

ಭಾನುವಾರ, 8 ಜೂನ್ 2025



ನಿನ್ನ ಪ್ರೀತಿಯ ನಾನು ಕಾಡುವ ಗಾಢ ಮೌನ 12



ಕೊಲ್ಹಾಪುರಿ ಮೆಟ್ಟು ಎಲ್ಲಾ ವರ್ಗದವರಿಗೂ ಅಚ್ಚುಮೆಚ್ಚು. ಈ ಮೆಟ್ಟಿಗೆ ಇರುವ ಜನಪ್ರಿಯತೆ ದೇಶದ ಗಡಿಯನ್ನೂ ದಾಟಿದೆ. ಆದರೆ, ಈ ಮೆಟ್ಟುಗಳು ಹೆಚ್ಚಾಗಿ ತಯಾರಾಗುವುದು ನಮ್ಮ ರಾಜ್ಯದ ಬೆಳಗಾವಿ ಜಿಲ್ಲೆಯಲ್ಲಿ ಎನ್ನುವುದು ವಿಶೇಷ.

ಕೊಲ್ಹಾಪುರಿ ಜೋಡು ಪ್ರಸಿದ್ಧಿ ಜೋರು



ಇಮಾಮ್‌ಹುಸೇನ್ ಗೂಡುನವರ

ಕೊಲ್ಹಾಪುರಿ ಚಪ್ಪಲಿಗಳು ಬರೀ ಚಪ್ಪಲಿಗಳಲ್ಲ; ಭಾರತೀಯ ಪರಂಪರೆಯ ಹೆಜ್ಜೆ ಗುರುತುಗಳು. ಒಮ್ಮೆಯಾದರೂ ಈ ಚಪ್ಪಲಿಗಳನ್ನು ಮೆಟ್ಟಿ ನೋಡಿ. ಅದರಲ್ಲಿ ಒಂದು ಗತ್ತು- ಗಮ್ಮತ್ತು ಇದೆ. ಇವುಗಳನ್ನು ಸಿದ್ಧಪಡಿಸುವವರ ಕೈಯಲ್ಲಿ ಅಂಥ ಕೌಶಲವಿದೆ. ಸಮಗಾರ ಸಮಾಜದವರು ಇಟ್ಟ ಹೆಜ್ಜೆಗಳು ಎರಡು ರಾಜ್ಯಗಳ ನಡುವೆ ಸಾಂಸ್ಕೃತಿಕ ಬಂಧ ಗಟ್ಟಿಗೊಳಿಸಿವೆ. ಇಂದು ನಿನ್ನೆಯಲ್ಲ; ಬರೋಬ್ಬರಿ 800 ವರ್ಷಗಳಿಂದಲೂ ಈ ಬಂಧ ಬಂಧುತ್ವವಾಗಿ ಬೆಳೆಯುತ್ತ ಬಂದಿದೆ.

ಬೆಳಗಾವಿ ಜಿಲ್ಲೆಯ ಅಥಣಿ ತಾಲ್ಲೂಕಿನ ಮದಭಾವಿಗೆ ಕಾಲಿಟ್ಟರೆ ಸಾಕು; ಚರ್ಮದ ವಾಸನೆ ಮೂಗಿಗೆ ಬಡಿಯುತ್ತದೆ. ಮಕ್ಕಳಿಂದ ಹಿರಿಯರವರೆಗೆ ಎಲ್ಲರಿಗೂ ಮೆಟ್ಟುಗಳನ್ನು ತಯಾರಿಸುವುದೇ ಕಾಯಕ. ಒಬ್ಬೊಬ್ಬರನ್ನು ಮಾತಿಗೆಳೆದಾಗ, 'ಈ ಚಪ್ಪಲ ಹಾಕೊಂಡ್ರ ಅದರ ಗತ್ತ ಬ್ಯಾರೇರಿ. ನೋಡಾಕಷ್ಟ ಅಲ್ಲ; ಆರೋಗ್ಯಕ್ಕೂ ಅನುಕೂಲ' ಎಂದು ಹೆಮ್ಮೆಯಿಂದಲೇ ಹೇಳುತ್ತಾರೆ. 'ಚಪ್ಪಲ ಹಾಕೊಂಡವ್ರ ಬದುಕೇನೋ ಚಂದ. ಆದ್ರ ನಮ್ದ ಸಂಕಷ್ಟದ ನಡಿಗಿ' ಎನ್ನುವ ನೋವಿನ ಮಾತೂ ಕಿವಿಗೆ ಬಿದ್ದಿತು.

ಕೊಲ್ಹಾಪುರಿ ಚಪ್ಪಲಿ ಎಂದರೆ ಎಲ್ಲರಿಗೂ ಅಚ್ಚುಮೆಚ್ಚು. ಚಲನಚಿತ್ರ ನಟ-ನಟಿಯರು, ಕ್ರಿಕೆಟಿಗರು, ರಾಜಕಾರಣಿಗಳು, ರೈತರು ಹೀಗೆ... ಅವುಗಳ ವಿನ್ಯಾಸ, ಅಂದಕ್ಕೆ ಬೆರಗಾಗದವರೇ ಇಲ್ಲ. ಇವು ಧೋತರ, ಪೈಜಾಮ್, ಸಾಂಪ್ರದಾಯಿಕ ಸೀರೆ, ಚೂಡಿದಾರ್ ಜತೆಗೆ ಧರಿಸಲೂ ಸೈ, ಪಾಶ್ಚಾತ್ಯ ಉಡುಗೆಗೂ ಜೈ.

ಬೆಳಗಾವಿ, ಧಾರವಾಡ, ಬಾಗಲಕೋಟೆ, ವಿಜಯಪುರ, ಮಹಾರಾಷ್ಟ್ರದ ಕೊಲ್ಹಾಪುರ, ಸಾಂಗ್ಲಿ, ಸಾತಾರ, ಸೊಲ್ಲಾಪುರ ಜಿಲ್ಲೆಗಳಲ್ಲಿ ಇವುಗಳನ್ನು ತಯಾರಿಸಲಾಗುತ್ತದೆ. ಆದರೆ, ಬೆಳಗಾವಿಯ ಅಥಣಿ, ನಿಪ್ಪಾಣಿ ತಾಲ್ಲೂಕುಗಳಲ್ಲಿ ಈ ವೃತ್ತಿ ನೆಚ್ಚಿಕೊಂಡವರ ಪ್ರಮಾಣವೇ ಅಧಿಕ.

ಇತ್ತೀಚಿನ ವರ್ಷಗಳಲ್ಲಿ ಚಪ್ಪಲಿ ತಯಾರಿಕೆಗಾಗಿ ಹಲವರು ಯಂತ್ರಗಳ ಮೊರೆ ಹೋಗಿದ್ದಾರೆ. ಆದರೆ, ಕೈಯಿಂದ ಚಪ್ಪಲಿ ಹೊಲಿಯುವವರೇ ಹೆಚ್ಚು. ಮೆಟ್ಟು ತಯಾರಿಕೆಯಲ್ಲಿ ಪ್ರತಿಯೊಬ್ಬರಿಗೆ ಒಂದೊಂದು ಮಾದರಿಯ ಕೆಲಸ ಹಂಚಿಕೆಯಾಗುತ್ತದೆ. ಚಪ್ಪಲಿ ತಯಾರಿಸುವವರಲ್ಲಿ ಪುರುಷರಷ್ಟೇ ಅಲ್ಲ; ಮಹಿಳೆಯರೂ ಇದ್ದಾರೆ. ಅನಕ್ಷರಸ್ಥರಿಂದ ಹಿಡಿದು ಪದವೀಧರರೂ ಕಾಣಸಿಗುತ್ತಾರೆ.

ಕೈಯಿಂದ ಹೆಣೆಯುವ ಕಾರಣಕ್ಕೆ ಹೆಚ್ಚು ತಾಳಿಕೆ-ಬಾಳಿಕೆ ಬರುವ ಚಪ್ಪಲಿಗಳೀಗ ಸಾಂಪ್ರದಾಯಿಕವಾಗಿ ಅಷ್ಟೇ ಉಳಿದಿಲ್ಲ. ಮಾರುಕಟ್ಟೆಯ ಬೇಡಿಕೆಗೆ ತಕ್ಕಂತೆ ಅವುಗಳಿಗೆ ಆಧುನಿಕ ಸ್ಪರ್ಶವೂ ಸಿಕ್ಕಿದೆ. ನವನವೀನ ವಿನ್ಯಾಸದೊಂದಿಗೆ ಮಾರುಕಟ್ಟೆಯಲ್ಲಿ 'ಟ್ರೆಂಡ್' ಸೃಷ್ಟಿಸಿವೆ. ಮದುವೆ ಮತ್ತಿತರ ಸಮಾರಂಭಗಳಲ್ಲಿ ಯುವಜನರ ನೆಚ್ಚಿನ ಆಯ್ಕೆಯಾಗಿಯೂ ಹೊರಹೊಮ್ಮಿವೆ.

ಚಪ್ಪಲಿ ಖರೀದಿಗೆ ಶ್ರೀಮಂತ-ಬಡವ, ವಯಸ್ಸಿನ ಬೇಧವಿಲ್ಲ. ಎಲ್ಲ ವಯೋಮಾನದವರಿಗೂ, ಅವರವರ ಹಣಕಾಸಿನ ಸಾಮರ್ಥ್ಯಕ್ಕೆ ಅನುಗುಣವಾದ ಮೆಟ್ಟುಗಳು ಲಭ್ಯ ಇವೆ. ಆಕರ್ಷಕವಾಗಿ ಕಾಣಿಸುವ ಈ ಚಪ್ಪಲಿ ಧರಿಸಿ, ನಡೆಯುವಾಗ ಬರುವ 'ಜುರ್ಕಿ' ಶಬ್ದ ದೇಶದ ಗಡಿದಾಟಿ ಹೋಗಿದೆ. ಆದರೆ, ತಲೆಮಾರುಗಳಿಂದ ಮೆಟ್ಟು ತಯಾರಿಕೆಯ ಈ ಕುಲಕಸುಬನ್ನೇ ನೆಚ್ಚಿಕೊಂಡವರದ್ದು ಮಾತ್ರ ಸಂಕಷ್ಟದ ನಡಿಗೆಯೇ...

'ಅಥಣಿ ತಾಲ್ಲೂಕಿನ ಮದಭಾವಿಯಲ್ಲಿ 800ಕ್ಕೂ ಹೆಚ್ಚು ಮಂದಿ ಕೊಲ್ಹಾಪುರಿ ಮೆಟ್ಟು ತಯಾರಿಸುತ್ತೇವೆ. ಇಡೀ ದೇಶದಲ್ಲಿ ಇವು ಖ್ಯಾತಿ ಗಳಿಸಿವೆ. ಆದರೆ, ಸ್ಥಳೀಯವಾಗಿ ಮಾರುಕಟ್ಟೆ ವ್ಯವಸ್ಥೆ ಇಲ್ಲದ್ದರಿಂದ 90 ಕಿಲೋಮೀಟರ್ ದೂರದ ಕೊಲ್ಹಾಪುರಕ್ಕೆ ಕಳುಹಿಸಬೇಕಿದೆ. ಸಾರಿಗೆಗೆ ಹೆಚ್ಚಿನ ಹಣ, ಸಮಯ ವ್ಯಯವಾಗುತ್ತಿದೆ. ಕಷ್ಟಪಟ್ಟು ಮೆಟ್ಟು ತಯಾರಿಸೋದು ನಾವು. ಆದರೆ, ನಮಗಿಂತ ಹೆಚ್ಚಿನ ಲಾಭ ಪಡೆಯೋದು ಮಹಾರಾಷ್ಟ್ರದ ವರ್ತಕರು' ಎಂದು ಕುಶಲಕರ್ಮಿ ಕೇದಾರಿ ಭಂಡಾರೆ ಹೇಳುವಾಗ ಅವರ ದನಿಯಲ್ಲಿ ಬೇಸರವಿತ್ತು.

'ನಾವು ಗುಣಮಟ್ಟದ ಕಚ್ಚಾವಸ್ತು ಬಳಸಿ ನಿರ್ದಿಷ್ಟ ದರಕ್ಕೆ ಚಪ್ಪಲಿ ಮಾರುತ್ತೇವೆ. ಆದರೆ, ಬೇರೆ ಕಡೆ ಕೆಲವರು ಕಳಪೆ ಕಚ್ಚಾವಸ್ತು ಬಳಸಿ, ಕಡಿಮೆ ದರಕ್ಕೆ ಮಾರುತ್ತಾರೆ. ಅಲ್ಲಲ್ಲಿ ಚೀನಾ ಮಾಡೆಲ್‌ಗಳೂ ಬರುತ್ತಿವೆ. ಇದರಿಂದ ನಮಗೆ ಸಮಸ್ಯೆಯಾಗುತ್ತಿದೆ. ಪ್ರತಿ ಗುರುವಾರ ಕಾರ್ಮಿಕರಿಗೆ ಸಂಬಳ ಕೊಡಲು ಕಷ್ಟ. ಮಳೆಗಾಲದಲ್ಲಿ ನಾಲ್ಕು ತಿಂಗಳು ಕೆಲಸವೇ ಇರಲ್ಲ. ಹಾಗಾಗಿ ಸರ್ಕಾರವೇ ಸಮಿತಿ ರಚಿಸಿ, ಗುಣಮಟ್ಟಕ್ಕೆ ತಕ್ಕಂತೆ ಉತ್ಪನ್ನಕ್ಕೆ ಒಂದು ನಿರ್ದಿಷ್ಟ ದರ ನಿಗದಿಪಡಿಸಬೇಕು' ಎನ್ನುತ್ತಾರೆ ಅದೇ ಊರಿನ ಮಹಾದೇವ ಕಾಂಬಳೆ.

11ನೇ ಪುಟಕ್ಕೆ...



ಬೆಳಗಾವಿ ಜಿಲ್ಲೆಯ ಅಥಣಿ ತಾಲ್ಲೂಕಿನ ಮದಭಾವಿಯಲ್ಲಿ ಕುಶಲಕರ್ಮಿಗಳು ಕೊಲ್ಹಾಪುರಿ ಚಪ್ಪಲಿ ತಯಾರಿಸುತ್ತಿರುವುದು

ಕೊಲ್ಹಾಪುರವೇ ಏಕೆ ಆಯ್ಕೆ?

'ಕೊಲ್ಹಾಪುರ' ಮಹಾರಾಷ್ಟ್ರದ ಪ್ರಮುಖ ಮಹಾನಗರ. ಇಲ್ಲಿ ಐತಿಹಾಸಿಕ ಮಹಾಲಕ್ಷ್ಮೀ ದೇವಸ್ಥಾನವಿದೆ. ದೇಶದ ವಿವಿಧೆಡೆಯಿಂದ ವರ್ಷವಿಡೀ ಇಲ್ಲಿಗೆ ಭಕ್ತರು, ಪ್ರವಾಸಿಗರು ಭೇಟಿ ಕೊಡುತ್ತಾರೆ. ಮದಭಾವಿ, ಅಥಣಿ, ನಿಪ್ಪಾಣಿಗೆ ಬೆಳಗಾವಿ ಹೋಲಿಸಿದರೆ, ಕೊಲ್ಹಾಪುರವೇ ಸಮೀಪವಿದೆ. ಹಾಗಾಗಿ ಉಭಯ ರಾಜ್ಯದವರು ತಮ್ಮ ಉತ್ಪನ್ನಗಳ ಮಾರಾಟಕ್ಕಾಗಿ ಕೊಲ್ಹಾಪುರ ಮಾರುಕಟ್ಟೆಯನ್ನೇ ಆಶ್ರಯಿಸಿದ್ದಾರೆ. ಇದಲ್ಲದೆ, ದೆಹಲಿ, ಮುಂಬೈ, ಹೈದರಾಬಾದ್ ಮಾರುಕಟ್ಟೆಗೂ ಕಳುಹಿಸುತ್ತಾರೆ.

'ಕೊಲ್ಹಾಪುರದಲ್ಲಿ ಚಪ್ಪಲಿ ಮಾರಾಟದ 150 ರಿಂದ 200 ಅಂಗಡಿಗಳಿವೆ. ಶಿವಾಜಿ ಪುತ್ಥಳಿ ಬಳಿ 'ಚಪ್ಪಲ್ ಲೈನ್' ಇದ್ದು, ಒಂದೇ ಕಡೆ 40ಕ್ಕೂ ಅಧಿಕ ಅಂಗಡಿಗಳಿವೆ. ಸೀಜನ್ ಅಂತೇನಿಲ್ಲ. ವರ್ಷವಿಡೀ ಇಲ್ಲಿ ಕೊಲ್ಹಾಪುರಿ ಚಪ್ಪಲಿ ಮಾರುತ್ತೇವೆ. ಸರಾಸರಿ ದರ ₹200ರಿಂದ ₹4 ಸಾವಿರದವರೆಗೆ ಇದೆ. ವಾರ್ಷಿಕ 10 ಲಕ್ಷಕ್ಕೂ ಅಧಿಕ ಜೋಡಿ ಚಪ್ಪಲಿಗಳನ್ನು ಮಾರಾಟ ಮಾಡುತ್ತೇವೆ. ಇದರಿಂದ ₹30 ಕೋಟಿಗೂ ಅಧಿಕ ವಹಿವಾಟು ನಡೆಯುತ್ತದೆ' ಎನ್ನುತ್ತಾರೆ ವ್ಯಾಪಾರಿ ಶಶಿಕಾಂತ ವಾಟ್ಕರ್.



ಮದಭಾವಿಯಲ್ಲಿ ಮಹಿಳೆಯೊಬ್ಬರು ಕೊಲ್ಹಾಪುರಿ ಚಪ್ಪಲಿ ಹೆಣೆಯುತ್ತಿರುವುದು

ಚಿತ್ರಗಳು: ಗೋವಿಂದರಾಜ ಜವಳಿ

ಊರಿನ ಗ್ರಾಮಸ್ಥರು, ಶಿಕ್ಷಕರು, ಹಳೆ ವಿದ್ಯಾರ್ಥಿಗಳು ಜೊತೆಗೂಡಿದರೆ ಒಂದು ಸರ್ಕಾರಿ ಶಾಲೆಯನ್ನು ಖಾಸಗಿ ಶಾಲೆಯ ಮಟ್ಟಕ್ಕೆ ಕೊಂಡೊಯ್ಯಬಹುದು ಎನ್ನುವುದನ್ನು ಕಟ್ಟಿಕೊಟ್ಟಿದೆ ಈ ಲೇಖನ. ಪುನಃಶ್ಚೇತನಗೊಳಿಸಿದ ಶಾಲೆಯಲ್ಲಿ ಮೂಲಸೌಕರ್ಯಗಳಿಗಷ್ಟೇ ಅಲ್ಲ ಮಕ್ಕಳ ಶಿಕ್ಷಣಕ್ಕೂ ಒತ್ತು ನೀಡಿದ ಈ ಯಶೋಗಾಥೆ ಮಾದರಿಯಾಗಿದೆ.

ಒಂದು ಸರ್ಕಾರಿ ಶಾಲೆ ಉಳಿದು ಬೆಳೆದ ಕತೆ

ಕೆ.ಎಂ. ಸಂತೋಷ್‌ಕುಮಾರ್

ಚಿಕ್ಕಮಗಳೂರು ಜಿಲ್ಲೆಯಲ್ಲಿ ಗುಡ್ಡಗಾಡು ಪ್ರದೇಶವಾಗಿರುವ ಆಲ್ದೂರು ಸಮೀಪದ ಹಂಗರವಳ್ಳಿಯು ಫರ್ಲಾಂಗಿಗೊಂದು ಮನೆಗಳಿರುವ ಕುಗ್ರಾಮ. ಈ ಊರಿನಲ್ಲಿ 75 ವರ್ಷಗಳ ಹಿಂದೆ ಮರಳ ಮೇಲೆ ಅಕ್ಷರ ತಿದ್ದಿಸುತ್ತಿದ್ದ 'ಕೂಲಿ ಮಠ'ದಿಂದ ಆರಂಭವಾದ ಸರ್ಕಾರಿ ಕನ್ನಡ ಶಾಲೆಯು ಒಂದು ಹಂತದಲ್ಲಿ 250ಕ್ಕೂ ಹೆಚ್ಚು ಮಕ್ಕಳಿಂದ ತುಂಬಿತ್ತು. ಆದರೆ, ಪೋಷಕರ ಇಂಗ್ಲಿಷ್ ಮೋಹ, ಖಾಸಗಿ ಶಾಲೆಗಳು, ಬೋರ್ಡಿಂಗ್ ಶಾಲೆಗಳತ್ತ ಒಲವು, ಹಳ್ಳಿಗರ ವಲಸೆ, ಕನ್ನಡ ಶಾಲೆಯಲ್ಲಿ ಗುಣಮಟ್ಟದ ಶಿಕ್ಷಣ ಇಲ್ಲವೆನ್ನುವ ಆರೋಪ, ಮೂಲಸೌಕರ್ಯ ಕೊರತೆಗಳ ನಡುವೆ 2002–2003ರಿಂದ ಮಕ್ಕಳ ದಾಖಲಾತಿ ಕ್ಷೀಣಿಸಲಾರಂಭಿಸಿತ್ತು. ಇದು ವರ್ಷದಿಂದ ವರ್ಷಕ್ಕೆ ಕುಸಿಯುತ್ತಲೇ ಹೋಗಿತ್ತು. 2009ರ ವೇಳೆಗೆ ಏಕಾಏಕಿ ಮಕ್ಕಳ ಸಂಖ್ಯೆ 9ಕ್ಕೆ ಕುಸಿಯಿತು. ಪರಿಣಾಮ 'ಹಂಗರವಳ್ಳಿ ಕನ್ನಡ ಶಾಲೆಯು ಆಲ್ದೂರಿನಲ್ಲಿರುವ ಸರ್ಕಾರಿ ಶಾಲೆ ಜತೆಗೆ ವಿಲೀನವಾಗಲಿದೆ' ಎಂಬ ನೋಟಿಸ್ ಶಿಕ್ಷಣ ಇಲಾಖೆಯಿಂದ ಶಿಕ್ಷಕರಿಗೆ ಬಂತು. ಹತ್ತು ಕಿ.ಮೀ. ದೂರದಲ್ಲಿರುವ ಆಲ್ದೂರು ಶಾಲೆಗೆ ಹೋಗಿ ವರದಿ ಮಾಡಿಕೊಳ್ಳಲು ಶಿಕ್ಷಕರಿಗೆ ನೋಟಿಸ್‌ನಲ್ಲಿ ಸೂಚಿಸಲಾಗಿತ್ತು. ಶಾಲೆಯ ಕನ್ನಡ ಶಿಕ್ಷಕ ಮಂಜುನಾಥ್, ಅಂದಿನ ಎಸ್‌ಡಿಎಂಸಿ ಅಧ್ಯಕ್ಷ ಶೇಖರ್, ಊರಿನ ಶಾಲೆ ಮುಚ್ಚಿ ಹೋದರೆ ಏನೆಲ್ಲ ಪಲ್ಲಟಗಳು ಆಗಲಿವೆ ಎನ್ನುವುದನ್ನು ಗ್ರಾಮಸ್ಥರು ಮತ್ತು ಸುತ್ತಲಿನ ಹಳ್ಳಿಗಳ ಶಿಕ್ಷಣ ಪ್ರೇಮಿಗಳಿಗೆ ಮನವರಿಕೆ ಮಾಡಿಕೊಟ್ಟರು. ಆಗ ಸ್ಥಳೀಯರು, ಸಮಾನ ಮನಸ್ಕರು, ಕೆಲವು ಪೋಷಕರು ಒಟ್ಟಿಗೆ ಸೇರಿ ಶಾಲೆಯನ್ನು ಉಳಿಸಿಕೊಳ್ಳಲು ಇರುವ ದಾರಿಗಳ ಹುಡುಕಾಟಕ್ಕೆ ಇಳಿದರು.

ಮೊದಲಿಗೆ; ಶಾಲೆ ಮುಚ್ಚುವ ಸ್ಥಿತಿಗೆ ಬರಲು ಕಾರಣಗಳೇನೆಂದು ಪಟ್ಟಿ ಮಾಡಿದಾಗ...ಶಾಲೆಗೆ ಬರುವ ಮಕ್ಕಳಿಗೆ ವಾಹನ ವ್ಯವಸ್ಥೆ ಇಲ್ಲ, ಇಂಗ್ಲಿಷ್ ಶಿಕ್ಷಣ ಇಲ್ಲ... ಎನ್ನುವ ಕೊರಗು ನೀಗಿಸಲು ಸಜ್ಜಾದರು. ಮಕ್ಕಳು ಶಾಲೆ ಬಿಡದಂತೆ ಉಳಿಸಿಕೊಳ್ಳಲು ಮತ್ತು ಪ್ರವೇಶಾತಿ ಹೆಚ್ಚಿಸಲು ಎಲ್‌ಕೆಜಿ, ಯುಕೆಜಿ ಆರಂಭಿಸಿದರು. ಜತೆಗೆ ಸುಸಜ್ಜಿತ ಕಟ್ಟಡವನ್ನು ನಿರ್ಮಿಸಲು ಸಂಕಲ್ಪ ಮಾಡಿದರು.

ಶಾಲೆ ಉಳಿಸುವ ಸಲುವಾಗಿಯೇ ಗ್ರಾಮದೇವತೆ ಉದ್ದಂಡೇಶ್ವರನ ಹೆಸರಿನಲ್ಲಿ 'ಶ್ರೀ ಉದ್ದಂಡೇಶ್ವರ ಶಿಕ್ಷಣ ಸೇವಾ ಟ್ರಸ್ಟ್' ಸ್ಥಾಪಿಸಿದರು. ಇದರ ಪದಾಧಿಕಾರಿಗಳೆಲ್ಲರೂ ತಲಾ ₹10 ಸಾವಿರ ಚಂದಾ ಹಾಕಿ ಶಾಲೆಯ ಕೊರತೆಗಳನ್ನು ನೀಗಿಸುವ ಕೆಲಸ ಆರಂಭಿಸಿದರು. ಟ್ರಸ್ಟ್‌ನ ಪದಾಧಿಕಾರಿಗಳು ಸುತ್ತಮುತ್ತಲ ಗ್ರಾಮಗಳಲ್ಲಿ ದಾನಿಗಳಿಂದ ದೇಣಿಗೆ ಸಂಗ್ರಹಿಸಿದರು.

ಮಾದರಿ ಶಾಲೆಯ ರೂಪುರೇಷೆ ಸಿದ್ಧಪಡಿಸುವುದು, ಶಾಲೆಗೆ ದ್ವಿಭಾಷಾ ಬೋಧನೆಗೆ ಅನುಮತಿ ಪಡೆಯುವುದು, ಶಾಲಾ ಕಟ್ಟಡ ನಿರ್ಮಾಣಕ್ಕೆ ಅನುದಾನ ತರುವುದು, ಇದರ ಜತೆಗೆ ಸರ್ಕಾರದ ಕಡೆಯಿಂದ ಏನೇನು ಕೆಲಸಗಳು ಆಗಬೇಕಿತ್ತೋ ಅವುಗಳನ್ನು ತಮ್ಮ ಗ್ರಾಮದವರೇ ಆದ ಈ ಶಾಲೆಯ ಹಳೆಯ ವಿದ್ಯಾರ್ಥಿಯಾಗಿರುವ ಕೃಷಿ ಸಚಿವ ಎನ್. ಚಲುವರಾಯಸ್ವಾಮಿ ಆಪ್ತ ಕಾರ್ಯದರ್ಶಿ ಎಚ್.ಜಿ. ಪ್ರಭಾಕರ್ ಅವರ ಹೆಗಲಿಗೆ ಹಾಕಿದರು.

ಶಾಲೆಯಲ್ಲಿ ದ್ವಿಭಾಷಾ ಮಾಧ್ಯಮ ಬೋಧನೆಗೆ ಅನುಮತಿಯೂ ಸಿಕ್ಕಿತು. ಕಾನ್ವೆಂಟ್ ಕನಸು ಕಾಣುತ್ತಿದ್ದ ಪೋಷಕರು ಈಗ ಈ ಶಾಲೆಗೆ ಮಕ್ಕಳನ್ನು ದಾಖಲಿಸಲು ಪೈಪೋಟಿಗೆ ಇಳಿದಿದ್ದಾರೆ. ಈಗ ಶಾಲೆಯಲ್ಲಿ ಎಲ್‌ಕೆಜಿಯಿಂದ 7ನೇ ತರಗತಿಯವರೆಗೆ 330 ಮಕ್ಕಳು ಕಲಿಯುತ್ತಿದ್ದಾರೆ. 25 ಮಕ್ಕಳಿಗೆ ಒಬ್ಬ ಶಿಕ್ಷಕರಂತೆ ಇಂಗ್ಲಿಷ್ ಬೋಧನೆಗೆ ಐವರು ಶಿಕ್ಷಕರನ್ನು ಟ್ರಸ್ಟ್ ನೇಮಿಸಿದೆ. ಆ ಶಿಕ್ಷಕರಿಗೆ ಅತಿಥಿ ಶಿಕ್ಷಕರ ವೇತನದಿಂದ ಹಾಗೂ ಟ್ರಸ್ಟ್‌ನಿಂದಲೇ ವೇತನ ನೀಡಲಾಗುತ್ತಿದೆ. ಶಾಲೆಯಲ್ಲಿ ಒಟ್ಟು ಶಿಕ್ಷಕರ ಸಂಖ್ಯೆ 10ಕ್ಕೇರಿದೆ. ಧರ್ಮಸ್ಥಳ ಗ್ರಾಮೀಣಾಭಿವೃದ್ಧಿ ಸಂಸ್ಥೆಯು ಒಬ್ಬರು ಅತಿಥಿ ಶಿಕ್ಷಕರನ್ನು ಒದಗಿಸಿದೆ.

ಸರ್ಕಾರ ಮಕ್ಕಳಿಗೆ ಕೊಡುವ ಸೌಲಭ್ಯಗಳ ಜತೆಗೆ ಟ್ರಸ್ಟ್ ಕಡೆಯಿಂದಲೂ ಒಂದೊಂದು ಜತೆ ಸಮವಸ್ತ್ರ, ಶೂ, ಸಾಕ್ಸ್, ಟ್ರ್ಯಾಕ್ ಶೂಟ್, ನೋಟ್ ಬುಕ್ಸ್ ಕೊಡಲಾಗುತ್ತಿದೆ. ವರ್ಷಕ್ಕೊಮ್ಮೆ ಉಚಿತವಾಗಿ ಪ್ರವಾಸಕ್ಕೆ ಕರೆದೊಯ್ಯಲಾಗುತ್ತಿದೆ. ಮಧ್ಯಾಹ್ನದ ಬಿಸಿಯೂಟವನ್ನು ಎಸ್‌ಡಿಎಂಸಿ ಮತ್ತು ಟ್ರಸ್ಟ್ ನಿರ್ವಹಿಸುತ್ತಿವೆ.

ಡೊನೇಷನ್ ಕೊಟ್ಟು ಕಾನ್ವೆಂಟ್‌ನಲ್ಲಿ ಓದಿಸುತ್ತಿದ್ದ ಪೋಷಕರು ತಮ್ಮ ಮಕ್ಕಳನ್ನು ಅಲ್ಲಿಂದ ಬಿಡಿಸಿ, ಈ ಶಾಲೆಗೆ ಸೇರಿಸುತ್ತಿದ್ದಾರೆ. ಶಾಲೆಗೆ ಪುನಃಶ್ಚೇತನ ಸಿಕ್ಕಿದ್ದೇ ತಡ ಹತ್ತಿರದಲ್ಲಿದ್ದ ಎರಡು ಕಾನ್ವೆಂಟ್‌ಗಳಿಗೆ ಬೀಗ ಬಿದ್ದಿದೆ! ಹಂಗರವಳ್ಳಿಯಷ್ಟೇ ಅಲ್ಲ, ಅಕ್ಕಪಕ್ಕದ ಹಳ್ಳಿಗಳು ಅಷ್ಟೇ ಏಕೆ, ಹೋಬಳಿ ಕೇಂದ್ರ ಆಲ್ದೂರಿನಿಂದಲೂ ಮಕ್ಕಳು ಈ ಶಾಲೆಗೆ ಬರಲಾರಂಭಿಸಿದ್ದಾರೆ.

11ನೇ ಪುಟಕ್ಕೆ...

'ಓದಿದ ಶಾಲೆ, ಸಮಾಜದ ಋಣ ಸ್ವಲ್ಪವಾದರೂ ತೀರಿಸಬೇಕಲ್ಲ'

ಈ ಶಾಲೆಯ ಹಳೆಯ ವಿದ್ಯಾರ್ಥಿ ಎಂಬ ಹೆಮ್ಮೆ ನನ್ನದು. ನಾನು ಕಲಿತ ಶಾಲೆಯ ಬಾಗಿಲು ಮುಚ್ಚುತ್ತಿದೆ ಎಂದಾಗ ಸುಮ್ಮನೆ ಕೂರುವುದಾದರೂ ಹೇಗೆ? ಹುಟ್ಟಿದ ಊರು, ಕಲಿತ ಶಾಲೆ, ಬೆಳೆಸಿದ ಸಮಾಜಕ್ಕೆ ವಾಪಸ್ ಏನು ಕೊಟ್ಟೆವು ಎನ್ನುವ ಪ್ರಶ್ನೆ ಕೇಳಿಕೊಂಡಾಗ ಆತ್ಮತೃಪ್ತಿ ಸಿಗಬೇಕಲ್ಲ? ಅದಕ್ಕಾಗಿ ನಮ್ಮೂರ ಕನ್ನಡ ಶಾಲೆ ಉಳಿಸುವ ಕೆಲಸಕ್ಕೆ ಒಂದಿಷ್ಟು ಅಳಿಲು ಸೇವೆ ಮಾಡಿದ್ದೇನೆ

-ಎಚ್.ಜಿ. ಪ್ರಭಾಕರ್, ಕೃಷಿ ಸಚಿವ ಎನ್. ಚಲುವರಾಯಸ್ವಾಮಿ ಅವರ ಆಪ್ತ ಕಾರ್ಯದರ್ಶಿ



ಹಂಗರವಳ್ಳಿ ಶಾಲೆಯಲ್ಲಿ ತರಗತಿ ಮುಗಿಸಿ ಮನೆಗೆ ಹೊರಡಲು ಬಸ್ ಹತ್ತುತ್ತಿರುವ ಮಕ್ಕಳು

ಸೂರ್ಯನ ಆಟ ನೋಟದ ಮಾಟ

ಕೆ.ಎಸ್.ಗಿರೀಶ

'ತೇರಾ ಏರಿ ಅಂಬರದಾಗೆ ನೇಸರ ನಗುತಾನೆ' ಕವಿ ದೊಡ್ಡರಂಗೇಗೌಡರ ಕಣ್ಣಿಗೆ ಸೂರ್ಯ ಕಂಡಿದ್ದು ಹೀಗೆ. ಈಚೆಗೆ ಕೊಡಗಿನ ಬೆಟ್ಟದ ತುದಿಯಲ್ಲಿ ಟೆಲಿಸ್ಕೋಪ್‌ನಿಂದ ಸೂರ್ಯನತ್ತ ಕಣ್ಣಿಟ್ಟಿದ್ದ ಹತ್ತಿಪ್ಪತ್ತು ಮಂದಿಯ ತಂಡ ಕಂಡಾಗ ಈ ಹಾಡು ನೆನಪಾಯಿತು. ಈ ಟೆಲಿಸ್ಕೋಪ್‌ನಿಂದ ನೋಡಿದರೆ ನಗುವ ನೇಸರನ ಬದಲಿಗೆ ನಿಗಿನಿಗಿ ಉರಿಯುವ ಸೂರ್ಯನ ದರ್ಶನವಾಯಿತು.

ಕವಿಯ ಕಣ್ಣು ಸೌಂದರ್ಯವನ್ನು ಕಂಡರೆ, ವಿಜ್ಞಾನಿಗಳ ಕಣ್ಣು ಕೌತುಕ ಮತ್ತು ವಾಸ್ತವವನ್ನು ಕಾಣುತ್ತದೆ. ರವಿಯ ಸೌಂದರ್ಯವನ್ನು ಅನೇಕ ಕವಿಗಳು ವರ್ಣಿಸಿದ್ದಾರೆ. ಆದರೆ, ರವಿಯ ನಿಜ ಸ್ವರೂಪವನ್ನು ಅಧ್ಯಯನ ಮಾಡಿದವರು ವಿರಳ. ಸೂರ್ಯಗ್ರಹಣದ ಸಮಯದಲ್ಲಿ ಒಂದಷ್ಟು ಜನ ಸೂರ್ಯನನ್ನು ದಿಟ್ಟಿಸಿದರೆ ನಂತರ ಯಾರೊಬ್ಬರೂ ಅತ್ತ ಕಣ್ಣಾಯಿಸುವುದಿಲ್ಲ ಎಂದು ಬೇಸರದಿಂದ ನುಡಿದವರು ಸೂರ್ಯನನ್ನು ನೋಡುವುದರಲ್ಲಿ ಮಗ್ನರಾಗಿದ್ದ ಹವ್ಯಾಸಿ ಖಗೋಳ ವೀಕ್ಷಕ ವಿಶ್ವನಾಥ್.

ಹೌದು. ಅವರು ಹೇಳಿದಂತೆ ಸೂರ್ಯನನ್ನು ಅಧ್ಯಯನ ಮಾಡಲು ಇಚ್ಛಿಸುವವರ ಸಂಖ್ಯೆ ಕಡಿಮೆ ಇದೆ. ಖಗೋಳ ಭೌತಶಾಸ್ತ್ರವನ್ನು ಅಧ್ಯಯನಕ್ಕೆ ಆಯ್ಕೆ ಮಾಡಿಕೊಳ್ಳುವವರ ಸಂಖ್ಯೆ ಹೆಚ್ಚೇನೂ ಇಲ್ಲ. ಅದರಲ್ಲೂ ಸೂರ್ಯನನ್ನು ಅಧ್ಯಯನ ಮಾಡಲು ಹೊರಟವರು ಬೆರಳೆಣಿಕೆಯಷ್ಟು ಮಂದಿ ಮಾತ್ರ.

ಈಗ ಸೂರ್ಯನ ಅಧ್ಯಯನಕ್ಕೆ ಅಥವಾ ವೀಕ್ಷಣೆಗೆ ಸಕಾಲ. ಪ್ರತಿ ಹನ್ನೊಂದು ವರ್ಷಗಳಿಗೊಮ್ಮೆ ಸೂರ್ಯನ ಮೇಲ್ಮೈನಲ್ಲಿ ಕೆಲವೊಂದು ಬಗೆಯ ಚಟುವಟಿಕೆಗಳು ಹೆಚ್ಚಾಗುತ್ತವೆ. ಈ ವರ್ಷ ಅಂತಹದ್ದೊಂದು ಚಟುವಟಿಕೆ ನಡೆದಿದೆ. ಈಗ ಬಿಟ್ಟರೆ ಇಂತಹ ದೃಶ್ಯಗಳನ್ನು ಕಣ್ತುಂಬಿಕೊಳ್ಳಲು ಹನ್ನೊಂದು ವರ್ಷ ಕಾಯಲೇಬೇಕಾಗುತ್ತದೆ.


ಹಾಗೆಂದು, ಬರಿಗಣ್ಣಿನಿಂದ ಸೂರ್ಯನನ್ನು ವೀಕ್ಷಿಸಲು ಆಗದು. ಅದಕ್ಕೆಂದೇ ವಿಶೇಷವಾಗಿ ರೂಪಿಸಲಾದ ಸೋಲಾರ್ ಟೆಲಿಸ್ಕೋಪ್ ಮೂಲಕವೇ ವೀಕ್ಷಿಸಬೇಕು. ಇದರಿಂದ ಹೆಚ್ಚು ನಿಖರವಾಗಿ ಸೂರ್ಯನನ್ನು ಕಾಣಬಹುದಾಗಿದೆ.

ಬೆಂಗಳೂರು ಅಸ್ಟ್ರಾನಮಿಕಲ್ ಸೊಸೈಟಿ ಎಂಬ ಹವ್ಯಾಸಿ ಖಗೋಳ ವೀಕ್ಷಕರ ಬಳಗವು ತುಸು ದುಬಾರಿ ಎನಿಸುವ ಸೋಲಾರ್ ಟೆಲಿಸ್ಕೋಪ್ ಖರೀದಿಸಿ ಇದರ ಮೂಲಕ ಸೂರ್ಯನನ್ನು ನೋಡುತ್ತಿದೆ. ಈಗಾಗಲೇ ಬೆಂಗಳೂರು ಮತ್ತು ಕೊಡಗಿನಲ್ಲಿ ಸಾಕಷ್ಟು ಬಾರಿ ಸೂರ್ಯನನ್ನು ಟೆಲಿಸ್ಕೋಪ್ ಮೂಲಕ ದಿಟ್ಟಿಸಿ, ಸಾಕಷ್ಟು ಚಿತ್ರಗಳನ್ನು ಸೆರೆ ಹಿಡಿದಿದ್ದಾರೆ. ಇಂತಹ ಟೆಲಿಸ್ಕೋಪ್‌ಗಳ ಬೆಲೆ ಅಂದಾಜು ₹1.50 ಲಕ್ಷದಿಂದ ಆರಂಭವಾಗಿ ₹10 ರಿಂದ ₹12 ಲಕ್ಷದವರೆಗೂ ಇದೆ. ದುಬಾರಿ ಬೆಲೆ ನೀಡಿದರೆ ಇನ್ನಷ್ಟು ನಿಖರವಾಗಿ ಸೂರ್ಯನನ್ನು ವೀಕ್ಷಿಸುವ ಟೆಲಿಸ್ಕೋಪ್‌ಗಳು ಸಿಗುತ್ತವೆ. ಸದ್ಯ, ನಮ್ಮ ಬಳಿ ಆರಂಭಿಕ ಬೆಲೆಯ ಟೆಲಿಸ್ಕೋಪ್ ಇದೆ ಎಂದರು ವಿಶ್ವನಾಥ್.

ಈ ಟೆಲಿಸ್ಕೋಪ್ ಕೇವಲ ಸೂರ್ಯನಿಗಾಗಿಯೇ ಇರುವಂತದ್ದು. ರಾತ್ರಿ ವೇಳೆಯಲ್ಲಿ ನಕ್ಷತ್ರ ವೀಕ್ಷಣೆ ಈ ಟೆಲಿಸ್ಕೋಪ್‌ನಿಂದ ಸಾಧ್ಯವಾಗದು. ಸೂರ್ಯನನ್ನು ಕಾಣುವ ಇಚ್ಛೆ ಉಳ್ಳವರಷ್ಟೇ ಈ ಟೆಲಿಸ್ಕೋಪ್ ಖರೀದಿಸಬಹುದು.

'ಬಿಎಎಸ್' ಕ್ಲಬ್‌ನಲ್ಲಿ ಸದ್ಯ 40 ರಿಂದ 60 ಸದಸ್ಯರು ಸಕ್ರಿಯವಾಗಿದ್ದಾರೆ. ಆನ್‌ಲೈನ್‌ನಲ್ಲಿ ಎರಡು ಸಾವಿರಕ್ಕೂ ಅಧಿಕ ಮಂದಿ ನೋಂದಾಯಿಸಿಕೊಂಡಿದ್ದಾರೆ. ಜನರಲ್ಲಿ ಖಗೋಳ ವೀಕ್ಷಣೆಯ ಕುರಿತು ಆಸಕ್ತಿ ಬೆಳೆಸುವುದು ಇದರ ಉದ್ದೇಶ. ಪ್ರತಿ ವರ್ಷ ಡಿಸೆಂಬರ್‌ನಿಂದ ಮಾರ್ಚ್‌ವರೆಗೆ ಕೊಡಗಿನ ಬೆಟ್ಟಗುಡ್ಡಗಳಿಗೆ ಬಂದು ಆಕಾಶಕಾಯಗಳನ್ನು ವೀಕ್ಷಿಸುವುದು ಇವರ ಹವ್ಯಾಸ.

11ನೇ ಪುಟಕ್ಕೆ...



ಸೋಲಾರ್ ಟೆಲಿಸ್ಕೋಪ್ ಮೂಲಕ ಸೂರ್ಯನನ್ನು ಕಂಡ ಬಗೆ

ಚಿತ್ರ: ಪ್ರಮೋದ್



ಸೋಲಾರ್ ಟೆಲಿಸ್ಕೋಪ್ ಮೂಲಕ ಸೂರ್ಯನನ್ನು ವೀಕ್ಷಿಸುತ್ತಿರುವ ಹವ್ಯಾಸಿ ಖಗೋಳ ವೀಕ್ಷಕರು

ಸನ್ನಿ ಸೈಡ್- ಅನನ್ಯ ವಸ್ತು ಸಂಗ್ರಹಾಲಯ

ಜನರಲ್ ಕೆ.ಎಸ್. ತಿಮ್ಮಯ್ಯನವರ ಬದುಕಿನ ಎಲ್ಲಾ ಪ್ರಮುಖ ಘಟನಾವಳಿಗಳನ್ನು ಸಾರ್ವಜನಿಕರಿಗೆ ಪರಿಚಯಿಸುವ ಉದ್ದೇಶದಿಂದ ಅವರು ಹುಟ್ಟಿ ಬೆಳೆದ 'ಸನ್ನಿ ಸೈಡ್' ಮನೆಯನ್ನು ವಿಶೇಷ ವಸ್ತು ಸಂಗ್ರಹಾಲಯವಾಗಿ ಮಾರ್ಪಡಿಸಲಾಗಿದೆ...

ಎಚ್ ಎಸ್ ನವೀನ ಕುಮಾರ್ ಹೊಸದುರ್ಗ

ಕಣ್ಣು ಹಾಯಿಸಿದ ಕಡೆಯೆಲ್ಲಾ ಕವಿ ಕುವೆಂಪು ಹೇಳಿದಂತೆ ದೇವರ ರುಜುವಿನ ಹಾಗೆ ಗೋಚರಿಸುವ ಹಸಿರು ಸಿರಿ ಸೊಬಗಿನ ಪ್ರಕೃತಿಯ ನೆಲೆವೀಡು ನಮ್ಮ ಕೊಡಗು. ಇದು ದೇಶವನ್ನು ರಕ್ಷಿಸುವ ವೀರ ಸೈನಿಕರ ತವರೂರು ಹೌದು. ನಮ್ಮ ದೇಶದ ರಕ್ಷಣಾ ಪಡೆಗಳನ್ನು ಮುನ್ನಡೆಸಿದ ಇಲ್ಲಿನ ಹಲವಾರು ವೀರಯೋಧರ ಪಟ್ಟಿಯಲ್ಲಿ ಎದ್ದು ಕಾಣಿಸುವವರು ಫೀಲ್ಡ್ ಮಾರ್ಷಲ್ ಕಾರಿಯಪ್ಪ ಹಾಗೂ ಜನರಲ್ ಕೆ. ಎಸ್. ತಿಮ್ಮಯ್ಯ.

ಜನರಲ್ ಕೆ. ಎಸ್. ತಿಮ್ಮಯ್ಯನವರು ಹುಟ್ಟಿ ಬೆಳೆದ ಮಡಿಕೇರಿಯ ಬೃಹತ್ ಬಂಗಲೆ 'ಸನ್ನಿ ಸೈಡ್' ಅನ್ನು ವಿಶೇಷ ವಸ್ತು ಸಂಗ್ರಹಾಲಯವಾಗಿ ಮಾರ್ಪಾಡು ಮಾಡಲಾಗಿದೆ. ಇದು 2021ರಲ್ಲಿ ಅಂದಿನ ರಾಷ್ಟ್ರಪತಿ ರಾಮನಾಥ್ ಕೋವಿಂದ್ ಅವರಿಂದ ಉದ್ಘಾಟನೆಗೊಂಡಿತು. ಈ ಸಂಗ್ರಹಾಲಯವು ಕೊಡಗಿಗೆ ಭೇಟಿ ನೀಡಿ, ಅಲ್ಲಿನ ಪ್ರಕೃತಿ ಸೌಂದರ್ಯವನ್ನು ಸವಿಯುವ ಪ್ರವಾಸಿಗರಿಗೆ ವಿಶೇಷ ಮಾಹಿತಿಗಳನ್ನು ನೀಡಿ ತಮ್ಮ ಪ್ರವಾಸವನ್ನು ಇನ್ನಷ್ಟು ಅರ್ಥಪೂರ್ಣವಾಗಿಸುವ ತಾಣವಾಗಿದೆ. ಇದು ಸುಪ್ರಸಿದ್ಧ ಸೈನಿಕನೋರ್ವನ ಅದ್ಭುತ ಸಾಧನೆಗಳ ಅನಾವರಣ ಮಾಡುವುದರ ಜೊತೆಗೇ ನಮಗೆ ಕೊಡವ ಜನಪದದ ವಿಶಿಷ್ಟ ಸಂಸ್ಕೃತಿಯನ್ನೂ ಬಹಳ ಚೆನ್ನಾಗಿ ಪರಿಚಯಿಸುತ್ತದೆ.

1906ರಲ್ಲಿ ಇದೇ ಮನೆಯಲ್ಲಿ ಜನಿಸಿದ ಕೊಡೆಂಡರ ಸುಬ್ಬಯ್ಯ ತಿಮ್ಮಯ್ಯ (ಕೆ.ಎಸ್.ತಿಮ್ಮಯ್ಯ) ನವರು ಕೊಡಗಿನ ಅತ್ಯಂತ ಶ್ರೀಮಂತ ಹಾಗೂ ಪ್ರತಿಷ್ಠಿತ ಮನೆತನವಾದ ಚಪ್ಪುದಿರ ಕುಟುಂಬದಲ್ಲಿ ಹುಟ್ಟಿದವರು. ಅವರ ತಂದೆ ಸುಬ್ಬಯ್ಯ ಬಹಳ ಸಿರಿವಂತರು ಹಾಗೂ ತಾಯಿ ಸೀತಮ್ಮ ಪ್ರಸಿದ್ಧ ಸಮಾಜ ಸೇವಕಿಯಾಗಿದ್ದರು. ತಮ್ಮ ಸಮಾಜ ಸೇವೆಗೆ ಕೈಸರ್- ಇ- ಹಿಂದ್ ಪದಕವನ್ನು ಪಡೆದಿದ್ದರು. ತಿಮ್ಮಯ್ಯನವರ ಪತ್ನಿ ನೀನಾ ಸಹ ಸುಪ್ರಸಿದ್ಧ ನೃತ್ಯಗಾರ್ತಿ ಹಾಗೂ ಸಮಾಜ ಸೇವಕಿ. ತಿಮ್ಮಯ್ಯನವರ ಅತ್ಯಂತ ವಿಶಿಷ್ಟವಾದ ಸೇನಾ ಸೇವೆ 35 ವರ್ಷಗಳಷ್ಟು ಸುದೀರ್ಘವಾದದ್ದು. ಇದರಲ್ಲಿ ಅವರು ಎರಡನೇ ವಿಶ್ವ ಯುದ್ಧದ ಸಮಯದಲ್ಲಿ ಬರ್ಮಾದ ಇನ್ಫ್ಯಾಂಟರಿ ಬ್ರಿಗೇಡ್ ಅನ್ನು ಯಶಸ್ವಿಯಾಗಿ ಮುನ್ನಡೆಸಿದ್ದರು. ಅಷ್ಟೇ ಅಲ್ಲದೆ ಸ್ವಾತಂತ್ರ್ಯಾನಂತರ 1948ರಲ್ಲಿ ನಡೆದ ಪಾಕಿಸ್ತಾನ ದಾಳಿಯನ್ನು ಅತ್ಯಂತ ಯಶಸ್ವಿಯಾಗಿ ಹಿಮ್ಮೆಟ್ಟಿಸಿ ನಮ್ಮ ದೇಶದ ರಕ್ಷಣೆ ಮಾಡುವಲ್ಲಿ ಪ್ರಮುಖ ಪಾತ್ರ ವಹಿಸಿದ್ದರು. ಭಾರತೀಯ ಸೇನೆಯಲ್ಲಿ ಅತ್ಯುನ್ನತ ಹುದ್ದೆಯಾದ ಆರ್ಮಿ ಚೀಫ್ ಪದವಿಗೇರಿದ್ದರು ಹಾಗೂ ಅತ್ಯುನ್ನತ ರ್‍ಯಾಂಕ್ ಆದ ಜನರಲ್ ಸಹ ಆಗಿದ್ದವರು. ಬ್ರಿಟಿಷ್ ಆಳ್ವಿಕೆಯ ಸಂದರ್ಭದಲ್ಲಿಯೇ ಸೇನೆಯ ಉನ್ನತ ಹುದ್ದೆಗಳನ್ನು ಅಲಂಕರಿಸಿದ್ದ ತಿಮ್ಮಯ್ಯನವರು ಆಗಿನ ಸಂದರ್ಭದಲ್ಲಿ, ಬ್ರಿಟಿಷರು, ಸೈನ್ಯದಲ್ಲಿದ್ದು ಭಾರತೀಯರನ್ನು ತಿರಸ್ಕಾರದಿಂದ ನೋಡುತ್ತಿದ್ದ ಅವಮಾನಗಳನ್ನೂ ಅನುಭವಿಸಿದ್ದರು. ಬ್ರಿಟಿಷರ ಆಳ್ವಿಕೆಯಲ್ಲಿ ಬಾಗ್ದಾದ್, ಹೈದರಾಬಾದ್, ಅಲಹಾಬಾದ್ ರೆಜಿಮೆಂಟ್‌ಗಳಲ್ಲಿ ಸೇವೆ ಸಲ್ಲಿಸಿದ್ದ ತಿಮ್ಮಯ್ಯನವರು, 1942ರಲ್ಲಿ ಕ್ವಿಟ್ ಇಂಡಿಯಾ ಚಳವಳಿ ಉತ್ತುಂಗ ಸ್ಥಿತಿಯಲ್ಲಿದ್ದಾಗ, ಭಾರತೀಯ ಹೋರಾಟಗಾರರ ಮೇಲೆ ಆಕ್ರಮಣ ನಡೆಸದೆ ಹೋರಾಟಗಾರರ ಜೊತೆಗೆ ಶಾಂತಿಯುತವಾದ ಸಂಧಾನ ಮಾಡಿದ್ದರು. ಅಂದಿನ ಅವಿಭಜಿತ ಭಾರತದಲ್ಲಿದ್ದ ಈಗಿನ ಪಾಕಿಸ್ತಾನದ ಕ್ವೆಟ್ಟಾದಲ್ಲಿ ಸಂಭವಿಸಿದ ಭಯಾನಕ ಭೂಕಂಪದಲ್ಲಿ ಸಂತ್ರಸ್ತರನ್ನು ಸಂರಕ್ಷಣೆಯಲ್ಲಿ ಪ್ರಮುಖ ಪಾತ್ರ ವಹಿಸಿದ್ದರು. 1943ರಲ್ಲಿ ಎರಡನೇ ವಿಶ್ವ ಯುದ್ಧದ ಸಂದರ್ಭದಲ್ಲಿ, ಜಪಾನೀಯರ ವಿರುದ್ಧ ಹೋರಾಡಲು ಬರ್ಮಾಕ್ಕೆ ತೆರಳಿ, ಜಪಾನೀಯರ ಮೇಲೆ ಅನಿರೀಕ್ಷಿತ ದಾಳಿ ಮಾಡಿ ಭಾರತೀಯ ಸೈನಿಕರ ರಕ್ಷಣೆ ಮಾಡಿದ್ದರು. ನಂತರ ಸಿಂಗಪುರದಲ್ಲಿಯೂ ಸೈನ್ಯದ ಕಾರ್ಯವನ್ನು ನಿರ್ವಹಿಸಿದ್ದರು.

ಸ್ವಾತಂತ್ರ್ಯ ನಂತರ ಭಾರತೀಯ ಸೇನೆ ಅತ್ಯಂತ ಪ್ರಮುಖ ಹುದ್ದೆಗಳನ್ನು ನಿರ್ವಹಿಸಿದ ತಿಮ್ಮಯ್ಯನವರು 1948ರಲ್ಲಿ ಪಾಕಿಸ್ತಾನದ ವಿರುದ್ಧದ ಭಾರತದ ಜಯದಲ್ಲಿ ಪ್ರಮುಖ ಪಾತ್ರ ವಹಿಸಿದ್ದರು. ನಂತರ ಮೇಜರ್ ಜನರಲ್, ಜನರಲ್ ರ್‍ಯಾಂಕ್‌ಗಳಿಗೆ ಏರಿ, ಆರ್ಮಿ ಚೀಫ್ ಕೂಡ ಆಗಿದ್ದರು. ನಿವೃತ್ತಿಯ ನಂತರವೂ ಕೊರಿಯಾ ಹಾಗೂ ಸೈಪ್ರಸ್ ದೇಶಗಳಲ್ಲಿ ವಿಶ್ವಸಂಸ್ಥೆಯ ಸೈನ್ಯವನ್ನು ಪ್ರತಿನಿಧಿಸಿದ ಹೆಗ್ಗಳಿಕೆ ತಿಮ್ಮಯ್ಯನವರದು.

ಇಂತಹ ಅತ್ಯಂತ ಸಂಭ್ರಮದ, ಯಶಸ್ಸಿನ ಜೀವನ ನಡೆಸಿದ ಜನರಲ್ ತಿಮ್ಮಯ್ಯನವರ ಬದುಕಿನ ಈ ಎಲ್ಲಾ ಪ್ರಮುಖ ಘಟನಾವಳಿಗಳನ್ನು ಸಾರ್ವಜನಿಕರಿಗೆ ಪರಿಚಯಿಸುವ ಹಾಗೂ ಪ್ರೇರಣೆ ನೀಡುವ ಉದ್ದೇಶದಿಂದ ಜನರಲ್ ಕೆ. ಎಸ್. ತಿಮ್ಮಯ್ಯ ವಸ್ತು ಸಂಗ್ರಹಾಲಯವನ್ನು ನಿರ್ಮಿಸಲಾಗಿದೆ. ಇಲ್ಲಿ ತಿಮ್ಮಯ್ಯನವರ ಸೇನಾ ಸಾಧನೆಯ ಹಲವು ಮಾಹಿತಿಪೂರ್ಣ ಫಲಕಗಳು, ಅವರ ಕುಟುಂಬದ ಚಿತ್ರಣ, ಅವರು ಬಳಸುತ್ತಿದ್ದ ಮಂಚ, ಟೇಬಲ್, ಡೆಸ್ಕ್ ಮುಂತಾದವುಗಳನ್ನು ಈ ನಿವಾಸದ ಇಪ್ಪತ್ತೆರಡು ಕೋಣೆಗಳಲ್ಲಿ ಅತ್ಯಂತ ವ್ಯವಸ್ಥಿತವಾಗಿ ಜೋಡಿಸಿಡಲಾಗಿದೆ. ಜೊತೆಗೆ ಸೇನೆಯ ಯೋಧರು ಬಳಸುವ ವಿಭಿನ್ನ ಶಸ್ತ್ರಾಸ್ತ್ರಗಳು, ಅವರ ಉಡುಗೆ ತೊಡುಗೆಗಳನ್ನು, ಅವುಗಳ ಕುರಿತು ಪರಿಚಯಾತ್ಮಕ ಮಾಹಿತಿಗಳೊಂದಿಗೆ ಸಂಗ್ರಹಿಸಿಡಲಾಗಿದೆ. ಇದಲ್ಲದೇ ಹೊರಾಂಗಣದಲ್ಲಿ ಸೇನೆಯಲ್ಲಿ ಬಳಸುವ ಟ್ಯಾಂಕರ್, ನೌಕಾದಳದ ನೌಕೆಗಳನ್ನು ಸಹ ಇರಿಸಲಾಗಿದೆ.


ಈ ಸಂಗ್ರಹಾಲಯದಲ್ಲಿ ತಿಮ್ಮಯ್ಯನವರು ವಿಶ್ವಸಂಸ್ಥೆಯ ಪ್ರತಿನಿಧಿಯಾಗಿ ಕೊರಿಯಾದ ಯುದ್ಧ ಕೈದಿಗಳ ಬಿಡುಗಡೆಯಲ್ಲಿ ಪ್ರಮುಖ ಪಾತ್ರ ವಹಿಸಿದ್ದರು. ಅವರ ಅನನ್ಯ ಕ್ಷಮತೆಯನ್ನು ಸ್ಮರಿಸಿ, ಈ ರೀತಿ ಬಿಡುಗಡೆಯಾದ ಕೊರಿಯಾದ 'ವ್ಹೂ' ಎಂಬ ವ್ಯಕ್ತಿ, 2005ರಲ್ಲಿ ಕೊರಿಯಾದಲ್ಲಿ ರೈಲಿನಲ್ಲಿ ಪ್ರಯಾಣಿಸುತ್ತಿದ್ದ ಕೊಡಗಿನ ಅಧಿಕಾರಿ ಒಬ್ಬರಿಗೆ ಕೊಡುಗೆಯಾಗಿ ನೀಡಿದ ಚಿನ್ನಲೇಪಿತ ವಿಶೇಷ ಕೈಗಡಿಯಾರವನ್ನು 'ಸ್ಟೋರಿ ಆಫ್ ದ ವ್ಹೂ ವಾಚ್' ಎಂದು ಸಂಗ್ರಹಿಸಿಡಲಾಗಿದೆ.

ಇದರ ಜೊತೆಯಲ್ಲಿಯೇ ಕೊಡವ ಜನಪದದ ವಿಶಿಷ್ಟ ಸಂಸ್ಕೃತಿಯ ಅನಾವರಣವೂ ಈ ಸಂಗ್ರಹಾಲಯದಲ್ಲಿದೆ. ಕೊಡವ ಪುರುಷ ಹಾಗೂ ಮಹಿಳೆಯರ ವಿಶಿಷ್ಟ ಉಡುಗೆ -ತೊಡುಗೆ, ಅವರ ಸಾಂಪ್ರದಾಯಿಕ ಆಭರಣಯುಕ್ತ ಆಯುಧ ಮುಂತಾದವುಗಳನ್ನು ತುಂಬಾ ಚೆನ್ನಾಗಿ, ಪರಿಚಯಾತ್ಮಕವಾಗಿ ಸಂಗ್ರಹಿಸಿಡಲಾಗಿದೆ. ಪ್ರವೇಶದಲ್ಲಿಯೇ ನಮ್ಮನ್ನು ಸ್ವಾಗತಿಸುವ ಸೈನಿಕನ ಬೂಟಿನ ಬೃಹತ್ ಪ್ರತಿಕೃತಿ ಅತ್ಯಂತ ಆಕರ್ಷಕವಾಗಿದೆ. ಇದಲ್ಲದೇ ಜನರಲ್ ತಿಮ್ಮಯ್ಯನವರು ಪ್ರಮುಖ ಪಾತ್ರ ವಹಿಸಿದ ವಿವಿಧ ಯುದ್ಧಗಳ, ಸೇನಾ ಚಟುವಟಿಕೆಗಳ ಪರಿಚಯಾತ್ಮಕ ವಿಡಿಯೊ ಶೋ ಕೂಡ ಇಲ್ಲಿದೆ.

ಒಟ್ಟಾರೆಯಾಗಿ ಈ ವಸ್ತು ಸಂಗ್ರಹಾಲಯದ ಒಳಹೊಕ್ಕರೆ ನಮ್ಮ ದೇಶದ ಸೈನಿಕರ ಕುರಿತು ಹೆಮ್ಮೆ ಮೂಡಿಸುವಂತಹ ವಿಶೇಷ ಚಿತ್ರಣಗಳ ಜೊತೆಗೇ ಕೇವಲ ತಮ್ಮ 59 ವರ್ಷಗಳ ಜೀವಿತಾವಧಿಯಲ್ಲಿ, ದೇಶದ ಅತ್ಯುತ್ತಮ ಸೈನಿಕರಲ್ಲಿ ಒಬ್ಬರು ಎಂಬ ಖ್ಯಾತಿಗೆ ಪಾತ್ರರಾಗಿದ್ದ ತಿಮ್ಮಯ್ಯನವರ ಬದುಕಿನ ಚಿತ್ರಣವನ್ನು ಯುವ ಜನತೆಗೆ ತಾವೂ ಸೈನಿಕರಾಗಬೇಕೆಂದು ಪ್ರೇರಣೆ ಮೂಡಿಸುವಂತೆ ಸಂಯೋಜಿಸಲಾಗಿದೆ. ಇದಲ್ಲದೇ ವಿಶಿಷ್ಟ ಕೊಡವ ಜನಜೀವನದ ಪರಿಚಯವನ್ನೂ ನಾಡಿನ ಬೇರೆ ಬೇರೆ ಭಾಗದ ಜನರಿಗೆ ಮಾಡಿಕೊಡುವ ಈ ಸಂಗ್ರಹಾಲಯ, ಬಹಳ ಅಪರೂಪದ್ದಾಗಿದೆ. ಮಡಿಕೇರಿಗೆ ಭೇಟಿ ನೀಡುವ ಪ್ರವಾಸಿಗರೆಲ್ಲರೂ ತಪ್ಪದೇ ನೋಡಬೇಕಾದ ವಿಶೇಷವಾದ ತಾಣವಾಗಿದೆ.



ಜನರಲ್ ಕೆ.ಎಸ್. ತಿಮ್ಮಯ್ಯನವರ ಕೆಲಸಗಳನ್ನು ಪರಿಚಯಿಸುವ ಭಾವಚಿತ್ರಗಳು



ಜನರಲ್ ಕೆ.ಎಸ್. ತಿಮ್ಮಯ್ಯನವರು ಬಳಸುತ್ತಿದ್ದ ಬಂದೂಕು

ಒಂದು ಸರ್ಕಾರಿ ಶಾಲೆ...

10ನೇ ಪುಟದಿಂದ...

ಇಲ್ಲಿ ಶಿಕ್ಷಣ ಪಡೆಯುತ್ತಿರುವ ಮಕ್ಕಳಲ್ಲಿ ಹೆಚ್ಚಿನವರು ಎಸ್‌ಸಿ, ಎಸ್‌ಟಿ, ಹಿಂದುಳಿದ ವರ್ಗದವರು.

ಶಿಥಿಲಾವಸ್ಥೆಯಲ್ಲಿದ್ದ ಶಾಲಾ ಕಟ್ಟಡ ತೆರವುಗೊಳಿಸಿ ಹೊಸ ಕಟ್ಟಡವನ್ನು ನಿರ್ಮಿಸಲು ಮುಂದಾದಾಗ, ತರಗತಿ ನಡೆಸುವುದು ಎಲ್ಲಿ ಎನ್ನುವ ತಲೆನೋವು ಶುರುವಾಯಿತು. ಆಗ ಗ್ರಾಮದ ಗಿರಿಜಮ್ಮ ಮತ್ತು ಗೋಪಾಲಗೌಡ ದಂಪತಿ ತಮ್ಮ ವಾಸದ ಮನೆಯನ್ನೇ ಶಾಲೆ ನಡೆಸಲು ತಾತ್ಕಾಲಿಕವಾಗಿ ಬಿಟ್ಟುಕೊಟ್ಟರು. ಮೂರು ವರ್ಷ ಅದೇ ಮನೆಯಲ್ಲಿ ತರಗತಿಗಳು ನಡೆದವು. ಈಗ ಖಾಸಗಿ ಹೈಟೆಕ್ ಶಾಲೆಗಳನ್ನು ನಾಚಿಸುವಂತೆ ಈ ಸರ್ಕಾರಿ ಶಾಲೆಯ ಸುಸಜ್ಜಿತ ಮೂರು ಅಂತಸ್ತಿನ ಕಟ್ಟಡ ಸುಮಾರು ₹4 ಕೋಟಿ ವೆಚ್ಚದಲ್ಲಿ ಸಿದ್ಧವಾಗಿದೆ.

ವಿಶಾಲ ಬೋಧನಾ ಕೊಠಡಿಗಳು, ಗ್ರಂಥಾಲಯ, ಕಂಪ್ಯೂಟರ್ ಲ್ಯಾಬ್, ಸಿಬ್ಬಂದಿ ಕೊಠಡಿ, ಅಡುಗೆ ಕೋಣೆ, ಭೋಜನಾಲಯ, ಕ್ರೀಡಾ ಸಾಮಗ್ರಿಗಳ ಕೊಠಡಿ ...ಹೀಗೆ ಎಲ್ಲದಕ್ಕೂ ಪ್ರತ್ಯೇಕ ಕೊಠಡಿಗಳಿವೆ. 500 ಆಸನ ಸಾಮರ್ಥ್ಯದ ಸಭಾಂಗಣವೂ ಇದೆ! ಸುಸಜ್ಜಿತ ಶೌಚಾಲಯಗಳಿವೆ. ಶಾಲೆಯ ಪಕ್ಕದಲ್ಲಿ ಮೂರು ಗುಂಟೆ ಜಾಗ ಖರೀದಿಸಿ, ಆಟದ ಮೈದಾನ ನಿರ್ಮಿಸಲಾಗಿದೆ. ಸುಸಜ್ಜಿತ ಕ್ರೀಡಾಂಗಣ ನಿರ್ಮಾಣಕ್ಕೂ ಯೋಜನೆ ಸಿದ್ಧವಾಗಿದ್ದು, ಇದಕ್ಕಾಗಿ ಕಂದಾಯ ಇಲಾಖೆ 5 ಎಕರೆ ಭೂಮಿಯನ್ನು ಗುರುತು ಮಾಡಿದೆ.

ಬಸ್‌ಗಳು ಬಂದವು!: ಮಕ್ಕಳನ್ನು ಸುರಕ್ಷಿತವಾಗಿ ಶಾಲೆಗೆ ಕರೆತಂದು, ಮನೆ ತಲುಪಿಸಲು ಹಂಗರವಳ್ಳಿಯ ಗೋಪಾಲಗೌಡ ಒಂದು ಬಸ್ ಕೊಟ್ಟರು. ಇದು ಸಾಕಾಗದೇ ಇದ್ದಾಗ ವಿಧಾನ ಪರಿಷತ್ ಉಪಸಭಾಪತಿ ಎಂ.ಕೆ. ಪ್ರಾಣೇಶ್ ಅವರಿಂದಲೂ ತಮ್ಮ ಅನುದಾನದಲ್ಲಿ ಒಂದು ಬಸ್ ಖರೀದಿಸಿ ಶಾಲೆಗೆ ನೀಡುವಂತೆ ಪ್ರೇರೇಪಿಸಿದರು. ಸದ್ಯ, ಶಾಲೆಯಲ್ಲಿ ಎರಡು ಬಸ್‌ಗಳಿದ್ದು, ಬಸ್ ಚಾಲಕ, ನಿರ್ವಾಹಕರ ಸಂಬಳ ಮತ್ತು ಡೀಸೆಲ್ ವೆಚ್ಚವನ್ನು ಮಾತ್ರ ಮಕ್ಕಳ ಪೋಷಕರು ಪ್ರತಿ ತಿಂಗಳು ಹಂಚಿಕೊಳ್ಳುತ್ತಿದ್ದಾರೆ.

ಇಷ್ಟೆಲ್ಲ ಮಾಡಿದ ಮೇಲೆ ಉತ್ತಮ ಶೈಕ್ಷಣಿಕ ವಾತಾವರಣದಲ್ಲಿ ಉತ್ತಮ ಫಲಿತಾಂಶ ಬರಬೇಕಲ್ಲವೇ? ಅದಕ್ಕಾಗಿ ಟ್ರಸ್ಟ್ ಪದಾಧಿಕಾರಿಗಳು ಎರಡು ವಾರಗಳಿಗೊಮ್ಮೆ ಶಾಲೆಯ ಪ್ರಗತಿ ಮತ್ತು ಚಟುವಟಿಕೆಗಳ ಪರಾಮರ್ಶೆ ನಡೆಸುತ್ತಾರೆ. 'ನಮ್ಮ ಶಾಲೆಯ ಮಕ್ಕಳು ಇಂಗ್ಲಿಷ್ ಅನ್ನು ಸರಾಗವಾಗಿ ಮಾತನಾಡುತ್ತವೆ. ಇಲ್ಲಿ ಕಲಿತವರು ಯುಪಿಎಸ್‌ಸಿ, ಕೆಪಿಎಸ್‌ಸಿ, ನೀಟ್, ಸಿಇಟಿ ಮುಂತಾದ ಸ್ಪರ್ಧಾತ್ಮಕ ಪರೀಕ್ಷೆಗಳನ್ನು ಪಾಸು ಮಾಡುವ ಸಾಮರ್ಥ್ಯಕ್ಕೇರಬೇಕು, ಸಮಾಜದಲ್ಲಿ ಉನ್ನತ ಸ್ಥಾನದಲ್ಲಿ ನಿಲ್ಲಬೇಕು ಎನ್ನುವ ಕನಸು ನಮ್ಮದು' ಎನ್ನುತ್ತಾರೆ ಟ್ರಸ್ಟಿನ ಅಧ್ಯಕ್ಷ ಎಚ್.ಜಿ.ಪ್ರದೀಶ್.

'ಅತಿಥಿ ಶಿಕ್ಷಕರೊಂದಿಗೆ ಕಾಯಂ ಶಿಕ್ಷಕರು ಹೊಂದಾಣಿಕೆಯಿಂದ



ಶ್ರಮವಹಿಸಿ ಮಕ್ಕಳ ಕಲಿಕೆಗೆ ಗಮನಾರ್ಹ ಕೊಡುಗೆ ನೀಡುತ್ತಿದ್ದಾರೆ. ನಮ್ಮ ಶಾಲೆಯನ್ನು ಜಿಲ್ಲೆಯಲ್ಲಿಯೇ ಮಾದರಿಯನ್ನಾಗಿ ಮಾಡಬೇಕೆಂಬ ಕನಸಿದೆ' ಎಂದು ಪ್ರಭಾರಿ ಮುಖ್ಯ ಶಿಕ್ಷಕಿ ರಾಜೇಶ್ವರಿ ಹೇಳಿದರು.

'ಆರಂಭದಲ್ಲಿ ಒಂದೊಂದು ತರಗತಿಗೆ 30 ಮಕ್ಕಳ ಸಂಖ್ಯೆಗೆ ಮುಟ್ಟಿಸುವ ಗುರಿ ಇತ್ತು. ಈಗ ಅದನ್ನು ಮೀರಿ ಹೋಗುತ್ತಿದೆ. ಇನ್ನು ಎರಡು ವರ್ಷಗಳಲ್ಲಿ 8 ರಿಂದ 10ನೇ ತರಗತಿಯವರೆಗೆ ಶುರುವಾಗಲಿದೆ. ಗ್ರಾಮಸ್ಥರು, ಜನಪ್ರತಿನಿಧಿಗಳು, ಶಿಕ್ಷಣ ಇಲಾಖೆ, ಜಿಲ್ಲಾ ಪಂಚಾಯಿತಿ, ಜಿಲ್ಲಾಡಳಿತದಿಂದ ನಮಗೆ ಸಂಪೂರ್ಣ ಸಹಕಾರ ಸಿಗುತ್ತಿದೆ' ಎನ್ನುತ್ತಾರೆ ಎಸ್‌ಡಿಎಂಸಿ ಅಧ್ಯಕ್ಷ ರುದ್ರೇಗೌಡ.

ಕೊಲ್ಹಾಪುರಿ ಜೋಡು ಪ್ರಸಿದ್ಧಿ ಜೋರು

10ನೇ ಪುಟದಿಂದ...

ಹೊಟ್ಟೆ-ಬಟ್ಟೆಗೇನೂ ತೊಂದರೆ ಇಲ್ಲ: ಮನೆ ಕೆಲಸ ಮಾಡುತ್ತಲೇ ಹಲವು ಮಹಿಳೆಯರು ಚಪ್ಪಲಿ ತಯಾರಿಕೆಯಲ್ಲಿ ತೊಡಗಿದ್ದು ಕಂಡುಬರುತ್ತದೆ. ಇದರಿಂದ ಹೆಚ್ಚಿನ ಗಳಿಕೆಯೇ ಆಗುವುದಿಲ್ಲ. ಆದರೆ ಹೊಟ್ಟೆ-ಬಟ್ಟೆಗೇನೂ ತೊಂದರೆ ಇಲ್ಲ ಎನ್ನುವವರೂ ಇದ್ದಾರೆ.

'ನಾನು ಹತ್ತು ವರ್ಷಗಳಿಂದ ಮೆಟ್ಟುಗಳನ್ನು ಕೈಯಿಂದ ಹೊಲಿಯುತ್ತಿದ್ದೇನೆ. ಮನೆಯಲ್ಲೇ ಕೆಲಸ. ದಿನಕ್ಕೆ ₹200 ರಿಂದ ₹300 ಗಳಿಸುತ್ತೇನೆ' ಎಂದು ರೇಖಾ ಭಂಡಾರೆ ಹೇಳಿದರೆ, 'ನಾನು ಚಪ್ಪಲಿಯ ಉಂಗುಷ್ಟವನ್ನು (ಹೆಬ್ಬೆರಳಿಗೆ ಆಧಾರವಾಗುವ ಪಟ್ಟಿ) ಸಿದ್ಧಪಡಿಸುತ್ತೇನೆ. ಈ ಕೆಲಸ ಬದುಕಿಗೆ ಆಧಾರವಾಗಿದೆ' ಎಂದರು ಶೋಭಾ ಹೊನಖಂಡೆ.

ಗಡಿಯಲ್ಲಿ ಈ ಮೆಟ್ಟುಗಳಿಗೆ 'ಹೀಟ್ ಕಂಟ್ರೋಲರ್' ಎಂತಲೂ ಹೆಸರುಂಟು. 'ನಮ್ಮೂರಿನಲ್ಲಿ ಯಾರದ್ದಾದರೂ ಕಣ್ಣು ಉರಿಯಲು ಆರಂಭಿಸಿದರೆ, ಕೊಲ್ಹಾಪುರಿ ಚಪ್ಪಲಿ ಧರಿಸುವಂತೆ ಹಿರಿಯರು ಹೇಳುತ್ತಿದ್ದರು. ಶರೀರದ ಉಷ್ಣತೆ ಹೀರಬಲ್ಲ ಅಷ್ಟೊಂದು ಶಕ್ತಿ ಇದಕ್ಕಿದೆ' ಎಂದು ಹೆಮ್ಮೆಯಿಂದ ಹೇಳುತ್ತ ತಾವು ಸಿದ್ಧಪಡಿಸುತ್ತಿದ್ದ ಚಪ್ಪಲಿಯನ್ನು ತೋರಿಸಿದರು ಮದಭಾವಿಯ ಮಾರುತಿ ಭಂಡಾರೆ. ಇದೇ ಕಾರಣಕ್ಕೆ ಬೇಸಿಗೆಯಲ್ಲಿ ಹೆಚ್ಚಿನವರು ಕೊಲ್ಹಾಪುರಿ ಮೆಟ್ಟನ್ನು ಮೆಟ್ಟುತ್ತಾರೆ.

'ನಮ್ಮಲ್ಲಿ ಚಪ್ಪಲಿ ತಯಾರಿಸಲು ಯಾರಿಗೂ ತರಬೇತಿ ಕೊಟ್ಟಿಲ್ಲ. ಬಾಲ್ಯದಿಂದಲೇ ಅದು ಕರಗತವಾಗಿ ಬಂದಿದೆ. ನಮ್ಮ ಘಟಕದಲ್ಲಿ ಆರು ಮಂದಿ ಕೆಲಸ ಮಾಡುತ್ತಾರೆ. ತಿಂಗಳಿಗೆ 800 ಜೋಡಿ ಚಪ್ಪಲಿ ತಯಾರಾಗುತ್ತವೆ. ನಮ್ಮಲ್ಲಿ ದುಡಿಯುವ ಪುರುಷರಿಗೆ ದಿನಕ್ಕೆ ₹350, ಮಹಿಳೆಯರಿಗೆ ₹200 ಕೂಲಿ ಸಿಗುತ್ತದೆ' ಎಂದು ಮಾರುತಿ ಹೇಳುತ್ತಾರೆ.

'ಚೆನ್ನೈ, ಮುಗಳಖೋಡ, ಸೈದಾಪುರ, ಮಾಲಗಾಂವದಿಂದ ಕಚ್ಚಾವಸ್ತು ತರಲಾಗುತ್ತದೆ. ಇದನ್ನು ಸುಣ್ಣದ ನೀರಿನಲ್ಲಿ ನೆನೆಸಿದಾಗ, ಕೂದಲು ಬೇರ್ಪಡುತ್ತವೆ. ನಂತರ ಸಸ್ಯಗಳ ಎಲೆ, ಬೀಜ, ತೊಗಟೆ ಬಳಸಿ ವಿವಿಧ ಪ್ರಕ್ರಿಯೆ ಮೂಲಕ ಚರ್ಮ ಹದಗೊಳಿಸಲಾಗುತ್ತದೆ. ಬಳಿಕ ಅಳತೆಗೆ ತಕ್ಕಂತೆ ಅದನ್ನು ಕತ್ತರಿಸಿ, ಚಪ್ಪಲಿ ಹೊಲಿಯಲಾಗುತ್ತದೆ. ಬಂಗಾರದ ಬಣ್ಣದ ಝರಿ, ಕುಂಚದಿಂದ ಅಲಂಕರಿಸಲಾಗುತ್ತದೆ. ಕಪ್ಪು, ಕಂದು ಸೇರಿ ಹಲವಾರು ಬಣ್ಣಗಳಲ್ಲಿ ಚಪ್ಪಲಿಗಳೀಗ ಲಭ್ಯವಿವೆ' ಎಂದು ಅಥಣಿ ಲೆದರ್ ಕ್ಲಸ್ಟರ್‌ನ ಕಾರ್ಯದರ್ಶಿ ಶಿವರಾಜ ಸೌದಾಗರ ಹೇಳುತ್ತಾರೆ.

ಕೊಲ್ಹಾಪುರಿ ಚಪ್ಪಲಿ ಹುಟ್ಟಿನ ಬಗ್ಗೆ ಯಾರ ಬಳಿಯೂ ನಿಖರವಾದ ಮಾಹಿತಿ ಇಲ್ಲ. 'ಇದನ್ನು ಪರಿಚಯಿಸಿದ್ದು ನಾವು' ಎಂದು ಬೆಳಗಾವಿ ಜಿಲ್ಲೆಯವರು ಹೇಳಿದರೆ, 'ಮಹಾರಾಷ್ಟ್ರದಲ್ಲೇ ಇದು ಹುಟ್ಟಿ ಖ್ಯಾತಿ ಗಳಿಸಿದೆ' ಎಂಬುದು ಮಹಾರಾಷ್ಟ್ರದವರ ವಾದ.

'ಈ ಚಪ್ಪಲಿಗೆ 800 ವರ್ಷಗಳ ಇತಿಹಾಸವಿದೆ. 13ನೇ ಶತಮಾನದಲ್ಲಿ ಕೊಲ್ಹಾಪುರಿ ಚಪ್ಪಲಿ ತಯಾರಿಕೆ ಆರಂಭವಾಯಿತು. ಕೊಲ್ಹಾಪುರ ಸಂಸ್ಥಾನವನ್ನು ಛತ್ರಪತಿ ಶಾಹೂ ಮಹಾರಾಜರು ಆಳಿದ 20ನೇ ಶತಮಾನದಲ್ಲಿ ಇದಕ್ಕೆ ಮಾನ್ಯತೆ ಸಿಕ್ಕಿತು' ಎಂದು ಕುಶಲಕರ್ಮಿಗಳು ಹೇಳುತ್ತಾರೆ.

ಬೇಕಿದೆ ಬ್ರ್ಯಾಂಡಿಂಗ್

ಬೆಳಗಾವಿ ಜಿಲ್ಲೆಯ ಅಥಣಿ ಪಟ್ಟಣವೊಂದರಲ್ಲೇ ಒಂದೂವರೆ ಸಾವಿರಕ್ಕೂ ಅಧಿಕ ಕುಶಲಕರ್ಮಿಗಳು ಕೊಲ್ಹಾಪುರಿ ಚಪ್ಪಲಿ ತಯಾರಿಸುತ್ತಾರೆ. 'ನಮಗೆ ಉತ್ತಮ ವರಮಾನ ಸಿಗಬೇಕಾದರೆ ಬೆಳಗಾವಿ ಅಥವಾ ಅಥಣಿ ಹೆಸರಿನಲ್ಲೇ ಅವುಗಳ ಬ್ರ್ಯಾಂಡಿಂಗ್ ಮಾಡಬೇಕು. ಲಿಡ್ಕರ್‌ನವರು ಅಂತರರಾಷ್ಟ್ರೀಯ ಸಂಸ್ಥೆಯೊಂದಿಗೆ ಒಡಂಬಡಿಕೆ ಮಾಡಿಕೊಂಡು, ನಮ್ಮ ಉತ್ಪನ್ನ ನಿಯಮಿತವಾಗಿ ಖರೀದಿಸಬೇಕು' ಎನ್ನುತ್ತಾರೆ ಸ್ಥಳೀಯ ಉತ್ಪಾದಕರು.

'ಬೆಳಗಾವಿ ಜಿಲ್ಲೆಯ ನಿಪ್ಪಾಣಿ, ಅಥಣಿ, ಮದಭಾವಿಯಲ್ಲಿ ತಯಾರಾಗುವ ಚಪ್ಪಲಿಗಳನ್ನು 'ಅಥಣಿ' ಬ್ರ್ಯಾಂಡ್ ಹೆಸರಿನಲ್ಲೇ ಮಾರಾಟ ಮಾಡಲು ಯೋಜನೆ ರೂಪಿಸಿದ್ದೇವೆ. ಆನ್‌ಲೈನ್ ಜತೆಗೆ, ರಾಜ್ಯದಲ್ಲಿರುವ ಲಿಡ್ಕರ್‌ನ ಎಲ್ಲ ಮಳಿಗೆಗಳು, ಆನ್‌ಲೈನ್ ಶಾಪಿಂಗ್ (lidkar.com) ಮತ್ತು ವಿಮಾನ ನಿಲ್ದಾಣದಲ್ಲೂ ಮಾರಾಟಕ್ಕೆ ಪ್ರಯತ್ನಿಸುತ್ತಿದ್ದೇವೆ' ಎಂದು ಲಿಡ್ಕರ್‌ನ ವ್ಯವಸ್ಥಾಪಕ ನಿರ್ದೇಶಕಿ ವಸುಂಧರಾ ಕೆ.ಎಂ. ಹೇಳುತ್ತಾರೆ.



'ಜಿಐ' ಟ್ಯಾಗ್

ಬೆಳಗಾವಿ, ಧಾರವಾಡ, ಬಾಗಲಕೋಟೆ, ವಿಜಯಪುರ, ಮಹಾರಾಷ್ಟ್ರದ ಕೊಲ್ಹಾಪುರ, ಸಾಂಗ್ಲಿ, ಸಾತಾರ, ಸೊಲ್ಲಾಪುರದಲ್ಲಿ ಸಿದ್ಧವಾಗುವ ಕೊಲ್ಹಾಪುರಿ ಚಪ್ಪಲಿಗಳಿಗೆ 2019ರಲ್ಲಿ ಭೌಗೋಳಿಕ ಸೂಚಕ(ಜಿಐ) ಟ್ಯಾಗ್ ಸಿಕ್ಕಿದೆ. ಈ ಚಪ್ಪಲಿಗೆ 'ಕೊಲ್ಹಾಪುರೀಸ್' ಎಂಬ ಪದ ಬಳಸುವ ಹಕ್ಕನ್ನು ಅಲ್ಲಿನ ಕುಶಲಕರ್ಮಿಗಳು ಪಡೆದಿದ್ದಾರೆ. ಆದರೆ, ಅಥಣಿ, ಮದಭಾವಿಯಲ್ಲಿ ಚಪ್ಪಲಿ ಸಿದ್ಧಪಡಿಸುವ ಬಹುತೇಕರಿಗೆ ಇದರ ಬಗ್ಗೆ ಗೊತ್ತೇ ಇಲ್ಲ.

ಸೂರ್ಯನ ಆಟ...

10ನೇ ಪುಟದಿಂದ...

ಸೂರ್ಯನಲ್ಲಿ ಹೆಚ್ಚು ಚಟುವಟಿಕೆ: ಸೂರ್ಯನಲ್ಲಿ ನಡೆಯುವ ಕೆಲವು ಬಗೆಯ ಚಟುವಟಿಕೆಗಳು ಪ್ರತಿ ಹನ್ನೊಂದು ವರ್ಷಕ್ಕೊಮ್ಮೆ ಹೆಚ್ಚಾಗುತ್ತವೆ. ಅದು ಈ ಬಾರಿ ನಡೆಯುತ್ತಿದ್ದು, ಈ ವರ್ಷದ ಮಧ್ಯಭಾಗದ ಸುಮಾರಿಗೆ ಗರಿಷ್ಠ ಮಟ್ಟ ತಲುಪುವ ನಿರೀಕ್ಷೆ ಇದೆ ಎಂದು ವಿಜ್ಞಾನಿಗಳು ಈ ಹಿಂದೆ ಅಂದಾಜು ಮಾಡಿದ್ದರು.

ಮುಖ್ಯವಾಗಿ ಸೂರ್ಯನಲ್ಲಿ ಕಣಗಳ ಪ್ರವಾಹ, ವಿಕಿರಣ ಪ್ರವಾಹಗಳಂತಹ ಘಟನೆಗಳು ಈ ವರ್ಷ ಹೆಚ್ಚು ನಡೆಯುತ್ತಿವೆ. ಇಂತಹ ವಿದ್ಯಮಾನಗಳು ಭೂಮಿಯ ಕಾಂತಕ್ಷೇತ್ರದ ಮೇಲೆ ಪ್ರಭಾವ ಬೀರುವ ಸಾಧ್ಯತೆ ಇದೆ. ಇದರಿಂದಾಗಿ ಭೂಮಿಯ ಕಾಂತಕ್ಷೇತ್ರದಲ್ಲಿ ಭೂ ಕಾಂತೀಯ ಬಿರುಗಾಳಿ ಉಂಟಾಗುವ ಸಾಧ್ಯತೆಯೂ ಹೆಚ್ಚು ಇದೆ ಎಂದು ಬೆಂಗಳೂರಿನ ಜವಾಹರ್‌ಲಾಲ್ ನೆಹರು ತಾರಾಲಯದ ನಿರ್ದೇಶಕ ಹಾಗೂ ಇಸ್ರೊ ನಿವೃತ್ತ ವಿಜ್ಞಾನಿ ಬಿ.ಆರ್.ಗುರುಪ್ರಸಾದ್ ಹೇಳುತ್ತಾರೆ.

ಇಂತಹ ವಿದ್ಯಮಾನಗಳು ಭೂಮಿಯನ್ನು ಸುತ್ತುತ್ತಿರುವ ಉಪಗ್ರಹಗಳಿಗೆ ಹಾನಿ ಮಾಡಬಲ್ಲವು, ಕೆಲವೊಂದು ರೇಡಿಯೊ ಸಂಪರ್ಕವನ್ನು ಕಡಿದು ಹಾಕಬಹುದು, ವಿದ್ಯುತ್ ಗ್ರಿಡ್‌ಗಳಿಗೂ ತೊಂದರೆ ಉಂಟು ಮಾಡಿ, ಗಗನಯಾತ್ರಿಗಳಿಗೂ ಅಪಾಯ ತಂದೊಡ್ಡುವ ಸಾಧ್ಯತೆಗಳಿವೆ ಎಂದು ಅವರು ತಿಳಿಸುತ್ತಾರೆ.

ಈ ಬಾರಿಯ ವಿಶೇಷ ಎಂದರೆ ಸೂರ್ಯನ ಮೇಲೆ ಪ್ರತಿ ಹನ್ನೊಂದು ವರ್ಷದ ಸುಮಾರಿಗೆ ಒಮ್ಮೆ ನಡೆಯುವಂತಹ ಇಂತಹ ವಿದ್ಯಮಾನಗಳನ್ನೆಲ್ಲ ನಿರಂತರವಾಗಿ ಉಪಗ್ರಹಗಳು ಮತ್ತು ರೋಬೋಟ್ ಅಂತರಿಕ್ಷ ನೌಕೆ ಮೂಲಕ ಕ್ರಮಬದ್ಧವಾಗಿ ಗಮನಿಸಲಾಗುತ್ತಿದೆ. ನಮ್ಮದೇ ಆದಿತ್ಯ ಎಲ್ 1 ನೌಕೆ ಸಹ ಸೂರ್ಯನ ಮೇಲೆ ತನ್ನ ಗಮನವನ್ನು ಸದಾ ಕೇಂದ್ರೀಕರಿಸಿದೆ. ಭೂಮಿಯಿಂದ 15 ಕೋಟಿ ಕಿಲೋಮೀಟರ್ ದೂರದಲ್ಲಿರುವ ಸೂರ್ಯನನ್ನು ಕೇವಲ 60 ಲಕ್ಷ ಕಿಲೋಮೀಟರ್ ಅಂತರದಲ್ಲಿ ಅಮೆರಿಕದ ಪಾರ್ಕರ್ ಸೌರ ಸಂಶೋಧಕ ನೌಕೆ ಹಾದು ಹೋಗಿದೆ. ಇವುಗಳಿಂದ ಇಂತಹ ವಿದ್ಯಮಾನಗಳಿಂದಾಗುವ ಪ್ರತಿಕೂಲ ಪರಿಣಾಮಗಳ ಬಗ್ಗೆ ಮುನ್ನೆಚ್ಚರಿಕೆ ವಹಿಸಲು ಹೆಚ್ಚಿನ ಮಾಹಿತಿ ದೊರಕುತ್ತದೆ ಎಂದು ಅವರು ಮಾಹಿತಿ ನೀಡಿದರು.

ಸೂರ್ಯನನ್ನು ಬರಿಗಣ್ಣಿನಿಂದ ನೋಡದಿರಿ: ಸೂರ್ಯನನ್ನು ಯಾವುದೇ ಕಾರಣಕ್ಕೂ ಬರಿಗಣ್ಣಿನಿಂದ ನೋಡಲೇಬಾರದು. ಒಂದು ವೇಳೆ ಸೂರ್ಯನನ್ನು ದಿಟ್ಟಿಸಿದರೆ ಕುರುಡುತನ ಉಂಟಾಗುವ ಸಾಧ್ಯತೆ ಇದೆ. ಸೂರ್ಯಗ್ರಹಣವನ್ನೂ ಬರಿಗಣ್ಣಿನಿಂದ ನೋಡಲೇಬಾರದು. ಟೆಲಿಸ್ಕೋಪ್‌ಗೆ ತಜ್ಞರ ಸಲಹೆಯ ಮೇರೆಗೆ ಸೂಕ್ತವಾದ ಫಿಲ್ಟರ್‌ಗಳನ್ನು ಹಾಕಿದರೆ ನೋಡಬಹುದು. ಇಲ್ಲವೇ, ಸೂರ್ಯನ ವೀಕ್ಷಣೆಗೆಂದೇ ಮಾಡಿದ ಸೋಲಾರ್ ಟೆಲಿಸ್ಕೋಪ್ ಮೂಲಕವೂ ನೋಡಬಹುದು. ಇವುಗಳು ಲಭ್ಯವಿಲ್ಲದೇ ಇದ್ದರೆ, ರಾಜಸ್ಥಾನದ ಉದಯಪುರ ಮತ್ತು ತಮಿಳುನಾಡಿನ ಕೊಡೈಕೆನಾಲ್‌ನಲ್ಲಿರುವ ವೀಕ್ಷಣಾಲಯದಲ್ಲೂ ಸೂರ್ಯನನ್ನು ನೋಡುವ ಅವಕಾಶ ಇದೆ.

ಮುನ್ನೋಟ 08-06-2025 ರಿಂದ 14-06-2025

ಎಂ.ಎನ್. ಲಕ್ಷ್ಮೀನರಸಿಂಹಸ್ವಾಮಿ, ಮಾದಾಪುರ

ಜ್ಯೋತಿಷ್ಯ ವಿಶಾರದ, ಸಂಪರ್ಕಕ್ಕೆ: 8197304680

ಈ ಭವಿಷ್ಯ ರಾಶಿಯನ್ನು ಅವಲಂಬಿಸಿದೆ

ಮೇಷ — ಅಶ್ವಿನಿ, ಭರಣಿ, ಕೃತ್ತಿಕಾ 1

ಸಮೂಹದಲ್ಲಿ ಬಹಳ ಅಲಂಕಾರಿಕವಾಗಿ ಕಾಣಿಸಿಕೊಳ್ಳಲು ಪ್ರಯತ್ನಪಡುವಿರಿ. ಆದಾಯವು ಮಧ್ಯಮಗತಿಯಲ್ಲಿರುತ್ತದೆ. ಸರ್ಕಾರದಿಂದ ಬರಬೇಕಾಗಿದ್ದ ಹಳೆ ಬಾಕಿಗಳು ಬರುತ್ತವೆ. ಹಿರಿಯರ ಜತೆ ವ್ಯವಹಾರದಲ್ಲಿ ಪಾಲ್ಗೊಳ್ಳಲು ಅವಕಾಶ ದೊರೆಯುತ್ತದೆ. ಸಂಗಾತಿಗೆ ಸ್ಥಿರಾಸ್ತಿಯನ್ನು ಕೊಳ್ಳುವ ಯೋಗವಿದೆ. ಪಾರಂಪರಿಕ ಕೃಷಿಯನ್ನು ಮಾಡುವವರಿಗೆ ಅಭಿವೃದ್ಧಿ ಇರುತ್ತದೆ.

ವೃಷಭ — ಕೃತ್ತಿಕಾ 2,3,4 ರೋಹಿಣಿ, ಮೃಗಶಿರಾ 1,2

ಆದಾಯವು ನಿಮ್ಮ ನಿರೀಕ್ಷೆಯಷ್ಟಿರುತ್ತದೆ. ನಿಮ್ಮ ಕೆಲಸ ಕಾರ್ಯಗಳಿಗೆ ಮಹಿಳೆಯರಿಂದ ಸ್ವಲ್ಪ ತೊಂದರೆ ಎದುರಾಗಬಹುದು. ಆಸ್ತಿ ಮಾಡುವ ವಿಚಾರದಲ್ಲಿ ಮುಂದುವರಿಯಬಹುದು. ವಿದ್ಯಾರ್ಥಿಗಳಿಗೆ ಉತ್ತಮ ಫಲಿತಾಂಶ ಪಡೆಯುವ ಯೋಗವಿದೆ. ಮಕ್ಕಳಿಂದ ನಿಮಗೆ ಧನಸಹಾಯ ಸಿಗುತ್ತದೆ. ಶೀತಬಾಧೆ ನಿಮ್ಮನ್ನು ಕಾಡಬಹುದು. ಸಂಗಾತಿಯಿಂದ ಸಂಸಾರಕ್ಕೆ ಸಾಕಷ್ಟು ಸಹಾಯ ದೊರೆಯುತ್ತದೆ.

ಮಿಥುನ — ಮೃಗಶಿರಾ 3,4 ಆರಿದ್ರಾ, ಪುನರ್ವಸು 1,2,3

ವ್ಯಾಪಾರಿ ಜ್ಞಾನ ಬಹಳವಾಗಿ ಇರುತ್ತದೆ. ಆದಾಯವು ಮಧ್ಯಮಗತಿಯಲ್ಲಿರುತ್ತದೆ. ಒಡಹುಟ್ಟಿದವರು ನಿಮಗೆ ಸಹಕಾರ ನೀಡುವರು. ಆಸ್ತಿ ಖರೀದಿ ವಿಚಾರದಲ್ಲಿ ಶುಭ ಸುದ್ದಿಗಳನ್ನು ಕೇಳುವಿರಿ. ಸಂಗಾತಿ ಜತೆಗೂಡಿ ಮಾಡಿದ ವ್ಯವಹಾರಗಳಲ್ಲಿ ಸಾಕಷ್ಟು ಲಾಭವಿರುತ್ತದೆ. ಸಂಗಾತಿಯು ನಿಮಗೆ ಆರ್ಥಿಕ ಸಹಕಾರವನ್ನು ನೀಡುವರು. ಹಿರಿಯರಿಗೆ ವಿದೇಶ ಪ್ರಯಾಣ ಯೋಗವಿದೆ.

ಕಟಕ — ಪುನರ್ವಸು 4 ಪುಷ್ಯ, ಆಶ್ಲೇಷ

ಸಂಸಾರದಲ್ಲಿ ಒಂದು ರೀತಿ ಸುಖವಿರುತ್ತದೆ. ಆದಾಯವು ಕಡಿಮೆ ಇರುತ್ತದೆ. ಕೃಷಿಯಿಂದ ಆದಾಯವನ್ನು ನಿರೀಕ್ಷೆ ಮಾಡಬಹುದು. ಹೈನುಗಾರಿಕೆ ಮಾಡುವವರಿಗೆ ಆದಾಯ ಹೆಚ್ಚುತ್ತದೆ. ಭಾಷಣಕಾರರಿಗೆ ತಮ್ಮ ಅಭಿಪ್ರಾಯ ಮಂಡಿಸಲು ಕಷ್ಟವಾಗಬಹುದು. ಪಿತ್ತವಿಕಾರಗಳು ಕಾಡಬಹುದು. ಸಂಗಾತಿ ಕಡೆಯ ಹಿರಿಯರು ಸಹಕಾರ ನೀಡುವವರು.

ಸಿಂಹ — ಮಖಾ, ಪೂರ್ವ ಫಲ್ಗುಣಿ, ಉತ್ತರ ಫಲ್ಗುಣಿ 1

ಕೆಲಸ ಮಾಡಲು ಸ್ವಲ್ಪ ನಿರಾಸಕ್ತಿ ಇರುತ್ತದೆ. ಆದಾಯವು ಚೇತರಿಸಿಕೊಳ್ಳುತ್ತದೆ. ಸ್ಥಿರಾಸ್ತಿ ಮಾಡುವ ಮನಸ್ಸು ಇದ್ದರೂ ಆ ಬಗ್ಗೆ ಗಮನ ಹರಿಸುವುದಿಲ್ಲ. ವಿದ್ಯಾರ್ಥಿಗಳಿಗೆ ಹೆಚ್ಚಿನ ಅನುಕೂಲವಿರುತ್ತದೆ. ಕಾಲಿಗೆ ಸಂಬಂಧಪಟ್ಟ ತೊಂದರೆಗಳು ಕಾಣಿಸಬಹುದು. ಸಂಗಾತಿಯ ಬಿರುನುಡಿಗಳು ನಿಮಗೆ ಅಚ್ಚರಿ ತರಬಹುದು. ತಂದೆಯಿಂದ ಆರ್ಥಿಕ ಸಹಕಾರ ದೊರೆಯುತ್ತದೆ.

ಕನ್ಯಾ — ಉತ್ತರಫಲ್ಗುಣಿ 2,3,4 ಹಸ್ತ, ಚಿತ್ತಾ 1,2

ಬುದ್ಧಿವಂತಿಕೆಯಿಂದ ಹಣಗಳಿಸಲು ಯತ್ನಿಸುವಿರಿ. ಆದಾಯವು ನಿಮ್ಮ ಅಗತ್ಯವನ್ನು ಪೂರೈಸುತ್ತದೆ. ಆಲಸಿತನದಿಂದ ಕೆಲವು ಕೆಲಸಗಳನ್ನು ಮಾಡಲಾರದೆ ಉಳಿಸಿಕೊಳ್ಳುವಿರಿ. ವಿದ್ಯಾರ್ಥಿಗಳಿಗೆ ಶ್ರಮಕ್ಕೆ ತಕ್ಕ ಫಲ ಮಾತ್ರ ಇರುತ್ತದೆ. ಹಳೆಯ ಮೂಳೆ ನೋವು ಈಗ ಮರುಕಳಿಸಬಹುದು. ಆಭರಣ ವ್ಯಾಪಾರಿಗಳಿಗೆ ಅನಿರೀಕ್ಷಿತ ಲಾಭವಿರುತ್ತದೆ.

ತುಲಾ — ಚಿತ್ತಾ 3,4 ಸ್ವಾತಿ, ವಿಶಾಖಾ 1,2,3

ವಾರದ ಆರಂಭ ಉತ್ತಮವಾಗಿರುತ್ತದೆ. ಆದಾಯವು ಕಡಿಮೆಯಿದ್ದು, ಹಣ ಹೊಂದಾಣಿಕೆಗೆ ಸ್ವಲ್ಪ ಪ್ರಯತ್ನ ಪಡಬೇಕಾಗಬಹುದು. ಬುದ್ಧಿವಂತಿಕೆಯಿಂದ ಜನರನ್ನು ಒಗ್ಗೂಡಿಸುವ ಕೆಲಸ ಮಾಡುವಿರಿ. ಸಂಸಾರದಲ್ಲಿ ಅಷ್ಟು ಸುಖವಿರುವುದಿಲ್ಲ, ಸ್ವಲ್ಪ ಕಾವೇರಿದ ವಾತಾವರಣವಿರುತ್ತದೆ. ಮಕ್ಕಳನ್ನು ನೋಡಲು ವಿದೇಶಕ್ಕೆ ಹೋಗಿ ಬರಬಹುದು. ವಿದ್ಯಾರ್ಥಿಗಳಿಗೆ ವಾಯುಯಾನ ಕ್ಷೇತ್ರದಲ್ಲಿ ಯಶಸ್ಸಿದೆ.

ವೃಶ್ಚಿಕ — ವಿಶಾಖಾ 4 ಅನೂರಾಧ, ಜ್ಯೇಷ್ಠ

ಆಲಸಿತನದಿಂದ ಕೆಲಸಕಾರ್ಯಗಳನ್ನು ಮುಂದೂಡುವಿರಿ. ಆದಾಯವು ಕಡಿಮೆ ಇರುತ್ತದೆ. ಬುದ್ಧಿವಂತಿಕೆಯಿಂದ ಆದಾಯವನ್ನು ಹೆಚ್ಚಿಸಿಕೊಳ್ಳಬಹುದು. ಜನ ಬೆಂಬಲ ನಿಮಗೆ ದೊರೆಯುತ್ತದೆ. ವಿದೇಶದಲ್ಲಿರುವವರು ಸ್ವದೇಶ ಮತ್ತು ವಿದೇಶದಲ್ಲಿ ಆಸ್ತಿಮಾಡಿಕೊಳ್ಳಬಹುದು. ಒಡವೆ ವಸ್ತುಗಳ ಬಗ್ಗೆ ಎಚ್ಚರವಾಗಿರಿ, ಕಳುವಾಗುವ ಸಂದರ್ಭಗಳಿವೆ. ಸಂಗಾತಿಯು ಸಂಸಾರದ ಬಗ್ಗೆ ಹೆಚ್ಚು ಗಮನ ಕೊಡುವರು.

ಧನುಸ್ಸು — ಮೂಲಾ, ಪೂರ್ವಾಷಾಢ, ಉತ್ತರಾಷಾಢ 1

ಬುದ್ಧಿವಂತಿಕೆ ಮತ್ತು ಆತ್ಮವಿಶ್ವಾಸ ಎರಡೂ ಹೆಚ್ಚಾಗುತ್ತದೆ. ಆದಾಯ ಕಡಿಮೆ ಇದ್ದು, ಅದರಲ್ಲೇ ನಿಭಾಯಿಸುವ ಶಕ್ತಿ ನಿಮಗಿರುತ್ತದೆ. ಕೃಷಿ ಭೂಮಿಯ ಬಗ್ಗೆ ಒಲವು ಹೆಚ್ಚುತ್ತದೆ. ವಿದ್ಯಾರ್ಥಿಗಳಿಗೆ ನಿರೀಕ್ಷೆಯ ಹತ್ತಿರದ ಫಲಿತಾಂಶ ದೊರೆಯುವ ಸಾಧ್ಯತೆಗಳಿವೆ. ಕಣ್ಣಿನ ತೊಂದರೆ ಇರುವವರು ಹೆಚ್ಚು ಎಚ್ಚರವಹಿಸಿರಿ. ಸಂಗಾತಿಯ ಜತೆಗೂಡಿ ಮಾಡಿದ ವ್ಯವಹಾರಗಳಲ್ಲಿ ನಿಮಗೆ ಲಾಭವಿರುತ್ತದೆ.

ಮಕರ — ಉತ್ತರಾಷಾಢ 2,3,4 ಶ್ರವಣ, ಧನಿಷ್ಠ 1,2

ಶ್ರಮವಹಿಸಿ ಕೆಲಸ ಮಾಡುವಿರಿ. ಆದಾಯವು ಕಡಿಮೆ ಇರುತ್ತದೆ. ವಿದೇಶಿ ವ್ಯವಹಾರ ಮಾಡುವವರಿಗೆ ಆದಾಯ ಹೆಚ್ಚುತ್ತದೆ. ನಿಮ್ಮ ಚಟುವಟಿಕೆಯಲ್ಲಿ ಹೆಚ್ಚು ಕಾರ್ಯತತ್ಪರರಾಗುವಿರಿ. ಶತ್ರುಗಳನ್ನು ನಿಗ್ರಹ ಮಾಡುವಲ್ಲಿ ಸ್ವಲ್ಪ ಯಶಸ್ಸನ್ನು ಕಾಣುವಿರಿ. ಕುಟುಂಬದಲ್ಲಿ ಈಗ ಸಂತೋಷ ಮನೆ ಮಾಡಿರುತ್ತದೆ. ಆಡಳಿತಾತ್ಮಕ ಪರೀಕ್ಷೆಗಳನ್ನು ತೆಗೆದುಕೊಳ್ಳುವವರಿಗೆ ಸಾಕಷ್ಟು ಯಶಸ್ಸು ಇರುತ್ತದೆ.


ಕುಂಭ — ಧನಿಷ್ಠ 3,4 ಶತಭಿಷಾ, ಪೂರ್ವಾಭಾದ್ರ 1,2,3

ಮಾತನಾಡುವಾಗ ಎಚ್ಚರಿಕೆ ಇರಲಿ, ಉಡಾಫೆ ಮಾತುಗಳು ನಿಮಗೆ ಮುಜುಗರ ತರುತ್ತವೆ. ಆದಾಯವು ಕಡಿಮೆ ಇರುತ್ತದೆ. ಹಿರಿಯ ಮಹಿಳೆಯರಿಂದ ಕೆಲಸ ದೊರೆಯುತ್ತದೆ. ಸರ್ಕಾರಿ ಸಂಸ್ಥೆಗಳಿಂದ ಆಸ್ತಿಯನ್ನು ಪಡೆಯುವ ಯೋಗವಿದೆ. ವಿದ್ಯಾರ್ಥಿಗಳಿಗೆ ಅತಿ ಹೆಚ್ಚು ಯಶಸ್ಸು ದೊರೆಯುತ್ತದೆ. ಮಹಿಳೆಯರ ಆರೋಗ್ಯದಲ್ಲಿ ವ್ಯತ್ಯಾಸಗಳಾಗಬಹುದು. ಸಂಗಾತಿಗೆ ಸ್ಥಿರಾಸ್ತಿ ದೊರೆಯುವ ಯೋಗವಿದೆ.

ಮೀನ — ಪೂರ್ವಾಭಾದ್ರ 4 ಉತ್ತರಭಾದ್ರ, ರೇವತಿ

ಶ್ರಮಪಟ್ಟು ಕೆಲಸ ಮಾಡಲೇಬೇಕಾದ ಅನಿವಾರ್ಯ ಪರಿಸ್ಥಿತಿ ನಿಮಗಿರುತ್ತದೆ. ಈಗ ಆದಾಯವು ಉತ್ತಮ ಸ್ಥಿತಿಯನ್ನು ತಲುಪುತ್ತದೆ. ವಿದ್ಯಾರ್ಥಿಗಳಿಗೆ ಫಲಿತಾಂಶದಲ್ಲಿ ಹಿನ್ನಡೆಯಾಗಬಹುದು. ಅನಿರೀಕ್ಷಿತವಾಗಿ ಕೆಲವರಿಗೆ ಶಸ್ತ್ರಚಿಕಿತ್ಸೆಗಳಾಗಬಹುದು. ಸಂಗಾತಿಯ ವ್ಯವಹಾರಗಳಲ್ಲಿ ನಿಮಗೆ ಲಾಭ ಹೆಚ್ಚುತ್ತದೆ. ಆಭರಣ ವ್ಯಾಪಾರಿಗಳಿಗೆ ನಿರೀಕ್ಷಿತ ಲಾಭವಿರುತ್ತದೆ.

ಪದಬಂಧ 2895



ಮೇಲಿನಿಂದ ಕೆಳಕ್ಕೆ

1. ಅಭಿನೇತ್ರಿ- ಆಕಾಶದಲ್ಲಿ ಹೀಗೆ ಕಾಣುತ್ತಾಳೆ 5
2. ವಧು ಹಾಕುವ ಶ್ರೇಷ್ಠ ಹೂವಿನ ಹಾರ 5
3. ಪರಿಮಳ ಬೀರುವ ಸುವಾಸಿತ ವೃಕ್ಷ 5
4. ಕನ್ನಡದ ಮೃಷ್ಟಾನ್ನ 5
6. ಯಾವ ಶ್ರಮವೂ ಇಲ್ಲದೆ ಸುಖವಾದದ್ದು 4
10. ಸುಸಂಸ್ಕೃತರು ಬಳಸುವ ಉಪ್ಪು 3
11. ಗಾಯವಾದರೂ ಹಾಡುತ್ತಲೇ ಇರುವವ 3
12. ಸಿಂಹಾಸನದ ಮೇಲೆ ಕುಳಿತು ಮೆರೆಯುವ ಮರ್ಯಾದೆ 5
13. ಕಾಪಾಡುವ ಸೋದರನಿಗೆ ದಾರದ ಬಂಧ 5
14. ಧರ್ಮಜನಿಗಿದ್ದ ಅನುಜಶಕ್ತಿ 4
15. ದ್ರವಸತ್ವದಿಂದ ತುಂಬಿದ್ದು 5
16. ಮಾಡಿದ ಕರ್ಮದಿಂದುಂಟಾದ ಮಗುವನ್ನು ಕೊಲ್ಲುವವ 5

ಎಡದಿಂದ ಬಲಕ್ಕೆ

1. ಕೋಪ, ಬೇಸರ, ಸಂತಸ, ಸಮಾಧಾನ ಇತ್ಯಾದಿಗಳ ಬೆರೆಕೆ ವ್ಯಕ್ತಗುಣದ ಅಂತರಂಗ 4
3. ಪತಿಯ ಬದಲಾವಣೆಯಿಂದಾಗುವ ಅವಾಂತರ 4
5. ಹಾಲು ಹುಣ್ಣಿಮೆಯ ಬೆಳಕಲ್ಲಿ ಗಿಡವೊಂದರಿಂದ ಹರಡುವ ಸುವಾಸನೆ 5
7. ಅಮ್ಮನ ಜೋಗುಳ ಪದ 4
8. ಹರಹರ ಎಂದೊಡನೆ ಬರುವ ಈಶನಾಮ 4
9. ಇವನೇ ಕರ್ಮಯೋಗಿ ಸದಾ ಕಾರ್ಯನಿರತ 5
13. ಸಮರದಂತೆ ಘೋರ, ಭಯಂಕರ 5
17. ದಶರಥಾತ್ಮಜನ ಕಾಪುಕವಚ 4
18. ವಸುಂಧರೆಯ ಏಳು ನಡುಗಡ್ಡೆ 4
19. ಸ್ವಚ್ಛ ಬಿಳುಪಿನ ಪರ್ವತ 5
20. ಹೊಸ ತೋಟಕ್ಕೆ ಸುಸಂಸ್ಕೃತ ನಾಮ 4
21. ಆತುರದ ಕುಣಿತದ ಶಬ್ದ ಹೀಗೆ ಕೇಳಿಸುತ್ತದೆ 4

ಪದಬಂಧ ಉತ್ತರ -2894

ಮೇಲಿಂದ ಕೆಳಕ್ಕೆ

1. ಸಿಂಧೂಸಂಗಮ 2.ರವಿ 3.ಸಂಗ 4.ಪದ್ಮಭೂಷಣ 6.ಖಗೋಳ 7.ಮತಿಭ್ರಮಣೆ 9.ವಿಜಯೀಭವ 11.ರಮಾರಮಣ 14.ಕಠೋರಸತ್ಯ 15.ಸುದ್ದಿಸಂಗ್ರಹ 17.ಮಾಯಾನಗರಿ 19.ಪ್ರಸವ 21.ಸಾತ್ 23.ನುಡಿ

ಎಡದಿಂದ ಬಲಕ್ಕೆ

1. ಸಿಂಧೂರ 3.ಸಂತಾಪ 5.ವಿಶಾಖ 7.ಮರುಗ 8.ಗೋಮತಿ 9.ವಿರಳ 10.ಭ್ರಮರ 12.ಮನುಜ 13.ಮಾರಣ 14.ಕಲ್ಮಣೆ 15.ಸುಲಭ 16.ಮಹಿಮಾ 18.ವಠಾರ 19.ಪ್ರಮಾಣ 20.ಸರಸ 21.ಸಾಹಿತ್ಯ 23.ವಜನು 24.ಹಠಾತ್ 24.ಡಿಗರಿ

ಬಹುಭಾಷಾ ನಟ ಕಿಶೋರ್ ಕುಮಾರ್ ಹಲವು ವರ್ಷಗಳ ಬಳಿಕ ಮತ್ತೆ ರಂಗಭೂಮಿಯಲ್ಲಿ ಕಾಣಿಸಿಕೊಂಡಿದ್ದಾರೆ. ಅವರ ನಟನೆಯ 'ಲವ್ ಲೆಟರ್ಸ್‌; ನಿನ್ನ ಪ್ರೀತಿಯ ನಾನು' ನಾಟಕ ಇತ್ತೀಚೆಗೆ ಕೆಲವು ಪ್ರದರ್ಶನಗಳನ್ನು ಕಂಡಿತು...

ನಿನ್ನ ಪ್ರೀತಿಯ ನಾನು ಕಾಡುವ ಗಾಢ ಮೌನ



ನಾಟಕದಲ್ಲಿ ಕಿಶೋರ್ ಕುಮಾರ್, ಸಿರಿ ರವಿಕುಮಾರ್

ಪ್ರೀತಿ ನಾಗರಾಜ

ಅಮೆರಿಕನ್ ನಾಟಕಕಾರ ಎ.ಆರ್.ಗರ್ನಿ 1987-88ರ ಸಮಯದಲ್ಲಿ 'ಎಪಿಸ್ಟೊಲರಿ' (ಪತ್ರಗಳ ಮೂಲಕ ಬೆಳೆಯುವ ಕೃತಿ/ಕಾದಂಬರಿ) ಶೈಲಿಯಲ್ಲಿ ಬರೆದ 'ಲವ್ ಲೆಟರ್ಸ್‌' ಎನ್ನುವ ನಾಟಕ ನಂತರ ಹಿಂದಿ/ಉರ್ದು ನಾಟಕಕಾರ ಜಾವೇದ್ ಸಿದ್ದಿಕಿ ಅವರ ಕೈಗೆ ಸಿಕ್ಕಿ 'ತುಮ್ಹಾರೀ ಅಮೃತಾ' ಆಗಿ, ನಂತರ ಜಯಂತ ಕಾಯ್ಕಿಣಿಯವರು ಅದನ್ನು 'ಇತಿ ನಿನ್ನ ಅಮೃತಾ' ಬರೆದದ್ದು ಇತಿಹಾಸ.

ಯುವ ವಯಸ್ಸಿನ ಆಕರ್ಷಣೆ, 'ಸಿಚುಯೇಶನ್ಶಿಪ್', ಫ್ರೆಂಡ್ ಜೋನ್, ಕುಕಿ ಜಾರ್ ಇಂತಹ ಸಂಕೀರ್ಣ ಸಂಬಂಧಗಳ ಹೊತ್ತಿನಲ್ಲಿ ಪತ್ರಮುಖೇನ ನಡೆದ ಘಟನೆಗಳನ್ನು ಆಧರಿಸಿದ ನಾಟಕವೊಂದು ಈವತ್ತಿನ ಮಟ್ಟಿಗೆ ಅಪ್ರಸ್ತುತ ಅನ್ನಿಸಿಬಿಡಬಹುದೆ?

ನಮ್ಮ ಆಲೋಚನೆಯೂ ನಮ್ಮ ಮೊಬೈಲಿಗೆ ಗೊತ್ತಾಗುವ ಈ ದಿನಮಾನದಲ್ಲಿ 'ಲವ್ ಲೆಟರ್ಸ್‌; ನಿನ್ನ ಪ್ರೀತಿಯ ನಾನು' ನಾಟಕದ ಬಗ್ಗೆ ಈ ಅನುಮಾನ ಇದ್ದದ್ದು ಸಹಜವೇ. ಈ ಅನುಮಾನಕ್ಕೆ ವ್ಯತಿರಿಕ್ತವಾಗಿ ಮೈಸೂರಿನ ಕಿರುರಂಗಮಂದಿರದ ಮುಂದೆ ಉದ್ದಾನುದ್ದ ಕ್ಯೂ! 'ನಿನ್ನ ಪ್ರೀತಿಯ ನಾನು' ಅನ್ನು ಕಣ್ತುಂಬಿಕೊಳ್ಳಲು ಎಲ್ಲಾ ವಯಸ್ಸಿನ ಪ್ರೇಕ್ಷಕರು ಹಾತೊರೆದು ಬಂದಿದ್ದರು. ರಂಗಭೂಮಿ ಹಾಗೂ ಹಲವು ಭಾಷೆಗಳಲ್ಲಿ ಮನೋಜ್ಞ ನಟನೆಗೆ ಹೆಸರಾದ ಕಿಶೋರ್ ಕುಮಾರ್ ಅವರು ಮುಖ್ಯ ಪಾತ್ರದಲ್ಲಿ ಅಭಿನಯಿಸಲಿದ್ದಾರೆ ಎನ್ನುವ ಕಾರಣವೂ ಒಂದಿತ್ತು. ಇತ್ತೀಚಿನ ದಿನಗಳಲ್ಲಿ ಮೈಸೂರಿನಲ್ಲೂ ವಾರಾಂತ್ಯ ಪ್ರದರ್ಶನಗಳು ಕೆಲವೊಮ್ಮೆ ಒಂದೇ ದಿನದಲ್ಲಿ ಎರಡು ಪ್ರದರ್ಶನಗಳನ್ನು ಮಾಡುತ್ತಾ ನಾಟಕಾಸಕ್ತರಿಗೆ ಹೆಚ್ಚು ಸಂತೋಷ ನೀಡುತ್ತಿವೆ. 'ನಿನ್ನ ಪ್ರೀತಿಯ ನಾನು'ವಿನ ಎರಡೂ ಶೋಗಳೂ 'ರಂಗಮಂದಿರ ಭರ್ತಿ'ಯಾಗಿದ್ದವು ಎನ್ನುವುದು ಮುಖ್ಯ ವಿಷಯ.

ತನ್ನ ಹತ್ತನೇ ಹುಟ್ಟುಹಬ್ಬಕ್ಕೆ ಬಂದ ಸಿದ್ಧಾರ್ಥನಿಗೆ ಪುಟ್ಟ ರಶ್ಮಿ ಧನ್ಯವಾದ ಹೇಳಲು ಬರೆಯುವ ಮುಗ್ಧ ಪತ್ರದ ಮೂಲಕ ನಾಟಕ ಶುರುವಾಗುತ್ತದೆ. ಬಾಲ್ಯದಿಂದ ತಮ್ಮದೇ ಚೌಕಟ್ಟುಗಳಲ್ಲಿ ಬಂಧಿತವಾದ ಎರಡು ಜೀವಗಳು ಹರೆಯಕ್ಕೆ ಬಂದು ತಂತಮ್ಮ ಒಳಗನ್ನು ಅರುಹುವಾಗ ಕೆಲವೊಮ್ಮೆ ನಗು ತರಿಸಿದರೆ, ಮತ್ತೆ ಕೆಲವೊಮ್ಮೆ ನೋವು ಉಕ್ಕಿ ಬರುವಂತೆ ಮಾಡುತ್ತವೆ. ಇಲ್ಲಿ ಘೋಷಣೆಗಳಿಲ್ಲ, ಎದುರುಗೊಳ್ಳುವ ಸಂಭಾಷಣೆಗಳಿಲ್ಲ–ಕಾಗದ, ಮಸಿ ಮತ್ತು ಅವರಿಬ್ಬರನ್ನು ಕಾಡುವ ಖಾಲಿತನ ಪ್ರೇಕ್ಷಕರ ಒಳಕ್ಕೂ ದಾಟಿಬಿಡುತ್ತದೆ. ಪದಗಳ ನಡುವಿನ ಅಂತರದಲ್ಲಿ ಬಾಲ್ಯದ ಗಾಯಗಳು, ಹಸಿ ಪ್ರೀತಿ, ಘನ ನೋವು, ಇನ್ನೇನು ಸಿಕ್ಕಿತು ಅನ್ನುವಾಗ ಕೈ ತಪ್ಪಿದ ಅನುಬಂಧದ ಅನಿವಾರ್ಯತೆ ಎಲ್ಲವೂ ಕಾಣಿಸುವಾಗ ಆಗುವ ಅಗಾಧ ಸಂಕಟಕ್ಕೆ ಸ್ಥಾಯೀಭಾವವಿದೆ.

ಪ್ರಶಾಂತತೆಯನ್ನೇ ಹೊತ್ತಿರುವ ರಂಗಸ್ಥಳ. ಅಲ್ಲಲ್ಲಿ ತೂಗುಬಿಟ್ಟಿರುವ ದುಂಡನೆಯ ಮಂದಬೆಳಕಿನ ಉಂಡೆಗಳು ನಕ್ಷತ್ರಗಳನ್ನು ಹೋಲುತ್ತಾ ಅನೂಹ್ಯ ಜಗತ್ತೊಂದು ಸೃಷ್ಟಿಯಾಗಿದೆ. ಆಗಾಗ ಸ್ವಲ್ಪವೇ ಬದಲಾಗುವ ಬೆಳಕನ್ನು ಬಿಟ್ಟರೆ ಮತ್ತೆ ಯಾವುದೇ ಅಂಶ ತನ್ಮಯ ಪ್ರೇಕ್ಷಕರನ್ನು ನಾಟಕದಿಂದ ಹೊರಗೆ ಎಳೆಯುವುದಿಲ್ಲ. ಕಲಾವಿದರು ರಂಗದ ತುಂಬೆಲ್ಲಾ ಓಡಾಡಿ ಮಾಡುವ ನಾಟಕಗಳನ್ನು ನೋಡಿ ಅಭ್ಯಾಸವಿದ್ದ ಪ್ರೇಕ್ಷಕರು ಈ ಕೂತು ಪತ್ರ ಓದುವ ಮಾದರಿಗೆ ಹೊಂದಿಕೊಳ್ಳಲು ಸ್ವಲ್ಪ ಸಮಯ ತೆಗೆದುಕೊಂಡರು.

ನಟರಿಗೆ ಶಾರೀರ ಅಂದರೆ 'ಧ್ವನಿ' ಎಂಬುದು ಕೆಲವೊಮ್ಮೆ ಅಭಿನಯಕ್ಕೆ ಒದಗುವ ಮಿತಿಯಾದರೆ, ಇಲ್ಲಿ ಅಭಿನಯದ ಶಕ್ತಿಯೇ 'ಧ್ವನಿ'ಯಾಗುತ್ತದೆ.

ಸಿದ್ಧಾರ್ಥನಾಗಿ ಕಿಶೋರ್ ಅವರ 'ನಟನೆ' ಹಲವು ಮಜಲುಗಳನ್ನು ದಾಟುತ್ತದೆ. ಹುಡುಗನಾಗಿ, ಯುವಕನಾಗಿ, ಆಫೀಸರ್ ಆಗಿ, ಸಂಸಾರಸ್ಥನಾಗಿ ಮತ್ತೆ ರಾಜಕೀಯ ಹಂಬಲಗಳ ವ್ಯಕ್ತಿಯಾಗಿ ಪಕ್ಕಾ ಮಧ್ಯಮವರ್ಗದ ಅಭಿಲಾಷೆಗಳ ಮೂಟೆ ಈ ಸಿದ್ಧಾರ್ಥ. ಆದರೆ ಅವನ ಎದುರಿಗೆ ಇರುವ ಚಂಚಲ ಮನಸ್ಸಿನ, ಯಾವುದೋ ಹುಡುಕಾಟದಲ್ಲಿ ತೊಡಗಿ ಖಾಲಿಯಾಗುತ್ತಿರುವ ತನ್ನನ್ನು ಎಲ್ಲೆಲ್ಲೋ ತಡಕಾಡಿ ಜೀವಿಸಲು ಪ್ರಯತ್ನಿಸುತ್ತಿರುವ ರಶ್ಮಿಯಾಗಿ ಸಿರಿ ರವಿಕುಮಾರ್ ಅವರ ಅಸ್ಖಲಿತ ಮಾತಿನ ಹದ ತಿಳಿಗಾಳಿಯಂತೆ ಪ್ರಾರಂಭವಾಗಿ, ಕಾಲಾನುಕ್ರಮದಲ್ಲಿ ಭಾರದ ಸಂಕೇತವಾಗುತ್ತದೆ. ತನ್ನದೊಂದು ಮನೆ ಹುಡುಕುತ್ತಾ ಪ್ರಪಂಚ ತಿರುಗುತ್ತಾ ಕಲೆಯಲ್ಲಿ ಮುಳುಗಿದ ಈ ಶ್ರೀಮಂತೆಯ ಆತ್ಮ ನೋವನ್ನು ತೋರುವುದು ದೊಡ್ಡ ಪದಗಳಿಂದಲ್ಲ, ಬದಲಿಗೆ ಕಣ್ಣುಗಳಿಗೆ ದಾಟದೇ ಹೋದ ನಗೆಯ ಅಲೆಗಳಲ್ಲಿ.

ಸಿದ್ಧಾರ್ಥ ತನ್ನ ಭಾವನಾತ್ಮಕ ಜಗತ್ತನ್ನು ಬಹು ಎಚ್ಚರಿಕೆಯಿಂದ ತೊಗಲಿನಂತೆ ಧರಿಸಿದರೆ, ರಶ್ಮಿ ತನ್ನ ಹುಡುಕಾಟಕ್ಕೆ ಸಿಗುವ ಎಲ್ಲವನ್ನೂ ನಿರ್ಭಿಡೆಯಿಂದ ತನ್ನದಾಗಿಸಿಕೊಳ್ಳುತ್ತಾಳೆ. ಆದರೆ ಎಲ್ಲವನ್ನೂ ಪ್ರಸ್ತುತಕ್ಕೆ ಇಳಿಸುವ ಸ್ವಾತಂತ್ರ್ಯವನ್ನು ಅವಳ 'ದುರಂತ' ವ್ಯಕ್ತಿತ್ವಕ್ಕೆ ಹೊಸ ಆಯಾಮ ಕೊಡುವಲ್ಲಿ ಅನುವಾದಕರು/ನಿರ್ದೇಶಕರು ಬಳಸಬಹುದಿತ್ತು ಎಂದು ಅನ್ನಿಸದೆ ಇರದು.

ಇದು ಹತ್ತಿಗೆ ತಗುಲಿದ ಕಿಡಿಯ ಹಾಗೆ. ಜ್ವಾಲೆ ಧಗಧಗಿಸಿ ಉರಿಯುವುದಿಲ್ಲ. ಕಿಡಿ ಸೋಕಿದ್ದು ಗೊತ್ತಾಗುವ ಹೊತ್ತಿಗೆ ಬರೀ ಬೂದಿ ಉಳಿದಿರುತ್ತದೆ.

ಎ.ಆರ್.ಗರ್ನಿ ನಾಟಕ ರೂಪಾಂತರ ಮತ್ತು ನಿರ್ದೇಶನವನ್ನು ವೆಂಕಟೇಶ್ ಪ್ರಸಾದ್ ಮಾಡಿದ್ದಾರೆ. ಜಯಂತ್ ಜಿ. ನಿಶಾಂತ್ ಗುರುಮೂರ್ತಿ ಅವರ ವಿನ್ಯಾಸವಿದ್ದು, ಅರುಣ್ ಡಿ.ಟಿ ಅವರ ಬೆಳಕಿನ ವಿನ್ಯಾಸವಿದೆ. ಸುಷ್ಮ ನಿರ್ಮಾಣದ ಹೊಣೆ ಹೊತ್ತಿದ್ದಾರೆ.

ಯಕ್ಷಗಾನದ ಬಾಗಿಲು ತೆರೆದು ಬಂದ ಕನಕ

ಕೆ.ನರಸಿಂಹಮೂರ್ತಿ



ದೇವನಿಲ್ಲದ ಜಾಗವೇ ಇಲ್ಲ ಎಂದು ಪ್ರತಿಪಾದಿಸುತ್ತಿರುವ ಕನಕ
ಚಿತ್ರ: ಹಂಪಾ ನಾಗರಾಜ್

ಭಾರತೀಯ ಭಕ್ತಿ ಪರಂಪರೆಯ ಮೊದಲಿಗರಲ್ಲೊಬ್ಬರಾದ ಕನಕದಾಸರೆಂದರೆ ಕರ್ನಾಟಕದ ಜನರಿಗೆ ಮೊದಲು ನೆನಪಾಗುವುದು ಡಾ.ರಾಜ್‌ಕುಮಾರ್ ಅಭಿನಯದ 'ಭಕ್ತ ಕನಕದಾಸ' ಸಿನಿಮಾ. 60ರ ದಶಕದಲ್ಲಿ ಬಂದ ಆ ಸಿನಿಮಾದಲ್ಲಿ ಮೂಡಿಬಂದ ಕನಕನೇ ನಿಜವಾದ ಕನಕ, ಅಲ್ಲಿರುವುದೇ ಕನಕನ ನಿಜವಾದ ಜೀವನಚರಿತ್ರೆ ಎಂದು ಜನ ಭಕ್ತಿಪೂರ್ವಕವಾಗಿ ನಂಬಿದ್ದಾರೆ. ನಂತರದ ದಶಕಗಳಲ್ಲಿ ಕನಕದಾಸರ ಕುರಿತು ಬೆರಳೆಣಿಕೆಯಷ್ಟು ನಾಟಕಗಳು, ಕಾವ್ಯಗಳು ಬಂದರೂ, ಆ ನಂಬಿಕೆಗೆ ಮಾತ್ರ ಚ್ಯುತಿ ಬಂದಿಲ್ಲ.

ಇನ್ನೊಂದೆಡೆ, ಜನಪದರ ಡೊಳ್ಳಿನ ಪದ, ತ್ರಿಪದಿ, ಏಕತಾರಿ ಹಾಡು, ಗೀಗೀ ಪದಗಳಲ್ಲಿ, ಕನಕನ ಕಿಂಡಿಯ ಐತಿಹ್ಯ, ಪಠ್ಯಪುಸ್ತಕದ ಪಾಠಗಳಲ್ಲಿ, ಕೀರ್ತನೆಗಳಲ್ಲಿ ಕನಕರ ಬದುಕು ಜೀವಂತವಾಗಿದೆ ಎಂಬುದು ವಿಶೇಷ. ಅಧ್ಯಯನಪೀಠ, ಕೇಂದ್ರಗಳಲ್ಲಿ ಕನಕದಾಸರ ಜೀವನ-ಕೃತಿಗಳ ಬಗ್ಗೆ ಸಂಶೋಧನೆಗಳು ನಿರಂತರವಾಗಿ ನಡೆದಿವೆ.

ಇಂಥ ಸನ್ನಿವೇಶದಲ್ಲಿ, ಯಕ್ಷಗಾನದ ಬಾಗಿಲು ತೆರೆದು ಕನಕದಾಸರು ಬಂದಿದ್ದಾರೆ. ಬೆಳ್ಳಿ ಹಬ್ಬದ ಸಂಭ್ರಮದಲ್ಲಿರುವ ಶಿವಮೊಗ್ಗದ ನಾಟ್ಯಶ್ರೀ ಕಲಾ ತಂಡದ ಕಲಾವಿದರು ಇದನ್ನು ಆಗು ಮಾಡಿದ್ದಾರೆ.

ಪ್ರಯೋಗಗಳ ರಂಗಭೂಮಿಯಾದ ಮೈಸೂರಿನ ರಂಗಾಯಣದ ಭೂಮಿಗೀತ ರಂಗಮಂದಿರದಲ್ಲಿ ಈ ತಂಡದ ಕಲಾವಿದರು 'ಸಂತ ಕವಿ ಕನಕದಾಸ-ಯಕ್ಷಗಾನ ಪ್ರಸಂಗ'ವನ್ನು ಅಭಿನಯಿಸಿ ಪ್ರದರ್ಶಕ ಕಲಾ ಪ್ರಕಾರಗಳ ಅಭಿವ್ಯಕ್ತಿ ಸಾಧ್ಯತೆ-ಸವಾಲುಗಳ ಕಡೆಗೂ ಗಮನ ಸೆಳೆದರು. ತಮ್ಮ 25 ವರ್ಷಗಳ ಸುದೀರ್ಘ ನಡಿಗೆಯಲ್ಲಿ ಇಂಥ ಸಾಹಸಮಯ ಪ್ರಯೋಗ-ಅನುಭವಗಳ ಜೊತೆಗೆ ಸಾಗುತ್ತಾ, ಪ್ರೇಕ್ಷಕರಲ್ಲೂ ಹೊಸ ಬಗೆಯ ಅಭಿರುಚಿಯನ್ನೂ ನಿರ್ಮಿಸುತ್ತಾ ಬಂದಿದ್ದಾರೆ ಎಂಬುದೇ ವಿಶೇಷ.

ಸಣ್ಣಾಟ, ದೊಡ್ಡಾಟ ಸೇರಿದಂತೆ ಜನಪದ ರಂಗ ಪ್ರಕಾರಗಳ ಉತ್ಸವಕ್ಕೆ ಸಾಕ್ಷಿಯಾಗಿದ್ದ ರಂಗಾಯಣವನ್ನು ಮರುರೂಪಿಸುವ ಪ್ರಯತ್ನವಾಗಿಯೂ ಇದು ಗಮನ ಸೆಳೆಯಿತು.

ಕರ್ನಾಟಕದ ಸಾಂಸ್ಕೃತಿಕ ಚರಿತ್ರೆಯಲ್ಲಿ ಮಹತ್ವದ ಸ್ಥಾನ ಪಡೆದಿರುವ ಬಸವಣ್ಣ, ಅಕ್ಕಮಹಾದೇವಿ, ಒಕ್ಕಲಿಗರ ಆರಾಧ್ಯದೈವವಾದ ಕಾಲಭೈರವೇಶ್ವರ, ಕುರುಬ ಸಮುದಾಯದ ಆರಾಧ್ಯದೈವವಾದ ಬೀರಲಿಂಗೇಶ್ವರರ ಪ್ರಸಂಗಗಳನ್ನು ಯಕ್ಷಗಾನಕ್ಕೆ ಅಳವಡಿಸಿ ನೂರಾರು ಪ್ರದರ್ಶನಗಳನ್ನು ನೀಡಿ, ಈಗಾಗಲೇ ಗಮನ ಸೆಳೆದಿರುವ ವಿದ್ವಾನ್ ದತ್ತಮೂರ್ತಿ ಭಟ್ಟರ ನೇತೃತ್ವದಲ್ಲೇ ಈ ಪ್ರಯೋಗವೂ ನಡೆಯಿತು. ಭಿನ್ನ ನೆಲೆಗಳಲ್ಲಿ ಕನಕನ ಪಾತ್ರವನ್ನು ತಾವೇ ನಿರ್ವಹಿಸಿ, ಅಮೋಘ ಅಭಿನಯದಿಂದ ಪ್ರೇಕ್ಷಕರ ಮನಸೂರೆಗೊಂಡರು.

ಒಂದೂವರೆ ವರ್ಷದ ಹಿಂದೆ ಕನಕ ಜಯಂತಿಯ ವೇಳೆಯಲ್ಲಿ ಶಿವಮೊಗ್ಗದಲ್ಲಿ ಈ ಪ್ರಯೋಗದ ಮೊದಲ ಪ್ರದರ್ಶನ ನಡೆದಿತ್ತು. ಇದೀಗ ಸಂತಕವಿ ಕನಕದಾಸ ಮತ್ತು ತತ್ವಪದಕಾರರ ಅಧ್ಯಯನ ಕೇಂದ್ರದ ಸಹಯೋಗದಲ್ಲಿ ಮತ್ತೆ ಪ್ರದರ್ಶಿಸಲಾಯಿತು.

90 ನಿಮಿಷಗಳ ಅವಧಿಯ ಪ್ರದರ್ಶನದಲ್ಲಿ ಕನಕದಾಸರ ಜೀವನವು 15 ವಿಭಿನ್ನ ದೃಶ್ಯಾವಳಿಗಳಲ್ಲಿ ಮೂಡಿಬಂತು. ತಿಮ್ಮಪ್ಪನಾಯಕ ಕನಕದಾಸರಾಗುವವರೆಗಿನ ಪೂರ್ವಾರ್ಧ ಹಾಗೂ ನಂತರದ ಕಥಾನಕವುಳ್ಳ ಉತ್ತರಾರ್ಧವು, ಯಕ್ಷಗಾನಕ್ಕೆ ಪ್ರಸಂಗವನ್ನು ಒಗ್ಗಿಸುವ ತಂಡದ ಪರಿಶ್ರಮವನ್ನೂ ತೋರಿತು.

ಸಂತಾನಕ್ಕಾಗಿ ತಿರುಪತಿ ತಿಮ್ಮಪ್ಪನಲ್ಲಿ ಬೀರಪ್ಪನಾಯಕ–ಬಚ್ಚಮ್ಮ ದಂಪತಿಯ ಹರಕೆ, ತಿಮ್ಮಪ್ಪ ನಾಯಕನ ಜನನ, ಆತನ ವೈಭೋಗ, ಯುದ್ಧ, ನಂತರ ಮೂಡುವ ವೈರಾಗ್ಯ ಮತ್ತು ಕನಕದಾಸರಾದ ನಂತರದ ಬದುಕು, ನಿಷ್ಕಳಂಕ ಭಕ್ತಿ, ಜಾತೀಯತೆಯು ತಂದೊಡ್ಡುವ ಸಂಕಟಗಳು, ಅದನ್ನು ಮೀರಿಕೊಳ್ಳುವ ಕನಕರ ಸಾತ್ವಿಕ ಆಕ್ರೋಶ, ನಿಜಭಕ್ತಿ, ಆ ಮೂಲಕವೇ ಕಾಣುವ ಕೃಷ್ಣ ದರ್ಶನ ಮತ್ತು ಸಮಾಜ ಪ್ರೀತಿ, ಮುಕ್ತಿಯ ಕ್ಷಣಗಳೆಲ್ಲವೂ ಪ್ರಸಂಗದಲ್ಲಿ ಮೇಳೈಸಿತು. ಎಂ.ಎ.ಹೆಗಡೆ ದಂಟ್‌ಕಲ್ ಅವರು ರಚಿಸಿರುವ ಪ್ರಸಂಗವನ್ನು ಈ ತಂಡ ಅಭಿನಯಿಸಿತು.

ಯಕ್ಷಗಾನ–ನಾಟಕ ಸಮನ್ವಯ

ಚಾರಿತ್ರಿಕ ವ್ಯಕ್ತಿಗಳ ಪ್ರಸಂಗದಲ್ಲಿ ಯಕ್ಷಗಾನದ ಪೋಷಾಕನ್ನು ಒಂದೇ ಸಮನೆ ಧರಿಸಲು, ಕುಣಿಯಲು, ಅಭಿನಯಿಸಲು ಆಗದು ಎಂಬುದರ ಕಡೆಗೂ ಪ್ರಯೋಗ ಗಮನ ಸೆಳೆಯಿತು.

ತಿಮ್ಮಪ್ಪನಾಯಕನಾಗುವವರೆಗೂ ಕಿರೀಟ ಸೇರಿ ಯಕ್ಷಗಾನದ ಪೋಷಾಕನ್ನು ಧರಿಸಿ ಹಾಡು, ಕುಣಿತ, ಸಂಭಾಷಣೆಯ ತ್ರಿವಳಿ ಅಭಿವ್ಯಕ್ತಿಗೆ ಮೈಕೊಡುವ ಪಾತ್ರ ಮತ್ತು ರಂಗಸಜ್ಜಿಕೆಯು, ಪಾತ್ರದ ಮನಪರಿವರ್ತನೆಯಾಗುತ್ತಲೇ ಪೋಷಾಕನ್ನೂ ಪರಿವರ್ತಿಸಲೇಬೇಕಾದ ಅನಿವಾರ್ಯತೆ ಅದು. ಕನಕನಂತೆಯೇ ಉಳಿದ ಪಾತ್ರಗಳೂ ಪೋಷಾಕು, ಅಭಿನಯ, ಭಾಷಾಭಿವ್ಯಕ್ತಿಯೆಲ್ಲವನ್ನೂ ಬದಲಾಯಿಸಿಕೊಳ್ಳುತ್ತವೆ.

ಐತಿಹ್ಯಗಳಿಂದ ಕೂಡಿದ ವ್ಯಕ್ತಿತ್ವವೊಂದನ್ನು, ಅದು ಜನಮಾನಸದಲ್ಲಿ ಮೂಡಿರುವ ರೀತಿಯಲ್ಲೇ ಕಟ್ಟಿಕೊಡಲೇಬೇಕಾದಾಗ ಯಾವ ಕಲೆಗಾದರೂ ದಕ್ಕುವ ಅಭಿವ್ಯಕ್ತಿಯ ಅವಕಾಶ ಇಷ್ಟೇ. ಇದು ಕಲಾ ಪ್ರಕಾರಗಳ ನಡುವಿನ ಸಮನ್ವಯಕ್ಕೂ ದಾರಿ ಮಾಡಿದೆ. ಹೀಗಾಗಿಯೇ ಇಲ್ಲಿ ಯಕ್ಷಗಾನ, ಬಯಲಾಟ ಮತ್ತು ನಾಟಕ ಒಂದರೊಳಗೊಂಡು ಮೇಳೈಸುತ್ತವೆ.

ಬಿಳಿ ಪಂಚೆ, ತಂಬೂರಿ, ಕರಿದಾರ ಧರಿಸಿ ಸಾತ್ವಿಕ ಕನಕನಾಗಿ ರೂಪುಗೊಂಡ ಪಾತ್ರವು ವೇದಿಕೆಗೆ ಬಂದ ನಂತರದಿಂದ, ಪೋಷಾಕಿನ ಜೊತೆಗೆ ಭಾಗವತಿಕೆಯೂ ತನ್ನ ಸಾಂಪ್ರದಾಯಿಕ ಶೈಲಿಯನ್ನು ಬಿಟ್ಟುಕೊಟ್ಟು, ನಾಟಕದ ಹಾಡುಗಾರಿಕೆಯ ಶೈಲಿಯನ್ನು ಅಳವಡಿಸಿಕೊಳ್ಳುತ್ತದೆ. ನಂತರದ್ದೆಲ್ಲ, ನಾವು ನೀವೆಲ್ಲ ಇದುವರೆಗೂ ನಂಬಿರುವ ಕನಕದಾಸರ ತಥಾಕಥಿತ ಜೀವನ. ಕನಕರ ಕೃತಿಗಳ ಸಾಂದರ್ಭಿಕ ಉಲ್ಲೇಖ, ಆರ್ತಭಾವದಿಂದ ಜನಪ್ರಿಯ ಕೀರ್ತನೆಗಳ ಗಾಯನ. ದೈವದಲ್ಲಿ ಲೀನವಾಗುವ ಮುಕ್ತಿ ಸತ್ಯ.

'ಚಾರಿತ್ರಿಕ ವ್ಯಕ್ತಿಗಳ ಪ್ರಸಂಗದಲ್ಲಿ ಯಕ್ಷಗಾನವೂ ಇರಬೇಕು, ಅದು ಜನ ಒಪ್ಪುವಂತೆಯೂ ಇರಬೇಕು. ಅಂಥ ವ್ಯಕ್ತಿತ್ವಗಳ ಮಹಾನ್ ಆಶಯವೂ ಹೊಸ ಪ್ರಕಾರದಲ್ಲಿ ಮೂಡಬೇಕೆಂಬುದೇ ನಮ್ಮ ಆಶಯ' ಎನ್ನುವ ದತ್ತಮೂರ್ತಿ ಭಟ್ಟರು, ಇಂಥ ಪ್ರಸಂಗಗಳ ನಿರೂಪಣೆಗೂ ಮುನ್ನ ಮಾಡುವ ಸಿದ್ಧತೆ, ವಿದ್ವಾಂಸರ, ಸ್ವಾಮೀಜಿಗಳ ಭೇಟಿ, ಚರ್ಚೆ, ವೇದಿಕೆ ಪ್ರದರ್ಶನಕ್ಕೂ ಮುನ್ನ ನಡೆಸುವ ಪ್ರಯೋಗಾಭಿನಯಗಳ ಪರಿಶ್ರಮವೂ ದೊಡ್ಡದು.

ಬಸವಣ್ಣನ ಕುರಿತ ಯಕ್ಷಗಾನ ಪ್ರದರ್ಶನದ ವೇಳೆ, ಆರಂಭದಲ್ಲಿ ಗಣಪನ ಪ್ರಾರ್ಥನೆಗೆ ಅವಕಾಶ ನೀಡದೇ ಇದ್ದ ಒಂದು ಘಟನೆಯೂ ಅವರ ನೆನಪಿನಲ್ಲಿದೆ. ಹಾಗೆಯೇ, ಚಾರಿತ್ರಿಕ ವ್ಯಕ್ತಿಗಳ ಯಕ್ಷಗಾನ ಪ್ರಸಂಗಗಳ ಪ್ರಯೋಗದಲ್ಲಿ ಅವರ ಪರಿಶ್ರಮವನ್ನು ಅರಿತವರು, ಶಂಕರಾಚಾರ್ಯರ ಕುರಿತೂ ಯಕ್ಷಗಾನ ಪ್ರಸಂಗ ಮಾಡುವಂತೆ ಕೇಳಿಕೊಂಡಿದ್ದನ್ನು ನಯವಾಗಿ ನಿರಾಕರಿಸಿದ ನಿದರ್ಶನವೂ ಇದೆ. ಅವರಿಗೆ ತಮ್ಮ ಕಲಾಭಿವ್ಯಕ್ತಿಯ ಸಾಧ್ಯತೆಯೂ ಗೊತ್ತು, ಮಿತಿಯೂ ಗೊತ್ತು ಎಂಬುದಕ್ಕೆ ಇವೆರಡು ಸಾಕ್ಷಿ.

'ಕನಕದಾಸರು, ಶಂಕರಾಚಾರ್ಯರ ಪಾತ್ರಕ್ಕೆ ಯಕ್ಷಗಾನದ ಕಿರೀಟ ಇಡಲಾಗದು. ಕಿರೀಟವಿಲ್ಲದೆ ಯಕ್ಷಗಾನವನ್ನೂ ಆಡಲಾಗದು. ಹೀಗಾಗಿ ತಿಮ್ಮಪ್ಪನಾಯಕನ ಪಾತ್ರಕ್ಕಷ್ಟೇ ಕಿರೀಟ ತೊಡಿಸಿದೆವು. ಕುಣಿಸಿದೆವು. ಸಂತ ಕನಕದಾಸರನ್ನು ಜನರ ಕಲ್ಪನೆಯಲ್ಲೇ ತೋರಿಸಿದೆವು. ಏಕೆಂದರೆ, ಚಾರಿತ್ರಿಕ ವ್ಯಕ್ತಿಗಳಿಗೂ, ಯಕ್ಷಗಾನಕ್ಕೂ ಅಪಚಾರವಾಗಬಾರದು' ಎನ್ನುತ್ತಾರೆ ಅವರು.

ಈ ಸದಾಶಯವೇ ಯಾವುದೇ ಕಲೆ ಮತ್ತು ಅಭಿವ್ಯಕ್ತಿಯ ಮೂಲಸೆಲೆ. ಅದನ್ನು ಸಾಧಿಸಲು ಹೊರಟ ತಂಡವು ಬಹುದೂರ ಸಾಗಿ ಬಂದಿದೆ. ಈ ತಂಡದ ಹಿಮ್ಮೇಳದಲ್ಲಿದ್ದ ಕೇಶವ ಹೆಗಡೆ ಕೊಳಗಿ, ಶಂಕರ ಭಾಗವತ್, ಸುಬ್ರಹ್ಮಣ್ಯ ಭಂಡಾರಿ, ಮುಮ್ಮೇಳದಲ್ಲಿದ್ದ ಕೃಷ್ಣಯಾಜಿ ಬಳ್ಕೂರು, ಅಶೋಕ ಭಟ್, ಪ್ರಭಾಕರ ಹಾನಗಲ್, ಪ್ರಶಾಂತ್ ವರ್ಧನ್, ಸದಾಶಿವ ಯಲ್ಲಾಪುರ, ಮಹಾಬಲೇಶ್ವರ್ ಇಟಗಿ, ವೆಂಕಟೇಶ್ ಓಜಗಾರ್, ಅವಿನಾಶ್ ಕೊಪ್ಪ, ಎಂ.ಆರ್.ನಾಯ್ಕ ಇಡೀ ಪ್ರಸಂಗವನ್ನು ಕಳೆಗಟ್ಟಿಸಿದರು.

bhanuvara@prajavani.co.in

ಮೊದಲ ಓದು

ಎಲ್ಲೆಗಳ ವಿಸ್ತರಣೆ; ರಸಪೂರಣ



ಪು: 300
₹375

ವಾಸ್ತವ ಪ್ರತಿವಾಸ್ತವ
ಲೇ:ಎಸ್.ದಿವಾಕರ್
ಪ್ರ: ವೀರಲೋಕ
ಸಂ: 7022122121

ಖುದ್ದು ಸಾಹಿತ್ಯದ ಓದಿನಲ್ಲಿ ಮುಳುಗಿ ಎದ್ದವರು ವಿಮರ್ಶಾ ಕಾರ್ಯ ಕೈಗೊಂಡರೆ ಅದಕ್ಕೆ ಅಪರೂಪದ ವಿಸ್ತಾರ ಪ್ರಾಪ್ತವಾಗುತ್ತದೆ. ಕೃತಿಯೊಂದರ ಹೂರಣವನ್ನು ಬಿಡಿಸಿ ನೋಡುವುದನ್ನು ಒಂದು ಸಿದ್ಧ ಮಾದರಿ ಎಂದುಕೊಳ್ಳೋಣ. ಅದಷ್ಟೇ ಅಲ್ಲದೆ ಅದರ ನೆವದಲ್ಲಿ ಇನ್ನಷ್ಟು ನೆನಪುಗಳನ್ನು, ವಿಚಾರಗಳನ್ನು, ಮಾಹಿತಿ - ಒಳನೋಟಗಳನ್ನು ದಾಟಿಸಿದರೆ? ಅದು ಎಸ್. ದಿವಾಕರ್ ಅವರ ಮಾದರಿಯಾಗುತ್ತದೆ. 'ವಾಸ್ತವ ಪ್ರತಿವಾಸ್ತವ' ಕೃತಿಯು ಅದಕ್ಕೆ ಇನ್ನೊಂದು ಉದಾಹರಣೆ. ಎಸ್. ದಿವಾಕರ್ ಸಣ್ಣ ಕಥೆಗಾರರಾಗಿ ಹಾಗೂ ಪ್ರಬಂಧಕಾರರಾಗಿ ಪ್ರಯೋಗಶೀಲ ಕೃತಿಗಳನ್ನು ನೀಡಿರುವವರು. ವಿಶ್ವ ಸಾಹಿತ್ಯದ ಹಲವು ಅಗುಳುಗಳನ್ನು ನಮಗೂ ಬಡಿಸಿದವರು. ಅವರ ಮಾತಿನಲ್ಲೇ ಸಾಹಿತ್ಯದ ಅನೂಹ್ಯ ನೆನಪುಗಳ ಮೆರವಣಿಗೆ ಕಾಣುತ್ತದೆ. 'ವಾಸ್ತವ ಪ್ರತಿವಾಸ್ತವ' ಕೂಡ ಅವರು ನುಡಿಯಲ್ಲಿ ಹಂಚಿಕೊಳ್ಳುವಷ್ಟೇ ಆಪ್ತ ವಿಷಯಗಳನ್ನು ಪದಗಳಲ್ಲಿ ಕಟ್ಟಿಕೊಟ್ಟಿದೆ. ಈ ಕೃತಿಯನ್ನು ಕೇವಲ ವಿಮರ್ಶೆಗಳ ಸಂಕಲನ ಎನ್ನಲಾಗದು. ಸಾಹಿತ್ಯಪ್ರೇಮಿಯೊಬ್ಬರು ರಸಾಸ್ವಾದವನ್ನು ಹಂಚಿಕೊಳ್ಳುವ ಅಪರೂಪದ ಬಗೆ ಎಂದೇ ಹೇಳಬೇಕು. 'ಸುಗಮ ಸಂಗೀತದ ಇತಿಹಾಸ' ಎಂಬ ವಿಮರ್ಶೆಯನ್ನು ಉದಾಹರಣೆಯಾಗಿ ನೋಡೋಣ. ಲೀಲಾವತಿಯವರು ಸುಗಮ ಸಂಗೀತವನ್ನು ಕಂಡರಿಸಿದ ರೀತಿಯನ್ನು ಬಣ್ಣಿಸುತ್ತಲೇ ದಿವಾಕರರ ಸಂಗೀತದ ಒಳನೋಟಗಳೂ ಆ ಮೂಲಕ ದಕ್ಕುತ್ತವೆ. ಸಂಗೀತಗಾರ ಎಸ್. ಕೃಷ್ಣಮೂರ್ತಿ ಅವರ ಕುರಿತ ಬರಹವೂ ಇದನ್ನೇ ಪುಷ್ಟೀಕರಿಸುತ್ತದೆ.

ಕೃತಿಯ ಬರಹಗಳನ್ನು ಮೂರು ಭಾಗಗಳಾಗಿ ವಿಂಗಡಿಸಿದ್ದಾರೆ. ಆದರೂ ಎಲ್ಲವುಗಳಲ್ಲಿ ವಿಸ್ತಾರದ ತಂತುವೊಂದು ಸಾಮಾನ್ಯ ಎನ್ನುವಂತೆ ಕಾಣುತ್ತದೆ. ಮಾಸ್ತಿ ಅವರ ಕುರಿತ ಬರಹದಲ್ಲಿ ಕಥೆಗಾರ ಮಾಸ್ತಿ, ಮನುಷ್ಯನಾಗಿ ಮಾಸ್ತಿ, ವಿಮರ್ಶಕರಾಗಿ ಮಾಸ್ತಿ ಎಲ್ಲವೂ ಅನಾವರಣಗೊಳ್ಳುವುದು ದಿವಾಕರರ ಶಕ್ತಿ. ಮಾಸ್ತಿ ಅವರು 'ಕ್ರೌರ್ಯ' ಕಥೆಯಲ್ಲಿ ತಮಗೆ ಇಷ್ಟವಾಗದ ಒಂದು ಸಂಗತಿಯನ್ನು ಹೇಳಿದ್ದಾರೆ. ಅದನ್ನೂ ದಿವಾಕರ್ ಮುಚ್ಚುಮರೆ ಮಾಡದೆ ದಾಖಲಿಸಿದ್ದಾರೆ.

ಇಂತಹ ರಚನೆ ಅಪ್ಪಟ ಸಾಹಿತ್ಯ ಪ್ರೀತಿ ಇರುವವರಿಗಷ್ಟೇ ಸಾಧ್ಯ. ದಿವಾಕರರ ವಿಮರ್ಶಾ ವಿವೇಕದ ಜೊತೆಗೆ ರಸಾನುಭವಕ್ಕೂ ಈ ಕೃತಿಯ ಓದು ಮುಖ್ಯ.

ಕಾನಿನೊಂದಿಗೆ ನಮ್ಮನ್ನೂ ಕಾಣಿಸುವ ಕತೆ



ಪು: 264
₹300


ಉಪ್ಪಾಗೆ ಹರಳು
ಲೇ: ಭಾರತಿ ಹೆಗಡೆ
ಪ್ರ: ಬಹುರೂಪಿ
ಸಂ: 70191 82729

ದುರಾಸೆಯ ವಿವಿಧ ಘಟ್ಟಗಳನ್ನು ಬಿಡಿಸಿಡುತ್ತದೆ ಈ ಕಾದಂಬರಿ. ಉತ್ತರ ಕನ್ನಡ ಜಿಲ್ಲೆಯ ಹವ್ಯಕ ಸಮುದಾಯದ ಜೀವನಶೈಲಿ ಆಹಾರ ಶೈಲಿ, ಉಳಿದ ಪಂಗಡಗಳೊಂದಿಗೆ ಹೊಂದಾಣಿಕೆಯ ಬದುಕು ಚಿತ್ರಿಸಲಾಗಿದೆ. ದುರಾಸೆ ಹೆಚ್ಚಿದಂತೆ ಕತ್ಲೆ ಕಾನು ಬಯಲಾಗುತ್ತದೆ. ಜೊತೆಗೆ ಮನುಷ್ಯತ್ವದ ಪದರೂ ಕಳಚಿಕೊಂಡು ತಾಯಿ ಮಗನ ಬಾಂಧವ್ಯದಲ್ಲಿಯೂ ಬಿರುಕು ಬರುತ್ತದೆ.

ಪ್ರೀತಿಯ ಕಣ್ಕಟ್ಟಿನೊಂದಿಗೆ ಮನೆ ಬಿಟ್ಟು ಹೋಗುವ ಜಾನಕಿ ಊರಿಗೆ ಮರಳುವಾಗ ಅದೆಷ್ಟು ದುರಂತಗಳನ್ನು ಕಾಣುತ್ತಾಳೆ, ಮಾನವೀಯತೆಯ ಮೂರ್ತಿವೆತ್ತ ತಿಪ್ಪನ ಪಾತ್ರ, ಕಾದಂಬರಿಯ ಜೀವಾಳವೇ ಆಗಿರುವ ಬಂಗಾರತ್ತೆಯ ವ್ಯಕ್ತಿತ್ವ, ಇಡೀ ಕಥನದಲ್ಲಿ ತಾನೂ ಒಂದು ಪಾತ್ರವೆಂಬಂತೆ ಇರುವ ಕಾನು, ಮನುಷ್ಯರೊಳಗಿನ ಮೃಗತ್ವವನ್ನೂ ಬಿಚ್ಚಿಡುತ್ತ ಹೋಗುತ್ತದೆ. ಪ್ರಕೃತಿಯ ಒಡನಾಟದಲ್ಲಿ ನೆಮ್ಮದಿಯಾಗಿದ್ದ ಬದುಕೊಂದು ಸಂಪತ್ತು ಸಂಗ್ರಹಕ್ಕೆ ಮುಂದಾದೊಡನೆ ಕಾಡು ಕಳೆದುಕೊಳ್ಳುತ್ತಾರೆ. ಊರಿನ ನೆಮ್ಮದಿಯೂ ಕಾಡಿನೊಂದಿಗೆ ಲೂಟಿಯಾಗುತ್ತದೆ. ಉತ್ತರ ಕನ್ನಡದ ಕಾನಿನನಲ್ಲಿ ಕಳೆದುಹೋಗುವ ನಾವು, ಪುಸ್ತಕ ಓದಿ ಮುಗಿಸುವುದರಲ್ಲಿ ಆ ಪಾತ್ರಗಳೆಲ್ಲ ಕಣ್ಮುಂದೆ ಹಾದು ಮನದೊಳಗಿಳಿಯುತ್ತವೆ. ಜಾತಿ ಮೀರಿದ ದೊಡ್ಡತನ, ಔದಾರ್ಯ, ಜಾತಿಯೊಳಗಿನ ವಾಂಛೆಗಳು ಸೂಕ್ಷ್ಮವಾಗಿ ಹಾದುಹೋಗುತ್ತ, ಗ್ರಾಮ ಭಾರತದ ಬದುಕು ಬದಲಾಗುವ ಚಿತ್ರಣ ಪ್ರಬಲವಾಗಿದೆ.

ಉಪ್ಪಾಗೆ ಹರಳು ಎಂಬುದು ಸಸ್ಯಜನ್ಯ ತುಪ್ಪ. ಈ ತುಪ್ಪದ ತಯಾರಿಯಲ್ಲಿ ಬದುಕಿನ ಕಡೆಗೋಲನ್ನೇ ಲೇಖಕಿ ಬರೆದಿದ್ದಾರೆ. ಹವ್ಯಕ ಭಾಷೆ, ಅಡುಗೆ ಖಾದ್ಯ ಜೀಂಗುಡುವ ಮಳೆ ಓದುಗನನ್ನು ಕಾಡುತ್ತವೆ. ಕಾನು ಕಾಣಿಸುತ್ತಲೇ ನಮ್ಮನ್ನೂ ಕಾಣಿಸುವ ಕೆಲಸ ಪುಸ್ತಕ ಮಾಡುತ್ತದೆ.

ನನ್ನೂರಿನ ವ್ಯಕ್ತಿಚಿತ್ರಗಳ ಭಿನ್ನಲೋಕ



ಪು: 160
₹175

ನನ್ನೂರಿನ ಶ್ರೀಸಾಮಾನ್ಯರು – ಮಲೆನಾಡು ಪರಿಸರದ ವ್ಯಕ್ತಿಚಿತ್ರಗಳು
ಲೇ: ಕಡಿದಾಳ್ ಪ್ರಕಾಶ್
ಪ್ರ: ಅಭಿರುಚಿ ಪ್ರಕಾಶನ
ಸಂ: 9980560013

ಒಂದು ಊರು ಊರಾಗಿ ರೂಪುಗೊಳ್ಳಲು ಎಷ್ಟೆಲ್ಲ ಮಿದುಳು ಹಾಗೂ ಮನಸ್ಸುಗಳು ಒಂದಾಗಿ ಕೆಲಸ ಮಾಡಿರುತ್ತವೆಯಲ್ಲ. ಹಾಗೆ ಅಕಾರಣವಾಗಿ ಪ್ರೀತಿ ತೋರಿ, ಪರಸ್ಪರ ಸಹಕಾರ ತತ್ವದ ಮೇಲೆ ಬದುಕು ಕಟ್ಟಿಕೊಳ್ಳುತ್ತ, ಊರನ್ನು ಕಟ್ಟಿದವರ ಕಥೆಯನ್ನು ಹೇಳಿದ್ದಾರೆ ಕಡಿದಾಳ್ ಪ್ರಕಾಶ್.

'ನನ್ನೂರಿನ ಶ್ರೀಸಾಮಾನ್ಯರು' ಮಲೆನಾಡು ಪರಿಸರದಲ್ಲಿ ಕಂಡ ಅಸಾಮಾನ್ಯ ವ್ಯಕ್ತಿತ್ವಗಳ ಹಲವು ಮುಖಗಳ ಅನಾವರಣ ಇಲ್ಲಿದೆ. ಒಂದು ಊರು ಊರಾಗಲು ಯಾವ ಅಂಶಗಳೆಲ್ಲ ಬೇಕು? ಎಂದು ಕೇಳಿಕೊಂಡರೆ ಬಹುಶಃ ಅದು ತೋರುವುದು ಭಾವಾನಾತ್ಮಕ ನಂಟುಗಳಿರುವ ಹಲವು ಕಿರುದಾರಿಗಳನ್ನೆ.

ಎಲೆಮರೆಯ ಕಾಯಿಯಂತೆ ಇದ್ದು, ಹೊಳೆಯುವ ನಕ್ಷತ್ರಗಳಂತೆ ಹೊಳೆದು, ಮಿಂಚುಳಗಳಂತೆ ಮಿಂಚಿ ಮರೆಯಾದ ಹಲವರ ಕುತೂಹಲಕಾರಿ ಕಥೆಗಳು ಹೇಳುವುದು ಬೇರೆಯದೆ. ಒಂದೂರಿನಲ್ಲಿ ದೀರ್ಘಕಾಲ ಇದ್ದು ಸರಿದವರಂತೆಯೇ, 'ಹೀಗೆ ಬಂದು ಹಾಗೆ ಹೋದರು' ಎನ್ನುವ ರೀತಿಯಲ್ಲಿದ್ದೂ ದೀರ್ಘಕಾಲ ಇದ್ದಷ್ಟೆ ನೆನಪನ್ನು ಅವರ ಸ್ವಭಾವದಿಂದ ಉಳಿಸಿದವರ ಕಥೆಯೂ ಇಲ್ಲಿ ಸೇರ್ಪಡೆಯಾಗಿದೆ.

ಹಾಗೆಂದು ಇಲ್ಲಿರುವ ಕಥೆಗಳೆಲ್ಲ ಕೇವಲ– ಸಾಧಕ, ಧೈರ್ಯಶಾಲಿ, ಮಾತುಗಾರ, ಕಲಾವಿದ ಅಥವಾ ಇನ್ನು ಏನೇನೋ ವಿಶೇಷ ಇರುವವರದ್ದಷ್ಟೆ ಎಂದು ಭಾವಿಸಬೇಡಿ. ಅತ್ಯಂತ ಸರಳ, ಸೌಮ್ಯ, ಪ್ರಾಮಾಣಿಕ, ಮಂದಗತಿಯ ನಡವಳಿಕೆಯಿಂದಲೇ ನೆನಪಿನಲ್ಲಿ ಉಳಿದವರು ಇಲ್ಲಿ ಕಥಾನಾಯಕರಾಗಿರುವುದು ವಿಶೇಷ. ಅಷ್ಟೆ ಅಲ್ಲದೇ, ಸುಳ್ಳು ಹೇಳುವ, ಕದಿಯುವ, ಸೋಮಾರಿ ವ್ಯಕ್ತಿತ್ವಗಳನ್ನೂ ಹಾಸ್ಯ ಧಾಟಿಯಲ್ಲಿ ಕಟ್ಟಿಕೊಟ್ಟಿದ್ದಾರೆ. ಈ ಅಸಾಮಾನ್ಯರ ಪೈಕಿ 'ತಾರಮ್ಮ' ಎಂಬ ಹೆಣ್ಣುಮಗಳ ವ್ಯಕ್ತಿಚಿತ್ರ ಬಿಟ್ಟರೆ, ತೆರೆಮರೆಯಲ್ಲಿ ಉಳಿದ ಇನ್ನಷ್ಟು ಹೆಣ್ಣುಮಕ್ಕಳ ಕಥೆಯನ್ನು ಹೇಳುವ ಉದಾರತೆ ತೋರಬಹುದಿತ್ತು ಲೇಖಕ.

ಕುವೆಂಪು ಪದ ಸೃಷ್ಟಿ

ಜಿ.ಕೃಷ್ಣಪ್ಪ

ಲಂಕಿಗ

ಲಂಕಿಗ (ನಾ). ಲಂಕೆಯಲ್ಲಿ ವಾಸಿಸುವವನು; ಲಂಕೆಯ ಪ್ರಜೆ

ಮಾಯಾಸಮರ್ಥ ಮಾರೀಚ ದೈತ್ಯನು ಗೋಳಿಡುವುದನ್ನು ಕಂಡು ಭೋಂಕನೆ ಮೇಲೆದ್ದು ಅಪ್ಪಿಕೊಂಡ ರಾವಣನನ್ನು ಕುವೆಂಪು 'ಲಂಕಿಗ' ಎಂದು ಸಂಬೋಧಿಸಿದ್ದಾರೆ.

'ಮಾಯಾ ಸಮರ್ಥನಾ ಮಾರೀಚದೈತ್ಯನುಂ
ಗೋಳಿಡುವುದಂ ಕಂಡು, ಲಂಕಿಗ ಭೋಂಕನೆಯೆ
ಮೇಲೆಳ್ದನಪ್ಪಿದನ್'

** *

'ಲಂಕೆಗಿನ್ ಸುಖಮೆಲ್ಲಿ? ಲಂಕೆಗಿನ್ ಶುಭಮೆಲ್ಲಿ?'
ಲಂಕಿಗರ್ ನಮಗೆ ನೆಮ್ಮದಿಯೆಲ್ಲಿ?'

ಬಾಯ್ಗತ್ತಿ

ಬಾಯ್ಗತ್ತಿ (ನಾ). ನುಡಿ ಕತ್ತಿ

ಕಾಡಿನ ಬಹುದೂರದಿಂದ ರಾಮನಂತೆ ಮಾಯಾವಿ ಮಾರೀಚನು 'ಓ ಲಕ್ಷ್ಮಣಾ' ಎಂದು ಕೂಗುವನು. ಸೀತೆ ಬೆಚ್ಚಿ ಬೆವರುವಳು. ಲಕ್ಷ್ಮಣನನ್ನು ನಿಂದಿಸುವಳು. ಕುವೆಂಪು ಅವರು ಸೀತೆಯ ಆ ಕತ್ತರಿಸುವಂತಹ ಕಠೋರ ನುಡಿಯನ್ನು 'ಬಾಯ್ಗತ್ತಿ' ಪದದಿಂದ ಹೀಗೆ ಚಿತ್ರಿಸಿದ್ದಾರೆ:

'ಹಾ ಬೇರ್ಗೊಯ್ದುದತ್ತಿಗೆಯ ಬಾಯ್ಗತ್ತಿ
ಊರ್ಮಿಳಾ ಪ್ರಿಯನ ನಿಶ್ಚಲತೆಯಂ!'

ರೆಪ್ಪೆವುಲ್ಲು

ರೆಪ್ಪೆವುಲ್ಲು (ನಾ). ಎವೆಯ ಕೂದಲು

ಸಂನ್ಯಾಸಿ ವೇಷದ ರಾವಣನು ಒಂಟಿಯಾಗಿರುವ ಸೀತೆಯನ್ನು ಕಂಡು ಹುಸಿಧ್ಯಾನವನ್ನು ನಟಿಸುತ್ತ, ಕ್ಷುದ್ರ ಭಾವವನ್ನು ಮುಚ್ಚಿಕೊಂಡಂತೆ ನಿಂತಿರುತ್ತಾನೆ. ಅದನ್ನು ಕುವೆಂಪು 'ರೆಪ್ಪೆವುಲ್ಲು' ರೂಪಕದಿಂದ ಹೀಗೆ ಚಿತ್ರಿಸಿದ್ದಾರೆ:

'ಬಕಧ್ಯಾನಮಂ
ನಿಂದಿಪೊಲಲ್ಲೆ ನಿಂದನು, ಬಗೆಯ ಬಾವಿಯಂ
ರೆಪ್ಪೆವುಲ್ಲಿಂದಡಕಿ ಮುಚ್ಚಿ'

ಕೇಪ್ ಟೌನ್ ಎಂಬ ಮೋಹಕ ನಗರ

ಆರ್. ಲಕ್ಷ್ಮೀನಾರಾಯಣ

ಪ್ರವಾಸ



ಕೇಪ್‌ಟೌನ್‌ನ ವಿಹಂಗಮ ನೋಟ. ನಗರದ ಹಿಂದೆ ಟೇಬಲ್ ಪರ್ವತ.

'ಮನುಕುಲದ ತೊಟ್ಟಿಲು' ಎಂದೇ ಹೆಸರಾದ ದಕ್ಷಿಣ ಆಫ್ರಿಕಾ ಹಲವು ವಿಸ್ಮಯಗಳ ಆಗರ. ಇನ್ನು ಅದರ ಅತ್ಯಂತ ಪ್ರಾಚೀನ ನಗರವಾದ ಕೇಪ್ ಟೌನ್ ಅಂತೂ ದಕ್ಷಿಣ ಆಫ್ರಿಕಾದ ಮಾತೃ ನಗರವೆಂದೇ ಖ್ಯಾತವಾದ ಅತ್ಯಂತ ಆಕರ್ಷಕ ಸ್ಥಳ. ಸುಮಾರು ಒಂದು ಲಕ್ಷ ವರ್ಷಗಳಷ್ಟು ಹಿಂದೆ ಮಾನವ ತನ್ನ ಮೊದಲ ಹೆಜ್ಜೆಯನ್ನು ಕೇಪ್ ಮೇಲೆ ಇರಿಸಿದನೆಂದು ಪುರಾತತ್ವ ಶಾಸ್ತ್ರ ಹೇಳುತ್ತದೆ. ಆ ದೇಶದ ಶಾಸಕಾಂಗದ ರಾಜಧಾನಿಯೂ ಇದಾಗಿದೆ. ಇದೊಂದು ಸದಾ ಬಿಜಿಯಾಗಿರುವ ಬಂದರು ನಗರವೂ ಹೌದು. ದಕ್ಷಿಣ ಆಫ್ರಿಕಾದ ಸ್ವಾತಂತ್ರ್ಯ ಹೋರಾಟದ ಮುಂಚೂಣಿಯ ನಾಯಕ ನೆಲ್ಸನ್ ಮಂಡೇಲಾರನ್ನು ಬಿಳಿಯರು 27 ವರ್ಷ ಸೆರೆಯಿಟ್ಟಿದ್ದ, ಈಗ ರಾಷ್ಟ್ರೀಯ ಮ್ಯೂಸಿಯಂ ಆಗಿರುವ ಜೈಲು ಇರುವ ರಾಬೆನ್ ದ್ವೀಪಕ್ಕೆ ಇಲ್ಲಿಂದಲೇ ಹೋಗಬೇಕು. ಡಚ್ಚರು, ಇಂಗ್ಲಿಷರು, ಮಲಯನ್ನರು, ಖೋಯ್ ಜನರು ಮತ್ತು ಇಲ್ಲಿಯ ಮೂಲ ನಿವಾಸಿಗಳಿಂದ ಝುಗಮಗಿಸುವ ಸಮ್ಮಿಶ್ರ ಸಂಸ್ಕೃತಿಗಳ ನಗರ ಕೇಪ್ ಟೌನ್.

ಕೇಪ್ ಟೌನ್‌ನ ಒಂದು ಕಡೆ ಭೋರ್ಗರೆವ ವಿಶಾಲವಾದ ಅಟ್ಲಾಂಟಿಕ್ ಮಹಾಸಾಗರವಿದ್ದರೆ, ಅದರ ಎದುರೆದುರೇ 'ನಿನಗಿಂತ ನಾನು ಯಾವುದರಲ್ಲಿ ತಾನೆ ಕಡಿಮೆ' ಎಂದು ಅದಕ್ಕೆ ಸವಾಲೊಡ್ಡುವಂತೆ ನಿಂತ ಮರಳುಗಲ್ಲಿನಿಂದಾದ ಮುಗಿಲು ಮುಟ್ಟುವ 'ಟೇಬಲ್ ಮೌಂಟೇನ್' ಇದೆ. ಮತ್ತೊಂದು ಕಡೆ ಪೆಂಗ್ವಿನ್‌ಗಳಿಗೆ ನೆಲೆಯಾದ 'ಬೌಲ್ಡರ್ಸ್ ಬೀಚ್' (ಹೂಟ್ಸ್ ಬೇ) ಕೂಡ ಇಲ್ಲೇ ಇದೆ. ಮಗದೊಂದು ಕಡೆ ಎಲ್ಲಕ್ಕಿಂತ ಮುಖ್ಯವಾದ ತಾಣ ಗುಡ್ ಹೋಪ್ ಭೂಶಿರವೆಂದೇ ಚರಿತ್ರೆಯಲ್ಲಿ ಹೆಸರಾದ 'ಕೇಪ್ ಆಫ್ ಗುಡ್ ಹೋಪ್' ಇದೆ. ಇಷ್ಟೇ ಅಲ್ಲದೆ ಎರಡು ಸಾಗರಗಳ ಅಕ್ವೇರಿಯಂ, ಬಟಾನಿಕಲ್ ಗಾರ್ಡನ್‌ಗಳೂ ಇವೆ.

ನಾವು ಮೊದಲು ಹೋದದ್ದೇ ಕೇಪ್ ಟೌನಿಗೆ. ಕ್ಯಾಂಪ್ಸ್ ಬೇ ಎಂಬ ಸಮುದ್ರದ ದಡದಲ್ಲಿರುವ ಉಪನಗರದ ತಂಗುದಾಣದಲ್ಲಿ ಎರಡು ದಿನ ತಂಗಿದ್ದು ಅಲ್ಲಿಯ ಪ್ರಮುಖ ಪ್ರೇಕ್ಷಣೀಯ ಸ್ಥಳಗಳನ್ನು ನೋಡಿದೆವು. ನಾವು ಅಲ್ಲಿಗೆ ಹೋದಾಗ ಚಳಿಗಾಲ ಪ್ರಾರಂಭವಾಗಲು ಇನ್ನು ಕೆಲವೇ ದಿನಗಳಿದ್ದವು (ಏಪ್ರಿಲ್ ಮಧ್ಯಭಾಗ). ಹಗಲೆಲ್ಲಾ ಕೊರೆಯುವ ಚಳಿ ಆಗಲೇ ಆರಂಭವಾಗಿಬಿಟ್ಟಿತ್ತು. ರಾತ್ರಿ ಹೊತ್ತಂತೂ ಕೊಠಡಿಯಲ್ಲಿ ಹೀಟರ್ ಹಾಕಿಕೊಂಡು ದಪ್ಪ ರಗ್ಗು ಹೊದ್ದು ಮಲಗಿದರೂ ಮೈಕೊರೆವ ಚಳಿಯಿಂದ ತಪ್ಪಿಸಿಕೊಳ್ಳಲು ಸಾಧ್ಯವಾಗಲೇ ಇಲ್ಲ. ಬೆಳಗಿನ ಸಮಯದಲ್ಲಂತೂ ಸದಾ ಮೋಡ ಮುಸುಕಿರುತ್ತದೆ. ಸಾಗರದ ನೀರಿಗೆ ಕೈ ಹಾಕಿದರೆ ಅಲ್ಲೇ ಸೆಟೆದುಕೊಂಡುಬಿಡುವಷ್ಟು ಥಂಡಿ. ಹಾಗಾಗಿ ಬೇರೆ ಕಡೆ ಬೀಚ್‌ಗೆ ಮುಗಿಬೀಳುವ ಹಾಗೆ ಇಲ್ಲಿಯ ಬೀಚ್‌ನಲ್ಲಿ ಮುಗಿಬೀಳುವಷ್ಟು ಜನ ಇರಲಿಲ್ಲ. ಇದಕ್ಕೆ ಕಾರಣ ಧ್ರುವ ಪ್ರದೇಶ ಅಂಟಾರ್ಟಿಕಾದ ಕಡೆಯಿಂದ ಹಿಮಬಂಡೆಗಳ ಕರಗಿದ ನೀರು ಬಂದು ಸೇರುವುದು.

> ದಕ್ಷಿಣ ಆಫ್ರಿಕಾದ ಕೇಪ್ ಟೌನ್ ಒಂದು ಸುಂದರ ನಗರ. ಇಲ್ಲಿನ ಅಟ್ಲಾಂಟಿಕ್ ಮಹಾಸಾಗರ, ಟೇಬಲ್ ಮೌಂಟೇನ್, ರಾಬೆನ್ ದ್ವೀಪ, ಪೆಂಗ್ವಿನ್‌ಗಳ ನೆಲೆ ಬೌಲ್ಡರ್ಸ್ ಬೀಚ್, ಕೇಪ್ ಆಫ್ ಗುಡ್ ಹೋಪ್‌ಗಳು ಅಪೂರ್ವ ಅನುಭವವನ್ನು ನೀಡುತ್ತವೆ.

ಮೊದಲು ನಾವು ನೋಡಲು ಹೋದದ್ದೇ ಕೇಪ್ ಟೌನಿನ ಆತ್ಮವೆನಿಸಿದ ಟೇಬಲ್ ಮೌಂಟೇನ್‌ಗೆ. ವಾಸ್ತವವಾಗಿ ಕೇಪ್ ಟೌನ್ ನಗರ ನಿರ್ಮಿತವಾಗಿರುವುದೇ ಈ ಪರ್ವತದ ಸುತ್ತ. ಜಗತ್ತಿನ ಅದ್ಭುತಗಳಲ್ಲಿ ಒಂದು ಎಂದೇ ಖ್ಯಾತವಾದ ಇದು, ಪ್ಯಾರಿಸ್‌ಗೆ ಐಫೆಲ್ ಟವರ್ ಹೇಗೋ ಹಾಗೆಯೇ ಕೇಪ್ ಟೌನಿಗೆ ಟೇಬಲ್ ಮೌಂಟೇನ್. ಒಂದು ಕಾಲದಲ್ಲಿ ಸಮುದ್ರ ಸಮತಲದ ಭಾಗವೇ ಆಗಿದ್ದ ಟೇಬಲ್ ಮೌಂಟೇನ್ ಈಗ ಸಮುದ್ರಮಟ್ಟದಿಂದ ಒಂದು ಸಾವಿರ ಮೀಟರ್ ಮೇಲಿದೆ. ಶಿಖರಭಾಗ ಟೇಬಲ್‌ನಂತೆ ಸಪಾಟಾಗಿರುವ ಕಾರಣದಿಂದಲೇ ಇದನ್ನು ಟೇಬಲ್ ಮೌಂಟೇನ್ ಎಂದು ಕರೆಯುತ್ತಾರೆ. ಬಿಳಿಯ ಟೇಬಲ್ ಕ್ಲಾತ್ ಹಾಸಿದಂತೆ ಸಾಮಾನ್ಯವಾಗಿ ಸದಾ ಮೋಡದ ತೆರೆ ಇದನ್ನು ಆವರಿಸಿರುತ್ತದೆ. ಸಾಗರದ ಮೇಲಿನಿಂದ ಬೀಸಿ ಬರುವ ಆಗ್ನೇಯ ಮಾರುತದಿಂದ ರೂಪುಗೊಂಡ ಮೋಡದ ತೆರೆ ಅದು. ಅದೊಂದು ರೋಚಕ ಅನುಭವ. ಪರ್ವತ ಶಿಖರದ ಸಪಾಟಾದ ಶಿಲಾ ಭಾಗ ಪೂರ್ವದಿಂದ ಪಶ್ಚಿಮಕ್ಕೆ ಮೂರು ಕಿಲೋಮೀಟರ್ ಉದ್ದವಿದೆ. ಹೊರಗಿನಿಂದ ನೋಡಿದಾಗ ಬೋಳುಬೆಟ್ಟದಂತೆ ಕಾಣುವ ಟೇಬಲ್ ಮೌಂಟೇನ್ ಸನಿಹದಿಂದ ನೋಡಿದಾಗ ಸಸ್ಯ ಸಮೃದ್ಧಿಯಿಂದ ಕೂಡಿದ್ದು, 1400 ಜಾತಿಯ ವಿವಿಧ ಗಿಡಮರಗಳು ಪರ್ವತವನ್ನು ಆವರಿಸಿಕೊಂಡಿದ್ದು, ಜಗತ್ತಿನ ಅತಿಹೆಚ್ಚು ಸಸ್ಯ ಸಮೃದ್ಧ ಸಾಮ್ರಾಜ್ಯಗಳಲ್ಲೊಂದೆಂದು ಹೆಸರಾಗಿದೆ. ಪರ್ವತದ ಪೂರ್ವದ ತುದಿ ಅತಿ ಎತ್ತರದ ಬಿಂದುವಾಗಿದ್ದು 1086 ಮೀಟರ್‌ಗಳಷ್ಟು ಎತ್ತರವಿರುವ ಅದನ್ನು ಮ್ಯಾಕ್ಲಿರ್ಸ್ ಬೀಕನ್ ಎಂದು ಕರೆಯಲಾಗುತ್ತದೆ. ಅದರ ಪಕ್ಕದ ಇಳಿಜಾರಿನ ನಂತರ ಕಾಣುವುದೇ ಡೆವಿಲ್ಸ್ ಪೀಕ್. ಕೇಬಲ್ ಕಾರನ್ನೇರಿ ಟೇಬಲ್ ಮೌಂಟೇನ್ ತುದಿಯನ್ನು ತಲುಪಬಹುದು. ಕೇಬಲ್ ಕಾರ್‌ಗಳು ಏರುವಾಗ ಮತ್ತು ಇಳಿಯುವಾಗ 360 ಡಿಗ್ರಿ ತಿರುಗುವುದರಿಂದ ಟೇಬಲ್ ಮೌಂಟೇನ್ನಿನ ಅದ್ಭುತ ರಮ್ಯ ದೃಶ್ಯಗಳನ್ನು ಒದಗಿಸುತ್ತವೆ. ಇದಲ್ಲದೆ ಉತ್ಸಾಹಿ ಚಾರಣಿಗರು ಕಾಲ್ನಡಿಗೆಯಲ್ಲಿ ಪರ್ವತದ ವಿವಿಧ ಪಾರ್ಶ್ವಗಳಿಗೆ ತಲುಪಲು 350ಕ್ಕಿಂತ ಹೆಚ್ಚು ದಾರಿಗಳಿವೆ ಎಂದು ಹೇಳಲಾಗುತ್ತದೆ. ಪರ್ವತದ ಮೇಲೆ ರೆಸ್ಟುರಾ ಕಲಾವಸ್ತುಗಳ ಅಂಗಡಿ ಇವೆ.



ಕೇಪ್ ಆಫ್ ಗುಡ್ ಹೋಪ್

ಅಟ್ಲಾಂಟಿಕ್ ಸಾಗರದ ಕಣ್ಣುಕೋರೈಸುವ ಬೆಳ್ಳನೆಯ ಬೀಚ್‌ಗಳು ಕೂಡ ಮರಳು ಶಿಲೆಯ ಟೇಬಲ್ ಮೌಂಟೇನ್ನಿನ ಶಿಥಿಲಗೊಂಡ ಕೋಡುಗಲ್ಲುಗಳ ಪರಿಣಾಮವೇ. ಇಂಥ ಬೀಚ್‌ಗಳಲ್ಲಿ ಒಂದಾದ 'ಬೌಲ್ಡರ್ಸ್ ಬೀಚ್' ಪೆಂಗ್ವಿನ್‌ಗಳ ನೆಲೆ. ಇಲ್ಲಿಯ ಗ್ರಾನೈಟ್ ಬಂಡೆಗಳ ನಡುವಣ ತಾಣಗಳಲ್ಲಿ ಆಶ್ರಯ ಪಡೆದುಕೊಂಡು ನಿರಾತಂಕವಾಗಿ ಈಜಿಕೊಂಡು, ಓಡಾಡಿಕೊಂಡಿರುವ ಚಿಕ್ಕ ದೊಡ್ಡ ಪೆಂಗ್ವಿನ್‌ಗಳನ್ನು ಕಾಣಬಹುದು.



ಪೆಂಗ್ವಿನ್‌ಗಳ ನೆಲೆಯಾದ ಬೌಲ್ಡರ್ಸ್ ಬೀಚ್

ದಕ್ಷಿಣ ಆಫ್ರಿಕಾದ ದಕ್ಷಿಣದ ತುತ್ತತುದಿಗೆ ಕೇಪ್ ಆಫ್ ಗುಡ್ ಹೋಪ್ (ಗುಡ್ ಹೋಪ್ ಭೂಶಿರ) ಎಂದು ಹೆಸರು. ಸಮುದ್ರಯಾನದ ಇತಿಹಾಸ ಪ್ರಸಿದ್ಧ ಕೇಪ್ ಎಂದರೆ 'ಕೇಪ್ ಆಫ್ ಗುಡ್ ಹೋಪ್'. ಕೇಪ್ ಎಂದರೆ ಸಮುದ್ರದೊಳಕ್ಕೆ ಚಾಚಿರುವ ಭೂಭಾಗ. 1485ರಲ್ಲಿ ಇದನ್ನು ಮೊದಲಿಗೆ ಕಂಡುಹಿಡಿದವನು ಬಾರ್ಟಲೊಮಿಯೊ ಡಿಯಾಸ್(Bartolomeu Dias) ಎಂಬ ಪೋರ್ಚುಗೀಸ್ ನಾವಿಕ. ಯೂರೋಪಿನಿಂದ ಏಷ್ಯಾದ ಕಡೆಗಿನ ಸರ್ವ-ಜಲಮಾರ್ಗವನ್ನು ಇದು ತೆರೆದಿಟ್ಟಿತು. ಪೂರ್ವದೇಶಗಳಿಗೆ ಜಲಮಾರ್ಗದ ಭರವಸೆಯ ಸಂಕೇತ 'ಕೇಪ್ ಆಫ್ ಗುಡ್ ಹೋಪ್'. ಪೋರ್ಚುಗಲ್ ರಾಜ ಇದಕ್ಕೆ ಈ ಹೆಸರನ್ನಿಟ್ಟ. ಯೂರೋಪಿಯನ್ನರಿಗೆ ಭಾರತಕ್ಕೆ ಸಮುದ್ರಮಾರ್ಗವನ್ನು ತೆರೆದಿಟ್ಟದ್ದೂ ಇದೇ ಭೂಶಿರವೇ. ಗುಡ್ ಹೋಪ್‌ನ ದೂರ ಪೂರ್ವಕ್ಕೆ 'ಕೇಪ್ ಪಾಯಿಂಟ್' ಇದೆ. ನಾವಿಕರಿಗೆ ದಿಗ್ದರ್ಶಕವಾದ ಲೈಟ್ ಹೌಸ್ ಇಲ್ಲಿದೆ.

ಟೇಬಲ್ ಬೇ ಹಾರ್ಬರ್ ಸುತ್ತ ನಿರ್ಮಿಸಲಾಗಿರುವ ಹೆಸರಾಂತ ವಿಕ್ಟೋರಿಯಾ ಮತ್ತು ಆಲ್ಫ್ರೆಡ್ (ವಿಎ) ವಾಟರ್ ಫ್ರಂಟ್ ಹಲವಾರು ದೋಣಿಗಳಿಗೆ ಮತ್ತು ಯುದ್ಧನೌಕೆಗಳಿಗೆ ನೆಲೆಯೊದಗಿಸುತ್ತದೆ.

ಕೇಪ್ ಟೌನ್ ಎಂಬ ಮೋಹಕ ಸುಂದರಿಯ ಸೌಂದರ್ಯಕ್ಕೆ ಮರುಳಾಗದವರೇ ವಿರಳ.


ಮಜ ಮಜ ಮಜಕೂರ

• ಎಂ.ಎಸ್.ಪೂಜಾರ



ಚಿಟ್ಟೆಗಳಿಗೆ ಬಂತು ಜೀವ!

• ಕಲೆ-ಪರಿಕಲ್ಪನೆ: ಸಂತೋಷ್ ಸಸಿಹಿತ್ಲು



ಗುಂಡ ನರ್ಸರಿಯಿಂದ ಕೆಂಪು ಬಣ್ಣದ ಹೂವಿದ್ದ ಹೂಕುಂಡವೊಂದನ್ನು ತಂದ. ಆ ಹೂವಿನ ಸುವಾಸನೆ ಎಲ್ಲಡೆ ಹರಡಿತ್ತು. ಆ ಹೂಕುಂಡವನ್ನು ಮನೆಯ ಎದುರಿಗಿನ ಉದ್ಯಾನದಲ್ಲಿ ಇದ್ದ ಟೇಬಲ್ ಮೇಲೆ ಖುಷಿಯಿಂದಲೇ ಇಟ್ಟ. ಬಳಿಕ ಮನೆಯೊಳಕ್ಕೆ ಹೆಜ್ಜೆ ಹಾಕಿದ. ಆ ಸಂದರ್ಭದಲ್ಲಿ ತನ್ನ ಅಂಗಿಯ ಮೇಲಿದ್ದ ಚಿಟ್ಟೆಗಳ ಚಿತ್ರಗಳು ಮಾಯವಾಗಿರುವುದನ್ನು ಗುಂಡ ಗಮನಿಸಿದ. ಹಿಂತಿರುಗಿ ನೋಡಿದಾಗ ಆ ಚಿಟ್ಟೆಗಳಿಗೆಲ್ಲ ಜೀವ ಬಂದು ಅವು ಆ ಸುವಾಸನೆಯುಕ್ತ ಹೂವಿನ ಸುತ್ತ ಸುತ್ತುತ್ತಿದ್ದವು.

ಪದ ಸಂಕಲನ

ಇಲ್ಲಿ ಕೊಟ್ಟಿರುವ ಎರಡು ಪದ ಹಾಗೂ ಒಂದು ಅಕ್ಷರವನ್ನು ಕೂಡಿಸಿ ಅರ್ಥಬದ್ಧ ಒಂದೇ ಪದ ಮಾಡಿರಿ.

1	ತಪ	+	ನಟ	+	ಕ	=	
2	ದಳ	+	ಜೋಶಿ	+	ರಾ	=	
3	ಮಾಳ	+	ಕಾಡು	+	ಗ	=	
4	ಸಾರಿ	+	ಹದ	+	ಪ್ರ	=	
5	ಮಾಮಾ	+	ಕುರಿ	+	ರ	=	

ಗಣಿತದಲ್ಲಿ ಗರ್ದಿಗಮ್ಮತ್ತು ದೈತ್ಯ ಸಂಖ್ಯಾ ದೌಲತ್ತು

1 ಹಾಗೂ ತನ್ನದೇ ಸಂಖ್ಯೆಯಿಂದ ಯಾವ ಸಂಖ್ಯೆ ಭಾಗವಾಗುವುದಿಲ್ಲ ಆ ಸಂಖ್ಯೆಗೆ ಅವಿಭಾಜ್ಯ ಸಂಖ್ಯೆ ಎನ್ನುತ್ತಾರೆ. ಇಂದೊಂದು ದಾಖಲೆಯ ಅತಿ ದೊಡ್ಡ ಅವಿಭಾಜ್ಯ ಸಂಖ್ಯೆ. ಇದರ ನೆನಪಿಗಾಗಿ ಒಂದು ಅಂಚೆ ಚೀಟಿಯನ್ನೂ ಹೊರಡಿಸಿದ್ದರು. ಆ ಸಂಖ್ಯೆ ಹೀಗಿದೆ.

1. 170141183460469231731687303715884105727
2. ಇದೊಂದು ತಿರುಚುಳಿ ಮುರುಚುಳಿ ದೈತ್ಯ ಅವಿಭಾಜ್ಯ ಸಂಖ್ಯೆ.
   1991999999999999999999999999999999
   91991

ಜಾಣಪದ ಆಟ

ಇಲ್ಲಿ ಕೊಟ್ಟಿರುವ ಮಧ್ಯದಲ್ಲಿನ ಅರ್ಕಾವಳಿ ಚಿಹ್ನೆಯ ಹಿಂದೆ-ಮುಂದೆ ಅರ್ಥವಿಲ್ಲದ ಪದಪಟ್ಟಿಯಿಂದ ಸೂಕ್ತವಾದ ಎರಡು ಪದ ಆರಿಸಿ ತುಂಬಿ ಅರ್ಥಬದ್ಧ ಪದ ರಚಿಸಿ.

1		೯	
2		೯	
3		೯	
4		೯	
5		೯	
6		೯	
7		೯	
8		೯	
9		೯	
10		೯	

ಪದ ಪಟ್ಟಿ

ಅಧ	ಧಮ	ಕಣ	ಕಾಂಡ
ಸ್ವರ	ರಾಜ	ಆಯ	ಚಂದ್ರ
ವಷಾ	ಭಟ	ಕಮ	ಧಿಫ
ಹಣೆ	ಮಾನ	ವಧ	ರೇಖೆ
ನಿವ	ಕಮ	ರಂಭ	ವೀರ

ಮೋಜಿನ ಇಂಗ್ಲಿಷ್ ಪದ-ಹಿಗ್ಗು

ಇಲ್ಲಿ ಕೊಟ್ಟಿರುವ ಮೂರಕ್ಷರದ ಪದಗಳಿಗೆ ಕೊನೆಗೆ ಒಂದಕ್ಷರ ಸೇರಿಸಿ, ಪದವನ್ನು ಹಿಗ್ಗಿಸಿ ನಾಲ್ಕಕ್ಷರದ ಪದ ಮಾಡಿ.



1	B	U	S	
2	H	E	R	
3	M	A	N	
4	N	O	T	
5	P	I	N	
6	R	A	T	
7	S	I	T	
8	T	E	N	
9	W	I	N	
10	F	U	N	

ಹುಡುಕಾಟ

ಇಲ್ಲಿ ಕೊಟ್ಟ ಶಬ್ದಗಳಿಂದ ಒಂದೊಂದು ಅಕ್ಷರ ಆಯ್ದು ಒಬ್ಬ ಕ್ರಿಕೆಟ್ ಆಟಗಾರನ ಹೆಸರು ಹುಡುಕಿ.

1.ಪ್ರೀತಿಯ ನನ್ನ ಅಮ್ಮ
2.ತಡೆಯಬೇಡ ನಿಲ್ಲು
3.ವೈರಲ್ ವಿಡಿಯೊ
4.ಬಣ್ಣಹಚ್ಚುವ ಕುಂಚ
5.ಸಂಬಂಧಿಕರ ಬಲ
6.ಹುಲುಸಾದ ಬೆಳೆಯು

ಚೂರು-ಮರಿ

ಈ ಪದವನ್ನು ಹೇಗಾದರೂ ಓದಿ ನೋಡಿ

REDIVIDER

ಮಜ ಮಜ ಮಜಕೂರದ ಕಳೆದ ಸಂಚಿಕೆಯ ಪ್ರಶ್ನೆಗಳಿಗೆ ಸರಿ ಉತ್ತರ ನೀಡಿದ ಮಕ್ಕಳ ಹೆಸರುಗಳನ್ನು ನೋಡಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

ಸರಿ ಉತ್ತರ ಮುಂದಿನ ವಾರ..

ಸರಿ ಉತ್ತರ ನೀಡಿದ ಮಕ್ಕಳ ವಿವರವನ್ನು ಪ್ರಜಾವಾಣಿ ವೆಬ್‌ಸೈಟ್‌ನಲ್ಲಿ ಹಾಗೂ ಆಯ್ದ ಆರು ಮಕ್ಕಳ ಚಿತ್ರಗಳನ್ನು ಮುಂದಿನ ಸಂಚಿಕೆಯಲ್ಲಿ ಪ್ರಕಟಿಸಲಾಗುವುದು. ಸರಿಉತ್ತರಗಳ ಜತೆಗೆ ಮಗುವಿನ ಹೆಸರು, ತರಗತಿ, ಶಾಲೆಯ ಹೆಸರು, ಊರು ಹಾಗೂ ವಿಳಾಸವನ್ನು ಕಳುಹಿಸಬೇಕು.

ಉತ್ತರ ಕಳುಹಿಸಲು ಇಮೇಲ್ ವಿಳಾಸ:

majakoora@prajavani.co.in

ಕಳೆದ ಸಂಚಿಕೆಯ ಸರಿ ಉತ್ತರಗಳು



ಪದಸಂಕಲನ: 1.ಅಬ್ಬರಮಳೆ 2.ಕನ್ನಡಪರ 3.ಮರುಕಳಿಸು 4.ಶಿವಕುಮಾರ 5.ಬಾರದಮಳೆ

ಸಣ್ಣಾಟ: ಕಡಲತೀರ


ಜಾಣಪದ ಆಟ: 1.ಪ್ರತ್ಯಕ್ಷ 2.ಪ್ರತ್ಯಾಸ್ತ್ರ 3.ವೃದ್ಧಾಪ್ಯ 4.ಬ್ರಹ್ಮಾಸ್ತ್ರ 5.ಸ್ತುತ್ಯಾರ್ಹ 6.ಪ್ರಶ್ನಾರ್ಹ 7.ನೈರ್ಮಲ್ಯ 8.ಕ್ಯಾತ್ಸಂದ್ರ 9.ಪ್ರಕ್ಷುಬ್ಧ 10.ಶ್ರೀಕೃಷ್ಣ

ಕ್ವಿಜ್: 1.A, 2.D, 3.D, 4.B, 5.B


ಸರಿ ಉತ್ತರ ನೀಡಿದ ಆಯ್ದ ಆರು ಪುಟಾಣಿಗಳು




ಪ್ರೇಮ್ ಹಂಗನಕಟ್ಟಿ
ನರಗುಂದ



ಪ್ರಸಾದ್ ಕೋಟೆ
ವಿಜಯಪುರ



ಮಹಮದ್ ಅಯಾನ್
ಹರಪನಹಳ್ಳಿ



ವಿಕಾಸ್ ಕಂದಕೂರು
ಕೊಪ್ಪಳ



ಶಾರ್ವರಿ ಎಸ್.
ಹೂವಿನಹಡಗಲಿ



ಅಧಿಕ್ಷಾ ಬಿ.ಎಂ.
ಹೊಸದುರ್ಗ

ಸಹಜ ಸ್ಥಿತಿಯತ್ತ ಚಿನ್ನಸ್ವಾಮಿ ಅಂಗಳ ● ಕಾಲ್ತುಳಿತದ ಸುತ್ತ ಪಿಸುಮಾತು

ಕರಾಳ ನೆನಪಿನಿಂದ ಹೊರಬರುವ ಯತ್ನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಚಿನ್ನಸ್ವಾಮಿ ಕ್ರೀಡಾಂಗಣದ ಬಳಿ ನಡೆದಿದ್ದ ಕಾಲ್ತುಳಿತದ ದುರ್ಘಟನೆಗೆ ಈಗ ನಾಲ್ಕು ದಿನಗಳಾಗಿವೆ. ಆ ಕರಾಳ ನೆನಪಿನಿಂದ ಹೊರಬರುವ ಪ್ರಯತ್ನದಲ್ಲಿ ಚಿನ್ನಸ್ವಾಮಿ ಕ್ರೀಡಾಂಗಣ ಇದೆ.

ಜೂನ್ 4ರಂದು ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡದ ಸಂಭ್ರಮಾಚರಣೆಯ ಸಂದರ್ಭದಲ್ಲಿ ಕ್ರೀಡಾಂಗಣದ ಬಳಿ ದುರ್ಘಟನೆ ನಡೆದಿತ್ತು. ನಂತರ ಎರಡು ದಿನ ಕೆಎಸ್‌ಸಿಎಗೆ ರಜೆ ನೀಡಲಾಗಿತ್ತು. ಶನಿವಾರ ಕ್ರೀಡಾಂಗಣದಲ್ಲಿ ಮತ್ತೆ ಚಟುವಟಿಕೆಗಳನ್ನು ಆರಂಭಿಸಲಾಯಿತು.

ಆದರೆ, ಇಲ್ಲಿಯ ವಾತಾವರಣ ಎಂದಿನಂತಿರಲಿಲ್ಲ. ಕ್ರಿಕೆಟ್ ಚಟುವಟಿಕೆ ಅಥವಾ ಕ್ರಿಕೆಟಿಗರ ಓಡಾಟ ಹೆಚ್ಚಿರಲಿಲ್ಲ. ಆದರೆ, ಪೊಲೀಸ್ ಜೀಪ್‌ಗಳ ಓಡಾಟ, ಬೇರೆ ಬೇರೆ ಇಲಾಖೆಗಳ ಅಧಿಕಾರಿಗಳ ಭೇಟಿ ದಿನವಿಡೀ ಇದ್ದವು. ಈ ನಡುವೆ ಕ್ಲಬ್ ಹೌಸ್ ಮತ್ತು ಕೆಎಸ್‌ಸಿಎ ಕಚೇರಿಗೆ ಕೆಲವು ಸದಸ್ಯರು ಬಂದು ಹೋಗುತ್ತಿದ್ದರು. ಪರಸ್ಪರ ಭೇಟಿಯಾದವರೆಲ್ಲರೂ ಕಾಲ್ತುಳಿತ ಘಟನೆಯ ಕುರಿತು ಚರ್ಚೆ ನಡೆಸುತ್ತಿದ್ದದ್ದು ಸಾಮಾನ್ಯವಾಗಿತ್ತು. ಒಬ್ಬೊಬ್ಬರದ್ದೂ ಒಂದೊಂದು ರೀತಿಯ ವಾದ ಮತ್ತು ಪ್ರತಿವಾದಗಳು ಗಮನ ಸೆಳೆಯುತ್ತಿದ್ದವು.

'ಒಂದು ಉದಾಹರಣೆಗಾಗಿ ಹೇಳುತ್ತಿರುವೆ ಕೇಳಿ; ನಮ್ಮ ಮನೆಯಲ್ಲಿ ಯಾವುದೋ ಒಂದು ಕಾರ್ಯಕ್ರಮದ ದಿನ ನಿಗದಿಯಾಗಿರುತ್ತದೆ. ಅದೇ ಸಂದರ್ಭದಲ್ಲಿ ಪಕ್ಕದ ಮನೆಯಲ್ಲಿ ಯಾರದ್ದೋ ಸಾವು ಸಂಭವಿಸುತ್ತದೆ. ಆಗ ನಾವು ನಮ್ಮ ಮನೆಯ ಪೂರ್ವನಿಗದಿಯ ಕಾರ್ಯಕ್ರಮವನ್ನು ರದ್ದು ಮಾಡಿಬಿಡುತ್ತೇವೆ. ಅದು ಮಾನವೀಯತೆ ಮತ್ತು ಸಾಮಾಜಿಕ ಸಹಜೀವನದ ಸಂಕೇತ. ಆದರೆ, ಕ್ರೀಡಾಂಗಣದ ಮುಂದೆ ದುರ್ಘಟನೆ ನಡೆಯುತ್ತದೆ. ಅದಾಗಿ ಕೆಲಹೊತ್ತಿನ ನಂತರ ಮೈದಾನದೊಳಗೆ ಕಾರ್ಯಕ್ರಮ ನಡೆಯುತ್ತದೆ. ಇದು ನ್ಯಾಯವೇ' ಎಂದು 'ಪ್ರಜಾವಾಣಿ'ಯೊಂದಿಗೆ ಮಾತಿಗೆ ನಿಂತಿದ್ದ ಹಿರಿಯ ಸದಸ್ಯರೊಬ್ಬರು ಆಕ್ರೋಶ ವ್ಯಕ್ತಪಡಿಸಿದರು.

'ಚಿನ್ನಸ್ವಾಮಿ ಕ್ರೀಡಾಂಗಣವು ಅದೆಷ್ಟೋ ಅದ್ಭುತ ಕ್ರಿಕೆಟ್ ಪಂದ್ಯಗಳಿಗೆ ವೇದಿಕೆಯಾಗಿತ್ತು. ಭಾರತದ ಕ್ರಿಕೆಟ್ ಪರಂಪರೆಯ ಬಹುಮುಖ್ಯ ಕೊಂಡಿಯೂ ಇದಾಗಿದೆ. ಆದರೆ, ಈಗ ಆಗಿದ್ದು ಬಹುದೊಡ್ಡ ದುರಂತ. ಇದರಿಂದ ನಮಗಂತೂ ಬಹಳ ದುಃಖವಾಗಿದೆ' ಎಂದು ಇನ್ನೊಬ್ಬ ಸದಸ್ಯರು ಬೇಸರ ವ್ಯಕ್ತಪಡಿಸಿದರು.

ಆದರೆ ಇನ್ನೂ ಕೆಲವು ಸದಸ್ಯರು ಘಟನೆಯ ಕುರಿತು ಮಾತನಾಡಲು ಹಿಂಜರಿದರು. ಕುಶಲೋಪರಿಯಲ್ಲಿಯೇ ಮಾತು ಮುಗಿಸಿ ನಿರ್ಗಮಿಸಿದರು.



ಚಿನ್ನಸ್ವಾಮಿ ಕ್ರೀಡಾಂಗಣದ ಬಳಿ ಸಂಭವಿಸಿದ ಕಾಲ್ತುಳಿತ ಪ್ರಕರಣ ನಡೆದ ನಂತರ ಕ್ರೀಡಾಂಗಣದ ಒಳಗೆ ನಡೆಯುತ್ತಿರುವ ಆಗುಹೋಗುಗಳ ಬಗ್ಗೆ ಕುತೂಹಲ ಜಾಸ್ತಿಯಾಗಿದೆ ಚಿತ್ರ: ಕಿಶೋರ್ ಕುಮಾರ್ ಬೋಳಾರ್

ಕಾರ್ಯದರ್ಶಿ, ಖಜಾಂಚಿ ರಾಜೀನಾಮೆ

ಒಂದನೇ ಪುಟದಿಂದ...

'ಕಳೆದ ಎರಡೂವರೆ ವರ್ಷಗಳಲ್ಲಿ ಇಬ್ಬರೂ ಮಾಡಿರುವ ಉತ್ತಮ ಕಾರ್ಯಗಳಿಗೆ ಸಭೆಯಲ್ಲಿ ಅಭಿನಂದಿಸಲಾಯಿತು. ರಾಜೀನಾಮೆ ಸ್ವೀಕರಿಸಲಾಯಿತು. ಮುಂದಿನ ನಿರ್ಧಾರಗಳ ಕುರಿತು ತಮಗೆಲ್ಲ ತಿಳಿಸಲಾಗುವುದು' ಎಂದು ತಿಳಿಸಿದರು.

ಸದ್ಯ ರಾಜೀನಾಮೆ ಕೊಟ್ಟವರ ಸ್ಥಾನಗಳಿಗೆ ಹಂಗಾಮಿ ಪದಾಧಿಕಾರಿಗಳನ್ನಾಗಿ ಆಯ್ಕೆ ಮಾಡುವ ಕುರಿತು ಅವರು ಹೆಸರುಗಳನ್ನು ಅಧ್ಯಕ್ಷರು ಬಹಿರಂಗಗೊಳಿಸಲಿಲ್ಲ. ಆದರೆ, ಸಮಿತಿ ಸದಸ್ಯರಾದ ಎಂ.ಎಸ್. ವಿನಯ್ ಮತ್ತು ಮಂಜುನಾಥ ರಾಜು ಅವರ ಹೆಸರುಗಳು ಈ ಸ್ಥಾನಕ್ಕಾಗಿ ಮುಂಚೂಣಿಯಲ್ಲಿವೆ ಎಂದು ಮೂಲಗಳು ತಿಳಿಸಿವೆ.

ಪ್ರಸಕ್ತ ಆಡಳಿತ ಸಮಿತಿಯ ಅವಧಿಯು ಇದೇ ಸೆಪ್ಟೆಂಬರ್ 31ಕ್ಕೆ ಮುಕ್ತಾಯವಾಗಲಿದೆ. ಅಕ್ಟೋಬರ್ ಅಥವಾ ನವೆಂಬರ್‌ನಲ್ಲಿ ಚುನಾವಣೆಗಳು ನಡೆಯುವ ಸಾಧ್ಯತೆ ಇದೆ.

'ಇಂದಿನ ಸಭೆಯಲ್ಲಿ ಆಡಳಿತ ಸಮಿತಿಯನ್ನು ವಿಸರ್ಜಿಸುವ ಕುರಿತು ಚರ್ಚೆಯಾಗಿಲ್ಲ. ನಮ್ಮದು ಕ್ರಿಕೆಟ್ ಸಂಸ್ಥೆ. ಇಲ್ಲಿಯ ಚಟುವಟಿಕೆಗಳು ಮುಂದುವರಿಯಬೇಕು. ಸಂಸ್ಥೆಗೆ ಧಕ್ಕೆಯಾಗಬಾರದು. ಆ ಕುರಿತು ಚರ್ಚೆ ನಡೆಸಲಾಯಿತು' ಎಂದರು.

ಕಾಲ್ತುಳಿತ ಪ್ರಕರಣದ ಹಿನ್ನೆಲೆಯಲ್ಲಿ ಕೆಎಸ್‌ಸಿಎ ಮೇಲೆ ಎಫ್‌ಐಆರ್ ದಾಖಲಾಗಿದೆ. ಈ ಕುರಿತು ಪ್ರತಿಕ್ರಿಯಿಸಿದ ಭಟ್, 'ಈ ಕುರಿತು ನಾನು ಹೆಚ್ಚಿಗೆ ಮಾತನಾಡಲಾಗದು. ಪ್ರಕರಣ ನ್ಯಾಯಾಲಯದಲ್ಲಿದೆ. ಇದೊಂದು ಸೂಕ್ಷ್ಮ ವಿಷಯ. ಸೂಕ್ತ ಸಮಯ ಬಂದಾಗ ವಿವರ ನೀಡುತ್ತೇನೆ. ನಾನೇ ನಿಮ್ಮೆಲ್ಲರನ್ನೂ ಕರೆದು ಪತ್ರಿಕಾಗೋಷ್ಠಿಯಲ್ಲಿ ಮಾಹಿತಿ ನೀಡುವೆ' ಎಂದರು.

'ನಾವು ಯಾವುದೇ ವಿಷಯದಿಂದಲೂ ಪಲಾಯನ ಮಾಡುತ್ತಿಲ್ಲ. ತನಿಖೆಗೆ ಎಲ್ಲ ರೀತಿಯಿಂದಲೂ ಬೆಂಬಲಿಸುತ್ತೇವೆ' ಎಂದರು.

ರಿಯಲ್‌ಗೆ ಗೆಲುವು

ಬೆಂಗಳೂರು: ಎಫ್‌ಸಿ ರಿಯಲ್ ಬೆಂಗಳೂರು ತಂಡವು ಕೆಎಸ್‌ಎಫ್‌ಎ ವೈಪಿಎಲ್ ಫುಟ್‌ಬಾಲ್ ಟೂರ್ನಿಯ ಪಂದ್ಯದಲ್ಲಿ ಶನಿವಾರ 3–1 ಗೋಲುಗಳಿಂದ ಎಂಆರ್‌ಯು ಎಫ್‌ಸಿ ತಂಡವನ್ನು ಮಣಿಸಿತು.

ಬೆಂಗಳೂರು ಫುಟ್‌ಬಾಲ್ ಕ್ರೀಡಾಂಗಣದಲ್ಲಿ ನಡೆದ ಇತರ ಪಂದ್ಯಗಳಲ್ಲಿ ಪ್ಲೇಸ್ಮಾರ್ಟ್ 3–1ರಿಂದ ಬ್ಲೂ ಸ್ಟಾರ್ಸ್ ಎಫ್‌ಸಿ ವಿರುದ್ಧ; ಕಿಕ್‌ಸ್ಟಾರ್ಟ್ ಎಫ್‌ಸಿ 2–1ರಿಂದ ರೂಟ್ಸ್ ಎಫ್‌ಸಿ ವಿರುದ್ಧ ಗೆಲುವು ಸಾಧಿಸಿತು.



ಕಾಶ್ಮೀರಕ್ಕೆ ಐತಿಹಾಸಿಕ ಸೇತುವೆ ಸಂಪರ್ಕ!

ಅಗ್ರ ಶ್ರೇಯಾಂಕದ ಸಬಲೆಂಕಾಗೆ ಫೈನಲ್‌ನಲ್ಲಿ ನಿರಾಸೆ

ಗಾಫ್‌ಗೆ ಫ್ರೆಂಚ್ ಓಪನ್ ಕಿರೀಟ

ಪ್ಯಾರಿಸ್ (ರಾಯಿಟರ್ಸ್): ಸೆಟ್ ಹಿನ್ನಡೆಯಿಂದ ಅಮೋಘ ರೀತಿ ಚೇತರಿಸಿಕೊಂಡ ಕೊಕೊ ಗಾಫ್ ಅವರು ಅಗ್ರ ಶ್ರೇಯಾಂಕದ ಅರಿನಾ ಸಬಲೆಂಕಾ ಅವರನ್ನು ಶನಿವಾರ 6–7 (5), 6–2, 6–4 ರಿಂದ ಆಘಾತ ನೀಡಿ ಮೊದಲ ಬಾರಿ ಫ್ರೆಂಚ್ ಓಪನ್ ಸಿಂಗಲ್ಸ್ ಪ್ರಶಸ್ತಿ ಗೆದ್ದುಕೊಂಡರು.

ಇದು ಅಮೆರಿಕದ ಆಟಗಾರ್ತಿಗೆ ಎರಡನೇ ಗ್ರ್ಯಾನ್‌ಸ್ಲಾಮ್ ಪ್ರಶಸ್ತಿ. 2015ರಲ್ಲಿ ಸೆರೆನಾ ವಿಲಿಯಮ್ಸ್ ರೋಲ್ಯಾಂಡ್ ಗ್ಯಾರೋಸ್‌ನಲ್ಲಿ ಪ್ರಶಸ್ತಿ ಗೆದ್ದ ನಂತರ, ಈ ಸಾಧನೆಗೆ ಪಾತ್ರರಾದ ಅಮೆರಿಕದ ಮೊದಲ ಆಟಗಾರ್ತಿ ಎಂಬ ಹಿರಿಮೆ 21 ವರ್ಷ ವಯಸ್ಸಿನ ಗಾಫ್ ಅವರದಾಯಿತು. 2002ರ (ಸೆರೆನಾ) ನಂತರ ಈ ಪ್ರಶಸ್ತಿ ಗೆದ್ದ ಅಮೆರಿಕದ ಅತಿ ಕಿರಿಯ ಆಟಗಾರ್ತಿ ಎನಿಸಿದರು ಕೂಡ.

ಅವರು ಟ್ರೋಫಿಯ ಜೊತೆಗೆ ಸುಮಾರು ₹25 ಕೋಟಿ ಬಹುಮಾನ ಪಡೆದರು. ಬೆಲರೂಸ್‌ನ ಆಟಗಾರ್ತಿ ಸುಮಾರು ₹12.50 ಕೋಟಿ ಬಹುಮಾನ ತಮ್ಮದಾಗಿಸಿಕೊಂಡರು.

ಸತತ ಮೂರನೇ ಗ್ರ್ಯಾನ್‌ಸ್ಲಾಮ್ ಫೈನಲ್ ಆಡಿದ ಸಬಲೆಂಕಾ, ನೆಟ್ ಬಳಿ ಚುರುಕಿನ ಆಟ, ನಾಜೂಕಿನ ಡ್ರಾಪ್‌ಗಳ ಮೂಲಕ ಮೂರನೇ ಗೇಮ್‌ನಲ್ಲಿ ಎದುರಾಳಿಯ ಸರ್ವಿಸ್‌ಅನ್ನು ಒಂದೂ ಪಾಯಿಂಟ್ ಕೊಡದೇ ಬ್ರೇಕ್ ಮಾಡಿ 4–1 ರಲ್ಲಿ ಮುನ್ನಡೆ ಪಡೆದಿದ್ದರು.

ಆದರೆ ಚೇತರಿಸಿಕೊಂಡ ಗಾಫ್ ತಿರುಗೇಟು ನೀಡಿ ಎದುರಾಳಿ ಸರ್ವ್‌ಅನ್ನು ಪಾಯಿಂಟ್ ಕೊಡದೇ ಮುರಿದರು. ಇದಕ್ಕೆ ಸರ್ವ್ ವೇಳೆ ಸಬಲೆಂಕಾ ಮಾಡಿದ ತಪ್ಪುಗಳೂ ಕಾರಣವಾದವು. ಎಂಟು ಗೇಮ್‌ಗಳ ನಂತರ ಸ್ಕೋರ್ 4–4 ಸಮನಾಯಿತು. ನಂತರ ಇಬ್ಬರಿಂದಲೂ ತಪ್ಪುಗಳು ಯಥೇಚ್ಛವಾದವು. ಗಾಫ್ ಸೆಟ್‌ಅನ್ನು ಟೈಬ್ರೇಕರ್‌ಗೆ ಬೆಳೆಸಿದ್ದು 4–1 ಮುನ್ನಡೆ ಕೂಡ ಪಡೆದಿದ್ದರು. ಆದರೆ ಈ ಹಂತದಲ್ಲಿ ಸಬಲೆಂಕಾ ಚೇತರಿಸಿ ಮೊದಲ ಸೆಟ್ ಗೆದ್ದರು.


ಆದರೆ, 2023ರ ಅಮೆರಿಕ ಓಪನ್ ಚಾಂಪಿಯನ್ ಗಾಫ್ ಆಟದ ತೀವ್ರತೆ ಹೆಚ್ಚಿಸಿದರು. ಎರಡನೇ ಸೆಟ್‌ನ ಮೊದಲ ಐದು ಗೇಮ್‌ಗಳಲ್ಲಿ ನಾಲ್ಕನ್ನು ಗೆದ್ದರು. ಸಬಲೆಂಕಾ ಎಸಗಿದ ತಪ್ಪುಗಳಿಂದ ಸೆಟ್‌ಅನ್ನು ಸುಲಭವಾಗಿ ಪಡೆದರು.

ಮೂರನೇ ಸೆಟ್‌ನ ಒಂದು ಹಂತದಲ್ಲಿ ಗಾಫ್ 3–1 ಮುನ್ನಡೆ ಪಡೆದಿದ್ದರು. ಈ ಹಂತದಲ್ಲಿ ಸಬಲೆಂಕಾ ಕೊಂಚ ಹೋರಾಟ ತೋರಿದರು. ಆದರೆ ಸಕಾಲದಲ್ಲಿ ಏಕಾಗ್ರತೆ ಕಂಡುಕೊಂಡ ಗಾಫ್ ಸೆಟ್ ಹಾಗೂ ಪಂದ್ಯ ಗೆದ್ದರು.


ಸಂಭ್ರಮದ ಕ್ಷಣ... ಟ್ರೋಫಿಯೊಂದಿಗೆ ಕೊಕೊ ಗಾಫ್ ಎಪಿ/ಪಿಟಿಐ ಚಿತ್ರ

ಪ್ರಶಸ್ತಿಗೆ ಸಿನ್ನರ್– ಅಲ್ಕರಾಜ್ ಪೈಪೋಟಿ


ಸಿನ್ನರ್


ಅಲ್ಕರಾಜ್

ಪ್ಯಾರಿಸ್ (ಎಪಿ): ವಿಶ್ವದ ಅಗ್ರಮಾನ್ಯ ಆಟಗಾರ ಯಾನಿಕ್ ಸಿನ್ನರ್ ಅವರು ಸರ್ಬಿಯಾದ ದಿಗ್ಗಜ ನೊವಾಕ್ ಜೊಕೊವಿಚ್ ಅವರನ್ನು ಮಣಿಸಿ ಫ್ರೆಂಚ್ ಓಪನ್ ಟೆನಿಸ್ ಟೂರ್ನಿಯ ಫೈನಲ್ ತಲುಪಿದರು. ಇಟಲಿಯ ತಾರೆ ಸಿನ್ನರ್ ಅವರು ಭಾನುವಾರ ನಡೆಯುವ ಫೈನಲ್‌ನಲ್ಲಿ ಹಾಲಿ ಚಾಂಪಿಯನ್ ಕಾರ್ಲೋಸ್ ಅಲ್ಕರಾಜ್ ಅವರನ್ನು ಎದುರಿಸಲಿದ್ದಾರೆ.

ಮುಖಾಮುಖಿ

11 ಪಂದ್ಯ
7 ಅಲ್ಕರಾಜ್ ಗೆಲುವು
4 ಸಿನ್ನರ್ ಗೆಲುವು

ಶುಕ್ರವಾರ ರಾತ್ರಿ ನಡೆದ ಪುರುಷರ ಸಿಂಗಲ್ಸ್ ಸೆಮಿಫೈನಲ್‌ನಲ್ಲಿ 23 ವರ್ಷ ವಯಸ್ಸಿನ ಸಿನ್ನರ್ 6-4, 7-5, 7-6(3)ರಲ್ಲಿ ನೇರ ಸೆಟ್‌ಗಳಿಂದ ಆರನೇ ಶ್ರೇಯಾಂಕದ ಜೊಕೊವಿಚ್ ಅವರನ್ನು ಹಿಮ್ಮೆಟ್ಟಿಸಿ ರೋಲ್ಯಾಂಡ್ ಗ್ಯಾರೋಸ್‌ನಲ್ಲಿ ಮೊದಲ ಬಾರಿ ಫೈನಲ್ ತಲುಪಿದರು. ದಾಖಲೆಯ 25ನೇ ಗ್ರ್ಯಾನ್‌ಸ್ಲಾಮ್ ಕಿರೀಟದ ನಿರೀಕ್ಷೆಯಲ್ಲಿದ್ದ 38 ವರ್ಷ ವಯಸ್ಸಿನ ಜೊಕೊವಿಚ್‌ಗೆ ನಿರಾಸೆಯಾಯಿತು.

ಅದ್ಭುತ ಲಯದಲ್ಲಿರುವ ಸಿನ್ನರ್ ಒಂದೂ ಸೆಟ್ ಕಳೆದುಕೊಳ್ಳದೆ ಫೈನಲ್ ತಲುಪಿದ್ದು, ನಾಲ್ಕನೇ ಗ್ರ್ಯಾನ್‌ಸ್ಲಾಮ್ ಪ್ರಶಸ್ತಿಯ ಮೇಲೆ ಕಣ್ಣಿಟ್ಟಿದ್ದಾರೆ. 1968ರಲ್ಲಿ ಪ್ರಾರಂಭವಾದ ಓಪನ್ ಯುಗದಲ್ಲಿ 1976ರ ಚಾಂಪಿಯನ್ ಆ್ಯಡ್ರಿಯಾನೊ ಪನಟ್ಟಾ ನಂತರ ಇಲ್ಲಿ ಫೈನಲ್ ತಲುಪಿದ ಇಟಲಿಯ ಎರಡನೇ ಆಟಗಾರ ಎಂಬ ಹಿರಿಮೆಗೆ ಸಿನ್ನರ್ ಪಾತ್ರವಾಗಿದ್ದಾರೆ.

ಇದಕ್ಕೂ ಮೊದಲು 22 ವರ್ಷ ವಯಸ್ಸಿನ ಅಲ್ಕರಾಜ್ ಅವರಿಗೆ ಎದುರಾಳಿಯಾಗಿದ್ದ ಎಂಟನೇ ಶ್ರೇಯಾಂಕದ ಲೊರೆಂಜೊ ಮುಸೆಟ್ಟಿ (ಇಟಲಿ) ಎಡಗಾಲಿನ ತೊಡೆಯ ನೋವಿನಿಂದ ಪಂದ್ಯದಿಂದ ಹಿಂದೆ ಸರಿದಿದ್ದರು. ಹೀಗಾಗಿ, ಸ್ಪೇನ್ ಆಟಗಾರ ಸತತ ಎರಡನೇ ಬಾರಿ ಇಲ್ಲಿ ಫೈನಲ್ ತಲುಪಿದ್ದರು.

ವಿದಾಯದ ಪಂದ್ಯ?: ರೋಲ್ಯಾಂಡ್ ಗ್ಯಾರೋಸ್‌ನಲ್ಲಿ ಇದು ತನ್ನ ಕೊನೆಯ ಪಂದ್ಯವಾಗಬಹುದು ಎಂದು ಮೂರು ಬಾರಿಯ ಚಾಂಪಿಯನ್ ಜೊಕೊವಿಕ್ ಭಾವುಕರಾಗಿ ಹೇಳಿದರು. ಪಂದ್ಯದ ತಕ್ಷಣ ಕೈಗೆ ಚುಂಬಿಸಿ ನಂತರ ಅಂಕಣ ಸ್ಪರ್ಶಿಸುವ ಮೂಲಕ ಇದು ವಿದಾಯದ ಪಂದ್ಯವೆಂಬ ಸಂಕೇತ ರವಾನಿಸಿದರು.

'ಕೇರಳಕ್ಕೆ ಮೆಸ್ಸಿ ಭೇಟಿ ಖಚಿತ'

ತಿರುವನಂತಪುರ (ಪಿಟಿಐ): ಈ ಹಿಂದೆಯೇ ರಾಜ್ಯ ಸರ್ಕಾರ ಘೋಷಿಸಿದ ಪ್ರಕಾರ ದಿಗ್ಗಜ ಆಟಗಾರ ಲಯೊನೆಲ್ ಮೆಸ್ಸಿ ನೇತೃತ್ವದ ಅರ್ಜೆಂಟೀನಾ ತಂಡ ರಾಜ್ಯಕ್ಕೆ ಭೇಟಿ ನೀಡುವುದು ಖಚಿತ. ಅವರಿಗೆ ಪ್ರಾಯೋಜಕರು ಪಂದ್ಯದ ಸಂಭಾವನೆಯನ್ನೂ ನೀಡಿದ್ದಾರೆ ಎಂದು ಕೇರಳದ ಕ್ರೀಡಾ ಸಚಿವ ಅಬ್ದುರಹಿಮಾನ್ ಶನಿವಾರ ಸ್ಪಷ್ಟಪಡಿಸಿದ್ದಾರೆ.

ಇದೇ ವರ್ಷದ ಅಕ್ಟೋಬರ್–ನವೆಂಬರ್ ತಿಂಗಳಲ್ಲಿ ಅರ್ಜೆಂಟೀನಾ ತಂಡ ಬರುವ ಸಾಧ್ಯತೆಯಿದೆ. ಅವರನ್ನು ರಾಜ್ಯದ ಅತಿಥಿಗಳು ಎಂದು ಆದರಿಸಲಾಗುವುದು ಎಂದು ತಿಳಿಸಿದ್ದಾರೆ.

ಪ್ರಾಯೋಜಕರು ಒಪ್ಪಂದದ ನಿಯಮಗಳನ್ನು ಉಲ್ಲಂಘಿಸಿ ಕಾರಣಕ್ಕೆ ಅರ್ಜೆಂಟೀನಾ ತಂಡ ತನ್ನ ನಿಗದಿ ಪ್ರವಾಸವನ್ನು ರದ್ದುಗೊಳಿಸಿದೆ ಎಂದು ಕೆಲವು ಮಾಧ್ಯಮಗಳು ವರದಿ ಮಾಡಿದ ನಂತರ ಸಚಿವರು ಈ ಹೇಳಿಕೆ ನೀಡಿದ್ದಾರೆ.

ಆದರೆ ಅಬ್ದುರಹಿಮಾನ್ ಮತ್ತು ಪ್ರಾಯೋಜಕರರಾದ ರಿಪೋರ್ಟರ್ ಬ್ರಾಡ್‌ಕಾಸ್ಟಿಂಗ್ ಕಂಪನಿ ಪತ್ರಿಕಾ ವರದಿಗಳಿಗೆ ಆಕ್ಷೇಪ ವ್ಯಕ್ತಪಡಿಸಿದ್ದು, ವಿಶ್ವ ಚಾಂಪಿಯನ್ ತಂಡವು ರಾಜ್ಯದಲ್ಲಿ ಸೌಹಾರ್ದ ಪಂದ್ಯ ಆಡಲಿದೆ ಎಂದು ಪುನರುಚ್ಚರಿಸಿದ್ದಾರೆ.

ನಾರ್ವೆ ಚೆಸ್ ಟೂರ್ನಿ: ಕೊನೆಯ ಸುತ್ತಿನಲ್ಲಿ ಎಡವಿದ ಗುಕೇಶ್


7ನೇ ಬಾರಿ ಪ್ರಶಸ್ತಿ ಗೆದ್ದ ಕಾರ್ಲ್‌ಸನ್

ಸ್ಟಾವೆಂಜರ್ (ನಾರ್ವೆ) (ಪಿಟಿಐ): ಅಮೆರಿಕದ ಗ್ರ್ಯಾಂಡ್ ಮಾಸ್ಟರ್ ಫ್ಯಾಬಿಯಾನೊ ಕರುವಾನ ಎದುರಿನ ಅಂತಿಮ ಸುತ್ತಿನ ಪಂದ್ಯದಲ್ಲಿ ಪ್ರಮಾದ ಎಸಗಿದ್ದು ವಿಶ್ವ ಚಾಂಪಿಯನ್ ಡಿ.ಗುಕೇಶ್ ಅವರಿಗೆ ದುಬಾರಿಯಾಯಿತು. ಇದರ ಲಾಭ ಪಡೆದ ಐದು ಬಾರಿಯ ವಿಶ್ವ ಚಾಂಪಿಯನ್ ಮ್ಯಾಗ್ನಸ್ ಕಾರ್ಲ್‌ಸನ್ ನಾರ್ವೆ ಚೆಸ್ ಟೂರ್ನಿಯಲ್ಲಿ ಏಳನೇ ಬಾರಿ ಪ್ರಶಸ್ತಿ ಗೆದ್ದುಕೊಂಡರು.

2018ರಲ್ಲಿ ಇಲ್ಲಿ ಚಾಂಪಿಯನ್ ಆಗಿದ್ದ ಕರುವಾನ ವಿರುದ್ಧದ ಪಂದ್ಯದಲ್ಲಿ ಗುಕೇಶ್ ಸ್ಥಿತಿ ಉತ್ತಮವಾಗಿ ಏನೂ ಇರಲಿಲ್ಲ. ಕೊನೆಯಲ್ಲಿ ಚೇತರಿಕೆಯ ಆಟವಾಡಿದರೂ ಸಮಯದ ಒತ್ತಡಕ್ಕೆ ಸಿಲುಕಿ ತಪ್ಪು ಮಾಡಿದ್ದರಿಂದ ಕರುವಾನ ಗೆದ್ದು ಮೂರು ಪಾಯಿಂಟ್ ಸಂಪಾದಿಸಿದರು.

ಇನ್ನೊಂದು ಕಡೆ ಕಾರ್ಲ್‌ಸನ್ ಕೊನೆಯ ಸುತ್ತಿನಲ್ಲಿ ಭಾರತದ ಅರ್ಜುನ್ ಇರಿಗೇಶಿ ಎದುರು ಕ್ಲಾಸಿಕಲ್ ಪಂದ್ಯ ಡ್ರಾ ಮಾಡಿಕೊಂಡರು. 'ಆರ್ಮ್‌ಗೆಡನ್'ನಲ್ಲಿ ಇರಿಗೇಶಿ ಗೆದ್ದರೂ ಟೂರ್ನಿಯಲ್ಲಿ ಒಟ್ಟಾರೆ 16 ಪಾಯಿಂಟ್ಸ್ ಕಲೆಹಾಕಿದ ಕಾರ್ಲ್‌ಸನ್ ಅಗ್ರಸ್ಥಾನ ಪಡೆಯುವಲ್ಲಿ ಯಶಸ್ವಿ ಆದರು.

ಕರುವಾನ (15.5) ಅವರು ಎರಡನೇ ಸ್ಥಾನ ಪಡೆದರೆ, ಗುಕೇಶ್ (14.5) ಮೂರನೇ ಸ್ಥಾನಕ್ಕೆ ಸರಿದರು. ಕಳೆದ ಸಲವೂ ಗುಕೇಶ್ ಮೂರನೇ ಸ್ಥಾನ ಪಡೆದಿದ್ದರು. ಕಾರ್ಲ್‌ಸನ್ ಆರ್ಮ್‌ಗೆಡನ್‌ನಲ್ಲಿ ಸೋತ ಕಾರಣ ಗುಕೇಶ್ ಕ್ಲಾಸಿಕಲ್ ಪಂದ್ಯ ಡ್ರಾ ಮಾಡಿಕೊಂಡಿದ್ದರೂ, ಪ್ರಶಸ್ತಿ ಅವಕಾಶ ಹೊಂದುತ್ತಿದ್ದರು.


ಪ್ರಶಸ್ತಿ ಗೆದ್ದ ಮ್ಯಾಗ್ನಸ್ ಕಾರ್ಲ್‌ಸನ್

ಕರುವಾನ ಅವರಿಗೆ ಸೋತ ತಕ್ಷಣ ಗುಕೇಶ್, ಕೆಲಕ್ಷಣ ಕಣ್ಣು ಮುಚ್ಚಿ, ಹತಾಶೆಯಿಂದ ಎರಡೂ ಕೈಗಳಿಂದ ಮುಖ ಮುಚ್ಚಿಕೊಂಡರು.

ಇರಿಗೇಶಿ ವಿರುದ್ಧ ಕ್ಲಾಸಿಕಲ್ ಪಂದ್ಯದಲ್ಲಿ ಕಾರ್ಲ್‌ಸನ್ ತೊಂದರೆಗೆ ಸಿಲುಕಿಕೊಂಡರೂ ಅಮೋಘ ರೀತಿ ಚೇತರಿಸಿ ಡ್ರಾ ಮಾಡಿಕೊಂಡಿದ್ದರು. ಇದರಿಂದ ಅವರಿಗೆ ಒಂದು ಪಾಯಿಂಟ್ ಹಾಗೂ ಅದರ ಜೊತೆ ಪ್ರಶಸ್ತಿಯೂ ಖಚಿತವಾಯಿತು.

'ತಮ್ಮ ಗಮನ ಗುಕೇಶ್– ಕರುವಾನ ಪಂದ್ಯದ ಕಡೆಯೂ ಇತ್ತು' ಎಂದೂ ಕಾರ್ಲ್‌ಸನ್ ಅವರು ಒಪ್ಪಿಕೊಂಡರು.

ಮುಝಿಚುಕ್‌ಗೆ ಪ್ರಶಸ್ತಿ

ಮಹಿಳಾ ವಿಭಾಗದಲ್ಲಿ ಗುರುವಾರ ಮುನ್ನಡೆಯಲ್ಲಿದ್ದ ಉಕ್ರೇನ್‌ನ ಅನ್ನಾ ಮುಝಿಚುಕ್ ಅವರು 16.5 ಪಾಯಿಂಟ್ ಸಂಗ್ರಹಿಸಿ ಚಾಂಪಿಯನ್ ಆದರು. ಅವರು ಭಾರತದ ಆರ್.ವೈಶಾಲಿ ವಿರುದ್ಧ ಕೊನೆಯ ಸುತ್ತಿನ ಕ್ಲಾಸಿಕಲ್ ಪಂದ್ಯ ಡ್ರಾ ಮಾಡಿಕೊಂಡು, ಆರ್ಮ್‌ಗೆಡನ್‌ನಲ್ಲಿ ಸೋತರೂ ಉಕ್ರೇನ್ ಆಟಗಾರ್ತಿಯ ಪ್ರಶಸ್ತಿ ಗೆಲುವಿಗೆ ಅಡ್ಡಿಯಾಗಲಿಲ್ಲ.



ಕೋನೇರು ಹಂಪಿ ಇನ್ನೊಂದು ಪಂದ್ಯದಲ್ಲಿ ಚೀನಾದ ವಿಶ್ವ ಚಾಂಪಿಯನ್ ಮಾ ವೆನ್ಜುನ್ ಜೊತೆ ಡ್ರಾ ಮಾಡಿಕೊಂಡು, ಆರ್ಮ್‌ಗೆಡನ್‌ನಲ್ಲಿ ಗೆದ್ದರೂ ಒಟ್ಟು 15 ಪಾಯಿಂಟ್‌ಗಳೊಡನೆ ಮೂರನೇ ಸ್ಥಾನಕ್ಕೆ ಸರಿಯಬೇಕಾಯಿತು.

ಸುಳ್ಳು ಪ್ರಮಾಣಪತ್ರ: 30 ಕುಸ್ತಿಪಟುಗಳ ವಿರುದ್ಧ ಕ್ರಮ

ನವದೆಹಲಿ (ಪಿಟಿಐ): ಸುಳ್ಳು ಜನನ ಪ್ರಮಾಣಪತ್ರ ನೀಡಿ ಜೂನಿಯರ್ ಹಂತದಲ್ಲಿ ಸ್ಪರ್ಧಿಸುತ್ತಿದ್ದ ವಯೋಮಿತಿ ಮೀರಿದ ಕುಸ್ತಿಪಟುಗಳ ಮೇಲೆ ಭಾರತ ಕುಸ್ತಿ ಫೆಡರೇಷನ್ ಚಾಟಿ ಬೀಸಿದೆ. 400ಕ್ಕೂ ಅಧಿಕ ಪ್ರಕರಣಗಳ ಪರಿಶೀಲನೆಯ ನಂತರ 30 ಮಂದಿ ಕುಸ್ತಿಪಟುಗಳ ಮೇಲೆ ತಾತ್ಕಾಲಿಕ ಅಮಾನತು ಹೇರಲಾಗಿದೆ.

ಹರಿಯಾಣದ ಹಲವು ಪೈಲ್ವಾನರು ಸುಳ್ಳು ಜನನಪ್ರಮಾಣಪತ್ರ ನೀಡಿ ಜೂನಿಯರ್ ವಿಭಾಗದಲ್ಲಿ ಸ್ಪರ್ಧಿಸುತ್ತಿರುವ ಬಗ್ಗೆ ಕೋಚ್‌ಗಳು ಮತ್ತು ಡೆಲ್ಲಿಯ ವಿವಿಧ ಅಖಾಡಗಳ ಕುಸ್ತಿಪಟುಗಳು ದೂರು ನೀಡಿದ್ದು, ಫೆಡರೇಷನ್ ಈ ಬಗ್ಗೆ ತಪಾಸಣೆ ನಡೆಸಿತ್ತು. ಫೆಡರೇಷನ್‌ಗೇ ಆಘಾತ ನೀಡುವ ರೀತಿ, ನಕಲಿ ಪ್ರಮಾಣಪತ್ರ ನೀಡಿದ್ದ ಇಬ್ಬರು ಪೈಲ್ವಾನರು ಇತ್ತೀಚೆಗೆ ಬಿಹಾರದಲ್ಲಿ ನಡೆದ ಖೇಲೊ ಇಂಡಿಯಾ ಕ್ರೀಡೆಗಳಲ್ಲಿ ಪದಕಗಳನ್ನೂ ಗೆದ್ದಿದ್ದರು.

ಇಂಗ್ಲೆಂಡ್‌ಗೆ ಬಂದಿಳಿದ ಭಾರತ ತಂಡ

ಲಂಡನ್ (ಪಿಟಿಐ): ಈ ತಿಂಗಳ 20ರಿಂದ ಇಂಗ್ಲೆಂಡ್ ವಿರುದ್ಧ ಆರಂಭವಾಗುವ ಐದು ಪಂದ್ಯಗಳ ಟೆಸ್ಟ್ ಸರಣಿಗಾಗಿ ಭಾರತ ಕ್ರಿಕೆಟ್ ತಂಡ ಶನಿವಾರ ಇಂಗ್ಲೆಂಡ್‌ಗೆ ಬಂದಿಳಿಯಿತು.


ಶುಭಮನ್ ಗಿಲ್

ಈ ಸರಣಿಯು 2025-27ರ ಐಸಿಸಿ ವಿಶ್ವ ಟೆಸ್ಟ್ ಚಾಂಪಿಯನ್‌ಷಿಪ್ ಋತುವಿನ ಭಾಗವಾಗಿದೆ.

ಅನುಭವಿಗಳಾದ ರೋಹಿತ್ ಶರ್ಮಾ ಮತ್ತು ವಿರಾಟ್ ಕೊಹ್ಲಿ ಟೆಸ್ಟ್ ಕ್ರಿಕೆಟ್‌ಗೆ ನಿವೃತ್ತಿ ಘೋಷಿಸಿದ ಬಳಿಕ ತಂಡಕ್ಕೆ ಶುಭಮನ್ ಗಿಲ್ ಅವರನ್ನು ನಾಯಕರನ್ನಾಗಿ ನೇಮಿಸಲಾಗಿದೆ. ಯುವ ಆಟಗಾರರನ್ನು ಒಳಗೊಂಡ ತಂಡವನ್ನು ಅವರು ಮುನ್ನಡೆಸಲಿದ್ದಾರೆ.

ಇಂಗ್ಲೆಂಡ್ ಲಯನ್ಸ್ ವಿರುದ್ಧ ನಡೆಯುತ್ತಿರುವ ಮೂರು ಪಂದ್ಯಗಳ 'ಟೆಸ್ಟ್' ಸರಣಿಗಾಗಿ ಭಾರತ 'ಎ' ತಂಡದಲ್ಲಿ ಆಡಲು ಆರು ಆಟಗಾರರು ಈ ಮೊದಲೇ ಇಂಗ್ಲೆಂಡ್ ತೆರಳಿದ್ದಾರೆ.

ಮೊದಲ ಟೆಸ್ಟ್ ಪಂದ್ಯ ಜೂನ್ 20ರಿಂದ ಲೀಡ್ಸ್‌ನಲ್ಲಿ ನಡೆಯಲಿದೆ. ನಂತರದ ಪಂದ್ಯಗಳು ಕ್ರಮವಾಗಿ ಬರ್ಮಿಂಗ್‌ಹ್ಯಾಮ್ (ಜುಲೈ 2–6), ಲಾರ್ಡ್ಸ್ (ಜುಲೈ 10–14), ಮ್ಯಾಂಚೆಸ್ಟರ್ (ಜುಲೈ 23–27) ಮತ್ತು ಓವಲ್‌ನಲ್ಲಿ (ಆಗಸ್ಟ್ 4–8) ನಡೆಯಲಿವೆ.

ಉತ್ತಮ ಸ್ಥಿತಿಯಲ್ಲಿ ಲಯನ್ಸ್

ನಾರ್ತಾಂಪ್ಟನ್ (ಪಿಟಿಐ): ಭಾರತ ಎ ತಂಡವು ಎರಡನೇ 'ಟೆಸ್ಟ್' ಪಂದ್ಯದ ಮೊದಲ ಇನಿಂಗ್ಸ್‌ನಲ್ಲಿ ಗಳಿಸಿದ್ದ 348 ರನ್‌ಗಳಿಗೆ ಉತ್ತರವಾಗಿ ಇಂಗ್ಲೆಂಡ್ ಲಯನ್ಸ್ ತಂಡವು 3 ವಿಕೆಟ್‌ಗಳಿಗೆ 192 ರನ್ ಕಲೆಹಾಕಿ ಉತ್ತಮ ಸ್ಥಿತಿಯಲ್ಲಿದೆ.

ಮೊದಲ ದಿನ 7 ವಿಕೆಟ್‌ಗೆ 319 ರನ್ ಗಳಿಸಿದ್ದ ಭಾರತ ಎ ತಂಡವು ಎರಡನೇ ದಿನವಾದ ಶನಿವಾರ ಕೇವಲ 29 ರನ್ ಸೇರಿಸಿ 348 ರನ್‌ಗಳಿಗೆ ಆಲೌಟ್ ಆಯಿತು. ಲಯನ್ಸ್ ಪರ ಆರಂಭಿಕ ಆಟಗಾರ ಟಾಮ್ ಹೈನ್ಸ್ (54;88ಎ) ಮತ್ತು ಎಮಿಲಿಯೊ ಗೇ (71;117ಎ) ಅರ್ಧಶತಕ ಗಳಿಸಿ ಆಸರೆಯಾದರು. ಲಯನ್ಸ್ ಸದ್ಯ 156 ರನ್‌ಗಳಿಂದ ಹಿನ್ನಡೆಯಲ್ಲಿದೆ.

ಸಂಕ್ಷಿಪ್ತ ಸ್ಕೋರ್: ಮೊದಲ ಇನಿಂಗ್ಸ್: ಭಾರತ ಎ: 89.3 ಓವರ್‌ಗಳಲ್ಲಿ 348. ಇಂಗ್ಲೆಂಡ್ ಲಯನ್ಸ್: 46 ಓವರ್‌ಗಳಲ್ಲಿ 3ಕ್ಕೆ 192 (ಟಾಮ್ ಹೈನ್ಸ್ 54, ಎಮಿಲಿಯೊ ಗೇ 71, ಅನ್ಶುಲ್ ಕಾಂಬೋಜ್ 38ಕ್ಕೆ 1, ತನುಷ್ ಕೋಟ್ಯಾನ್ 21ಕ್ಕೆ 1).

ಆರ್ಚರಿ ವಿಶ್ವಕಪ್: ಭಾರತಕ್ಕೆ ಬರಿಗೈ

ಅಂತಾಲ್ಯ (ಟರ್ಕಿ) (ಪಿಟಿಐ): ನಿರಾಶಾದಾಯಕ ಪ್ರದರ್ಶನ ತೋರಿದ ಭಾರತದ ಆರ್ಚರಿ ಪಟುಗಳು ಶನಿವಾರ ಮುಕ್ತಾಯಗೊಂಡ ಆರ್ಚರಿ ವಿಶ್ವಕಪ್ ಸ್ಟೇಜ್3 ಕೂಟದಲ್ಲಿ ಒಂದೂ ಪದಕ ಗೆಲ್ಲದೇ ಬರಿಗೈಯಲ್ಲಿ ಮರಳಿದರು. ಏಷ್ಯನ್ ಕ್ರೀಡೆಗಳಿಗೆ ಕೇವಲ ಒಂದು ವರ್ಷ ಉಳಿದಿರುವಂತೆ ಭಾರತ ತಂಡದ ಈ ಕಳಪೆ ಪ್ರದರ್ಶನವು, ತಂಡದ ಆಯ್ಕೆ, ಸಿದ್ಧತೆ, ಮನೋಬಲದ ಮೇಲೆ ಗಂಭೀರ ಪ್ರಶ್ನೆ ಮೂಡಿಸಿದೆ.

ಮೇ ತಿಂಗಳಲ್ಲಿ ಶಾಂಘೈನಲ್ಲಿ ನಡೆದ ವಿಶ್ವಕಪ್ ಸ್ಟೇಜ್ 2 ಕೂಟದಲ್ಲಿ ಭಾರತದ ಬಿಲ್ಗಾರರು ಎರಡು ಚಿನ್ನ, ಒಂದು ಬೆಳ್ಳಿ, ನಾಲ್ಕು ಕಂಚಿನ ಪದಕ ಗೆದ್ದುಕೊಂಡು ಪದಕ ಪಟ್ಟಿಯಲ್ಲಿ ಎರಡನೇ ಸ್ಥಾನ ಪಡೆದು ಗಮನಸೆಳೆದಿದ್ದರು. ಆದರೆ ಈಗ ಅದು ಗತವೈಭವದಂತೆ ಕಂಡಿದೆ.

ಅಂತ್ಯಾಲದಲ್ಲಿ ಕಳಪೆ ನಿರ್ವಹಣೆ ಅಚ್ಚರಿ ಮೂಡಿಸಿತು. ಭಾರತ ಪ್ರಬಲವಾಗಿರುವ ಕಾಂಪೌಂಡ್ ಆರ್ಚರಿಯಲ್ಲಿ ಒಂದೂ ಪದಕ ಬರಲಿಲ್ಲ.

ಶುಕ್ರವಾರ ವೈಯಕ್ತಿಕ ಮತ್ತು ಟೀಮ್ ವಿಭಾಗದಲ್ಲಿ ಕಾಂಪೌಂಡ್ ಆರ್ಚರಿ ಸ್ಪರ್ಧಿಗಳು ಹೊರಬಿದ್ದಿದ್ದರು. ನಂತರ ರಿಕರ್ವ್ ವಿಭಾಗದಲ್ಲೂ ನಿರಾಶೆ ಮುಂದುವರಿಯಿತು.

ಅನುಭವಿ, ನಾಲ್ಕು ಬಾರಿಯ ಒಲಿಂಪಿಯನ್‌ಗಳಾದ ದೀಪಿಕಾ ಕುಮಾರಿ, ತರುಣದೀಪ್ ರೈ ಸಹ ಪದಕ ಸುತ್ತಿಗೇರಲು ವಿಫಲರಾದರು.

ಇದ್ದುದರಲ್ಲಿ ಸಮಾಧಾನ ಮೂಡಿಸಿದವರೆಂದರೆ ಸಿಮ್ರನ್‌ಜಿತ್ ಕೌರ್ ಅವರ ಆಟ. ಶನಿವಾರ ನಡೆದ ಕ್ವಾರ್ಟರ್ ಫೈನಲ್‌ನಲ್ಲಿ ಸೋಲುವ ಮೊದಲು ಒಲಿಂಪಿಕ್ ಸ್ವರ್ಣ ವಿಜೇತೆ ಅನ್ ಸಾನ್ ಅವರಿಗೆ ಶೂಟ್‌ಆಫ್‌ವರೆಗೆ ಪೈಪೋಟಿ ನೀಡಿದರು.

ದೀಪಿಕಾ, ಕೊರಿಯಾದ ಪ್ರಬಲ ಎದುರಾಳಿ ವಿರುದ್ಧ ಮತ್ತೊಮ್ಮೆ ನಿರಾಶೆ ಮೂಡಿಸಿದರು. ಅಂಕಿತಾ ಭಕತ್ ಮೊದಲ ಸುತ್ತಿನಲ್ಲೇ ಹೊರಬಿದ್ದರು.

ಹಾಕಿ: ನೆದರ್ಲೆಂಡ್ಸ್‌ಗೆ ಮಣಿದ ಭಾರತ

ಆಮ್‌ಸ್ಟೆಲ್ವೀನ್, ನೆದರ್ಲೆಂಡ್ಸ್ (ಪಿಟಿಐ): ಭಾರತ ಪುರುಷರ ಹಾಕಿ ತಂಡವು ಶನಿವಾರ ಎಫ್‌ಐಎಚ್ ಪ್ರೊ ಲೀಗ್‌ನ ಯುರೋಪಿಯನ್ ಲೆಗ್‌ನ ಮೊದಲ ಪಂದ್ಯದಲ್ಲಿ 1–2 ಗೋಲುಗಳಿಂದ ಒಲಿಂಪಿಕ್ ಚಾಂಪಿಯನ್ ನೆದರ್ಲೆಂಡ್ಸ್ ತಂಡಕ್ಕೆ ಮಣಿಯಿತು.

ನಾಯಕ ಹರ್ಮನ್‌ಪ್ರೀತ್ ಸಿಂಗ್ (19ನೇ ನಿಮಿಷ) ಅವರು ಎರಡನೇ ಕ್ವಾರ್ಟರ್‌ನಲ್ಲಿ ಪೆನಾಲ್ಟಿ ಕಾರ್ನರ್ ಅವಕಾಶವನ್ನು ಗೋಲಾಗಿ ಪರಿವರ್ತಿಸಿ ಭಾರತ ತಂಡಕ್ಕೆ ಆರಂಭಿಕ ಮುನ್ನಡೆ ಒದಗಿಸಿದ್ದರು. ಆದರೆ, 25ನೇ ನಿಮಿಷದಲ್ಲಿ ಆತಿಥೇಯ ತಂಡದ ವ್ಯಾನ್ ಡ್ಯಾಮ್ ಥಿಜ್ಸ್ ಅವರು ಚೆಂಡನ್ನು ಗುರಿ ಸೇರಿಸಿದರು. ಹೀಗಾಗಿ, ಉಭಯ ತಂಡಗಳ ಸ್ಕೋರ್ ಸಮಬಲಗೊಂಡಿತು. ಪಂದ್ಯ ಮುಗಿಯಲು ಎರಡು ನಿಮಿಷ ಇರುವಂತೆ ವ್ಯಾನ್ ಮತ್ತೊಂದು ಗೋಲು ಗಳಿಸಿದರು.

ಭಾರತ ತಂಡವು ಲೆಗ್‌ನ ಎರಡನೇ ಪಂದ್ಯದಲ್ಲಿ ಸೋಮವಾರ ಮತ್ತೆ ನೆದರ್ಲೆಂಡ್ಸ್ ತಂಡವನ್ನು ಎದುರಿಸಲಿದೆ.

ವರ್ಷದ ಆರಂಭದಲ್ಲಿ ಭುವನೇಶ್ವರದಲ್ಲಿ ನಡೆದ ಪ್ರೊ ಲೀಗ್‌ನ ತವರು ಲೆಗ್‌ನಲ್ಲಿ ಹರ್ಮನ್‌ಪ್ರೀತ್ ಬಳಗವು ಎಂಟು ಪಂದ್ಯಗಳಲ್ಲಿ ಐದು ಗೆಲುವು ಸಾಧಿಸಿತ್ತು. ಭಾರತ ಒಟ್ಟು 15 ಅಂಕಗಳೊಂದಿಗೆ ಅಂಕಪಟ್ಟಿಯಲ್ಲಿ ನಾಲ್ಕನೇ ಸ್ಥಾನದಲ್ಲಿದೆ.

ತೈವಾನ್ ಅಥ್ಲೆಟಿಕ್ಸ್ ಓಪನ್: ಮೊದಲ ದಿನ ಭಾರತಕ್ಕೆ ಆರು ಚಿನ್ನದ ಪದಕ

ಜ್ಯೋತಿ ಯರ್ರಾಜಿ, ತೇಜಸ್‌ಗೆ ಚಿನ್ನ

ತೈಪೆ ಸಿಟಿ (ಪಿಟಿಐ): ಏಷ್ಯನ್ ಚಾಂಪಿಯನ್ ಜ್ಯೋತಿ ಯರ್ರಾಜಿ, ಶನಿವಾರ ಆರಂಭಗೊಂಡ ತೈವಾನ್ ಅಥ್ಲೆಟಿಕ್ಸ್ ಓಪನ್ ಕೂಟದ ಮಹಿಳೆಯರ 100 ಮೀಟರ್ ಹರ್ಡಲ್ಸ್‌ನಲ್ಲಿ ಚಿನ್ನದ ಪದಕಕ್ಕೆ ಕೊರಳೊಡ್ಡಿದರು.

ಭಾರತದ 25 ವರ್ಷ ವಯಸ್ಸಿನ ಜ್ಯೋತಿ, ತೈಪೆ ಮುನಿಸಿಪಲ್ ಸ್ಟೇಡಿಯಂನಲ್ಲಿ ನಡೆದ ಸ್ಪರ್ಧೆಯಲ್ಲಿ 12.99 ಸೆಕೆಂಡ್‌ಗಳಲ್ಲಿ ಗುರಿ ಮುಟ್ಟಿದರು. ಜಪಾನ್‌ನ ಅಸುಕಾ ಟೆರಾಡಾ (13.04 ಸೆ.) ಹಾಗೂ ಚಿಸಾತೊ ಕಿಯೊಯಾಮಾ (13.10 ಸೆ.) ಅವರು ಕ್ರಮವಾಗಿ ಬೆಳ್ಳಿ ಮತ್ತು ಕಂಚಿನ ಪದಕ ಗೆದ್ದರು.

ಈ ಸ್ಪರ್ಧೆಯಲ್ಲಿ ಜ್ಯೋತಿ (12.78 ಸೆ.) ರಾಷ್ಟ್ರೀಯ ದಾಖಲೆಯನ್ನು ಹೊಂದಿದ್ದಾರೆ. ಮೇ ತಿಂಗಳಿನಲ್ಲಿ ದಕ್ಷಿಣ ಕೊರಿಯಾದಲ್ಲಿ ಈಚೆಗೆ ನಡೆದ ಏಷ್ಯನ್ ಚಾಂಪಿಯನ್‌ಷಿಪ್‌ನಲ್ಲಿಯೂ ಅವರು (12.96 ಸೆ) ಚಿನ್ನ ಗೆದ್ದಿದ್ದರು.

ಪುರುಷರ 110 ಮೀ. ಹರ್ಡಲ್ಸ್‌ನಲ್ಲಿ ರಾಷ್ಟ್ರೀಯ ದಾಖಲೆ ಹೊಂದಿರುವ ಭಾರತದ ತೇಜಸ್ ಶಿರ್ಸೆ (13.52 ಸೆ.) ಚಿನ್ನದ ಪದಕ ತಮ್ಮದಾಗಿಸಿಕೊಂಡರು. ಇದು ಅವರ ಎರಡನೇ ವೈಯಕ್ತಿಕ ಶ್ರೇಷ್ಠ ಸಾಧನೆಯಾಗಿದೆ.



ಜ್ಯೋತಿ ಯರ್ರಾಜಿ



ತೇಜಸ್ ಶಿರ್ಸೆ ಪ್ರಜಾವಾಣಿ ಸಂಗ್ರಹ ಚಿತ್ರ

ಆತಿಥೇಯ ತೈಪೆಯ ಸೀಹ್ ಯುವಾನ್– ಕೈ (13.72 ಸೆ.) ಹಾಗೂ ಕುಇ– ರು ಶೆನ್ (13.75) ಕ್ರಮವಾಗಿ ಬೆಳ್ಳಿ ಹಾಗೂ ಕಂಚಿನ ಪದಕ ಜಯಿಸಿದರು.

ಟ್ರಿಪಲ್ ಜಂಪ್‌ನಲ್ಲಿ 16.21 ಮೀ. ಸಾಧನೆಯೊಂದಿಗೆ ಭಾರತದ ಅಥ್ಲೀಟ್ ಅಬ್ದುಲ್ಲಾ ಅಬೂಬಕ್ಕರ್ ಹಾಗೂ ಮಹಿಳೆಯರ 1,500 ಮೀ. ಓಟದಲ್ಲಿ ಪೂಜಾ (4 ನಿ. 11.63 ಸೆ.) ಚಿನ್ನದ ಪದಕ ಗೆದ್ದರು.

ರಿಲೆ ತಂಡಗಳಿಗೆ ಚಿನ್ನ: 4x100 ಮೀ. ರಿಲೆ ಸ್ಪರ್ಧೆಯಲ್ಲಿ 38.75 ಸೆಕೆಂಡುಗಳಲ್ಲಿ ಗುರಿ ತಲುಪಿದ ಗುರಿಂದರ್‌ವೀರ್ ಸಿಂಗ್, ಅನಿಮೇಶ್ ಕುಜುರ್, ಮಣಿಕಂಠ ಹೋಬಳಿದಾರ್ ಮತ್ತು ಅಮ್ಲಾನ್ ಬೋರ್ಗೊಹೈನ್ ಅವರನ್ನು ಒಳಗೊಂಡ ಭಾರತ ತಂಡವು ಚಿನ್ನದ ಪದಕವನ್ನು ತನ್ನದಾಗಿಸಿಕೊಂಡಿತು. ಆದಾಗ್ಯೂ, ಟೋಕಿಯೊ ವಿಶ್ವ ಚಾಂಪಿಯನ್‌ಷಿಪ್‌ಗೆ ಅರ್ಹತೆ ಪಡೆಯುವಲ್ಲಿ ವಿಫಲವಾಯಿತು.

ಮಹಿಳೆಯರ 4x100 ಮೀ. ರಿಲೆ ಸ್ಪರ್ಧೆಯಲ್ಲಿ ವಿ.ಸುಧೀಕ್ಷಾ, ಎಸ್.ಎಸ್. ಸ್ನೇಹಾ, ಅಭಿನಯಾ ರಾಜರಾಜನ್ ಮತ್ತು ನಿತ್ಯಾ ಗಂಧೆ ಅವರನ್ನೊಳಗೊಂಡ ಭಾರತ ತಂಡ 44.06 ಸೆಕೆಂಡುಗಳಲ್ಲಿ ಗುರಿ ತಲುಪಿ, ಸ್ವರ್ಣ ಪದಕ ಜಯಿಸಿತು.

ಕೂಟದಲ್ಲಿ ಆರು ಚಿನ್ನದ ಪದಕಗಳೊಂದಿಗೆ ಭಾರತವು ಪದಕ ಪಟ್ಟಿಯಲ್ಲಿ ಅಗ್ರಸ್ಥಾನದಲ್ಲಿದೆ.